ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಮಾತ್ರವಲ್ಲ ರಾಜ್ಯದ ಇತರ ಕಡೆಗಳಲ್ಲೂ ಕೂಡ ನಡೆಯುತ್ತಿವೆ. ಕಳೆದ ವಾರ ಮೈಸೂರಿನ "ವಿಕಾಸ ಕರ್ನಾಟಕ" ಎಂಬ ವಾರ ಪತ್ರಿಕೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಅಂಬಳಿ ರಿಸಾರ್ಟ್ ನಲ್ಲಿ ಕೂಡ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ಪಾಶ್ಚಿಮಾತ್ಯ ರೀತಿಯಲ್ಲಿ ಮಹಿಳೆಯರು, ಪುರುಷರು ಭಾಗವಹಿಸಿದ್ದಷ್ಟೇ ಅಲ್ಲ ಡ್ರಗ್ಸ್ ತೆಗೆದುಕೊಳ್ಳುತ್ತಿರುವಂತಹ ಫೋಟೋಗಳನ್ನೂ ಕೂಡ ಪತ್ರಿಕೆಯಲ್ಲಿ ಹಾಕಿದ್ದಾರೆ. ಅದೂ ಕೂಡ ನಿಲ್ಲಬೇಕೆಂದು ಹೇಳುತ್ತೇನೆ.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

(ಮುಂದುವರೆದ ಚರ್ಚೆ)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಚಾರವಾಗಿ ನಾಳೆ ತೀರ್ಮಾನ ಮಾಡಿ ಹೇಳುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನಮ್ಮದು ಏನು ತಕರಾರು ಇಲ್ಲ. ಆದರೆ ಈ ತೀರ್ಮಾನ ಸಕಾರಾತ್ಮಕವಾಗಿ ಇರಬೇಕು ಹಾಗೂ ಪರಿಣಾಮಕಾರಿಯಾಗಿ ಇರಬೇಕು, ಇಲ್ಲವೆಂದರೆ ಇದೇ ಸದನದಲ್ಲಿ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ಇನ್ನು ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿರುವವರು ಈ ಜನತಾ ದಳದವರು, ನಾನು ಅವರನ್ನು ನೇರವಾಗಿ ಕೇಳುತ್ತಿದ್ದೇನೆ. ನಿಮ್ಮ ಆಂತರಿಕ ಕಿತ್ತಾಟ ಯಾವ ಕಾರಣಕ್ಕೋಸ್ಕರವೆಂದು ನೀವು ಕರ್ನಾಟಕ ಜನತೆಗೆ ಹೇಳಬೇಕಾಗಿದೆ, ಮತ್ತು ಈ ಸದನಕ್ಕೆ ಹೇಳಬೇಕಾಗುತ್ತದೆ. ಇದು ಏಕೆ ಈ ಆಂತರಿಕ ಕಿತ್ತಾಟ? ನಿಮ್ಮಲ್ಲಿ ಏನಾದರೂ ತಾತ್ವಿಕವಾದಂತಹ ಭಿನ್ನಾಭಿಪ್ರಾಯಗಳು ಬಂದಿವೆಯೇ? ಈ ರೀತಿ ತಾತ್ವಿಕ ಭಿನ್ನಾಭಿಪ್ರಾಯಗಳು ಬಂಮ ಘರ್ಷಣೆ ಬಂದಿದ್ದರೆ ನಾನು ಖಂಡಿತ ಸ್ವಾಗತ ಮಾಡುತ್ತೇನೆ. ಈ ದೇಶದಲ್ಲಿ ಆರೋಗ್ಯವಾದಂತಹ ತಾತ್ವಿಕ ವಿಚಾರದ ಮೇಲೆ ಚರ್ಚೆ ಮಾಡಬೇಕಾಗಿದೆ, ಬಿನ್ನಾಭಿಪ್ರಾಯಗಳ ಅಭಿಪ್ರಾಯಗಳು ಬರಬೇಕಾಗಿದೆ. ಇಂತಹ ಸ್ಥಿತಿ ಏನಾದರೂ ಕರ್ನಾಟಕ ರಾಜ್ಯದ ಜನತಾದಳದೊಳಗೆ ಏನಾದರೂ ಬಂದಿದೆಯಾ? ತಾತ್ವಿಕವಾದ ಭಿನ್ನಾಭಿಪ್ರಾಯಗಳು ಏನಾದರೂ ಇದೆಯಾ? ನನಗೆ ತಿಳಿದಮಟ್ಟಿಗೆ ಯಾವುದೇ ರೀತಿಯಾದಂತಹ ತಾತ್ವಿಕ ಭಿನ್ನಾಭಿಪ್ರಾಯ ನಿಮ್ಮಲ್ಲಿ ಇಲ್ಲ. ನಾನು ಹಲವಾರು ಸಂದರ್ಭದಲ್ಲಿ ಹೇಳಿದ್ದೇನೆ. ಜನತಾದಳದವರಿಗೆ ತಾತ್ವಿಕವಾದ ಭಿನ್ನಾಭಿಪ್ರಾಯ ಬರಲು ಸಾಧ್ಯವಿಲ್ಲ. ಯಾವ ಕಾರಣಕ್ಕೂ ಆಂತರಿಕ ಜಗಳ ಬರಲು ಸಾಧ್ಯವಿಲ್ಲ. ಹಾಗಾದರೆ ನೀವು ಇವತ್ತು ಉತ್ತರವನ್ನು ಹೇಳಬೇಕಾದರೆ ಯಾವು ಕಾರಣಕ್ಕಾಗಿ ಈ ಭಿನ್ನಾಭಿಪ್ರಾಯದ ಬಿಕ್ಕಟ್ಟು ಈ ಜನತಾದಳದಲ್ಲಿ ಉಂಟಾಗಿದೆ, ರಾಜಕೀಯವಾದ ಭಿನ್ನಾಭಿಪ್ರಾಯಗಳು ನಿಮ್ಮಲ್ಲಿ ಏನಾದರೂ ಇದೆಯಾ? ರಾಜಕೀಯ ಭಿನ್ನಾಭಿಪ್ರಾಯಗಳು ಬಂದು ನಿಮ್ಮಲ್ಲೇ ಏನಾದರೂ ಆಂತರಿಕ ಸಮಸ್ಯೆ ಬೆಳೆದು ಬಂದಿದೆಯಾ? ರಾಜಕೀಯ ಭಿನ್ನಾಭಿಪ್ರಾಯಗಳು ಎಂದರೆ ಇಡೀ ದೇಶದಲ್ಲಿ ಪೊಲಿಟಿಕಲ್ ಪೋಲರೈಜೇಷನ್ ಆಗಬೇಕಾಗಿದೆ. ಯಾವ್ಯಾವ ಶಕ್ತಿಗಳ ಮಧ್ಯೆ ಪೋಲರೈಜೇಷನ್ ಆಗಬೇಕಾಗಿದೆ. ಒಂದು ಜಾತ್ಯಾತೀತ ಶಕ್ತಿಗಳ ಮತ್ತು ಕೋಮು ಶಕ್ತಿಗಳ ಮಧ್ಯೆ ಪೋಲರೈಜೇಷನ್ ಈ ದೇಶದಲ್ಲಿ

ಆಗಬೇಕಾಗಿದೆ. ಅಂತಹ ರಾಜಕೀಯ ಭಿನ್ನಾಭಿಪ್ರಾಯದ ಬಿಕ್ಕಟ್ಟು ಜನತಾದಳದವರಿಗೆ ಬಂದಿದೆಯಾ? ನನಗೆ ಗೊತ್ತಿರುವ ಹಾಗೆ ಅಂತಹ ಭಿನ್ನಾಭಿಪ್ರಾಯ ನಿಮ್ಮಲ್ಲಿ ಇಲ್ಲ. ಇವರಿಗೆ ಜಾತ್ಯಾತೀತ ತತ್ವದ ಬಗ್ಗೆ ಆಲೋಚನೆ ಮಾಡುವಂಥಾದ್ದು ಇಲ್ಲ. ಅವರು ದೇಶದ ಭವಿಷ್ಯದ ಬಗ್ಗೆ ಚಿಂತನೆ ಮಾಡುವಂತಹ ಪರಿಸ್ಥಿತಿಯಲ್ಲೂ ಅವರು ಇಲ್ಲ. ದೇಶ ಯಾವ ಕಡೆಗೆ ಹೋಗುತ್ತಿದೆ, ಇದನ್ನು ನಿಲ್ಲಿಸಬೇಕೆನ್ನುವಂತಹ ಪ್ರಶ್ನೆಯಂತೂ ಇಲ್ಲ. ಆದರೆ ಒಂದೇ ಒಂದು ಸಂಗತಿ ಎಂದರೆ ಮಾನ್ಯ ಹೆಚ್.ಜಿ. ಗೋವಿಂದೇಗೌಡರು ಮೊನ್ನೆ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಪ್ರತಿಭಟನೆ ಮಾಡಿರುವಂತಹ ಸಂಗತಿ ಮೆಚ್ಚಬೇಕಾದಂತಹ ವಿಷಯವಾಗಿದೆ. ಅದನ್ನು ಬೇರೆಯವರು ಒಪ್ಪಬಹುದು, ಬಿಡಬಹುದು, ಅದು ಬೇರೆ ಪ್ರಶ್ನೆ. ಅಂಥಾದ್ದು ಏನೂ ಇಲ್ಲ ಇವರಿಗೆ. ಹಾಗಾದರೆ ಇನ್ನೊಂದು ಪ್ರಮುಖವಾದ ವಿಷಯದಲ್ಲಿ ಇವರಿಗೆ ಭಿನ್ನಾಭಿಪ್ರಾಯ ಬಂದಿರಬಹುದು. ಅದು ಯಾವುದೆಂದರೆ, ಕರ್ನಾಟಕ ರಾಜ್ಯದ ಅಭಿವೃದ್ಧಿ ಮಾಡತಕ್ಕಂಥ ವಿಷಯದ ಬಗ್ಗೆ ನಿಮ್ಮ ನಿಮ್ಮಲ್ಲಿ ಭಿನ್ನಾಭಿಪ್ರಾಯ ಇದೆಯೇ? ಕರ್ನಾಟಕ ರಾಜ್ಯದ ಸಮಗ್ರವಾದಂಥ ಅಭಿವೃದ್ಧಿಯನ್ನು ಮಾಡಬೇಕು ಎಂದು ನಾವು ಹೊರಟಿದ್ದೆವು, ಒಂದು ಗುಂಪು ಅದಕ್ಕೆ ಅಡ್ಡ ಹಾಕುತ್ತಿದೆ ಎನ್ನುವ ಪರಿಸ್ಥಿತಿ ಬಂದಿದೆಯೇ? ಅಭಿವೃದ್ಧಿಯನ್ನಂತೂ ಮಾಡಲೇ ಇಲ್ಲ. ಯಾವುದೇ ವಿಷಯದಲ್ಲೂ ಕೂಡ ಜನತಾದಳದ ಸರ್ಕಾರದವರಾದ ನಾವು ಕರ್ನಾಟಕ ರಾಜ್ಯಕ್ಕೆ ಈ ರೀತಿಯಾದಂಥ ಕೊಡುಗೆಯನ್ನು ಕೊಟ್ಟಿದ್ದೇವೆ, 1994ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದಂಥ ನಾವು ಇಂಥ ಕೊಡುಗೆಯನ್ನು ಕರ್ನಾಟಕ ರಾಜ್ಯಕ್ಕೆ ಕೊಟ್ಟಿದ್ದೇವೆ ಎಂದು ಹೇಳಲು ನಿಮ್ಮ ಹತ್ತಿರ ಏನಾದರೂ ಸಾಧನೆ ಇದೆಯೇ? ಒಂದೇ ಒಂದು ಸಾಧನೆಯನ್ನು ಹೇಳಬಹುದು. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವಲ್ಪ ಸುಧಾರಣೆ ಮಾಡಿದ್ದೀರಿ. ವಿದ್ಯುತ್ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಸುಧಾರಣೆಗಳಾಗಿವೆ. ಆರೋಗ್ಯ ಇಲಾಖೆಯಲ್ಲಿ ಕೆಲವು ಪ್ರಾಮಾಣಿಕವಾದಂಥ ಪ್ರಯತ್ನಗಳು ನಡೆದಿವೆ. ಇಷ್ಟನ್ನು ಬಿಟ್ಟರೆ ಕರ್ನಾಟಕ ರಾಜ್ಯಕ್ಕೆ ನಮ್ಮದೊಂದು ಕೊಡುಗೆ ಇದೆ ಎಂದು ಹೇಳುವಂಥಾದ್ದು ಏನಾದರೂ ಇದ್ದರೆ ಅದನ್ನು ದಯವಿಟ್ಟು ಹೇಳಬೇಕು. ಅಲ್ಲದೆ, ನಿಮಗೆ ಈ ಸದನದ ಬಗ್ಗೆ ಏನಾದರೂ ಗೌರವವಿದೆಯೇ? ಪ್ರತಿ ಸಂದರ್ಭದಲ್ಲೂ ಅಧ್ಯಕ್ಷರು ನಿಮಗೆ ಛೀಮಾರಿ ಹಾಕತಕ್ಕಂಥಾದ್ದೇ ಆಗಿದೆ. ಅಟೆಂಡೆನ್ಸ್ ಇಲ್ಲ, ಮಂತ್ರಿಗಳಿಲ್ಲ, ಶಾಸಕರಿಲ್ಲ, ಇದ್ದರೆ ಅವರವರಷ್ಟಕ್ಕೇ ಅವರು ಮಾತನಾಡಿಕೊಂಡು ಕುಳಿತಿರುತ್ತಾರೆ. ಇವೆಲ್ಲವೂ ಕೂಡ ಸಮಸ್ಯೆಗಳೇ ನಿಮ್ಮಲ್ಲಿ ಆಂತರಿಕ ಬಿಕ್ಕಟ್ಟು ಏಕೆ ಬಂತು? ಅದು ನಮ್ಮ ಪಕ್ಷದ ಒಳಗಿನ ವಿಷಯ ಅದಕ್ಕೂ ನಿಮಗೂ ಸಂಬಂಧವಿಲ್ಲ, ನಾವು ಮಾತನಾಡಿಕೊಂಡಿರುತ್ತೇವೆ ಎಂದು ನೀವು ಹೇಳಬಹುದು. ಆದರೆ ಅದು ಸಾಧ್ಯವಿಲ್ಲ. ಏಕೆಂದರೆ ನಿಮ್ಮ ಆಂತರಿಕ ಬಿಕ್ಕಟ್ಟಿನಿಂದ ಕರ್ನಾಟಕ ರಾಜ್ಯದ ಜನತೆಗೆ ಹೊಡೆತ ಬೀಳುತ್ತಿದೆ, ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಹೊಡೆತ ಬೀಳುತ್ತಿದೆ. ನಿಮ್ಮ ಮೇಲೆ ವಿಶ್ವಾಸವಿಟ್ಟು ಮತ ಹಾಕಿದ ಕರ್ನಾಟಕ ರಾಜ್ಯದ ಜನತೆಗೆ ವಿಶ್ವಾಸಘಾತಕತನದಿಂದ ನಡೆದುಕೊಳ್ಳುತ್ತಿದ್ದೀರಿ. ಇದಕ್ಕೆ ನಿಮ್ಮ ಆಂತರಿಕ ಬಿಕ್ಕಟ್ಟು ಕಾರಣ. ಆದ್ದರಿಂದ ನೀವು ಇವತ್ತು ಪ್ರಾಮಾಣಿಕರಾಗಿದ್ದರೆ ನಿಮ್ಮಲ್ಲಿ ಏಕೆ ಆಂತರಿಕ ಬಿಕ್ಕಟ್ಟು ಉಂಟಾಗಿದೆ ಎಂದು ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಹೇಳಬೇಕಾಗಿದೆ. ಈ ನಿಮ್ಮ ಆಂತರಿಕ ಬಿಕ್ಕಟ್ಟಿನ ಪರಿಣಾಮವನ್ನು, ಇದರ ಪ್ರಯೋಜನವನ್ನು ಪಡೆಯಲು ಪ್ರಯತ್ನ ಮಾಡುತ್ತಿರತಕ್ಕಂಥ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯ ಸ್ನೇಹಿತರಿಗೆ ಅವಕಾಶ ಮಾಡಿಕೊಟ್ಟಿರತಕ್ಕಂಥವರು

ನೀವು. ಹಾಗಾಗಿ ಕರ್ನಾಟಕ ರಾಜ್ಯದ ಜನತೆ 1994ನೇ ಇಸವಿಯಲ್ಲಿ ಸ್ಪಷ್ಟವಾಗಿ ಯಾವ ತೀರ್ಪನ್ನು ಕೊಟ್ಟಿದ್ದಾರೋ ತೀರ್ಪಿಗೆ ವಿರುದ್ಧವಾಗಿ ನೀವು ನಡೆಯುತ್ತಿದ್ದೀರಿ ಮತ್ತು ಆ ತೀರ್ಪನ್ನು ವಿಕೃತಗೊಳಿಸುವ ಪ್ರಯತ್ನವೂ ಇಲ್ಲಿ ನಡೆಯುತ್ತಿದೆ. ಹಾಗಾಗಿ ನಿಮ್ಮ ಆಂತರಿಕ ಬಿಕ್ಕಟ್ಟು ಕರ್ನಾಟಕ ರಾಜ್ಯದ ಮೇಲೆ ಹೇಗೆ ಪರಿಣಾಮ ಬೀರಿದೆ ಎನ್ನುವುದನ್ನು ಒಂದೊಂದಾಗಿ ಹೇಳುತ್ತೇನೆ. ಎಲ್ಲವನ್ನೂ ಹೇಳುವುದಿಲ್ಲ. ಕೆಲವು ಮುಖ್ಯ ವಿಷಯಗಳನ್ನು ಮಾತ್ರ ಹೇಳುತ್ತೇನೆ. ನಿಮ್ಮ ಆಂತರಿಕ ಬಿಕ್ಕಟ್ಟು ಉದ್ಭವವಾದಂಥ ಸಂದರ್ಭದಲ್ಲಿ ರಾಜ್ಯದ ಐದು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ-ಪಾಸ್ತಿ ನಷ್ಟವಾಯಿತು, ನೂರಾರು ಮುಗ್ಧ ಜನರು ತಮ್ಮ ಪ್ರಾಣ ಕಳೆದುಕೊಂಡರು. ಆಗ ಕನಿಷ್ಠವೆಂದರೆ ನಿಮ್ಮ ಸರ್ಕಾರದ ಪರವಾಗಿ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ಒಬ್ಬ ಮಂತ್ರಿಯಾದರೂ ಆ ಪ್ರದೇಶಗಳಿಗೆ ಹೋಗಿ ಸ್ವಾಂತನ ಹೇಳತಕ್ಕಂಥಾದ್ದನ್ನು ಮಾಡಲಿಲ್ಲ. ಹಣಕಾಸು ಪರಿಹಾರ ಕೊಡತಕ್ಕಂಥಾದ್ದು ಎರಡನೆಯದು. ಅವರಿಗೆ ಸಾಂತ್ವನ ಹೇಳತಕ್ಕಂಥ ಕನಿಷ್ಠ ಸೌಜನ್ಯವನ್ನೂ ನೀವು ತೋರಲಿಲ್ಲ. ಒಬ್ಬ ಮಂತ್ರಿ ಅಲ್ಲಿಗೆ ಹೆಲಿಕಾಪ್ಟರ್‌ನಲ್ಲಿ ಹೋದರು. ಅರ್ಧ ಗಂಟೆಯಲ್ಲೇ ಹೆಲಿಕಾಪ್ಟರ್‌ನಲ್ಲಿ ವಾಪಸ್ಸು ಬಂದರು. ಹಾಗಾದರೆ ಸರ್ಕಾರವನ್ನು ನಡೆಸುತ್ತಿರತಕ್ಕಂಥ ನಿಮ್ಮ ಜವಾಬ್ದಾರಿ ಏನು? ನಿಮ್ಮನ್ನು ಅಧಿಕಾರಕ್ಕೆ ಕಳುಹಿಸಿದಂಥ ಕರ್ನಾಟಕ ರಾಜ್ಯದ ಜನ ಸಂಕಷ್ಟಕ್ಕೆ ಗುರಿಯಾದಂಥ ಸಂದರ್ಭದಲ್ಲಿ ಕನಿಷ್ಠ ಅವರಿಗೆ ಸಾಂತ್ವನ ಹೇಳುವಂಥ ಸೌಜನ್ಯವೂ ಇಲ್ಲದೇ ಇರತಕ್ಕಂಥ ಭಂಡತನವನ್ನು ನೀವು ಪ್ರದರ್ಶನ ಮಾಡಿದಿರಿ, ನಿಮ್ಮ ಆಂತರಿಕ ಕಲಹಗಳಿಂದ. ನಿನ್ನೆ ಮಾನ್ಯ ಈಶ್ವರಪ್ಪನವರು ಬಹಳ ಪ್ರಾಮುಖ್ಯವಾದಂಥ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ ನಾವು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದೆವು, ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿಯಿಂದ ಎಷ್ಟು ನಷ್ಟವಾಗಿದೆ, ನಮಗೆ ಎಷ್ಟು ಹಣ ಬೇಕಾಗಿದೆ ಎನ್ನುವ ಲೆಕ್ಕವನ್ನೂ ಕೂಡ ನೀವು ಅವರಿಗೆ ಸರಿಯಾಗಿ ಕೊಡಲಿಲ್ಲ ಎಂದು ಹೇಳಿದರು. ಅಂದರೆ, ನಿಮ್ಮ ಆಡಳಿತ ಯಂತ್ರಾಂಗ ಏನು ಮಾಡುತ್ತಿದೆ? ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಎಂದು ಹೇಳುವಂಥ ಒಂದು ಪುಸ್ತಕವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ನಮಗೆ ಕೊಟ್ಟಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ನೀವು ಅಸೆಸ್‌ಮೆಂಟ್ ಮಾಡಿದಿರಿ? ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದರು, ಒಂದೇ ಊರಿನಲ್ಲಿ 300 ಮನೆಗಳು ಬಿದ್ದಿವೆ ಆದರೆ ನೀವು ಲೆಕ್ಕದಲ್ಲಿ ಇಡೀ ರಾಯಚೂರಿನಲ್ಲಿ ಕೆಲವು ನೂರು ಮನೆಗಳು ಮಾತ್ರ ಬಿದ್ದಿವೆ ಎಂದು ವರದಿಯನ್ನು ಕೊಟ್ಟಿದ್ದೀರಿ. ಹಾಗಾದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ನಿಮ್ಮ ಆಡಳಿತ ಯಂತ್ರಾಂಗ ಮತ್ತು ನೀವು ಏನು ಕೆಲಸವನ್ನು ಮಾಡುತ್ತಿದ್ದೀರಿ? ಅತಿವೃಷ್ಟಿಗೆ ಈಡಾಗಿ ಸಾವಿರಾರು ಕೋಟಿ ರೂಪಾಯಿ ನಷ್ಟವಾದರೆ ನಿಮಗೆ ಅದರ ಬಗ್ಗೆ ಕಾಳಜಿಯಿಲ್ಲ. ನಿಮ್ಮ ಅಂತಃಕಲಹದಲ್ಲಿ ನೀವು ಮುಳುಗಿದ್ದೀರಿ. ನೀವು ಪ್ರಮಾಣಿಕರಾಗಿದ್ದರೆ ಎಲ್ಲಾ ಪತ್ರಿಕೆಗಳನ್ನು ತೆಗೆದು ನೋಡಿ. ಅತ್ತ ಅತಿವೃಷ್ಟಿ ಸಂದರ್ಭದಲ್ಲಿ ಜನ ನಾಶವಾಗಿ ಸಾಯುತ್ತಿದ್ದರೆ ನಾಶವಾಗುತ್ತಿದ್ದರೆ, ಇತ್ತ ಪ್ರತಿದಿನವೂ ಪತ್ರಿಕೆಗಳಲ್ಲಿ ಭಿನ್ನಮತೀಯರದ್ದು ಒಂದು ಹೇಳಿಕೆ, ಭಿನ್ನಮತೀಯರಿಗೆ ವಿರುದ್ಧವಾಗಿ ಆಡಳಿತ ಪಕ್ಷದವರದೊಂದು ಹೇಳಿಕೆಗಳು ಬಂದಿವೆ. ಅತಿವೃಷ್ಟಿಯ ಬಗ್ಗೆ ಒಂದು ಅಕ್ಷರವನ್ನೂ ನೀವು ಎಲ್ಲಿಯೂ ಪ್ರಸ್ತಾಪ ಮಾಡಲಿಲ್ಲ. ಇನ್ನು ಎರಡನೆಯದಾಗಿ, ರಾಜ್ಯದಲ್ಲಿ ಬಹಳ ಪ್ರಮುಖವಾದಂಥ, ಗಂಭೀರವಾದಂಥ ಹಲವಾರು

ಪ್ರಶ್ನೆಗಳಿದ್ದವು. ಅದು ಕಾವೇರಿ ಪ್ರಶ್ನೆಯಾಗಿರಬಹುದು, ಆಲಮಟ್ಟಿ ಪ್ರಶ್ನೆಯಾಗಿರಬಹುದು, ಹೀಗೆ ಈ ಎಲ್ಲಾ ಬಹಳ ಗಂಭೀರವಾದಂಥ ಪ್ರಶ್ನೆಗಳು ಇದೇ ಸಂದರ್ಭದಲ್ಲಿ ಎದ್ದು ಬಂದವು. ಇವತ್ತು ಸುಪ್ರೀಂ ಕೋರ್ಟಿನಲ್ಲಿ ಒಂದು ಆರ್ಡರ್ ಇದೆ, ನಿನ್ನೆ ಒಂದು ಇತ್ತು. ಈ ಯಾವುದೇ ಪ್ರಶ್ನೆಗಳ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಲಿಲ್ಲ, ನೀವು ಆಲೋಚನೆ ಮಾಡಲಿಲ್ಲ. ನಿಮ್ಮ ಆಂತರಿಕ ಒಳಜಗಳಗಳಿಂದ ಇವತ್ತು ರಾಜ್ಯದ ಮೇಲೆ ಯಾವ ರೀತಿಯ ಪ್ರಭಾವವಾಗಿದೆ ಎಂದರೆ ರಾಜ್ಯದಲ್ಲಿ ಆಡಳಿತ ಯಂತ್ರಾಂಗ ಕುಸಿದಿದೆ. ಮತ್ತು ಏನು ಕೆಲಸ ಮಾಡುತ್ತಿದ್ದೀರಿ ಎಂದು ನೀವು ಅಧಿಕಾರಿಗಳನ್ನು ಕೇಳಿ. ಕರ್ನಾಟಕ ರಾಜ್ಯದಲ್ಲಿ ಇವತ್ತು ಆಡಳಿತ ಯಂತ್ರಾಂಗ ಯಾವ ಸ್ಥಿತಿಗೆ ಬಂದಿದೆ ಎನ್ನುವುದನ್ನು ಸ್ವಲ್ಪವಾದರೂ ಗಮನವಿಟ್ಟು ನೋಡಿ. ನೀವು ಮಂತ್ರಿಗಳಾಗಿರುವುದರಿಂದ ನಿಮಗೆ ಅದರ ಅನುಭವವಾಗುವುದಿಲ್ಲ. ಏಕೆಂದರೆ ನೀವು ಫೋನ್ ಮಾಡಿದ ತಕ್ಷಣ ಅಧಿಕಾರಿಗಳು ಓಡಿ ಬರುತ್ತಾರೆ. ನೀವು ಹೇಳಿದ ತಕ್ಷಣ ಒಂದು ಫೈಲನ್ನು ಹಿಡಿದುಕೊಂಡು ಬರುತ್ತಾರೆ. ಆಡಳಿತ ಯಂತ್ರಾಂಗ ಕೆಟ್ಟಿದೆ ಎಂದು ನೀವು ನೋಡಬೇಕಾದರೆ, ಏನಾಗಿದೆ ಎಂದು ಒಬ್ಬ ಸಾಮಾನ್ಯ ಮನುಷ್ಯನನ್ನು ಕೇಳಬೇಕು. ಶಾಸಕರಿಗೇ ಅಧಿಕಾರಿಗಳು ಸಿಗುವುದಿಲ್ಲ, ಇನ್ನು ಸಾಮಾನ್ಯ ಜನರ ಪರಿಸ್ಥಿತಿ ಏನು? ಉದಾಹರಣೆಗೆ ಹೇಳಬೇಕಾದರೆ, ಕೆ.ಎಸ್.ಆರ್.ಟಿ.ಸಿ. ಯ ಎಂ.ಡಿ.ಯವರೊಂದಿಗೆ ಫೋನಿನಲ್ಲಿ ಮಾತನಾಡಲು ನಾನು ಮೂರು ತಿಂಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಆದರೆ ನನಗೆ ಸಾಧ್ಯವಾಗಿಲ್ಲ. ಯಾವುದೇ ಸಂದರ್ಭದಲ್ಲಿ ಫೋನ್ ಮಾಡಿದರೂ, ಅವರು ಕಾನ್ಫೆರೆನ್ಸ್‌ನಲ್ಲಿದ್ದಾರೆ, ಮೀಟಿಂಗ್‌ನಲ್ಲಿದ್ದಾರೆ, ಊಟಕ್ಕೆ ಹೋಗಿದ್ದಾರೆ, ಟೂರ್ ಹೋಗಿದ್ದಾರೆ ಎಂದು ಹೇಳುತ್ತಾರೆ. ಅವರು ಅಲ್ಲೇ ಇರುತ್ತಾರೆ. ಫೋನ್ ತೆಗೆದುಕೊಳ್ಳುತ್ತಾರೆ, ಇದ್ದರೆ ನೋಡುತ್ತೇವೆ ಎಂದು ಹೇಳುತ್ತಾರೆ, ನಂತರ ಮೀಟಿಂಗ್‌ನಲ್ಲಿ ಕುಳಿತಿದ್ದಾರೆ ಎನ್ನುವ ಉತ್ತರ ಬರುತ್ತದೆ. ನಂತರ ಆ ಅಧಿಕಾರಿಗಳು ಸೌಜನ್ಯಕ್ಕಾದರೂ, ಶಾಸಕರೊಬ್ಬರು ಫೋನ್ ಮಾಡಿದ್ದರಂತೆ, ಮತ್ತೆ ಫೋನ್ ಮಾಡಿ ಏನು ಎಂದು ಕೇಳುವ ಸ್ಥಿತಿ ಇಲ್ಲ. ಇದು ಇವರೊಬ್ಬರದೇ ಪರಿಸ್ಥಿತಿಯಲ್ಲ, ನಾನು ಉದಾಹರಣೆಯನ್ನಷ್ಟೇ ಹೇಳುತ್ತಿದ್ದೇನೆ. ನಮಗೇ ಆ ರೀತಿಯಾದರೆ ಇನ್ನು ಸಾಮಾನ್ಯ ಮನುಷ್ಯನ ಸ್ಥಿತಿ ಏನು? ಅಧ್ಯಕ್ಷರು ಮೊನ್ನೆ ಬಹಳ ಚೆನ್ನಾಗಿ ಹೇಳಿದರು, ಅಧಿಕಾರಿಗಳನ್ನು ರೀಚ್ ಆಗತಕ್ಕಂಥಾದ್ದು ನಮಗೇ ಎಷ್ಟು ಕಷ್ಟವಾಗಿದೆ, ಇನ್ನು ಸಾಮಾನ್ಯ ಮನುಷ್ಯನು ಹೇಗೆ ನಿಮ್ಮ ಅಧಿಕಾರಿಗಳನ್ನು ರೀಚ್ ಆಗುತ್ತಾನೆ ಎಂದು ಹೇಳಿದರು. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಈ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಮತ್ತು ಶಾಸಕರು ಮುಖ್ಯವೋ, ಅವರಿಗೆ ಹೆಚ್ಚು ಅಧಿಕಾರ ಇದೆಯೋ ಅಥವಾ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಇದೆಯೋ ಎಂದು ಹೇಳುವಂಥಾದ್ದಕ್ಕೆ ನೀವು ಉತ್ತರ ಹೇಳಬೇಕು. ಯಾವುದೇ ಸಂದರ್ಭದಲ್ಲಿ ಜನತಾದಳ ಅಧಿಕಾರಕ್ಕೆ ಬಂದರೆ ಅಧಿಕಾರಿಗಳು ಮೇಲಕ್ಕೆ ಹೋಗಿ ಬಿಡುತ್ತಾರೆ. ಏಕೆಂದರೆ ನಿಮ್ಮ ಆಂತರಿಕ ಕಿತ್ತಾಟದಿಂದ ಆಡಳಿತದ ಮೇಲೆ ಹತೋಟಿ ಇಲ್ಲ, ಆಡಳಿತದ ಬಗ್ಗೆ ಸರಿಯಾದಂಥ ಪ್ರಜ್ಞೆ ಇಲ್ಲ, ಆಡಳಿತ ನಡೆಸತಕ್ಕಂಥ ಜನಗಳಿಗೆ ಇಲಾಖೆಗಳ ಮೇಲೆ ಯಾವುದೇ ರೀತಿಯಾದಂಥ ಹತೋಟಿ ಇರುವುದಿಲ್ಲ. ಹಾಗಾಗಿ ಅಲ್ಲಿ ಅಧಿಕಾರಿಗಳದ್ದೇ ಆಡಳಿತ. ಅಂದರೆ ಪ್ರಜಾಪ್ರಭುತ್ವಕ್ಕೆ ಇದು ಅವಹೇಳನವಲ್ಲವೇ? ನೀವು ಸ್ವಲ್ಪ ಆತ್ಮ ಪರೀಕ್ಷೆ ಮಾಡಿಕೊಳ್ಳಬೇಕು, ಪ್ರಜಾಪ್ರಭುತ್ವವನ್ನು ನೀವು ಅವಹೇಳನ ಮಾಡುತ್ತಿದ್ದೀರೋ ಮತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಏನಾದರೂ ಬೆಲೆ ಉಂಟೋ ಎಂದು. ಅಧಿಕಾರಿಗಳು ಏನು

ತಿಳಿದುಕೊಂಡಿದ್ದಾರೆ? ಇವತ್ತು ಅಧಿಕಾರಿಗಳು ಶಾಸಕಾಂಗಕ್ಕೆ ಸಬಾರ್ಡಿನೇಟ್ ಆಗಿದ್ದಾರೋ ಅಥವಾ ಇನ್ ಸಬಾರ್ಡಿನೇಷನ್ ಆಗಿದೆಯೇ? ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯವನ್ನು ಕೇಳುತ್ತೇನೆ, ಮಂತ್ರಿಗಳು ಇದನ್ನು ಹೇಳಬೇಕು. ಇವರೆ ಸೈನ್ ಮಾಡಿ ಪತ್ರ ಕಳುಹಿಸಿ ಒಂದು ಫೈಲನ್ನು ಕಳುಹಿಸಿದರೆ ಅದು ಸಾಮಾನ್ಯ ಮನುಷ್ಯನೊಬ್ಬನಿಗೆ ಮೂರ್‍ನಾಲ್ಕು ತಿಂಗಳಾದರೂ ರೀಚ್ ಆಗುವುದಿಲ್ಲ. ನಿಮಗೆ ಎಷ್ಟು ತಿಂಗಳು ಬೇಕು ಎಂದು ನಾನು ಹೇಳುತ್ತೇನೆ. ನಾನು ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಹತ್ತಿರ ಸುಮಾರು ಸಲ ಮಾತನಾಡಿದ್ದೇನೆ. ಒಂದು ಟೆಂಡರ್ ಹಾಕಲು ಅಥವಾ ಅದನ್ನು ರದ್ದು ಮಾಡಲು ಅಥವಾ ಟೆಂಡರ್ ಕೊಳ್ಳಲು ನಾಲ್ಕು ತಿಂಗಳಾದರೂ ಸಾಧ್ಯವಾಗುವುದಿಲ್ಲ. ನಬಾರ್ಡ್‌ನಿಂದ ದುಡ್ಡು ಬಂದಿರುತ್ತದೆ, ಎಸ್ಟಿಮೇಟ್ ರೆಡಿ ಇದೆ, ಎಲ್ಲವೂ ರೆಡಿ ಇದೆ. ಆದರೆ ಒಂಡು ಟೆಂಡರ್ ಮಾಡಲು ಮೂರ್ನಾಲ್ಕು ತಿಂಗಳು ತೆಗೆದುಕೊಳ್ಳುತ್ತಾರೆ. ಅಂದರೆ ನಿಮ್ಮ ವ್ಯವಸ್ಥೆ ಹೇಗಿದೆ ಎಂದು ಹೇಳುತ್ತಿದ್ದೇನೆ. ಕಾನೂನಿನಲ್ಲಿ ಹಾಗಿದೆ, ಹೀಗಿದೆ, ಅದಕ್ಕಾಗಿ ಹೀಗೆ ಆಗುತ್ತಿದೆ ಎಂದು ನೀವು ಹೇಳಬಹುದು. ಆದರೆ ನಮಗೆ ಬೇಕಾಗಿರತಕ್ಕಂಥಾದ್ದು, ಕರ್ನಾಟಕ ರಾಜ್ಯದ ಜನತೆಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ ಕೆಲಸಗಳು ಆಗಬೇಕು. ನಿಮ್ಮ ಕಾನೂನು, ನಿಮ್ಮ ಪ್ರೊಸೀಜರ್‌ಗಳು ಮುಖ್ಯವಲ್ಲ.

12.10 ಪಿ.ಎಂ.

ಆಡಳಿತದಲ್ಲಿ ಹಿಡಿತ ಇಲ್ಲದಿರುವ ಕಾರಣದಿಂದ ಒಬ್ಬ ಸಾಮಾನ್ಯ ಪ್ರಜೆ ಬಲಿಪಶು ಆಗಿದ್ದಾನೆ. ಅವನಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲ. ಯಾವುದರಲ್ಲಿ ಸರ್ಕಾರದ ಸಾಧನೆ ಆಗಿದೆ ಎಂಬುದನ್ನು ಸರ್ಕಾರದವರು ಹೇಳಿದ್ದಾರೆ. ಆದರೆ ಸಾಧನೆ ಆಗದೇ ಇರತಕ್ಕಂಥದ್ದು ಎಷ್ಟು ಪರ್ಸೆಂಟ್ ಇದೆ ಎನ್ನುವುದನ್ನು ನೋಡುವುದಾದರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳು ಎಷ್ಟು ಖಾಲಿ ಇವೆ? ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ? ನಮ್ಮ ಕೋಲಾರ ಜಿಲ್ಲೆಯಲ್ಲಿ 672 ಹೈಸ್ಕೂಲ್‌ಗಳಲ್ಲಿ ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇವೆ. ಈಗ ನವೆಂಬರ್ ತಿಂಗಳು ನಡೆಯುತ್ತಿದೆ. ಮಾರ್ಚ್ ತಿಂಗಳಿನಲ್ಲಿ ಶಾಲಾ ಮಕ್ಕಳು ಪರೀಕ್ಷೆ ಬರೆಯಬೇಕು. ಉಪಾಧ್ಯಾಯರು ಇಲ್ಲದೆ, ಪಾಠಪ್ರವಚನ ಸರಿಯಾಗಿ ನಡೆಯದೆ ಮಕ್ಕಳು ಪರೀಕ್ಷೆಯಲ್ಲಿ ಏನು ಬರೆಯುತ್ತಾರೆ? ಇದನ್ನು ಸರ್ಕಾರ ಆಲೋಚನೆ ಮಾಡಬೇಕು. ನಿಮ್ಮ ಮಕ್ಕಳು ಸುಮಾರು ಜನ ನಮ್ಮ ಸರ್ಕಾರಿ ಪ್ರೌಢಶಾಲೆಗಳಿಗೆ ಹೋಗುವುದಿಲ್ಲ. ಅವರೆಲ್ಲಾ ಫೈವ್ ಸ್ಟಾರ್ ಕಲ್ಚರ್ ಇರತಕ್ಕಂಥ ವಿದ್ಯಾಸಂಸ್ಥೆಗಳಿಗೆ ಕಳುಹಿಸಿರುತ್ತಾರೆ. ನಿಮಗೆ ಆ ಕಷ್ಟ ಗೊತ್ತಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ 3 ಪ್ರೌಢ ಶಾಲೆಗಳಿದ್ದು ಶಾಲೆಗೊಬ್ಬರಂತೆ ಒಬ್ಬೊಬ್ಬ ಪಿ.ಟಿ. ಟೀಚರ್ ಇದ್ದಾರೆ. ಒಬ್ಬ ಪಿ.ಟಿ. ಮಾಸ್ಟರ್ ಒಂದು ಪ್ರೌಢ ಶಾಲೆಯನ್ನು ನಡೆಸುವುದಕ್ಕೆ ಹೇಗೆ ಸಾಧ್ಯ? ಹಳ್ಳಿಯಲ್ಲಿರತಕ್ಕಂಥ ಒಬ್ಬ ವಿದ್ಯಾರ್ಥಿ ಸರ್ಕಾರಿ ಶಾಲೆಗೆ ಹೋಗತಕ್ಕಂಥ ಸಂದರ್ಭದಲ್ಲಿ ಆ ಶಾಲೆಯಲ್ಲಿ ಸರಿಯಾಗಿ ಉಪಾಧ್ಯಾಯರು ಇಲ್ಲ ಎಂದರೆ ಅವನು ಮಾರ್ಚ್ ತಿಂಗಳಲ್ಲಿ ನಡೆಯುವ ಪರೀಕ್ಷೆಯಲ್ಲಿ ಏನು ಬರೆಯುತ್ತಾನೆ? ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಇನ್ನು ಆಶ್ರಯ ಯೋಜನೆಯಲ್ಲಿ ಮನೆಯನ್ನು ಕಟ್ಟಿಸಿಕೊಳ್ಳಲು ಹಣ ಸರ್ಕಾರದಿಂದ ಬಿಡುಗಡೆ ಮಾಡುತ್ತಾರೆ. 1996-97 ಮತ್ತು 1997-98ರಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಆ ಹಣವನ್ನು

ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡದಿದ್ದರೆ ಪ್ರಾಕ್ಟಿಕಲ್ ಆಗಿ ಏನಾಗುತ್ತದೆ ಎಂದರೆ, ಒಬ್ಬ ಫಲಾನುಭವಿ ಮನೆ ಕಟ್ಟಲು ಪಾಯ ಹಾಕಿ 2-3 ತಿಂಗಳಲ್ಲಿ ಮನೆಯನ್ನು ಕಟ್ಟದಿದ್ದರೆ ಆ ಪಾಯ ಹೋಗಿಬಿಟ್ಟಿರುತ್ತದೆ. ಹಾಗೆಯೇ ಅರ್ಧ ಗೋಡೆ ಕಟ್ಟಿಸಿದರೆ, ಮಳೆ ಬಂದು ಅತಿವೃಷ್ಟಿಯಿಂದ ಆ ಅರ್ಧ ಗೋಡೆ ಬಿದ್ದುಹೋಗುತ್ತದೆ. ಬಿದ್ದು ಹೋದ ಗೋಡೆಗೆ ಅದನ್ನು ಕಟ್ಟಲು ಪುನಃ ಯಾವ ಲೆಕ್ಕದಲ್ಲೂ ಸಹ ಹಣ ಕೊಡುವುದಕ್ಕೆ ಆಗುವುದಿಲ್ಲ. ಅತಿವೃಷ್ಟಿಯ ಲೆಕ್ಕದಲ್ಲಿ ಅವನಿಗೆ ಹಣ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವನಿಗೆ ಮನೆಗೆ ಹಣ ಸ್ಯಾಂಕ್ಷನ್ ಆಗಿದೆ ಎಂದು ಲೆಕ್ಕದಲ್ಲಿ ಇರುತ್ತದೆ. ಸರ್ಕಾರ ಒಂದು ಮನೆ ಕಟ್ಟಿಸಿಕೊಳ್ಳಲು 20 ಸಾವಿರ ರೂ. ಕೊಡುತ್ತದೆ ಎಂದಾದರೆ, ಮೊದಲು ಅರ್ಧ ಕಟ್ಟಿದ ಕಟ್ಟಡ ಬಿದ್ದುಹೋಗಿದ್ದರೆ ಪುನಃ ಅದೇ ಹಣದಲ್ಲಿ ಮನೆ ಕಟ್ಟಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲರಿಗೂ ಮನೆ ಸಿಗಬೇಕು ಎನ್ನುವ ಉದ್ದೇಶ ಸರ್ಕಾರದ್ದು ಏನು ಇದೆಯೋ ಆ ಉದ್ದೇಶ ಸಂಪೂರ್ಣವಾಗಿ ಸಫಲವಾಗಲಿಲ್ಲ. ಒಬ್ಬ ಫಲಾನುಭವಿಗೆ ಸರ್ಕಾರದವರು ಆಶ್ರಯ ಮನೆ ಕೊಟ್ಟಿರುತ್ತಾರೆ, ಪ್ರಾಕ್ಟಿಕಲ್ ಆಗಿ ಏನಾಗುತ್ತದೆ ಎಂದರೆ ಬಿಲ್‌ಗೋಸ್ಕರ ಆ ಫಲಾನುಭವಿ ತಾಲ್ಲೂಕು ಪಂಚಾಯಿತಿ ಆಫೀಸಿಗೆ ಒಂದು ಸಲ ಬರಬೇಕಾದರೆ ಕನಿಷ್ಟ 50 ರೂಪಾಯಿ ಬಸ್ ಚಾರ್ಜು ಖರ್ಚುಮಾಡಿಕೊಂಡು ಬರಬೇಕಾಗುತ್ತದೆ. ಆದರೆ ಆ ಆಫೀಸಿನಲ್ಲಿರುವ ಮಹಾನುಭಾವರು - ಹಣ ಇಲ್ಲ, ಹಣ ಬರುವವರೆಗೆ ಬರಬೇಡಿ ಎಂದು ಹೇಳದೆ ನಾಳೆ ಬನ್ನಿ ನಾಡಿದ್ದು ಬನ್ನಿ ಎಂದು ಆತನನ್ನು ತಿರುಗಾಡಿಸುತ್ತಲೇ ಇರುತ್ತಾರೆ. ಒಂದು ಬಿಲ್ ಗೋಸ್ಕರ 50 ರಿಂದ 100 ಸಲ ಆಫೀಸಿಗೆ ಬಂದು ತಡಕಾಡಬೇಕಾಗಿದೆ. ಹೀಗಾದರೆ ಅವನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಸರ್ಕಾರ ಆಲೋಚನೆ ಮಾಡಬೇಕು. ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆಂದರೆ, ಆಡಳಿತ ಯಂತ್ರದಲ್ಲಿರತಕ್ಕಂಥ ಲೋಪದೋಷಗಳಿಂದ ಮತ್ತು ಸರ್ಕಾರ ದೃಢವಾದ ನಿರ್ಧಾರ ಮತ್ತು ತೀರ್ಮಾನ ಇಲ್ಲದಿರತಕ್ಕಂಥ ಕಾರಣದಿಂದ ಇವತ್ತು ಇಡೀ ಯಂತ್ರಾಂಗದ ಮೇಲೆ ಆಡಳಿತದ ಪರಿಣಾಮ ಆಗಿ ಸಾಮಾನ್ಯ ಪ್ರಜೆಯೊಬ್ಬ ಇವತ್ತು ಸಂಪೂರ್ಣವಾಗಿ ನಲುಗಿ ಹೋಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇನ್ನು ನೀರಾವರಿ ವಿಚಾರ ಬಂದಾಗ, ಇದರಲ್ಲಿ ನಾವು ಪ್ರಚಾರ ಪ್ರಿಯರಾಗಿ ಬಿಟ್ಟಿದ್ದೇವೋ ಏನೋ ಎನ್ನತಕ್ಕಂಥ ಅನುಮಾನ ಮೂಡಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನಲ್ಲಿ ಸರ್ಕಾರದಿಂದ ಮನೆಗಳನ್ನು ಏನು ಕೊಡುತ್ತಿದ್ದಾರೆ ಅದಕ್ಕೆ ಈವರೆಗೆ ಹಣ ಕೊಟ್ಟಿಲ್ಲ. 1996-97, 1997-98ರ ವರ್ಷಗಳಿಗೆ ಹಣ ಕೊಟ್ಟಿದ್ದಾರೆ. 1995-96ನೇ ಸಾಲಿನ ಕೆಲಸಕ್ಕೆ ಅಮೌಂಟ್ ರಿಲೀಸ್ ಆಗಿಲ್ಲ. ಅದರ ಬಗ್ಗೆ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸಿಟಿಯಲ್ಲಿ ಆಶ್ರಯ ಕಮಿಟಿಯಲ್ಲಿ ನನ್ನ ಕ್ಷೇತ್ರಕ್ಕೆ 300 ಮನೆಗಳನ್ನು ಕೊಟ್ಟಿದೆ. ಅದಕ್ಕೆ ಇವತ್ತಿನವರೆಗೂ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಕಾರ್ಪೊರೇಷನ್‌ನವರಿಗೆ ಹೇಳಿದರೆ ಹೌಸಿಂಗ್ ಬೋರ್ಡ್ ನವರನ್ನು ಕೇಳಿ ಎಂದು ಹೇಳುತ್ತಾರೆ, ಹೌಸಿಂಗ್ ಬೋರ್ಡ್‌ಗೆ ಹೇಳಿದರೆ ಬಿ.ಡಿ.ಎ. ಯವರ ಮೇಲೆ ಹೇಳುತ್ತಾರೆ, ಬಿ.ಡಿ.ಎ.ಗೆ ಕೇಳಿದರೆ ಆಶ್ರಯ ಕಮಿಟಿಯನ್ನು ಕೇಳಿ ಎಂದು ತೋರಿಸುತ್ತಾರೆ. ಪ್ರತಿ ತಿಂಗಳು 50 ಲಕ್ಷ ರೂಪಾಯಿ

ಹೌಸಿಂಗ್ ಬೋರ್ಡ್‌ನಿಂದ ಇಂಟರೆಸ್ಟ್ ಪೇ ಮಾಡುತ್ತಿದ್ದಾರೆ. ಇದುವರೆಗೆ ಸರ್ಕಾರದಿಂದ ಕಲೆಕ್ಟ್ ಮಾಡಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀರಾವರಿ ವಿಷಯಕ್ಕೆ ಬಂದಂಥ ಸಂದರ್ಭದಲ್ಲಿ ನಾವು ಹಲವಾರು ಸಂದರ್ಭಗಳಲ್ಲಿ ಸಣ್ಣ ನೀರಾವರಿಗೆ ಸಾಕಷ್ಟು ಹಣ ಕೊಡಲಿಲ್ಲವೆಂದು ಪ್ರಸ್ತಾಪ ಮಾಡಿದ್ದೇವೆ.

ಅಧ್ಯಕ್ಷರು : ಅನೇಕ ಜಿಲ್ಲೆಗಳಲ್ಲಿ ನಮ್ಮ ಶಾಸಕರು ಸಮಿತಿ ಸಭೆಗಳನ್ನು ನಡೆಸಿ ಫಲಾನುಭವಿಗಳ ಪಟ್ಟಿಯನ್ನು ರೆಡಿಮಾಡಿ ನೀವು ಕೆಲಸ ಮಾಡಿಕೊಳ್ಳಿ ಹಣ ಬಿಡುಗಡೆ ಮಾಡುತ್ತೇವೆಂದು ಅವರಿಗೆ ಹೇಳಿಬಿಟ್ಟರು. ಸರ್ಕಾರ ಬಿಡುಗಡೆ ಮಾಡಿದ ಹಣ ಜಿಲ್ಲಾ ಪಂಚಾಯತ್ ಮುಖಾಂತರ ತಾಲ್ಲೂಕು ವಿಸ್ತರಣಾಧಿಕಾರಿಗಳಿಗೆ ಹೋಗಿ ಅವರು ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟುಕೊಂಡು ಕುಳಿತುಬಿಟ್ಟಿದ್ದಾರೆ. 1995-96ರಿಂದ ಹಿಡಿದು ಈ ವರ್ಷದವರೆಗೆ ಫಲಾನುಭವಿಗಳ ಲಿಸ್ಟನ್ನು ಫೈನಲೈಜ್ ಮಾಡಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಕೆಲವು ಕಡೆ ಇರಬಹುದು. ಆದರೆ ನಮ್ಮ ಅನುಭವದಲ್ಲಿ ಅದು ಏನೂ ಆಗಿಲ್ಲ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡುತ್ತಿದ್ದೇನೆ. ಕೆಲವು ಕ್ಷೇತ್ರಗಳಲ್ಲಿ ಫಲಾನುಭವಿಗಳಿಗೋಸ್ಕರ ಸೈಟ್ಸ್ ಕೊಡಲಿಕ್ಕೋಸ್ಕರ ಜಾಗವನ್ನು ರೆವಿನ್ಯೂ ಇಲಾಖೆಯಿಂದ ಮಂಜೂರು ಮಾಡಿದ್ದಾರೆ. ಆ ಜಾಗದಲ್ಲಿ ಸೈಟ್ಸ್ ಕೂಡ ಮಾಡಿ ಆಗಿದೆ. ಕನ್‌ವರ್ಟ್ ಮಾಡಿ ಪ್ಲಾನ್ ಎಸ್ಟಿಮೇಟ್ ಎಲ್ಲಾ ಸಿದ್ಧವಾಗಿದೆ. ನಾವು ಅದನ್ನು ಫಲಾನುಭವಿಗಳಿಗೆ ಕೊಡುತ್ತೇವೆ. ಫಲಾನುಭವಿಗಳಿಗೆ ಹಕ್ಕುಪತ್ರ ಕೊಡಬೇಕು ಎನ್ನುವ ಸಂದರ್ಭದಲ್ಲಿ ಬೇರೆ ಕಡೆಯಿಂದ ಬಂದು ಅಲ್ಲಿ ಅತಿಕ್ರಮ ಪ್ರವೇಶ ಮಾಡಿ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಇವತ್ತು ಆ ಜಾಗಗಳನ್ನು ಬಿಡುತ್ತಿಲ್ಲ. ಅವರನ್ನು ಬಿಡಿಸುವುದಕ್ಕೆ ರೆವಿನ್ಯೂ ಮತ್ತು ಪೋಲೀಸ್ ಈ ಎರಡೂ ಇಲಾಖೆಗಳು ಪ್ರಯತ್ನ ಮಾಡಿದರೂ ಸಹ ಸಾಧ್ಯವಾಗುತ್ತಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಇದು ನನ್ನ ಕ್ಷೇತ್ರದಲ್ಲಿ ಮಾತ್ರವಲ್ಲ, ಬಹುಶಃ ಎಲ್ಲಾ ಕ್ಷೇತ್ರಗಳಲ್ಲೂ ಇದೆಯೆಂದು ಕಾಣುತ್ತದೆ. ಇವತ್ತು ಬಗರ್ ಹುಕುಂ ಜಾಗವೆಂದು ಪ್ರತಿಯೊಂದು ಜಾಗದಲ್ಲಿ ಬೇಲಿ ಹಾಕುತ್ತಾರೆ. ಅದು ಸರ್ಕಾರಿ ಅರಣ್ಯಪ್ರದೇಶದ ಜಾಗ, ಖಾಸಗಿ ಜಾಗ ಹೀಗೆ ಯಾವುದೇ ಇದ್ದರೂ ಅಲ್ಲಿ ಪ್ರತಿಯೊಂದಕ್ಕೂ ಬೇಲಿ ಹಾಕತಕ್ಕಂಥ ಪ್ರವೃತ್ತಿ ಇಡೀ ರಾಜ್ಯದಲ್ಲಿ ಬೆಳೆಯುತ್ತಾ ಇದೆ. ಇದರ ಬಗ್ಗೆ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಸರ್ಕಾರ ಫಲಾನುಭವಿಗಳಿಗೋಸ್ಕರ ಸೈಟ್ ಎಂದು ಏನು ಗುರುತು ಮಾಡಿಕೊಟ್ಟಿದೆ, ಆ ಜಾಗವನ್ನು ಖುಲ್ಲಾ ಮಾಡಿಸತಕ್ಕಂಥ ಅತಿ ಶೀಘ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದು ಆಗದೆ ಫಲಾನುಭವಿಗಳು ಮನೆ ಕಟ್ಟಲಿಕ್ಕೆ ಆಗುವುದಿಲ್ಲ ಮತ್ತು ಸೈಟ್ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ವಿರಾಜಪೇಟೆ ನಗರದಲ್ಲಿ ಮನೆಗಳನ್ನು ಕಟ್ಟಿಸುವ ಗುರಿಯನ್ನು ನಿಗದಿ ಮಾಡಿದೆ. ಹಣವನ್ನು ಇದುವರೆವಿಗೂ ಬಿಡುಗಡೆ ಮಾಡಿಲ್ಲ.

ನಾವು ಫಲಾನುಭವಿಗಳ ಪಟ್ಟಿಯನ್ನು ಆಯ್ಕೆ ಮಾಡಿ ಘೋಷಣೆ ಮಾಡಿದ್ದೇವೆ. ಅವರು ಬಂದು ಪ್ರತಿದಿನ ಕೆಲಸ ಮಾಡುತ್ತಿದ್ದಾರೆ. ಮತ್ತು ಯಾವಾಗ ಹಣ ಬಿಡುಗಡೆ ಆಗುತ್ತದೆಂದು ನಮ್ಮನ್ನು ಕೇಳುತ್ತಿದ್ದಾರೆ. ವಿರಾಜಪೇಟೆ ನಗರದಲ್ಲಿ ಕಳೆದ ವರ್ಷ ಮತ್ತು ಈ ವರ್ಷ ಒಂದು ನಯಾ ಪೈಸೆ ಕೂಡ ಬಿಡುಗಡೆ ಆಗಿಲ್ಲ. ನಾನು ಈ ಸದನಕ್ಕೆ ಹೇಳುತ್ತಿರತಕ್ಕಂಥದ್ದು ಸತ್ಯಾಂಶವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿಗೆ ಹಣ ಕೊಟ್ಟಿಲ್ಲ, ಸಣ್ಣ ನೀರಾವರಿಗೆ ಹೆಚ್ಚು ಗಮನಕೊಟ್ಟಿಲ್ಲವೆಂದು ನಾವು ಹಲವಾರು ಸಂದರ್ಭದಲ್ಲಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಸಣ್ಣ ನೀರಾವರಿ ಬಗ್ಗೆ ಕರ್ನಾಟಕ ರಾಜ್ಯದ ಅಂಕಿಅಂಶಗಳನ್ನು ತೆಗೆದುಕೊಂಡು ದಯವಿಟ್ಟು ಅಭ್ಯಾಸ ಮಾಡಿ ಎಂದು ಶ್ರೀ ಸಿದ್ಧರಾಮಯ್ಯನವರಿಗೆ ಹಲವಾರು ಸಲ ಹೇಳಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮೇಜರ್ ಇರಿಗೇಷನ್‌ನಿಂದ ಎಷ್ಟು ಉತ್ಪತ್ತಿ ಆಗುತ್ತಿದೆ ಹಾಗೂ ಅದಕ್ಕೆ ಎಷ್ಟು ಖರ್ಚು ಸರ್ಕಾರದಿಂದ ಮಾಡುತ್ತಿದೆ ಮತ್ತು ಸಣ್ಣ ನೀರಾವರಿಯಿಂದ ಎಷ್ಟು ಉತ್ಪಾದನೆ ಆಗುತ್ತಿದೆ ಹಾಗೂ ಅದಕ್ಕೆ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ ಎಂದು ಲೆಕ್ಕವನ್ನು ತೆಗೆದು ನೋಡಿದಾಗ, ಇವತ್ತಿಗೂ ಕೂಡ ಕರ್ನಾಟಕ ರಾಜ್ಯದಲ್ಲಿ ಆಗುತ್ತಿರತಕ್ಕಂಥ ಒಟ್ಟು ಕೃಷಿ ಉತ್ಪನ್ನಗಳಲ್ಲಿ ಶೇಕಡ 70ರಷ್ಟು ಸಣ್ಣ ನೀರಾವರಿಯಿಂದ ಉತ್ಪಾದನೆ ಆಗುತ್ತಿದೆ ಎಂದು ಗೊತ್ತಾಗುತ್ತದೆ. ಆದರೆ ಇವತ್ತು ಒಂದು ಕೆರೆ ಆಗಲಿ, ಕಾಲುವೆ ಆಗಲಿ, ತೂಬು ಆಗಲಿ ರಿಪೇರಿ ಇಲ್ಲ. ಮಳೆಗಾಲದಲ್ಲಿ ಮಳೆ ಬಂದರೆ ಕೆರೆಯಲ್ಲಿ ನೀರು ನಿಂತುಕೊಳ್ಳತಕ್ಕಂಥ ಸ್ಥಿತಿಯಲ್ಲಿ ಕೆರೆಗಳು ಇಲ್ಲ. ಸಣ್ಣ ನೀರಾವರಿಗೆ ಹಣ ಕೊಡತಕ್ಕಂಥ ಸ್ಥಿತಿ ಇಲ್ಲ. ಆದ್ದರಿಂದ ಇಡೀ ಕೃಷಿ ಉತ್ಪಾದನೆಗೆ ಹೊಡೆತ ಬಿದ್ದಿದೆ. ಸರ್ಕಾರ ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಆಹಾರ ಧಾನ್ಯಗಳ ಬಗ್ಗೆ ಪ್ರತ್ಯೇಕವಾಗಿ ಹೇಳುತ್ತಾ 1988-89ರ ಕೃಷಿ ಉತ್ಪಾದನೆ ಗುರಿ 87 ಲಕ್ಷ ಟನ್ನುಗಳಷ್ಟು ರೀಚ್ ಆಗುತ್ತೇವೆಂದು ತಿಳಿಸಲಾಗಿದೆ. ಆದರೆ ಯೋಜನಾ ಆಯೋಗದ ಅಂಕಿ ಅಂಶಗಳ ಪ್ರಕಾರ 2 ಸಾವಿರ ಇಸವಿಗೆ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಗೆ 2 ಹೊತ್ತು ಆಹಾರ ಕೊಡಬೇಕಾದರೆ 142 ಲಕ್ಷ ಟನ್ನುಗಳಷ್ಟು ಆಹಾರ ಬೇಕಾಗಿದೆ ಎಂದು ಅದು ಲೆಕ್ಕ ಹಾಕಿದೆ. 1985-86 ಮತ್ತು 1987-88 ಇಲ್ಲಿಂದ ಲೆಕ್ಕ ಹಾಕಿದರರೆ 67 ಲಕ್ಷ ಟನ್ಸ್ ಆಯಿತು. 1988-89ಕ್ಕೆ ಲಕ್ಷ ಟನ್ಸ್ ಆಹಾರ ಉತ್ಪಾದನೆ ಮಾಡಿದರೆ 2 ಸಾವಿರ ಇಸವಿಗೆ ಇದನ್ನು ಹೇಗೆ ಮೇಕ್ ಅಪ್ ಮಾಡುತ್ತೀರಿ? ಅದರ ಜೊತೆಗೆ 1998-99ರಲ್ಲಿ ಬಡ್ಜೆಟ್‌ನಲ್ಲಿ ನೀವೇನು ಹೇಳಿದ್ದೀರಿ, ಅದರ ಟಾರ್ಗೆಟ್ಟನ್ನೂ ಸಹ ರೀಚ್ ಆಗಲಿಲ್ಲ. ಆಹಾರಧಾನ್ಯಗಳ ಪರಿಸ್ಥಿತಿ ಏನು? ಕರ್ನಾಟಕ ರಾಜ್ಯದ ಪರಿಸ್ಥಿತಿ ಏನಾಗುತ್ತದೆ? ಈಗಾಗಲೇ ಬೆಲೆ ಏರಿಕೆ ಪ್ರಶ್ನೆಯನ್ನೆದುರಿಸುತ್ತಿದ್ದೀರಿ. ಬೆಲೆ ಏರಿಕೆ ಬಗ್ಗೆ ಒಂದೊಂದು ರೀತಿಯಿಂದ ಹಲವಾರು ವ್ಯಾಖ್ಯಾನಗಳು ಬರುತ್ತಿವೆ. ಅಗತ್ಯ ವಸ್ತುಗಳನ್ನಾದರೂ ಪೂರೈಕೆ ಮಾಡುವ ಸ್ಥಿತಿ ಇಲ್ಲದಿರುವಾಗ, ಯಾವ ರೀತಿಯಾದ ಪರಿಣಾಮವಾಗುತ್ತದೆ? ನಾನೇಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ನೀವು ಸಣ್ಣ ನೀರಾವರಿಗೆ ಪ್ರೋತ್ಸಾಹ ಕೊಡದಿದ್ದರೆ, ಹೆಚ್ಚು ಹಣವನ್ನು ಒದಗಿಸದಿದ್ದರೆ, ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡಲು ಸಾಧ್ಯವಿಲ್ಲ. ಕೃಷಿ ಉತ್ಪಾದನೆ ಹೆಚ್ಚಾಗದಿದ್ದರೆ, ಕರ್ನಾಟಕ ರಾಜ್ಯದಲ್ಲಿ ಆಹಾರದ ಬಿಕ್ಕಟ್ಟು ಉದ್ಭವವಾಗುತ್ತದೆನ್ನುವುದನ್ನು ನೀವು ಪರಿಗಣನೆಗೆ ತೆಗೆದುಕೊಂಡಿಲ್ಲ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ಗಡಿ ಭಾಗಗಳಲ್ಲಿ ನಕ್ಸಲೀಯರ ಚಟುವಟಿಕೆಗಳಿರುವ

7444-142

ಪ್ರದೇಶಗಳಲ್ಲಿ ಅವರನ್ನು ನಿಯಂತ್ರಿಸಲು, ಆ ಭಾಗಗಳ ಅಭಿವೃದ್ಧಿಗೆಂದು ಹಣವನ್ನು 1993-94ನೇ ಇಸವಿ ಮತ್ತು ಅದಕ್ಕೂ ಹಿಂದಿನ ವರ್ಷಗಳಲ್ಲಿ ಪ್ರತಿ ಜಿಲ್ಲೆಗಳೂ 20-30 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಿರಿ. ಆದರೆ, 3-4ವರ್ಷಗಳಿಂದ ಅದನ್ನು ನಿಲ್ಲಿಸಿದ್ದೀರಿ. ಬಿ.ಐ.ಡಿ.ಪಿ.ಗೂ ಹಣ ಒದಗಿಸುವುದನ್ನು ನಿಲ್ಲಿಸಿದ್ದೀರಿ. ಅದರ ಜೊತೆಯಲ್ಲಿ ಗಡಿ ಭಾಗಗಳಲ್ಲಿರುವ ಪೋಲೀಸ್ ಠಾಣೆಗಳನ್ನು ಸುಭದ್ರಗೊಳಿಸುತ್ತೇವೆಂದು ನಿಮ್ಮ ಭಾಷಣದಲ್ಲಿ ಹೇಳಿದಿರಿ. ಪೋಲೀಸ್ ಠಾಣೆಯಲ್ಲಿ ಜೀಪ್ ಸಹ ಇಲ್ಲ. ಡಕಾಯಿತರು ಬಂದು ಹೋದ 3 ದಿವಸಗಳ ನಂತರ ಜೀಪ್ ಸಿಗುತ್ತದೆ. ನಿಮ್ಮ ಬೆಳವಣಿಗೆಯ ವಿಜನ್ ಏನು? ಆ ಏರಿಯಾಗಳ ಪೋಲೀಸ್ ಠಾಣೆಗಳಲ್ಲಿ ಹೋಗಿ ನೋಡಿದರೆ ನಿಮಗರ್ಥವಾಗುತ್ತದೆ. ಜೀಪೂ ಇಲ್ಲ, ಒಂದು ಪೋಲೀಸ್ ಠಾಣೆಗಿರಬೇಕಾದ ಸ್ಟಾಫ್ ಮತ್ತು ಏನು ವ್ಯವಸ್ಥೆಗಳಿರಬೇಕಿತ್ತೋ ಅವೂ ಕೂಡ ಇಲ್ಲ. ಈ ರೀತಿಯಾದರೆ ನೀವು ಹೇಗೆ ಕಾನೂನು ಪರಿಸ್ಥಿತಿಯನ್ನು ಹದ್ದುಬಸ್ತಿನಲ್ಲಿ ಇಡುತ್ತೀರಿ? ಹೇಗೆ ಸುಧಾರಣೆ ಮಾಡುತ್ತೀರಿ ಎಂಬುದನ್ನು ತಾವೇ ಹೇಳಬೇಕು.

ಅಧ್ಯಕ್ಷರು : ವೋರಾ ಕಮಿಷನ್, ಧರ್ಮವೀರ ಕಮಿಷನ್ ರಿಪೋರ್ಟ್‌ಗಳಲ್ಲಿ ಪೋಲೀಸರ ಸುಧಾರಣೆ ಬಗ್ಗೆ ಹೇಳಿರುವ ಕುರಿತಂತೆ ತಾವೇನಾದರೂ ಹೇಳುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವ ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು : ತಾವು ತಯಾರಾಗಿ ಬಂದಿದ್ದರೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಧರ್ಮವೀರ ಕಮಿಟಿ ರಿಪೋರ್ಟ್ ಬಗ್ಗೆ ಈ ಸದನದಲ್ಲಿ ಸಾಕಷ್ಟು ಸಲ ಚರ್ಚೆಯಾಗಿದೆ. ಆದರೆ, ಆದರಿಂದೇನಾದರೂ ನಮಗೆ ರಿಸಲ್ಟ್ ಸಿಕ್ಕಿದೆಯೇ?

MR. SPEAKER : You have pointed out the inadequacies in the police department. We all have a duty to advice the government as to how the police department should be organised and how the morale of the department should be increased. That is the only way to safeguard the honour, property and lives of people. If you have any concrete suggestions based on these two reports and on your own thinking, please advise the government.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಾನೂನು ಸುವ್ಯವಸ್ಥೆ ಪ್ರಶ್ನೆ ಬಂದಾಗ, ಈ ರಾಜ್ಯದ ಜನತೆಗೆ ಪೋಲೀಸರ ಮೇಲೆ ನಂಬಿಕೆ ಹೋಗಿದೆ. ಆದರೆ, ಪೋಲೀಸರು ಹಗಲು-ರಾತ್ರಿ ದುಡಿಯುತ್ತಾರೆ. ಯಾರಾದರೂ ಸತ್ತರೆ ಆ ಹೆಣವನ್ನು 24 ಗಂಟೆಯೂ ಕಾವಲು ಕಾಯುತ್ತಾರೆ. ಅಲ್ಲಿಂದ ಪ್ರಾರಂಭವಾಗಿ ಅವರು ಸತತವಾಗಿ ಕೆಲಸ ಮಾಡುತ್ತಾರೆ.

(ಈ ಹಂತದಲ್ಲಿ ಉಪಸಭಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನಲಂಕರಿಸಿದರು.

ಆದರೂ, ಅವರ ಬಗ್ಗೆ ಸಾರ್ವಜನಿಕರಿಗೆ ಕಿಂಚಿತ್ತಾದರೂ ಒಳ್ಳೆಯ ಅಭಿಪ್ರಾಯವನ್ನು ಹುಟ್ಟಿಹಾಕಲು ಆಗಲಿಲ್ಲ. ಏಕೆ? Where lies the mistake? ಅದನ್ನು ಸರ್ಕಾರ ಆಲೋಚನೆ

ಮಾಡಬೇಕಾಗಿದೆ, ಆ ಇಲಾಖೆ ಕೂಡ ಆಲೋಚನೆ ಮಾಡಬೇಕಾಗಿದೆ. ಈ ಇಲಾಖೆ ಆಲೋಚಿಸುವ ಸಂದರ್ಭದಲ್ಲಿ, ಸರ್ಕಾರಕ್ಕೆ ಮತ್ತು ಗೃಹಮಂತ್ರಿಗಳಿಗೆ ಸಂಬಂಧಪಟ್ಟಹಾಗೆ ನಾನೇನು ಹೇಳುತ್ತಿದ್ದೇನೆಂದರೆ, ಮೊದಲನೆಯದಾಗಿ, ಪೋಲೀಸರು ಸೌಜನ್ಯದಿಂದ ನಡೆದುಕೊಳ್ಳುವಂತೆ ತಾವು ಅವರಿಗೆ ಹೇಳಬೇಕು. ಪೋಲೀಸರಿಗೆ ಮಾನಸಿಕ ಒತ್ತಡ ವಿಪರೀತವಾಗಿರುತ್ತದೆ ಎಂಬುದು ನನಗೆ ಗೊತ್ತು. ಆದಿರಿಂದಾಗಿ ಅವರು ತಾಳ್ಮೆ ಕಳೆದುಕೊಂಡು ಬೇಜವಾಬ್ದಾರಿಯಿಂದ ವರ್ತಿಸುವುದು ಅರ್ಥವಾಗುತ್ತದೆ. ಆದರೆ, ಪೋಲೀಸರಿಗೆ ಬೇಕಾಗಿರುವ ಎಲ್ಲಾ ಕನಿಷ್ಠ ಸೌಲಭ್ಯಗಳನ್ನಾದರೂ ಸರ್ಕಾರ ಒದಗಿಸಬೇಕಾಗುತ್ತದೆ. ಅವರ ಸಂಬಳ-ಸಾರಿಗೆಯಿಂದ ಹಿಡಿದು ಅವರಿಗೆ ಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕಾಗುತ್ತದೆ. ಅದನ್ನೆಲ್ಲಾ ಮಾಡಿಕೊಡದೇ ಹೋದರೆ, ನೀವು ಪೋಲೀಸರ ಮೊರೇಲನ್ನು ಹೆಚ್ಚು ಮಾಡಲು ಸಾಧ್ಯವಾಗುವುದಿಲ್ಲ. ನೀವು ಪೋಲೀಸರಿಗೆ ಯೂನಿಯನ್ ಮಾಡಿಕೊಳ್ಳಬಾರದೆಂದು ಹೇಳಿ, ಅದನ್ನು ಇನ್‌ಡಿಸಿಪ್ಲಿನ್ ಎನ್ನುತ್ತೀರಿ. ಅವರ ಸಂಬಳವಿರಬಹುದು, ತುಟ್ಟಿಭತ್ಯೆ ಇರಬಹುದು, ಅಗತ್ಯವಸ್ತುಗಳ ಬಗ್ಗೆ ಅವರ ಬೇಡಿಕೆ ಇರಬಹುದು, ಆದರೆ ನೀವು ಅವರಿಗೆ ಅದರ ಬಗ್ಗೆ ಮಾತನಾಡಲೇ ಅವಕಾಶ ಕೊಡುವುದಿಲ್ಲ. ಯೂನಿಯನ್ ಮಾಡುವುದು ಎಂದರೆ ಸಿದ್ದರಾಮಯ್ಯನವರಿಗೆ ಸಿಟ್ಟು ಬರುತ್ತದೆ. ಆದುದರಿಂದ, ಪೋಲೀಸ್ ಸ್ಟೇಷನ್‌ನ್ನು ಆಧುನೀಕರಣಗೊಳಿಸಬೇಕಾಗಿದೆ. ಸಿದ್ದರಾಮಯ್ಯನವರ ಬಗ್ಗೆ ನಾನು ಬೇಜವಾಬ್ದಾರಿಯಾಗಿ ಮಾತನಾಡುವುದಿಲ್ಲ.

ಶ್ರೀ ಆರ್. ಶ್ರೀನಿವಾಸ್ : ಸರ್ಕಲ್, ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಇವರು ಜಾಸ್ತಿ ಮಾಡಿದ್ದಾರೆಯೇ ಹೊರತಾಗಿ, ಪೋಲೀಸ್ ಪೇದೆಗಳ ಸಂಖ್ಯೆಯನ್ನು ಜಾಸ್ತಿ ಮಾಡಿಲ್ಲ. ಅವರ ಸಂಖ್ಯೆ 20 ವರ್ಷಗಳ ಹಿಂದೆ ಏನಿತ್ತೋ ಅದರ ಮಟ್ಟದಲ್ಲೇ ಇದೆ. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕಾದರೆ ಪೋಲೀಸ್ ಪೇದೆಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೆ ಅದು ಸಾಧ್ಯವಾಗುತ್ತದೆ. ಸರ್ಕಾರ ತೀರ್ಮಾನ ತೆಗೆದುಕೊಂಡು ಕೇವಲ ಸರ್ಕಲ್, ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಅಪ್‌ಗ್ರೇಡ್ ಮಾಡಿದೆ. ಆ ರೀತಿ ಮಾಡುವುದರ ಬದಲಾಗಿ, ಪೋಲೀಸ್ ಸ್ಟಾಫ್ ಸಂಖ್ಯೆ ಜಾಸ್ತಿ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಬ್-ಇನ್ಸ್ ಪೆಕ್ಟರ್‌ಗಳ ನೇರ ನೇಮಕಾತಿ ನಡೆದು ಸುಮಾರು ವರ್ಷಗಳಾಯಿತು. ಎಲ್ಲರಿಗೂ ಪ್ರೊಮೋಷನ್ ಕೊಟ್ಟು ಸಬ್-ಇನ್ಸ್ ಪೆಕ್ಟರ್ ಗೆ ಬಡ್ತಿ ನೀಡಬೇಕಾಗುತ್ತದೆಂದು ಇಷ್ಟು ವರ್ಷ ನಿಲ್ಲಿಸಿದಿರಿ ಈ ವರ್ಷ ಮಾಡಿರಬಹುದು. ಆದರೆ, ಅದರ ಪರಿಣಾಮವನ್ನು ಆ ಇಲಾಖೆಯವರೇ ಹೇಳಬೇಕು. ಪ್ರೊಮೋಷನ್ ಮೇಲೆ ಸಬ್-ಇನ್ಸ್‌ಪೆಕ್ಟರ್ ಆಗಿ ಎಲಿವೇಟ್ ಮಾಡಿದ್ದಾರಲ್ಲಾ, ಅದರ ಪರಿಣಾಮವೇನೆಂಬುದರ ಬಗ್ಗೆ ನನಗಿಂತ ಹೆಚ್ಚಿಗೆ ಆ ಇಲಾಖೆಯವರಿಗೆ ಗೊತ್ತಿದೆ.

SRI SIDDARAMAIAH : Promotion should be given or not?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪ್ರೊಮೋಷನ್ ಕೊಡಬೇಕು. ಆದರೆ, ಯಾವ ಯಾವ ಹಂತದಲ್ಲಿ, ಯಾರ್‍ಯಾರಿಗೆ, ಯಾವ ಲೆಕ್ಕದಲ್ಲಿ ಕೊಡಬೇಕೆನ್ನುವುದನ್ನು ನೀವು ಆಲೋಚನೆ ಮಾಡಬೇಕಾಗುತ್ತದೆ.

ಅದನ್ನು ಬಿಟ್ಟು, ಎಲ್ಲದಕ್ಕೂ ಅದೇ ಮಾನದಂಡ ಉಪಯೋಗಿಸಿದರೆ ಇವತ್ತು ಪೋಲೀಸ್ ಠಾಣೆಯಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಹಾಗಾಗಿ, ಕಾನೂನಿನ ಸುವ್ಯವಸ್ಥೆ ಕಾಪಾಡಬೇಕೆಂದರೆ, ಅವರಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನೂ ತಾವು ಮಾಡಿಕೊಡಬೇಕು, ಆಮೇಲೆ ಬೇಕಾದರೆ ಅವರ ಮೇಲೆ ಆಪಾದನೆ ಮಾಡುವುದಿದ್ದರೆ ಮಾಡಿ. ಇನ್ನೊಂದು ಬಹಳ ಮುಖ್ಯವಾದ ವಿಷಯವೆಂದರೆ, ಪೋಲೀಸರಿಗೂ, ನಮಗೂ ನಿಕಟ ಸಂಬಂಧವೇರ್ಪಡಿಸುವ ಇಲಾಖೆಯೆಂದರೆ ಕಾರ್ಮಿಕ ಇಲಾಖೆ. ಅಲ್ಲಿ ಪೋಲೀಸರಿಗೇನು ಕೆಲಸ? ಶ್ರೀ ಸಿದ್ಧರಾಮಯ್ಯನವರು ಕಾರ್ಮಿಕ ಮಂತ್ರಿಗಳಿದ್ದಾರೆ, ಅವರೇ ಇದಕ್ಕೆ ಉತ್ತರಿಸಬೇಕು. ಬೆಂಗಳೂರು ನಗರದಲ್ಲಿಂದು ಯಾವುದಾದರೂ ಕಾರ್ಖಾನೆಯಲ್ಲಿ ಕಾರ್ಮಿಕರು ಯೂನಿಯನ್ ಕಟ್ಟುತ್ತೇವೆಂದರೆ, ಪೋಲೀಸರು ಮ್ಯಾನೇಜ್‌ಮೆಂಟ್ ಜೊತೆ ಸೇರಿಕೊಂಡು, ಆ ಕಾರ್ಮಿಕರನ್ನು ಸದೆ-ಬಡಿದು, ಅವರ ಮೇಲೆ ಅನಾವಶ್ಯಕವಾದ ಕೇಸ್ ಹಾಕುವುದನ್ನು ನಾವು ನೋಡುತ್ತಿದ್ದೇವೆ. ಇಂದು ಲಕ್ಷಾಂತರ ಅಸಂಘಟಿತ ಕಾರ್ಮಿಕರಿದ್ದಾರೆ. ಹೊಸ ಆರ್ಥಿಕ ಧೋರಣೆಗಳ ಪ್ರಭಾವದಿಂದ ಇವತ್ತು ಎಲ್ಲವೂ ಖಾಸಗೀಕರಣಗೊಳ್ಳುತ್ತಿರುವ ಸಂದರ್ಭದಲ್ಲಿ, ಖಾಸಗಿ ಕಾರ್ಖಾನೆಯ ಕಾರ್ಮಿಕರು ಸಂಘಟನೆಯಾಗದ ಹಾಗೆ ಮಾಡುವ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಅದಕ್ಕೆ ಪೋಲೀಸರು ಮ್ಯಾನೇಜ್‌ಮೆಂಟ್ ಪರವಾಗಿ ನೇರವಾಗಿ ಶಾಮೀಲಾಗಿದ್ದಾರೆ. ಯೂನಿಯನ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದು ಕಳೆದ ನಾಲ್ಕು ತಿಂಗಳಿನಿಂದ ಪೀಣ್ಯಾ ಎಸ್ಟೇಟ್ ನಲ್ಲಿರುವ ಫೋರಾಸೆಸ್ ಎಂಬ ಫ್ಯಾಕ್ಟರಿಯಲ್ಲಿ ಕಾರ್ಮಿಕರು ಹೋರಾಟ ಮಾಡುತ್ತಿದ್ದಾರೆ. ನಾನು ಸ್ವತಃ ಶ್ರೀ ರೋಷನ್ ಬೇಗ್‌ರವರ ಮನೆಯಲ್ಲಿ ಕುಳಿತು, ಕಮಿಷನರ್‌ರವರ ಜೊತೆ ಮಾತನಾಡಿದ್ದೇನೆ. ಈಗ ಅಲ್ಲಿ ಸೆಕ್ಷನ್ 144 ಜಾರಿಗೊಳಿಸಿದ್ದಾರೆ. ಅವರು ಯಾರಿಗಾದರೂ ಹೊಡೆದರೆ? ಏನಾದರೂ ಗಲಾಟೆಯಾಗಿದೆಯೇ? ಪ್ರಾಪರ್ಟಿ ನಷ್ಟವಾಗಿದೆಯೇ? ಪೋಲೀಸರಿಗೇನು ಕೆಲಸ ಅಲ್ಲಿ? ಕಾರ್ಮಿಕ ಇಲಾಖೆಯ ಅಧಿಕಾರಿಗಳು ಇಂದು ಏನಾಗಿದ್ದಾರೆಂದರೆ, ಯಾವುದೇ ರೀತಿಯಲ್ಲಿ ಅವರಿಗೆ ಶಕ್ತಿ ಇಲ್ಲದಂತಾಗಿದೆ. ಕಾರ್ಖಾನೆಗಳ ಮಾಲೀಕರು, ಕಾರ್ಮಿಕರು ಯೂನಿಯನ್ ಮಾಡುತ್ತೇವೆಂದರೆ ಅವರನ್ನು ಡಿಸ್‌ಮಿಸ್ ಮಾಡುತ್ತೇವೆ, ಸಸ್‌ಪೆಂಡ್ ಮಾಡುತ್ತೇವೆ, ಫ್ಯಾಕ್ಟರಿಗೆ ಲಾಕ್ ಔಟ್ ಘೋಷಿಸುತ್ತೇವೆಂದು ಹೇಳುತ್ತಾರೆ. ಯೂನಿಯನ್ ಕಾರಣಕ್ಕಾಗಿಯೇ ಕಳೆದ 3 ದಿವಸಗಳಿಂದ ಬಿಪಿಎಲ್ ಫ್ಯಾಕ್ಟರಿಯಲ್ಲಿ ಹೋರಾಟ ಮಾಡುತ್ತಿದ್ದ ಕಾರ್ಮಿಕರ ಪೈಕಿ 200 ಜನ ಕಾರ್ಮಿಕರನ್ನು ಸಸ್‌ಪೆಂಡ್ ಮಾಡಲಾಗಿದೆ. ಲೇಬರ್ ಕಮೀಷನರ್‌ರವರು ಮಾಲೀಕರಿಗೆ ನೋಟೀಸ್ ಕೊಟ್ಟರೆ, ಅವರು ಅದನ್ನು ತೆಗೆದುಕೊಳ್ಳುವುದೇ ಇಲ್ಲ. ಈ ಪರಿಸ್ಥಿತಿಗೆ ಮಾಲೀಕರು ಬಂದಿದ್ದಾರೆ. ಇದರಲ್ಲಿ ಪೋಲೀಸ್‌ನವರೂ ಕೂಡ ಷಾಮೀಲು ಆಗಿದ್ದಾರೆ. ಪೋಲೀಸರು ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳ ಪರವಾಗಿ ನಿಲ್ಲಬೇಕಾಗಿತ್ತು, ಆದರೆ ಅದನ್ನು ಬಿಟ್ಟು ಮಾಲೀಕರ ಜೊತೆ ಶಾಮೀಲಾಗಿ ಯೂನಿಯನ್ ಅನ್ನೇ ಒಡೆಯತಕ್ಕಂಥ ಪರಿಸ್ಥಿತಿ ಬಂದಿದೆ. ನೀವು ವಿದೇಶಕ್ಕೆ ಹೋಗುವ ಮುಂಚೆ ತಮ್ಮ ಮನೆಯ ಮುಂದೆ ಫೊರೆಸೆಸ್ ಕಾರ್ಖಾನೆಯ ನೌಕರರು ಧರಣಿ ಮಾಡಿದಾಗ, ಅವರಿಗೆ ತಾವು ಒಂದು ಆಶ್ವಾಸನೆ ಕೊಟ್ಟು ವಿದೇಶಕ್ಕೆ ಹೋಗಿದ್ದೀರಿ. ನಾನು ಈ ಸಂಬಂಧವಾಗಿ ಮಾನ್ಯ ಗೃಹ ಸಚಿವರನ್ನು ಕಂಡು ನಂತರ ಪೋಲೀಸ್ ಕಮೀಷನರ್‌ರವರನ್ನು ಭೇಟಿ ಮಾಡಿದರೆ, ಕಮೀಷನರ್‌ರವರೇ ನಮಗ

ಅರ್ಧಗಂಟೆ ಭಾಷಣ ಮಾಡಿ ಮಾಲೀಕರದ್ದೂ ಏನೂ ತಪ್ಪಿಲ್ಲ, ಕಾರ್ಮಿಕರದ್ದೇ ತಪ್ಪು ಎಂದು, ನಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ. ಕಮೀಷನರ್‌ರವರು ಇದಕ್ಕೊಂದು ವಿಚಿತ್ರವಾದ ಕಾರಣ ಕೊಡುತ್ತಾರೆ, ಅದೇನೆಂದರೆ ಕಾರ್ಮಿಕರು ಸ್ಟ್ರೈಕ್ ಮಾಡುವಂಥ ಸಂದರ್ಭದಲ್ಲಿ ನಮ್ಮ ಪೋಲೀಸ್ ರವರನ್ನೇ ತಮ್ಮ ವ್ಯಾನ್‌ನಲ್ಲಿ ಹಾಕಿಕೊಂಡು ಹೋದರು ಎಂದು ಹೇಳುತ್ತಿದ್ದಾರೆ. ಪೋಲೀಸ್‌ನವರು ಡ್ರೆಸ್‌ನಲ್ಲಿ ಇಲ್ಲದಿರುವ ಸಂದರ್ಭದಲ್ಲಿ ಸಾರ್ವಜನಿಕರೆಂದು ಈ ರೀತಿ ವ್ಯಾನಿನಲ್ಲಿ ಹಾಕಿಕೊಂಡು ಹೋಗಿರಬಹುದು. ನಿಮ್ಮ ಕಮೀಷನರ್‌ರವರು ಮಾಲೀಕರ ಪರವಾಗಿ ಅರ್ಧಗಂಟೆ ಭಾಷಣ ಮಾಡುತ್ತಾರೆ. ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರ ಪರವಾಗಿ ನಿಲ್ಲಬೇಕಾದ ನಿಮ್ಮ ಪೋಲೀಸ್ ನವರು, ಮಾಲೀಕರ ಪರವಾಗಿ, ಮೇನೇಜ್‌ಮೆಂಟ್ ಪರವಾಗಿ ಹೋಗಿ ಕಾರ್ಮಿಕರ ಸಂಘಟನೆಯನ್ನು ಒಡೆಯತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಇದೇ ಸದನದಲ್ಲಿ ಗಾರ್ಮೆಂಟ್ಸ್ ವರ್ಕರ್ಸ್ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದರೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವವರಿಗೆ ನೀವೇನು ರಕ್ಷಣೆ ಕೊಟ್ಟಿದ್ದೀರಿ? ಗಾರ್ಮೆಂಟ್ಸ್ ಮಾಲೀಕರು ಗೂಂಡಾಗಳನ್ನು ಕರೆದುಕೊಂಡು ಬಂದು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಜೊತೆಗೆ ಸಂಘರ್ಷಕ್ಕೆ ಇಳಿಸುತ್ತಿದ್ದಾರೆ. ಹೀಗಿದ್ದರೂ ಕೂಡ ಪೋಲೀಸ್‌ನವರು ಇತ್ತ ಕಡೆ ಗಮನ ಕೊಡುತ್ತಿಲ್ಲ. ಕಾರ್ಖಾನೆಯ ಮಾಲೀಕರಿಗೆ, ಲೇಬರ್ ಇಲಾಖೆ ಎಂದರೆ ಕಸದ ಕಡ್ಡಿ ಸಮಾನವಾಗಿದೆ. ಲೇಬರ್ ಇಲಾಖೆಯಿಂದ ಬಂದಿರತಕ್ಕಂಥ ಯಾವುದೇ ಆಜ್ಞೆಗಳನ್ನು, ನೋಟೀಸ್‌ಗಳನ್ನು, ಮಾಲೀಕರು ಪರಿಗಣಿಸುವುದಿಲ್ಲ. ನಿಮ್ಮ ಕನ್‌ಸಿಲೇಷನ್‌ಗೆ ಕೂಡ ಇವರು ಬರುವುದಿಲ್ಲ. ಇವತ್ತು ಕಾರ್ಮಿಕರ ಹಿತರಕ್ಷಣೆ ಕಾಪಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದರ ಜೊತೆಗೆ ಕಾರ್ಮಿಕರ ಚಳುವಳಿ, ಸಂಘಟನೆಗಳ ಮಧ್ಯೆ ಪೋಲೀಸರು ಪ್ರವೇಶ ಮಾಡಬಾರದು, ಪೋಲೀಸರು ಅವರ ಮಧ್ಯೆ ಪ್ರವೇಶ ಮಾಡದ ರೀತಿಯಲ್ಲಿ ನಿಷೇಧಿಸಬೇಕು. ಸರ್ಕಾರ ಈ ಬಗ್ಗೆ ಪೋಲೀಸ್‌ನವರಿಗೆ ಎಚ್ಚರಿಕೆ ಕೊಡಬೇಕು. They have no business unless there is a law and order problem, to interfere I trade union activities. They need not go either with the Management or the Labour Union. ಪೋಲೀಸರು ಮಧ್ಯೆ ಪ್ರವೇಶ ಮಾಡುವುದನ್ನು ಖಡಾಖಂಡಿತವಾಗಿ ನಿಷೇಧಿಸಬೇಕು. ಇನ್ನು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಅಭಿವೃದ್ಧಿ ಮಂಡಲಿಗಳ ಬಗ್ಗೆ ಹೇಳುವುದಾದರೆ, ಮೊದಲನೆಯದಾಗಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಎನ್ನತಕ್ಕಂಥ ಒಂದು ಮಂಡಳಿ ಇದೆ. ಈ ಮಂಡಳಿಗೆ ನೀವು ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ ಆದರೆ ಹಣವನ್ನು ಕೊಡಲಿಲ್ಲ. ಈ ಅಭಿವೃದ್ಧಿ ಮಂಡಲಿಯ ವ್ಯಾಪ್ತಿಗೆ ಬರತಕ್ಕಂಥ 75 ಜನ ಶಾಸಕರು ನಿಜವಾಗಲೂ ನತದೃಷ್ಟರಾಗಿದ್ದಾರೆ. ಏಕೆಂದರೆ ಇಡೀ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಒಂದು ವರ್ಷಕ್ಕೆ ನೀವು ಸುಮಾರು ಐದು-ಆರು ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತೀರಿ. ಈ ಹಣವನ್ನು 75 ಕ್ಷೇತ್ರಗಳಿಗೆ ವಿಂಗಡಿಸಿದರೆ ಸುಮಾರು ಒಂದೊಂದು ಕ್ಷೇತ್ರಕ್ಕೆ ಎರಡೂವರೆ ಲಕ್ಷ ರೂಪಾಯಿ ಬರಬಹುದು.

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : 1997-98ನೇ ಸಾಲಿಗೆ 26ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆ ಮಾಡಿಕೊಡಿ ಎಂದು ಪ್ರತಿ ಕ್ಷೇತ್ರಕ್ಕೂ ಕಳುಹಿಸಿಕೊಟ್ಟರು. ಇಷ್ಟೊಂದು ಹಣ ಪ್ರತಿ ಕ್ಷೇತ್ರಕ್ಕೂ

ಬರುತ್ತದೆಂದು ನಮಗೆ ಬಹಳ ಖುಷಿಯಾಯಿತು. ಆರು ತಿಂಗಳು ಕಳೆದ ಮೇಲೆ ಇಪ್ಪತ್ತಾರು ಲಕ್ಷ ರೂಪಾಯಿದ್ದುದ್ದು ಹತ್ತು ಲಕ್ಷಕ್ಕೆ ಮಿತಿ ಮಾಡಿದರು. ಆಗ ನಾವು ಎಲ್ಲರೂ ಸೇರಿ ಪಕ್ಷ ಭೇದ ಮರೆತು ಇಲ್ಲಿ ಧರಣಿ ಮಾಡಿದಾಗ, ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರತಿ ಕ್ಷೇತ್ರಕ್ಕೂ 25 ಲಕ್ಷ ರೂಪಾಯಿ ಕೊಡುವುದಾಗಿ ಹೇಳಿದರು. ಆದರೆ ಇದು ಅಖೈರಾಗಿ ತೀರ್ಮಾನವಾಗಿರುವ ಹಣ ಎಷ್ಟು ಎಂದರೆ ಕೇವಲ ಏಳು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ, ಆ ಹಣ ಕೂಡ ಇನ್ನೂ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಸದಸ್ಯರು ಹೇಳುವಂತೆ ಪ್ರತಿ ಕ್ಷೇತ್ರಕ್ಕೂ 5-6 ರೂಪಾಯಿ ಹಣವೂ ಕೂಡ ಇಲ್ಲಿಯವರೆವಿಗೂ ಬರಲಿಲ್ಲ. ಮಾನ್ಯ ಹಣಕಾಸಿನ ಸಚಿವರು ಸದನದಲ್ಲಿ 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಏನು ಪ್ರಾಮಿಸ್ ಮಾಡಿದ್ದರೋ ಆ ಹಣವೂ ಕೂಡ ಬರಲಿಲ್ಲ. ಪ್ರತಿ ವರ್ಷ ಬರತಕ್ಕಂಥ ಹಣ ಬಾರದೇ ಇರುವುದರಿಂದ ಯಾವ ಅಭಿವೃದ್ಧಿ ಕೆಲಸಗಳೂ ಆಗಿಲ್ಲ ಎಲ್ಲಾ ಸ್ಥಗಿತವಾಗಿದೆ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ, ಬೇರೆ ಅಭಿವೃದ್ಧಿ ಮಂಡಲಿಗಳಾದ, ಮಲೆನಾಡು ಅಭಿವೃದ್ಧಿ ಮಂಡಳಿ, ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚಿನ ಹಣ ಸರ್ಕಾರದವರು ಕೊಡುತ್ತಾರೆ. ಈ ವರ್ಷ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸುಮಾರು 30-40 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇದ್ದು ಇಲ್ಲದ ಹಾಗೆ ಇದೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ : ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಈ ಬಗ್ಗೆ ನಾವು ಎಲ್ಲರೂ ಪಕ್ಷಾತೀತವಾಗಿ ಇಲ್ಲಿ ಹೋರಾಟ ಮಾಡಿದ್ದೇನೆ. ಈ ವಿಷಯದಲ್ಲಿ ಕೂಡ ಸರ್ಕಾರ ವಿಫಲವಾಗಿದೆ. ಸುಮಾರು ವರ್ಷಗಳಿಂದ ನಮಗೆ ಅನ್ಯಾಯವಾಗಿದೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಹಾಗೂ ನಂತರ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲೂ ಸಹ ಮಾನ್ಯ ಹಣಕಾಸಿನ ಸಚಿವರು ಈ ಭಾಗಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ನೀಡಿದ್ದರು. ಈ ಬಗ್ಗೆ ಹೆಚ್ಚಿನ ಗಮನ ನೀಡಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಹಣಕಾಸಿನ ಸಚಿವರು ಹೊರಗೆ ಹೋಗಿದ್ದಾರೆ. ಅವರು ಉತ್ತರ ಕೊಡುವ ಕಾಲಕ್ಕೆ ತಾವು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಹಾಗೆ ಉತ್ತರಿಸುತ್ತಾರೆ. ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಶ್ರೀರಾಮರೆಡ್ಡಿಯವರೇ ತಾವು ಮುಂದುವರೆಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಬಗ್ಗೆ ಮಾತನಾಡುತ್ತಿದ್ದೆ. ಈ ಮಂಡಳಿಯ ವ್ಯಾಪ್ತಿ ಸುಮಾರು 75 ಕ್ಷೇತ್ರಕ್ಕೂ ಬರುತ್ತದೆ. ಬೇರೆ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚಿನ ಹಣ ಕೊಡುತ್ತಾರೆಂದು ನಾವು ಹೇಳಿದರೆ ಅದು ತಪ್ಪು ಅಭಿಪ್ರಾಯವಾಗುತ್ತದೆ. ನೀವು ಬೇರೆ ಮಂಡಳಿಗಳಿಗೆ ಹಣ ಕೊಡಿ ನಾವೇನೂ ಬೇಡ ಎಂದು ಹೇಳುವುದಿಲ್ಲ. ಆದರೆ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ಎಷ್ಟು ತಾಲ್ಲೂಕುಗಳು ಬರುತ್ತವೆ, ಬಯಲು ಸೀಮೆ

ಅಭಿವೃದ್ಧಿ ಮಂಡಳಿಯಲ್ಲಿ ಎಷ್ಟು ತಾಲ್ಲೂಕುಗಳು ಬರುತ್ತವೆ? ನೀವು ಕೊಡತಕ್ಕಂಥ ಹಣ ಎಷ್ಟು ಎಂಬುದನ್ನು ತಾವು ಲೆಕ್ಕ ಹಾಕಬೇಕು. ಏಕೆಂದರೆ, ಬಯಲು ಸೀಮೆ ಅಭಿವೃದ್ಧಿಯ ಮಂಡಳಿಯ ವ್ಯಾಪ್ತಿಗೆ 75 ಕ್ಷೇತ್ರ ಸೇರಿದರೆ ಐದು ಕೋಟಿ ರೂಪಾಯಿ ಹಣ ಕೊಡುತ್ತೀರಿ. ಅದರಂತೆ ಮಲೆನಾಡು ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂಪಾಯಿ ಕೊಡುತ್ತೀರಿ. ಅದರಂತೆ ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿಗೆ 100 ಕೋಟಿ ರೂಪಾಯಿ ಕೊಡುತ್ತೀರಿ. ಹೀಗಾದರೆ ಸರ್ಕಾರದ ಧೋರಣೆ ಏನು ಎನ್ನತಕ್ಕಂಥ ವಿಷಯವನ್ನು ತಾವು ಹೇಳಬೇಕಾಗುತ್ತದೆ. ಈ ಅಭಿವೃದ್ಧಿ ಮಂಡಳಿಗಳಿಗೆ ಸರಿಯಾದ ರೀತಿಯಲ್ಲಿ ಹಣ ಕೊಟ್ಟು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ಇದ್ದರೆ ಮಾತ್ರ ಈ ಮಂಡಳಿಗಳನ್ನು ರಚನೆ ಮಾಡಿ. ಇಲ್ಲದಿದ್ದರೆ ಈ ಮಂಡಳಿಗಳನ್ನು ರದ್ದು ಮಾಡಿಬಿಡಿ. ಎಲ್ಲಾ ಮಂಡಳಿಗಳಲ್ಲಿರುವ ಶಾಸಕರುಗಳಿಗೆ ಹಣ ಕೊಡುತ್ತಾರೆಂದು ಅಲ್ಲಿ ಪ್ರಚಾರವಾಗಿರುತ್ತದೆ. ನಮಗೆ ನೋಡಿದರೆ ಒಂದು ರಸ್ತೆ ಮಾಡಿಸುವುದಕ್ಕೆ ನಮ್ಮ ಹತ್ತಿರ ಶಕ್ತಿ ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಈ ಮಂಡಳಿಗೆ ಪ್ರತಿ ವರ್ಷ ಮೂರು ಲಕ್ಷ ರೂಪಾಯಿ ಕೊಡುವುದಕ್ಕೆ ಮೂರು ವರ್ಷ ಕಾಯಿಸುತ್ತಾರೆ. ಹೀಗಿರುವಾಗ ಈ ಮಂಡಳಿಗಳ ಅವಶ್ಯಕತೆ ಇದೆಯೇ? ಈ ಮಂಡಳಿಗಳನ್ನು ರದ್ದು ಮಾಡಿಬಿಡಿ. ನಮ್ಮ ಮಂಡಳಿಯ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಮಂಡಳಿಯ ಅಧ್ಯಕ್ಷರಿಗೆ ಒಂದು ಕಾರು ಕೂಡ ಕೊಟ್ಟಿಲ್ಲ, ಕಛೇರಿ ಕೂಡ ಇಲ್ಲ, ಕಛೇರಿ ಚಿತ್ರದುರ್ಗದಲ್ಲಿದ್ದರೆ ಅದು ಬಾಡಿಗೆ ಕಟ್ಟಡದಲ್ಲಿದೆ.

(ಗೊಂದಲ)

ನಾವು ಮಾತ್ರ ಗಾಂಧಿ ತರಹ ಇರಬೇಕು. ಬೇರೆಯವರು ಮಾತ್ರ ಒಳ್ಳೆಯ ಹೈ-ಟೆಕ್ ಕಲ್ಚರ್ ತರಹ ಇರಬೇಕು. ಇದು ಯಾವ ನ್ಯಾಯ?

ಶ್ರೀ ಜಗದೀಶ್ ಶೆಟ್ಟರ್ : ನಾವು ಮಂಡಳಿಗೆ ಪತ್ರ ಹಾಕಿದರೆ ಅದಕ್ಕೆ ಉತ್ತರವಿಲ್ಲ, ಫೋನು ಮಾಡಿದರೆ ಯಾರೂ ತೆಗೆದುಕೊಳ್ಳುವವರು ಅಲ್ಲಿ ಇರುವುದಿಲ್ಲ, ಒಟ್ಟಿನಲ್ಲಿ ಅಲ್ಲಿ ಸಿಬ್ಬಂದಿ ಕೂಡ ಇರುವುದಿಲ್ಲ. ಹೀಗಾದರೆ ಹೇಗೆ?

ಮಾನ್ಯ ಸದಸ್ಯರು : ಆ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಿದರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವ ಕಾರಣಕ್ಕೋಸ್ಕರ ಸುಮಾರು 50-60 ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ಮಾಡಿದ್ದೀರಿ? ಇದನ್ನು ಸರ್ಕಾರ ಹೇಳಬೇಕು. ಒಂದು ಕಡೆ ಅಧಿಕಾರ ವಿಕೇಂದ್ರೀಕರಣ ತತ್ವಶಃ ಜಾರಿ ಮಾಡಿದ್ದೇವೆಂದು ಹೇಳತಕ್ಕಂಥ ನೀವು 42 ಜನ ಮಂತ್ರಿಮಂಡಲವನ್ನು ಇಟ್ಟುಕೊಂಡಿರುತ್ತೀರಿ. 60-70 ನಿಗಮ ಮಂಡಳಿಗಳನ್ನು ರಚನೆ ಮಾಡಿದ್ದೀರಿ, ಹೀಗಾದರೆ ವಿಕೇಂದ್ರೀಕರಣ ಬೇಕಾಗಿತ್ತೇ?

12.40 ಪಿ.ಎಂ.

ನೀವು ಪ್ರಾಮಾಣಿಕವಾಗಿ ಅಧಿಕಾರ ವಿಕೇಂದ್ರೀಕರಣ ಮಾಡುವುದೇ ಆಗಿದ್ದರೆ, 42 ಜನ ಮಂತ್ರಿಗಳ ಅವಶ್ಯಕತೆ ಇರಲಿಲ್ಲ. ಏಕೆಂದರೆ ಇವತ್ತು ಎಲ್ಲಾ ಇಲಾಖೆಗಳು ಜಿಲ್ಲಾ ಪಂಚಾಯಿತಿಯ

ವ್ಯಾಪ್ತಿಯ ಒಳಗೆ ಕೆಲಸ ಮಾಡುತ್ತಿವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಒಳಗೆ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ 42 ಜನ ಮಂತ್ರಿಗಳು ನಿಮಗೆ ಏಕೆ ಬೇಕು? ನೀವು ಏಕೆ ಮಾಡಿದ್ದೀರಿ? ಹಾಗಾದರೆ ವಿಕೇಂದ್ರೀಕರಣದ ಪ್ರಶ್ನೆ ಏನು? ಇದೇ ರೀತಿ ನೀವು ನಿಗಮ ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ಮಾಡಿದ್ದೀರಿ. ಇವತ್ತು ನಿಮ್ಮಲ್ಲಿ 42 ಜನ ಮಂತ್ರಿಗಳು ಇದ್ದಾರೆ ಮತ್ತು 70 ಜನ ನಿಗಮ ಮಂಡಳಿಗಳ ಅಧ್ಯಕ್ಷರಗಳು ಇದ್ದಾರೆ. ಇದನ್ನು ಯಾವ ಉಪಯೋಗಕ್ಕೋಸ್ಕರ ಮಾಡಿದ್ದೀರಿ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾಗುತ್ತಿದೆ. ನಿಗಮ ಮಂಡಳಿಗಳಿಂದ ಏನೇನು ಉಪಯೋಗ ಆಗಿಲ್ಲ. ಈ ನಿಗಮ ಮಂಡಳಿಗಳನ್ನು ರಚನೆ ಮಾಡಿರತಕ್ಕಂಥದ್ದು ನಿಮ್ಮ ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸಲಿಕ್ಕೆ ಮಾಡಿದ್ದೀರೇ ಹೊರತು, ಖಂಡಿತವಾಗಿಯೂ ಕೂಡ ನೀವು ಕರ್ನಾಟಕ ರಾಜ್ಯದ ಅಭಿವೃದ್ಧಿಗೋಸ್ಕರ ನಿಗಮ ಮಂಡಳಿಗಳನ್ನು ಮಾಡಿಲ್ಲ. ನೀವು ಮಾಡಿದಂತಹ ಈ ಪಾಪದ ಕೆಲಸಕ್ಕೆ ಇವತ್ತು ನೀವೇ ಬಲಿಯಾಗಿದ್ದೀರಿ. ನಿಗಮ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಿರುವ ಕಾರಣಕ್ಕೋಸ್ಕರವೇ ಇವತ್ತು ನಿಮ್ಮಲ್ಲಿ ಭಿನ್ನಾಭಿಪ್ರಾಯ ಪ್ರಾರಂಭವಾಗಿದೆ. ಇಲ್ಲಿ ಕೆಲವರು ನನ್ನನ್ನು ಮಂಡಳಿಗೆ ಅಧ್ಯಕ್ಷರನಾಗಿ ಮಾಡಿಲಿಲ್ಲವೆಂದು ಮತ್ತೊಬ್ಬರು ನನ್ನನ್ನು ಮಾಡಲಿಲ್ಲವೆಂದು ಇವರುಗಳಲ್ಲಿಯೇ ಭಿನ್ನಾಭಿಪ್ರಾಯ ಪ್ರಾರಂಭವಾಗಿದೆ. ನಿಗಮ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಿರುವುದರಿಂದ ನಿಮಗೆ ರಾಜಕೀಯವಾಗಿಯೂ ಕೂಡ ಹೊಡೆತ ಬಿದ್ದಿದೆ. ಒಂದು ಕಡೆ ನಿಮಗೆ ರಾಜಕೀಯವಾಗಿ ಹೊಡೆತ ಬಿತ್ತು, ಇನ್ನೊಂಡು ಕಡೆ ಕರ್ನಾಟಕ ರಾಜ್ಯದ ಅಭಿವೃದ್ಧಿ ಕೂಡ ಆಗಿಲ್ಲ. ಇವತ್ತು ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಹೇರಳವಾದಂತಹ ಹಣ ಖರ್ಚಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇವತ್ತು ನಿಗಮ ಮಂಡಳಿಯ ಅಧ್ಯಕ್ಷರಾಗಿರುವವರು ರೆಬೆಲ್ ಆಗಿದ್ದಾರೆ, ಆಗದೆ ಇರುವವರೂ ಕೂಡ ರೆಬೆಲ್ ಆಗಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರು ಏಕೆ ರೆಬೆಲ್ ಆಗಿದ್ದಾರೆ ಎಂದರೆ, ಇವರನ್ನು ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದರೆ ಅಲ್ಲಿ ಅಧಿಕಾರ ಮತ್ತು ಹಣ ಕೂಡ ಇಲ್ಲ. ಆದ್ದರಿಂದ ಇಲ್ಲಿ ಕುಳಿತುಕೊಂಡು ಏನು ಮಾಡಬೇಕೆಂದು ಇವತ್ತು ಇವರೆಲ್ಲರೂ ರೆಬೆಲ್ ಆಗಿದ್ದಾರೆ. ಈ ಕಾರಣ ಬಿಟ್ಟರೆ ಬೇರೆ ಪರಿಸ್ಥಿತಿ ಏನೂ ಇಲ್ಲ. ಇವತ್ತು ಅಧಿಕಾರ ವಿಕೇಂದ್ರಿಕರಣವನ್ನು ನೀವು ಅವಹೇಳನ ಮಾಡುತ್ತಿದ್ದೀರಿ. ಆದ್ದರಿಂದ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಿಮಗೆ ಪ್ರಾಮಾಣಿಕವಾದಂತ ಕಾಳಜಿ ಇದ್ದರೆ 42 ಜನ ಮಂತ್ರಿಗಳು ಮತ್ತು 70 ಜನ ಮಂಡಳಿಯ ಅಧ್ಯಕ್ಷರ ಅವಶ್ಯಕತೆ ಇರಲಿಲ್ಲ. ಇವತ್ತು ವಿಶ್ವಾಸ ನಿರ್ಣಯದ ಮೇಲೆ ಪ್ರಶ್ನೆ ಇದೆ. ಆದ್ದರಿಂದ ನಾನು ರಾಜಕೀಯ ಪ್ರಶ್ನೆಗೆ ಬರುತ್ತೇನೆ. ಇವತ್ತು ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಆಗುತ್ತಿದೆ. ನಾನು ಪ್ರಾರಂಭದಲ್ಲಿ ಪ್ರಸ್ತಾಪ ಮಾಡುವಾಗ ಹೇಳಿದೆ, ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡತಕ್ಕಂಥ ನಮ್ಮ ಸ್ನೇಹಿತರಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದವರು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು. ಅದು ಏನೆಂದರೆ, ಇವತ್ತು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೀರಿ. ಈ ಸರ್ಕಾರವನ್ನು ತೆಗೆದು ನೀವಿಬ್ಬರೂ ಸೇರಿ ಸರ್ಕಾರವನ್ನು ಮಾಡುತ್ತೇವೆಂದು ಇವತ್ತು ಸ್ಪಷ್ಟವಾಗಿ ಸದನಕ್ಕೆ ಮತ್ತು ಕರ್ನಾಟಕ ರಾಜ್ಯದ ಜನತೆಗೆ ಹೇಳಬೇಕು. ಒಂದು ವೇಳೆ ಈ ರೀತಿ ಮಾಡದಿದ್ದರೆ, ಸರ್ಕಾರವನ್ನು ಉರುಳಿಸತಕ್ಕಂಥ ಒಂದೇ ಒಂದು ಉದ್ದೇಶ ನಿಮ್ಮಲ್ಲಿ

ಇದ್ದರೆ ನೀವು ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಶೂನ್ಯತ್ವ, ಆಡಳಿತಾತ್ಮಕ ಶೂನ್ಯತ್ವವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ನಾವು ಅಭಿಪ್ರಾಯ ಪಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಸರ್ಕಾರ ರಚನೆ ಮಾಡುವುದಕ್ಕೋಸ್ಕರ ಈ ಅವಿಶ್ವಾಸ ನಿರ್ಣಯಕ್ಕೆ ನಿಮ್ಮ ಬೆಂಬಲ ಇರುತ್ತದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದನ್ನು ನೀವು ತೋರಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲದಿದ್ದರೆ ಇಲ್ಲವಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ. ಏಕೆಂದರೆ ನೀವಿಬ್ಬರೂ ಒಟ್ಟಾಗಿ ಸೇರಿದರೂ ಕೂಡ ಸರ್ಕಾರವನ್ನು ರಚನೆ ಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ನೀವಿಬ್ಬರೂ ಸೇರಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೀರಿ. ಸರ್ಕಾರ ಬಿದ್ದು ಹೋದರೆ ನೀವಿಬ್ಬರೂ ಸೇರಿ ಸರ್ಕಾರ ರಚನೆ ಮಾಡುತ್ತೇವೆಂದು ಕರ್ನಾಟಕ ರಾಜ್ಯದ ಜನತೆಗೆ ಮತ್ತು ಸದನಕ್ಕೆ ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇಲ್ಲದಿದ್ದರೆ ನೀವು ಅರಾಜಕತೆಯನ್ನು ಹುಟ್ಟು ಹಾಕಲಿಕ್ಕೆ ಇವತ್ತು ಅವಿಶ್ವಾಸ ನಿರ್ಣಯವನ್ನು ಮಾಡಿದ್ದೀರಿ ಎನ್ನತಕ್ಕಂಥ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಈ ಅಭಿಪ್ರಾಯವನ್ನು ಏಕೆ ಹೇಳುತ್ತಿದ್ದೇನೆಂದರೆ, 1994ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ನಡೆದಂಥ ಚುನಾವಣೆಯಲ್ಲಿ ಮತಾದೇಶ ನಿಮ್ಮ ವಿರೋಧ ಇದೆ. ಆದರೆ, ಇವರ ಮೇಲಿನ ಪ್ರೀತಿಗೆ ಕರ್ನಾಟಕ ರಾಜ್ಯದ ಜನತೆ ಮತ ಹಾಕಿಲ್ಲ. ನೀವಿಬ್ಬರೂ ಬೇಡವೆಂದು ಇವರಿಗೆ ಮತ ಹಾಕಿದ್ದಾರೆಯೇ ಹೊರತು, ಇವರು ಏನೋ ಉದ್ಧಾರ ಮಾಡುತ್ತಾರೆ, ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂಬ ಕಾರಣಕ್ಕಾಗಿ ಕರ್ನಾಟಕ ರಾಜ್ಯದ ಜನತೆ ಇವರಿಗೆ ಮತ ಹಾಕಲಿಲ್ಲ. ಇವತ್ತು ಕರ್ನಾಟಕ ರಾಜ್ಯದ ಜನತೆಯ ಜನಾದೇಶಕ್ಕೆ ಜನತಾದಳದವರು ಒಂದು ಕಡೆ ದ್ರೋಹ ಮಾಡುತ್ತಿದ್ದಾರೆ, ಇನ್ನೊಂದು ಕಡೆ ಕರ್ನಾಟಕ ಜನತೆ ಇವರನ್ನು ತಿರಸ್ಕಾರ ಮಾಡಿದ್ದಾರೆ. ಆದರೂ ಕೂಡ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆಂದು ಹೇಳುತ್ತಿದ್ದೇನೆ. ಅದಕ್ಕಾಗಿ ನೀವಿಬ್ಬರು ಸೇರಿ ಸರ್ಕಾರ ರಚನೆ ಮಾಡುತ್ತೇವೆ ಎಂಬ ಪ್ರಶ್ನೆಗೆ ಉತ್ತರ ಹೇಳಬೇಕಾಗಿದೆ. 1994ರಲ್ಲಿ ಕರ್ನಾಟಕ ರಾಜ್ಯದ ಜನತೆ ಏನು ತೀರ್ಪು ಕೊಟ್ಟಿದ್ದಾರೆ ಅದರ ಪ್ರಕಾರ ನಡೆಯತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಕರ್ತವ್ಯಕ್ಕೆ ನಾವು ಯಾವುದೇ ಕಾರಣದಿಂದ ಲೋಪ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಏನಾದರೂ ಜನತಾದಳದಲ್ಲಿ ಇವರ ಆಂತರಿಕ ಕಿತ್ತಾಟದಿಂದ ಸರ್ಕಾರ ಬಿದ್ದು ಹೋದರೆ, ಅದಕ್ಕೆ ಕರ್ನಾಟಕ ಜನತೆಯ ವಿಶ್ವಾಸ ಮತ್ತು ದೇಶಕ್ಕೆ ದ್ರೋಹ ಮಾಡಿದವರು ನೀವೇ ಎಂದು ಆಗುತ್ತದೆ. ಆದ್ದರಿಂದ, ನೀವು ಎಚ್ಚರಿಕೆಯಿಂದ ಇದ್ದು, ಅದನ್ನು ಪರಿಗಣನೆ ಮಾಡಬೇಕು. ಇಲ್ಲದಿದ್ದರೆ ನಿಮ್ಮನ್ನು ಇತಿಹಾಸ ಕ್ಷಮಿಸುವುದಿಲ್ಲ. ಇತಿಹಾಸ ಏಕೆ ಕ್ಷಮಿಸುವುದಿಲ್ಲವೆಂದರೆ, ಇವತ್ತು ದೇಶದ ರಾಜಕಾರಣ ಮತ್ತು ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ಅಪಾಯಕಾರಿ ಮತ್ತು ಗಂಡಾಂತಕಾರಿ ಶಕ್ತಿಗಳು ಈ ದೇಶದಲ್ಲಿ ರಣಹದ್ದುಗಳ ರೀತಿಯಲ್ಲಿ ಕಾಡುತ್ತಿವೆ. ಅದನ್ನು ತಪ್ಪಿಸಬೇಕೆಂದು ನಿಮ್ಮಲ್ಲಿ ಪ್ರಾಮಾಣಿಕವಾದ ಕಾಳಜಿ ಇದ್ದರೆ, ಈ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲೆಲ್ಲಾ ಜಾತ್ಯಾತೀತ ಶಕ್ತಿಗಳು ಒಂದಾಗಿರತಕ್ಕಂಥ ಸಂದರ್ಭದಲ್ಲಿ, ಯಾವ ಜನಾದೇಶ ಈ ಕೋಮು ಶಕ್ತಿಗಳ ವಿರುದ್ಧ ಮತ್ತು ಕಾಂಗ್ರೆಸ್‌ನ ದುರಾಡಳಿತದ

7444-143

ವಿರುದ್ಧ ನಿಮಗೆ ಮತ ಕೊಟ್ಟಿದ್ದಾರೆ, ಇದರ ವಿರುದ್ಧವಾಗಿ ಹೋದರೆ ನಿಮಗೆ ಖಂಡಿತವಾಗಿ ಇತಿಹಾಸ ಕ್ಷಮಿಸುವುದಿಲ್ಲ ಮತ್ತೆ ಇಡೀ ಕರ್ನಾಟಕ ರಾಜ್ಯದ ಜನತೆಗೆ ದ್ರೋಹ ಮಾಡಿದವರಾಗುತ್ತೀರಿ. ಈಗ ನಾನು ಮತ್ತೊಮ್ಮೆ ಹೇಳುವುದೇನೆಂದರೆ, ನೀವು ಯಾವ ಕಾರಣಕ್ಕೂ ಕಿತ್ತಾಟ ಮಾಡತಕ್ಕಂಥ ಅವಶ್ಯಕತೆ ಇಲ್ಲ. ನಿಮ್ಮ ತಾತ್ವಿಕ ಭಿನ್ನಾಭಿಪ್ರಾಯ ಮತ್ತು ರಾಜಕೀಯ ಭಿನ್ನಾಭಿಪ್ರಾಯವಾಗಲಿ ಅಥವಾ ಕರ್ನಾಟಕ ರಾಜ್ಯದ ಅಭಿವೃದ್ಧಿ ಬಗ್ಗೆ ಭಿನ್ನಾಭಿಪ್ರಾಯವಾಗಲಿ ಇಲ್ಲ. ಆದರೆ, ಸ್ವಾರ್ಥ ರಾಜಕಾರಣಕ್ಕೋಸ್ಕರ ನೀವು ಕಿತ್ತಾಡುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಜನತಾ ದಳದ ಶಾಸಕಾಂಗ ಸಭೆಗೆ ಮಾನ್ಯ ಶ್ರೀರಾಮರೆಡ್ಡಿಯವರನ್ನು ಆಹ್ವಾನ ಮಾಡಿಕೊಂಡು ಅವರಿಂದ ಸ್ವಲ್ಪ ಪಾಠ ಹೇಳಿಸಿಕೊಳ್ಳಿ.

ಶ್ರೀ ಹೆಚ್. ಡಿ. ಬಸವರಾಜ್ : ಇವರ ಹತ್ತಿರ ಸಲಹೆ ಕೇಳಿದರೆ ಸಿ.ಪಿ.ಎಂ. ಗತಿಯೇ ಆಗುತ್ತದೆ. ದಯವಿಟ್ಟು ಅವರ ಸಲಹೆ ಬೇಡ. ಏಕೆಂದರೆ, ಅವರು ಒಬ್ಬರೇ ಬಂದಿರುವುದರಿಂದ ಹೇಗೋ ಮಾತನಾಡಿಕೊಂಡು ಹೋಗಲಿ. ಅವರಾದರೂ ಜಾಸ್ತಿ ಜನ ಗೆದ್ದು ಬರಲಿ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜೆಡಿಎಲ್‌ಪಿ ಸಭೆಗೆ ನನ್ನಗಿಂತ ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕರೆದುಕೊಂಡರೆ ತುಂಬಾ ಒಳ್ಳೆಯದಾಗುತ್ತದೆ. ಏಕೆಂದರೆ ಅವರಿಗೆ ಸರ್ಕಾರ ರಚನೆ ಮಾಡಿ ಅದನ್ನು ಹೇಗೆ ಬೀಳಿಸಬೇಕು ಮತ್ತು ಹೇಗೆ ಕಟ್ಟಬೇಕೆಂಬ ಅನುಭವ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : 100 ಪರ್ಸೆಂಟ್ ಶ್ರೀ ರಾಮರೆಡ್ಡಿಯವರ ಸಲಹೆಯೇ ಇಂಥವರಿಗೆ ಬೇಕಾಗಿರುವುದು. ಮನೆಗಳಲ್ಲಿ ಜಗಳವಾದಾಗ ಬೇರೆಯವರೇ ಬಂದು ಸಲಹೆ ಕೊಡುವುದು. ಆದ್ದರಿಂದ ಇವರನ್ನು ಕರೆದು ಸಲಹೆ ತೆಗೆದುಕೊಂಡರೆ ಸೂಕ್ತ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರಿಗೆ ರಾಜ್ಯದಲ್ಲಿ ಎಷ್ಟು ಜನ ಬೆಂಬಲ ಕೊಟ್ಟಿದ್ದಾರೆ? ಇವರೊಬ್ಬರು ಬಂದು ಸಲಹೆ ಕೊಡುತ್ತಾರೆಂದರೆ ಅದು ಎಷ್ಟರಮಟ್ಟಿಗೆ ಸಾಧು ಇರುತ್ತದೆ? ಮತ್ತು ಎಷ್ಟರಮಟ್ಟಿಗೆ ಜನ ಅವರ ಮೇಲೆ ವಿಶ್ವಾಸ ಇಟ್ಟಿದ್ದಾರೆಂದು ಗೊತ್ತಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೆನ್ನೆಯಿಂದ ನಮ್ಮ ಒಬ್ಬ ಪ್ರಮುಖ ಹಿರಿಯ ಸಚಿವರೊಬ್ಬರು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿ ಮತ್ತು ವಾಟಾಳ್ ನಾಗರಾಜ್ ಹಾಗೂ ನಮ್ಮ ಸ್ನೇಹಿತರನ್ನು ವೈಯಕ್ತಿಕವಾಗಿ ಕರೆದು, ಬಿದ್ದು ಹೋಗುವ ಸ್ಥಿತಿಯಲ್ಲಿ ನಾವು ಇದ್ದೇವೆ, ಆದ್ದರಿಂದ ನೀವು ಯಾವ ರೀತಿ ಸಹಕಾರ ಕೊಡುತ್ತೀರೆಂದು ಒಬ್ಬೊಬ್ಬ ಮಂತ್ರಿಗಳು ಕರೆದು ಚರ್ಚೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರ ಜೊತೆಯಲ್ಲಿ ಮತ್ತು ಕಾಂಗ್ರೆಸ್ ನವರ ಜೊತೆಯಲ್ಲಿಯೂ ಸಹ ಚರ್ಚೆಯಾಗಿದೆ. ಇವರ್ಯಾರಿಗೂ ಸರ್ಕಾರ ಹೋಗುವುದಕ್ಕೆ ಇಷ್ಟ ಇಲ್ಲ. ಆದರೆ ಸುಮ್ಮನೆ ಇಲ್ಲಿ ನಾಟಕವಾಡುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಯಡಿಯೂರಪ್ಪನವರ ಜೊತೆ ಚರ್ಚೆ ಮಾಡುತ್ತೇವೆಂದು ಹೇಳಿರಬೇಕಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಜೊತೆ ಮತ್ತು ಮಾನ್ಯ ವಾಟಾಳ್ ನಾಗರಾಜ್ ಜೊತೆ ಮಾತನಾಡತಕ್ಕಂಥ ಅವಶ್ಯಕತೆ ಸರ್ಕಾರಕ್ಕೆ ಇಲ್ಲ. ಏಕೆಂದರೆ ನಮಗೆ ಇರುವುದು ಒಂದೇ ಮತ. 40 ಮತ ಇರತಕ್ಕಂಥ ಇವರು ಮತ್ತು ಅವರು ರಾಜಿ ಮಾಡಿಕೊಂಡು ಜನರಿಗೆ ಟೋಪಿ ಹಾಕುತ್ತಿದ್ದಾರೆ. ಸರ್ಕಾರವನ್ನು ಉರುಳಿಸುವುದಕ್ಕೋಸ್ಕರ ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ ಎಂದು ಇವರು ಪ್ರಾಮಾಣಿಕವಾಗಿ ಹೇಳಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೇವೆ. ರಾಜ್ಯದ ಜನತೆಗೆ ದ್ರೋಹ ಮಾಡಿ, ಶಾಪಗ್ರಸ್ತರಾಗಿರತಕ್ಕಂಥ ಸರ್ಕಾರದ ಪರವಾಗಿ ನೀವು ಇರುತ್ತೀರೋ, ನಾವು ಇರುತ್ತೇವೆಯೋ ಎಂಬ ಬಣ್ಣ ಬಯಲಾಗುತ್ತದೆ. ಸ್ವಲ್ಪ ಸಮಯ ಕಾದು ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ಶಾಪ ಯಾರೂ ಹಾಕುತ್ತಿಲ್ಲ. ಆದರೆ, ಇವರು ನೋಡುವುದಕ್ಕಾಗಿ ಅವರ ಮೇಲೆ ಶಾಪ ಹಾಕುತ್ತಿದ್ದಾರೆ. ಒಳಗೆ ಮಾತ್ರ ಸರ್ಕಾರ ಇರಬೇಕೆಂದು ಅವರ ಆಸೆಯಾಗಿದೆ. ಹಿರಿಯ ನಾಯಕರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಂಥ ಸಂದರ್ಭ ಬಂದಾಗ ನಾವು ಸರ್ಕಾರಕ್ಕೆ ಬೆಂಬಲ ಕೊಡುತ್ತೇವೆಂದು ಹೇಳಿದ್ದಾರೆ. ಸ್ವಲ್ಪ ಹೆಚ್ಚುಕಡಿಮೆ ಬಿಜೆಪಿಯವರು ಅವರ ಜೊತೆಗೆ ಇರುವುದು. ಇವತ್ತು ನವ ನಿರ್ಮಾಣ ವೇದಿಕೆಯವರು ನೇರವಾಗಿ ಈ ಸರ್ಕಾರಕ್ಕೆ ಬೆಂಬಲ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅಂದರೆ ಇವತ್ತು ಲೋಕಶಕ್ತಿ ಮತ್ತು ಬಿಜೆಪಿಯವರು ಒಟ್ಟಿಗೆ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕಶಕ್ತಿಗೆ ಮತ್ತು ನಮಗೆ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಹೊಂದಾಣಿಕೆ ಇತ್ತು. ಸದನದ ಒಳಗೆ ಮತ್ತು ವಿಧಾನಮಂಡಲದ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ ನಮಗೂ ಅವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ. ನಮ್ಮ ನಿಲುವು ಬಹಳ ಸ್ಪಷ್ಟವಾಗಿದೆ. ಆದಷ್ಟು ಬೇಗ ಈ ಸರ್ಕಾರವನ್ನು ತೊಲಗಿಸಬೇಕು. ಇದನ್ನು ನಾಳೆ ಅಥವಾ ನಾಡಿದ್ದು ತಾವು ನೋಡುವಿರಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇವರು ಕೃಷ್ಣನ ಲೆಕ್ಕಕ್ಕೆ ಬಂದಿದ್ದಾರೆ. ಟೆಕ್ನಿಕಲ್ ಆಗಿ ಇವರು ವಿರೋಧ, ಆದರೆ ಆತ್ಮೀಯವಾಗಿ ಅವರಿಗೆ ಸಪೋರ್ಟ್ ಮಾಡುತ್ತಾರೆ. ಇವರು ರಾಮನನ್ನು ಬಿಟ್ಟು ಈಗ ಕೃಷ್ಣನ ಲೆಕ್ಕಕ್ಕೆ ಬಂದು ಬಿಟ್ಟರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರು ಪ್ರಾಮಾಣಿಕವಾಗಿ ಸರ್ಕಾರವನ್ನು ಉರುಳಿಸುತ್ತೇವೆಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆಯೇ? ಸದನದ ಪ್ರಾರಂಭದ ದಿವಸವೇ ಮಾನ್ಯ ಯಡಿಯೂರಪ್ಪನವರು ಹೇಳಿದರು. ಮಾನ್ಯ ಜೆ.ಹೆಚ್. ಪಟೇಲರ ಸರ್ಕಾರವನ್ನು ಉರುಳಿಸುವುದಕ್ಕೆ ಸಿರಾದಲ್ಲಿ ಪಿತೂರಿ ನಡೆದಿದೆ ಎಂದು ಹೇಳಿದರು. ಇವರು ಏತಕ್ಕಾಗಿ ಈ ಮಾತನ್ನು ಹೇಳಿದರು. ಅದರ ಅರ್ಥ ಏನು?

ಶ್ರೀ ವಾಟಾಳ್ ನಾಗರಾಜ್ : ಅದರ ಅರ್ಥವೇನೆಂದರೆ ಸರ್ಕಾರ ಉರುಳಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ಅರ್ಥವಾಗಿರುವುದು ಇಷ್ಟೆ. ನಿಮಗೆ ಅರ್ಥವಾಗಿರುವುದನ್ನು ಹೇಳಿದರೆ ನಾವು ಕೇಳುವುದಕ್ಕೆ ತಯಾರಿದ್ದೇವೆ. ಇದು ರಿವರ್ಸ್ ಆದರೆ ಬಹಳ ಚೆನ್ನಾಗಿರುತ್ತದೆ. ಮಾನ್ಯ ಬಸವರಾಜ್‌ರವರು ಹೇಳಿದರು ಇವರ ಸಲಹೆಯನ್ನು ತೆಗೆದುಕೊಂಡು ಏನು ಮಾಡುತ್ತೀರಿ. ಈ ದೇಶದಲ್ಲಿ ಹುಲಿಯೂ ಉಂಟು, ಇರುವೆಯ ದಂಡು ಉಂಟು, ಅದು ಮಾನ್ಯ ಬಸವರಾಜ್ ರವರಿಗೆ ಗೊತ್ತಿರಬೇಕು. ಇರುವೆಯ ದಂಡು ಒಂದಾದರೆ ಯಾವ ಘಟಸರ್ಪ ಕೂಡ ಯಾವ ಹುಲಿಯನ್ನು ಬೇಕಾದರೂ ಮಣಿಸುತ್ತದೆ ಎನ್ನುವುದನ್ನು ಅವರು ತಿಳಿದಿರಬೇಕು. ಜನತಾ ದಳ ಸರ್ಕಾರಕ್ಕೆ ಇವತ್ತು ಹಲವಾರು ರೀತಿಯಲ್ಲಿ ಅವರಿಗೆ ಏನಾದರೂ ರಾಜಕೀಯ ಜವಾಬ್ದಾರಿ ಇದ್ದರೆ ಅವರು ಪ್ರಾಮಾಣಿಕವಾಗಿ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕು. ನಾನು ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯದ ರಾಜಕಾರಣದ ಪರಿಸ್ಥಿತಿ ಈ ರಾಜ್ಯದ ಪರಿಸ್ಥಿತಿ, ದೇಶದ ರಾಜಕಾರಣದ ಪರಿಸ್ಥಿತಿ ದೇಶದ ಪರಿಸ್ಥಿತಿ ಇವತ್ತು ಇದು ಯಾವ ಸ್ಥಿತಿಗೆ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಬೇಜವಾಬ್ದಾರಿತನ ಎಷ್ಟರಮಟ್ಟಿಗೆ ಈ ಶಕ್ತಿಗಳನ್ನು ಬೆಳೆಯಲಿಕ್ಕೆ ಅವಕಾಶ ಮಾಡಿಕೊಡುತ್ತದೆ. ಈ ಶಕ್ತಿಗಳು ಬೆಳೆದಾಗ ಈ ದೇಶದ ಪರಿಸ್ಥಿತಿ ಏನಾಗಬಹುದು. ನಾವು ಆ ರೀತಿಯ ಅಪರಾಧವನ್ನು ಮಾಡಿದಾಗ ಇತಿಹಾಸ ನಮ್ಮನ್ನು ಕ್ಷಮಿಸುತ್ತಾ ಎಂದು ಅವರು ತಮ್ಮ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕು. ನಾವೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಒಂದು ರಾಜ್ಯದ ಭವಿಷ್ಯದ ಚುಕ್ಕಾಣಿಯನ್ನು ಹಿಡಿದುಕೊಂಡಿರುವಂತಹ ಜನ. ರಾಜ್ಯದ ಜನತೆಯ ಬಗ್ಗೆ ಕನಿಷ್ಟ ಕಾಳಜಿ ಇಲ್ಲದಿರತಕ್ಕಂಥ ರೀತಿಯಲ್ಲಿ ವರ್ತನೆ ಮಾಡುತ್ತಾ ಇರತಕ್ಕಂತಹ ಈ ಸಂದರ್ಭದಲ್ಲಿ ನಾವು ಇವತ್ತು ಜನತಾದಳದ ಸರ್ಕಾರ, ಪಕ್ಷಕ್ಕೆ ನಾವು ಹೇಳಬೇಕಾಗಿದೆ. ನಿಮ್ಮ ಭಿನ್ನಮತದಲ್ಲಿ ಯಾವುದೇ ಅರ್ಥವಿಲ್ಲ. ನಿಮ್ಮ ಭಿನ್ನಾಭಿಪ್ರಾಯಗಳಿಗೆ ಯಾವುದೇ ಅರ್ಥವಿಲ್ಲ. ನೀವು ನಿಮ್ಮ ಸ್ವಾರ್ಥ ರಾಜಕಾರಣಕ್ಕೋಸ್ಕರ ಕರ್ನಾಟಕ ರಾಜ್ಯವನ್ನು ಬಲಿ ಮಾಡುತ್ತಿದ್ದೀರಿ, ಎಂದು ಹೇಳುತ್ತಿದ್ದೇನೆ. ಆಡಳಿತ ಪಕ್ಷದವರು ತಮ್ಮ ಜವಾಬ್ದಾರಿಯನ್ನು ಅರಿಯದೆ ಮಾಡುತ್ತಾ ಇರುವಂತಹ ಈ ಕೃತ್ಯದಿಂದ ಕರ್ನಾಟಕ ರಾಜ್ಯಕ್ಕೆ ಎಷ್ಟು ಅನಾಹುತ ಮಾಡುತ್ತದೆ ಎಂದು ನಾನು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವಂತಹ ಇವರ ಜೊತೆನೂ ಬಹಳ ಪ್ರಮುಖವಾದಂತಹ ಅಂಶದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆರ್ಥಿಕ ಧೋರಣೆಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಜನತಾದಳ, ಕಾಂಗ್ರೆಸ್ ಹಾಗೂ ಬಿಜೆಪಿ ಈ ಮೂರು ಪಕ್ಷಗಳಿಗೂ ವ್ಯತ್ಯಾಸವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ನಮ್ಮ ಮುಂದೆ ಇರತಕ್ಕಂಥದ್ದು ಅವಿಶ್ವಾಸ ನಿರ್ಣಯ. ಅದರ ಪರ ಅಥವಾ ವಿರೋಧ. ಈಗ ನಾವು ಪರವಾಗಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಮಾತನಾಡಿ ಸಮರ್ಥನೆಯನ್ನು ಮಾಡುಕೊಂಡಿದ್ದೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಅವಿಶ್ವಾಸ ನಿರ್ಣಯದ ಪರವಾಗಿಯಾದರೂ ಮಾತನಾಡಬೇಕು ಇಲ್ಲ ವಿರುದ್ಧವಾಗಿಯಾದರೂ ಮಾತನಾಡಬೇಕು.

ಶ್ರೀ ಜಿ.ಬಿ. ಶಿವಕುಮಾರ್ : ಶ್ರೀರಾಮರೆಡ್ಡಿಯವರ ಪಾತ್ರ 3ನೆಯ ಅಂಪೈರ್ ಇದ್ದಂತೆ. ಅವರು ಒಳ್ಳೆಯದನ್ನು ಒಳ್ಳೆಯದು ಎಂದು ಹೇಳುತ್ತಾರೆ. ಕೆಟ್ಟದ್ದನ್ನು ಕೆಟ್ಟದ್ದು ಎಂದು ಹೇಳುತ್ತಾರೆ. ಅವರೇ ಸರಿಯಾದ ಅಂಪೈರ್. ಇದನ್ನು ಮಾನ್ಯ ಯಡಿಯೂರಪ್ಪನವರು ಒಪ್ಪಿಕೊಳ್ಳುತ್ತಾರೆಂಬುದು ನನ್ನ ಭಾವನೆ.

ಶ್ರೀ ಕಾಗೋಡು ತಿಮ್ಮಪ್ಪ : ಶ್ರೀರಾಮರೆಡ್ಡಿಯವರು ಜನತಾ ದಳದ ಸರ್ಕಾರ ದ್ರೋಹ ಮಾಡುತ್ತಿದೆ. ಜನಾದೇಶವನ್ನು ಮರೆತಿದೆ ಮುಂತಾಗಿ ಹೇಳುತ್ತಾರೆ. ಆದರೆ ಅವಿಶ್ವಾಸ ನಿರ್ಣಯದ ಪರವಾಗಿ ಮಾತನಾಡಲೂ ತಯಾರಿಲ್ಲ. ಅವರು ಅವಿಶ್ವಾಸ ನಿರ್ಣಯದ ಪರವಾಗಿದ್ದಾರೋ ಅಥವಾ ವಿರುದ್ಧವಾಗಿದ್ದಾರೋ ಅದನ್ನು ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಪರಿವರ್ತನೆಯನ್ನು ಮಾಡಿಕೊಳ್ಳಿ ಎಂದು ಹೇಳುತ್ತಾ ಇರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವಿಶ್ವಾಸ ನಿರ್ಣಯವನ್ನು ರದ್ದುಮಾಡಿ ಅದನ್ನು ಮತಕ್ಕೆ ಹಾಕಬೇಕಾಗಿತ್ತು. ಈ ನಿರ್ಣಯದ ಬಗ್ಗೆ ಮೂರು ದಿವಸದಿಂದ ಏಕೆ ಮಾತನಾಡಬೇಕಾಗಿತ್ತು?

ಶ್ರೀ ಕಾಗೋಡು ತಿಮ್ಮಪ್ಪ : ನಾವು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಮೇಲೆ ಈ ಸದನವನ್ನು ಒಪ್ಪಿಸಬೇಕು. ಅದಕ್ಕೋಸ್ಕರವಾಗಿ ಚರ್ಚೆಯನ್ನು ಮಾಡಬೇಕು ಮತ್ತು ವಿಮರ್ಶೆಯನ್ನು ಮಾಡಿ ಹೇಳಬೇಕಾಗಿದೆ. ನಾವು ಆ ಕೆಲಸವನ್ನು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾವು ಸರ್ಕಾರದ ನ್ಯೂನ್ಯತೆಗಳನ್ನೂ ಸಹ ಹೇಳಬೇಕಾಗುತ್ತದೆ. ಆದರೆ ಸರ್ಕಾರ ....

ಶ್ರೀ ಕಾಗೋಡು ತಿಮ್ಮಪ್ಪ : ಅವರ ವಾದವನ್ನು ಸದನದಲ್ಲಿ ಮಂಡಿಸುವುದಕ್ಕೆ ಸಂಪೂರ್ಣ ಸ್ವಾತಂತ್ರ ಇದೆ, ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ತಾವು ಈ ನಿರ್ಣಯದ ಪರವಾಗಿ ಇರುವವರೋ ಅಥವಾ ವಿರುದ್ಧವಾಗಿ ಇರುವವರೋ ಅದನ್ನು ಹೇಳುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ವಾಟಾಳ್ ನಾಗರಾಜ್ : ನಿರ್ಣಯದ ಪರ ಮತ್ತು ವಿರುದ್ಧ ನಂತರ ತಾನೇ ತೋರಿಸುವುದು. ಯಾರು ನಿರ್ಣಯದ ಪರ ಮತ್ತು ವಿರುದ್ಧ ಒಂದು. ಎರಡನೆಯದಾಗಿ ಈ ಸರ್ಕಾರ ಮಾನ್ಯ ಕಾಗೋಡು ತಿಮ್ಮಪ್ಪನವರೇ .....

ಶ್ರೀ ಕಾಗೋಡು ತಿಮ್ಮಪ್ಪ : ನಾವು ಈ ಸದನಕ್ಕೆ ಕೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಏನೂ ಗೋಪ್ಯವಾಗಿಲ್ಲ. ಈ ಸದನಕ್ಕೆ ಗೊತ್ತಾದ ರೀತಿಯಲ್ಲಿ ಸರ್ಕಾರ ಮಾಡಿರತಕ್ಕಂತಹ ಅನ್ಯಾಯಗಳನ್ನೂ ಸಹ ನಾವು ಹೇಳಬೇಕಾಗುತ್ತದೆ. ಸರ್ಕಾರದ ಅವಧಿ ಇನ್ನೊಂದು ವರ್ಷ ಇರುವಾಗ ಅದನ್ನು ಉರುಳಿಸಿ ಮತ್ತೆ ವಿಸರ್ಜನೆ ಮಾಡಿ ಸರ್ಕಾರ ಚುನಾವಣೆಗೆ ಹೋಗಬೇಕು ಎಂದು ಮಾಡಿದ್ದೀರೋ ....

ಶ್ರೀ ಕಾಗೋಡು ತಿಮ್ಮಪ್ಪ : ನಾನು ಕೇಳುವುದು ಇಷ್ಟೇ, ನಿಮ್ಮ ವಾದ ಈ ನಿರ್ಣಯದ ಪರವಾಗಿಯೋ ಅಥವಾ ವಿರುದ್ಧವಾಗಿಯೋ ಇದು ಈ ಸದನಕ್ಕೆ ಸ್ಪಷ್ಟವಾಗಿ ತಿಳಿಯಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಶ್ರೀರಾಮರೆಡ್ಡಿಯವರು ನಿರ್ಣಯದ ವಿರುದ್ಧವಾಗಿ ಎಂದು ಮಾತನಾಡಿಬಿಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ನಮಗೆ ಯಾವುದೇ ಬೆಂಬಲವಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಕಾಗೋಡು ತಿಮ್ಮಪ್ಪನವರೇ, ಮಾನ್ಯ ಶ್ರೀರಾಮರೆಡ್ಡಿಯವರು ಈಗ ನಿರ್ಣಯದ ವಿರುದ್ಧವಾಗಿ ಮಾತನಾಡಿದ್ದಾರೆ. ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮ ಸರ್ಕಾರ ಉಳಿದುಕೊಳ್ಳಬೇಕು. ಬೇರೆ ಶಕ್ತಿಗಳು ಇಲ್ಲಿ ಬರುವುದಕ್ಕೆ ಬಿಡಬೇಡಿ. ನೀವು ಕಡ್ಡಾಯವಾಗಿ ಇರಬೇಕು ಎಂದು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಿಮಗೇನಾದರೂ ತೊಂದರೆಯಾದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಅನೇಕರು ಆ ಪಕ್ಷದಲ್ಲಿರುವವರು ಸರ್ಕಾರದ ವಿರುದ್ಧವಾಗಿ ಮಾತನಾಡುತ್ತಾರೆ. ಆದರೆ ಅವರುಗಳು ಮತ ಹಾಕುವಾಗ ಸರ್ಕಾರದ ಪರವಾಗಿಯೇ ಹಾಕುತ್ತಾರೆ. ಇಲ್ಲಿ ನಾವು ಸರ್ಕಾರದಿಂದ ಆಗಿರುವಂತಹ ನ್ಯೂನತೆಗಳನ್ನು ನಾವು ಹೇಳಬೇಕಾಗುತ್ತದೆ.

ಶ್ರೀ ಜಿ.ಬಿ. ಶಿವಕುಮಾರ್ : ಇಲ್ಲಿ ಇಬ್ಬರು ಥರ್ಡ್ ಅಂಪೈರ್‌ಗಳಾಗಲು ಸಾಧ್ಯವಿಲ್ಲ. ಒಂದು ಶ್ರೀರಾಮರೆಡ್ಡಿಯವರು ಮತ್ತೊಂದು ಶ್ರೀ ವಾಟಾಳ್ ನಾಗರಾಜ್‌ರವರು,

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ನೀವು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತರತಕ್ಕಂತಹ ಅವಶ್ಯಕತೆ ಇರಲಿಲ್ಲ. ನಿಮ್ಮಲ್ಲಿ ಮೂಲಭೂತವಾದ ವಿಷಯದ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲ. ನೀವು ಏತಕ್ಕಾಗಿ ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ನಾನು ಹೇಳುವುದೇನೆಂದರೆ ಜನತಾದಳಕ್ಕೆ ಕಾಂಗ್ರೆಸ್ ಪಕ್ಷಕ್ಕೆ, ಬಿಜೆಪಿ ಪಕ್ಷಕ್ಕೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟಹಾಗೆ ಮೂಲಭೂತವಾದ ವ್ಯತ್ಯಾಸಗಳಾಗಲಿ, ಭಿನ್ನಾಭಿಪ್ರಾಯಗಳಾಗಲಿ ಇಲ್ಲ. ಹೀಗಿರುವಂತಹ ಸಂದರ್ಭದಲ್ಲಿ ನೀವು ಯಾವ ಕಾರಣಕ್ಕಾಗಿ ಅವಿಶ್ವಾಸ ನಿರ್ಣಯವನ್ನು ಅವರ ಮೇಲೆ ತಂದಿರುವ ಬಗ್ಗೆ ನೀವೇ ಸ್ಪಷ್ಟ ಮಾಡಬೇಕಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವು ಮೂಲಭೂತವಾದ ಅಂಶಗಳನ್ನು ಮುಟ್ಟಲೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ. ದಯವಿಟ್ಟು ತಾವೆಲ್ಲರೂ ಈ ನಿರ್ಣಯದ ಬಗ್ಗೆ ಬೆಂಬಲ ಕೊಡಿ ಎಂದು ಅವರು ಕೊನೆಗಳಿಗೆಯಲ್ಲಿ ಕೇಳಿಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಾವು ಈ ಸದನದಲ್ಲಿ ಬಹಳ ಹಿರಿಯ ಸದಸ್ಯರಾಗಿದ್ದೀರಿ. ನಮಗಿಂತ ತಾವು ಅನುಭವಿಗಳು, ತಾವು ದಯವಿಟ್ಟು ಈ ವಿಷಯದ ಬಗ್ಗೆ ಅರ್ಥಮಾಡಿಕೊಳ್ಳಬೇಕು. ನೀವು ಮೂಲಭೂತವಾದ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯಗಳು

ಇವೆ ಎಂದು ಹೇಳಲಿಲ್ಲ. ನೀವು ಸರ್ಕಾರ ಮಾಡಿರತಕ್ಕಂತಹ ಲೋಪದೋಷಗಳು ಮತ್ತು ವಿಫಲತೆಗಳನ್ನು ಎತ್ತಿ ಹಿಡಿದಿದ್ದೀರಿ......

ಶ್ರೀ ಮಂಜುನಾಥ್ ಸಿ. ಕುನ್ನೂರು : ಅವರಿಂದ ನಮ್ಮ ಪಕ್ಷದವರು ಏನೂ ಪಾಠ ಕಲಿಯಬೇಕಾಗಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಭಾಷಣವನ್ನು ಮುಂದುವರಿಸಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮಾತನಾಡುತ್ತಿದ್ದೆ ಇಲ್ಲಿ ಅವರೇ ಅಡ್ಡಬಂದದ್ದು. ಇಲ್ಲಿ ನಾನು ಹೇಳಿದ್ದು ನೀವು ಸರ್ಕಾರದ ಲೋಪದೋಷಗಳನ್ನು ಮತ್ತು ವಿಫಲತೆಗಳನ್ನು ಎತ್ತಿ ಹೇಳಿದ್ದೀರಿ. ಆದರೆ ಮೂಲಭೂತವಾಗಿ ಅವರು ಅನುಸರಿಸತಕ್ಕ ಆರ್ಥಿಕ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯವಿದೆ ಎಂದು ತಾವು ಯಾವುದೇ ಸಂದರ್ಭದಲ್ಲಿಯೂ ಹೇಳಲಿಲ್ಲ. ಇಲ್ಲಿ ನಾನು ಏತಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, 1991ನೇ ಇಸವಿಯಲ್ಲಿ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಪಿ.ವಿ. ನರಸಿಂಹರಾವ್ ರವರು ತಂದಿರತಕ್ಕಂತಹ ಹೊಸ ಆರ್ಥಿಕ ಧೋರಣೆಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಇವರೇನೂ ಹಿಂದೆ ಬೀಳಲಿಲ್ಲ. ಇವರು ಅವರಿಗಿಂತ ಜೋರಾಗಿಯೇ ಪ್ರಯತ್ನ ಮಾಡಿದರು. ಇವರು ಎಷ್ಟೇ ಪ್ರಯತ್ನ ಮಾಡಿದರೂ ಸಹ ಕರ್ನಾಟಕ ರಾಜ್ಯಕ್ಕೆ ವಿದೇಶದಿಂದ ಹಣ ಬಂದದ್ದು ಎಷ್ಟು ಎಂದು ಲೆಕ್ಕ ಹೇಳಬೇಕು. ಆ ಹಣ ಯಾವ ಉದ್ದೇಶಕ್ಕಾಗಿ ಬಂದಿದೆ ಎಂದು ಲೆಕ್ಕ ಹಾಕಬೇಕು. ಅದು ಭಾರತ ದೇಶದ ಒಂದು ಭಾಗವೇ, ಮತ್ತೇ ಅದು ಕರ್ನಾಟಕ ರಾಜ್ಯ ಪ್ರತ್ಯೇಕವಲ್ಲ. ಇವತ್ತು ನಮ್ಮ ದೇಶದ ಪರಿಸ್ಥಿತಿ ಏನಾಗಿದೆಯೋ ಅದೇ ನಮ್ಮ ಕರ್ನಾಟಕ ರಾಜ್ಯದ ಪರಿಸ್ಥಿತಿಯಾಗಿದೆ. ವಿದೇಶದಿಂದ ಹೇರಳವಾದ ಬಂಡವಾಳ ಹರಿದುಬರುತ್ತದೆ. ನಾವು ಏನೇನು ಆಗಿಬಿಡುತ್ತೇವೆ ಎಂದು ಕಲ್ಪನೆಯನ್ನು ಹೊತ್ತಿಕೊಂಡಿದ್ದೆವು, ಅದು ಆಗಲಿಲ್ಲ. ಆದರೆ ಬಿಜೆಪಿಯವರು ಏನಾದರೂ ಬದಲಾವಣೆ ಮಾಡಿದ್ದಾರೆಂದರೆ ಅವರೂ ಸಹ ಏನೂ ಮಾಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ವಿದೇಶಿ ಬಂಡವಾಳ ಬೇಕು ಎಂದು ಬೇಡಿಹೋದವರಲ್ಲಿ ಕೇರಳರಾಜ್ಯವೂ ಉಂಟು. ವೆಸ್ಟ್ ಬೆಂಗಾಲ್ ಸಹ ಉಂಟು. ಕೇರಳದ ಮುಖ್ಯಮಂತ್ರಿಯವರು ವಿದೇಶಿ ಯಾತ್ರೆಯನ್ನು ಮಾಡಲಿಲ್ಲವೇ? ಅವರನ್ನು ಆಹ್ವಾನ ಮಾಡಲಿಲ್ಲವೇ ವಿದೇಶಿಯರನ್ನು ಇಲ್ಲಿಗೆ ಬಂದು ಬಂಡವಾಳ ಹೂಡಿ ಎಂದು ಕೇಳಲಿಲ್ಲವೇ?

ಶ್ರೀ ಯು.ಆರ್. ಸಭಾಪತಿ : ಕರ್ನಾಟಕದಲ್ಲಿ ರಿಜೆಕ್ಟ್ ಆದದ್ದನ್ನು ವೆಸ್ಟ್ ಬೆಂಗಾಲ್‌ನಲ್ಲಿ ಇಂಪ್ಲಿಮೆಂಟ್ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ನಾವು ವಾದ ಮಾಡೋಣ, ವಾದ ಮಾಡುವುದರಲ್ಲಿ ತಪ್ಪು ಏನೂ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ತಾವು ಭಾಷಣವನ್ನು ಮುಂದುವರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿದೇಶಿ ಬಂಡವಾಳವನ್ನು ಭಾರತದ ಒಳಗಡೆ ಬರುವುದಕ್ಕೆ ವಿರೋಧ ಮಾಡತಕ್ಕಂತಹ ಅವಶ್ಯಕತೆ ಇಲ್ಲಿ ಯಾರಿಗೂ ಇಲ್ಲ. ಅದು ನಾವಾಗಬಹುದು ಅಥವಾ ನೀವಾಗಬಹುದು. ಆದರೆ ಇಲ್ಲಿ ಪ್ರಶ್ನೆ ಇರುವಂತದ್ದು ಆದರೆ ವಿದೇಶಿ ಬಂಡವಾಳ ಯಾವ ಷರತ್ತಿನ

ಒಳಗಡೆ ನಮ್ಮ ದೇಶಕ್ಕೆ ಬರಬೇಕು, ಯಾವ ಕಾರಣಕ್ಕೆ ಬರಬೇಕು ಎಂಬುದರ ಬಗ್ಗೆ ಬಹಳ ಮುಖ್ಯವಾದಂತಹ ಭಿನ್ನಾಭಿಪ್ರಾಯ ಇರತಕ್ಕಂಥದ್ದು.

ಉಪಾಧ್ಯಕ್ಷರು : ಮಾನ್ಯ ಕಾಗೋಡು ತಿಮ್ಮಪ್ಪನವರೇ, ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವುದಕ್ಕೆ ಅವಕಾಶಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಪಶ್ಚಿಮ ಬಂಗಾಳ್‌ದವರು ಮತ್ತು ಕೇಂದ್ರ ಸರ್ಕಾರದವರು ಈ ಹಣವನ್ನು ವಿದೇಶದಲ್ಲಿ ತೊಡಗಿಸುವುದಕ್ಕೆ ಆಹ್ವಾನ ಮಾಡಿದ್ದಾರೋ, ಮಾಡಲಿಲ್ಲವೋ .... ಕಂಡೀಷನನ್ನು ಅವರು ಹಾಕುವುದಕ್ಕೆ ಬರುವುದಿಲ್ಲ, ಕೇಂದ್ರ ಸರ್ಕಾರದವರು ಹಾಕಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅದನ್ನೇ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವಿದೇಶಿ ಬಂಡವಾಳ ಭಾರತದೊಳಗಡೆ ಬರಬಾರದೆಂದು ಹೇಳತಕ್ಕಂತಹ ತೀರ್ಮಾನಕ್ಕೆ ನಾವು ಬಂದಿಲ್ಲ, ಯಾರೂ ಬರತಕ್ಕಂತಹ ಅವಶ್ಯಕತೆ ಇಲ್ಲ. ಆದರೆ ಯಾವ ಷರತ್ತಿನ ಮೇಲೆ ಬರಬೇಕು. ಯಾವ ಕಾರಣಕ್ಕೋಸ್ಕರ ಬರಬೇಕು ಬಹಳ ಮುಖ್ಯವಾದ ಅಂಶವಿದೆ. ಆ ಅಂಶದಲ್ಲಿ ಪಶ್ಚಿಮಬಂಗಾಳ ಸರ್ಕಾರವಾಗಲೀ ಕೇರಳದ ಸರ್ಕಾರವಾಗಲೀ ವಿದೇಶಿ ಬಂಡವಾಳವನ್ನು ಆಹ್ವಾನ ಮಾಡಲಿಲ್ಲ. ಆಹ್ವಾನವನ್ನು ಮಾಡಿದ್ದರೆ ನಮ್ಮ ಷರತ್ತಿಗೆ ಒಳಪಟ್ಟು ಬಂಡವಾಳ ನೀವು ಹಾಕುವುದಾದರೆ ನಾವು ಆಹ್ವಾನವನ್ನು ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಏನು ಹೇಳುತ್ತಾರೆ ಹಣಕಾಸಿನ ಸಚಿವರು ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಅದರ ಪರಿಣಾಮ ಏನಾಗಿದೆ ಎನ್ನುವುದನ್ನು ನೋಡಬೇಕು ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಆವಾಗಿನಿಂದ ಯೋಚಿಸುತ್ತಿದ್ದೆ. ಸಿಪಿಎಂನ ಶ್ರೀರಾಮರೆಡ್ಡಿಯವರು ವಿದೇಶಿ ಬಂಡವಾಳದ ಬಗ್ಗೆ ಹೇಳುತ್ತಿದ್ದಾರೆ. ಸಿಪಿಎಂನ ಬಂಡವಾಳನೇ ವಿದೇಶಿ ವಿಚಾರ. ನಿಮ್ಮ ವಿಚಾರ ಇದೆಯಲ್ಲಾ ಅದು ಸ್ವದೇಶದ್ದು ಅಲ್ಲ. ನಿಮ್ಮ ವಿಚಾರನೇ ವಿದೇಶಿ ಬಂಡವಾಳ. ಸುಮ್ಮನೆ ಏಕೆ ಮಾತನಾಡುತ್ತೀರಿ ?

ಶ್ರೀ ಯು.ಆರ್. ಸಭಾಪತಿ : ಸ್ವದೇಶಿಯವರೇ, ನೀವೂ ಈ ವಿದೇಶದ ವಿಚಾರಧಾರೆಯಲ್ಲಿಯೇ ಹೋಗುತ್ತಿದ್ದೀರಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮದು ವಿದೇಶಿ ವಿಚಾರ. ಅವರದ್ದು ಸ್ವದೇಶಿ ವಿಚಾರ. ನಮ್ಮದು ಇಂಪೋರ್ಟೆಡ್ ಐಡಿಯಾಲಜಿ ಇವರದು ಇಲ್ಲೆ ಮಣ್ಣಿನಲ್ಲಿ ಹುಟ್ಟಿದ ಐಡಿಯಾಲಜಿ. ಇವರು ಬರತಕ್ಕದ್ದೆಲ್ಲವೂ ವಿದೇಶದಿಂದ. ಈ ದೇಶವನ್ನು ವಿದೇಶಕ್ಕೆ ಒತ್ತೆ ಇಡತಕ್ಕದ್ದು. ಇವರು ಹುಟ್ಟತಕ್ಕದ್ದು ವಿದೇಶದಿಂದಲೇ. ಈ ದೇಶವನ್ನು ಒತ್ತೆ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ಸರ್ಕಾರಕ್ಕೆ ಬೆಂಬಲ ಕೊಟ್ಟು ಈ ದೇಶವನ್ನು ವಿದೇಶಕ್ಕೆ ಒತ್ತೆ ಇಡತಕ್ಕ ಕೆಲಸವನ್ನು ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಅಧಿಕಾರಕ್ಕೆ ಬಂದ ಮೇಲೆ ಬದಲಾವಣೆ ಮಾಡಲಿಲ್ಲ. ಏನೂ ಮಾಡಲಿಲ್ಲ. ವರ್ಷದಲ್ಲಿ ಎಷ್ಟು ಬಂಡವಾಳ ವಿದೇಶದಿಂದ ಬಂದಿದೆ ಎಷ್ಟು ಜಾಸ್ತಿಯಾಗಿದೆ ಎನ್ನುವ ಲೆಕ್ಕವಿದೆ.

ಉಪಾಧ್ಯಕ್ಷರು : ಮಾನ್ಯ ರೆಡ್ಡಿಯವರೇ, ನೀವು ಮಾತನಾಡುವಾಗ ಸದಸ್ಯರನ್ನು ಏಕೆ ನೋಡುತ್ತೀರಿ? ನೇರವಾಗಿ ನನ್ನ ಕಡೆಗೆ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸ್ವದೇಶದ ಐಡಿಯಾಲಜಿ ಇರತಕ್ಕವರು ವಿದೇಶಕ್ಕೆ ನಮ್ಮ ದೇಶವನ್ನು ಯಾವ ರೀತಿ ಒತ್ತೆ ಇಟ್ಟಿದ್ದಾರೆನ್ನುವ ಲೆಕ್ಕ ನನ್ನ ಹತ್ತಿರವಿದೆ. ಇವರು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ತಡೆಹಿಡಿದಿದ್ದಾರೆನ್ನುವ ಲೆಕ್ಕವಿದೆ. 1998ನೇ ಕೊನೆಗೆ ಅಂದರೆ 1997ನೇ ಮಾರ್ಚಿಗೆ ವಿದೇಶಿ ಸಾಲ ಒಂದು ಕೋಟಿ 47 ಲಕ್ಷದ ಸಾವಿರ ಕೋಟಿ ರೂಪಾಯಿ ಜನವರಿಯಿಂದ ಇವತ್ತಿಗೆ ಶೇಕಡ ಇಪ್ಪತರಷ್ಟು ವಿದೇಶದಿಂದ ಸಾಲ ಆಗಿರತಕ್ಕದ್ದು ಇದೆ. ಅದನ್ನು ನಾನು ಹೇಳಿಲಿಲ್ಲ, ನಿಮ್ಮ ಹಣಕಾಸಿನ ಸಚಿವರು ಹೇಳಿದ್ದಾರೆ. ಪ್ರತಿಯೊಬ್ಬ ಮನುಷ್ಯನ ಮೇಲೆ ಏಳು ಸಾವಿರ ಎಂಟು ನೂರು ರೂಪಾಯಿ ಸಾಲ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಯಾರ ಕಾಲದಲ್ಲಿ ಸರ್ಕಾರಕ್ಕೆ ಸಪೋರ್ಟ್ ಮಾಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಏನು ಮಾಡಿದಿರಿ ಅಂದರೆ ಅದಕ್ಕೆ ಉತ್ತರವಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ : ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ಬಗ್ಗೆ ಇಲ್ಲಿ ಏಕೆ ಚರ್ಚೆ ಮಾಡುವುದು?

ಉಪಾಧ್ಯಕ್ಷರು : ಸದಸ್ಯರುಗಳು ನೀವು ನೀವೇ ಚರ್ಚೆ ಮಾಡಿಕೊಳ್ಳುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆರ್ಥಿಕ ನೀತಿಗೆ ಸಂಬಂಧಪಟ್ಟ ಹಾಗೆ ಕಾಂಗ್ರೆಸ್ ಜನತಾದಳ ಮತ್ತು ಭಾರತೀಯ ಜನತಾಪಕ್ಷ ಮೂರರದ್ದೂ ಒಂದೇ ಧೋರಣೆ. ಹಾಗಾಗಿ ಅವರ ಮೇಲೆ ನೀವು ಅವಿಶ್ವಾಸ ನಿರ್ಣಯ ತಂದಿರುವುದಕ್ಕೆ ಕಾರಣವಿಲ್ಲ. ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾವು ಯಾವ ಸ್ಥಿತಿಗೆ ಬಂದಿದ್ದೇವೆ ಎನ್ನುವುದನ್ನು ಹೇಳಬೇಕಾಗುತ್ತದೆ. ಇದರಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆ ಅನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. India the IMF Rule ಎಂಬ ಪುಸ್ತಕವನ್ನು ಬರೆದಿರತಕ್ಕ ಮೈಕೇಲ್ ಟೊಸ್ಸೊವಸ್ಕಿ ಏನು ಹೇಳುತ್ತಾರೆಂದರೆ

"The indirect rule in India has a long history. The Rajputs' Princely States had a fair degree of autonomy in relation to the British Colonial Government. In contrast under the IMF, World Bank, Tutelage, the Union Finance Minister

reports directly to the 1818, Harrington Street, North South Washington DC, by passing the Parliament and democratic process, the Union Budget written by Indian Bureaucrats in Delhi has become a repetitious and redundant document. It is the main clause which included loan agreement signed with the World Bank and IMF".

This is the condition of this country. ಇದಕ್ಕೆ ತಾವೆಲ್ಲರೂ ಕಾರಣ. ಆದ್ದರಿಂದ ಅವಿಶ್ವಾಸ ನಿರ್ಣಯ ತರುವುದಕ್ಕೆ ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ ಅದನ್ನು ತರತಕ್ಕ ಅವಶ್ಯಕತೆಯಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ನಾಯಕರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅವಿಶ್ವಾಸ ನಿರ್ಣಯವನ್ನು ಸದನದ ಮುಂದೆ ತಂದಿದ್ದಾರೆ. ಅವರು ಸಮಾರು 24-25 ಚಾರ್ಜಸ್‌ಗಳನ್ನು ಕೂಡ ಸರ್ಕಾರದ ಮೇಲೆ ಮಾಡಿದ್ದಾರೆ. ನಮ್ಮ ಭಾರತೀಯ ಜನತಾ ಪಕ್ಷದ ನಾಯಕರು ಈಶ್ವರಪ್ಪನವರು ಮತ್ತು ಅವರ ಸಂಗಡಿಗರೂ ಕೂಡ ಅವರದೇ ಆದಂತಹ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ. ಎರಡೂ ಅವಿಶ್ವಾಸ ನಿರ್ಣಯಗಳು ಇವತ್ತು ಚರ್ಚೆಯಲ್ಲಿವೆ. ನಮ್ಮ ವಿರೋಧಪಕ್ಷದ ನಾಯಕರು ಏನು ಸದನದ ಮುಂದೆ ಮಂಡಿಸಿದ್ದಾರೆ, ಅನೇಕ ಸದಸ್ಯರು ಈ ಸರ್ಕಾರದ ಮೇಲೆ ಏನು ಕೆಲವು ಆಪಾದನೆಗಳನ್ನು ಮಾಡಿದ್ದಾರೆ, ಅದರ ಪುನರಾವರ್ತನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಹೊಸ ವಿಚಾರದ ಬಗ್ಗೆ ಒತ್ತು ನೀಡಿ ಕೆಲವು ವಿಚಾರವನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ಇಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಅದೊಂದು ವಿರೋಧ ಪಕ್ಷದ ಮಹಾ ಅಸ್ತ್ರ. ಅದು ಅಪರೂಪವಾಗಿರಬೇಕು. ಅದನ್ನು ಯಾವಾಗಲೂ ತರುವುದಕ್ಕೆ ಆಗುವುದಿಲ್ಲ. ಅದೊಂದು ತಾಂತ್ರಿಕವಾದ ಪ್ರಕ್ರಿಯೆ ಅಲ್ಲ. ತಾವು ಹೇಳಿದ್ದೀರಿ ಏನಾದರೂ ತಾಂತ್ರಿಕವಾಗಿ ತಂದಿದ್ದೀರಾ? ಇಬ್ಬರೂ ಕೂಡಿ ಸರ್ಕಾರ ಮಾಡಬೇಕೆಂದು ಏನಾದರೂ ಮಾಡಿದ್ದೀರಾ ಎಂದು ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ವಿಷಯ ಅಲ್ಲಿಯವರೆಗೆ ಬರುವುದಿಲ್ಲ. ವಿಷಯ ಏನೆಂದರೆ ಜನಾದೇಶವನ್ನು ಅವರಿಗೆ 1994ರಲ್ಲಿ ಕೊಟ್ಟಿದ್ದಾರೆ. ಅದು ಯಾವ ರೀತಿ ಜನಾದೇಶ, ಅದು ಚರ್ಚೆಗೆ ವಸ್ತು ಅಲ್ಲ. ಜನಾದೇಶ ಕೊಟ್ಟಮೇಲೆ ಇವತ್ತು ಅದನ್ನು ಏಕಾಏಕಿ ಅಪ್ರೈಷನ್ ಮಾಡಬೇಕು. ಅದು ಜನರ ದೃಷ್ಟಿಯಲ್ಲಿ ನಾವು ಮಾಡಬೇಕಾದ ಕರ್ತವ್ಯ. ಜನರಿಗೆ ಆ ಅವಕಾಶವಿರುವುದಿಲ್ಲ. ಒಟ್ಟು ಸಮಗ್ರ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡತಕ್ಕದ್ದು ಕೆಲವು ಡಿಬೇಟಿಂಗ್ ಸೊಸೈಟಿಗಳಲ್ಲಾಗಲಿ ಆಗಬಹುದು. ಅಥವಾ ಕೆಲವು ಸೆಮಿನಾರ್‌ಗಳಲ್ಲಿ ಆಗಬಹುದು ಆದರೆ ಅದನ್ನು ಕ್ರೋಢಿಕರಿಸಿ ಇವತ್ತು ಸರ್ಕಾರ ಯಾವ ದಿಸೆಯಲ್ಲಿ ಹೋಗಿದೆ. ಬರೀ ಚುನಾವಣೆಗೆ ಕಾಯುವುದಲ್ಲ. ಒಂದು ರೀತಿಯ ಎಚ್ಚರಿಕೆ ಇದು. ಒಂದು ರೀತಿ ತಂತಿಯ ಮೇಲೆ ನಡೆಯುವಾಗ ಎಡವಿ ಬೀಳಬಹುದು. ಚಾಕಚಕ್ಯತೆ ಇದ್ದರೆ ಅದರ ಮೇಲೆ ನಡೆದುಕೊಂಡು ಪಾರಾಗಿ ಹೋಗಬಹುದು. ನಿನ್ನೆ ಮಾನ್ಯ ಈಶ್ವರಪ್ಪನವರು ಬಹಳ ಸಿಟ್ಟಿನಲ್ಲಿ ರಾತ್ರಿಯೆಲ್ಲಾ ನಿದ್ರೆಯಿಲ್ಲವೆಂದು ಹೇಳುತ್ತಿದ್ದರು. ದೇವರ ವಿಷಯವಾಗಿ ಬಹಳ ಚರ್ಚೆಯಾಯಿತು.

ದೇವರನ್ನು ಖಂಡನೆ ಮಾಡಿದರು ಅದಕ್ಕೆ ಈ ವೇದಿಕೆಯನ್ನು ಉಪಯೋಗ ಮಾಡಿದರು ಎಂದರು. ಕೆಲವು ಊರುಗಳಲ್ಲಿ ಕೆಂಡ ಸೇವೆ ಮಾಡುತ್ತಾರೆ. ದೇವರ ಸೇವೆ ಮಾಡುತ್ತಾರೆ. ಒಂದು ರೀತಿಯಲ್ಲಿ ಜೆ.ಹೆಚ್. ಪಟೇಲರ ಸರ್ಕಾರಕ್ಕೆ ಇದೊಂದು ಕೆಂಡ ಸೇವೆ ಇದ್ದ ಹಾಗೆ. ಏನಾದರೂ ಪಾವಿತ್ರತೆ ಕಡಿಮೆಯಾದರೆ ಸುಡುತ್ತದೆ. ನಿಮಗೆ ಒಂದು ರೀತಿಯ ಅಗ್ನಿ ಪರೀಕ್ಷೆಯೂ ಹೌದು. ಒಂದು ರೀತಿ ತಂತಿಯ ಮೇಲೆ ನಡೆಯುವ ಪ್ರಕ್ರಿಯೆ ಕೂಡ ಹೌದು. ಪ್ಲಾನಿಂಗ್‌ನಲ್ಲಿ ಆನ್ಯೂಯಲ್ ಪ್ಲಾನಿಂಗ್ ಇರುತ್ತದೆ. ಫೈವ್ ಇಯರ್ಸ್ ಪ್ಲಾನ್ ಇರುತ್ತದೆ. The midterm appraisal of not the opposition party, the midterm appraisal of the performance of the Government by the people, because we represent them. ಅದಕ್ಕೆ ಇವತ್ತು ನಾವು ಆ ಕರ್ತವ್ಯ ಮಾಡಬೇಕು. ರಾಜ್ಯದಲ್ಲಿ ನಮ್ಮ ಮೇಲೆ ಜನ ಇಟ್ಟಂತಹ ಕರ್ತವ್ಯವನ್ನು ನಾವು ಇವತ್ತು ನಿರ್ವಹಿಸುತ್ತಿದ್ದೇವೆ.

1.10 ಪಿ.ಎಂ.

ಇದರಲ್ಲಿ ಏನಾದರೂ ಒಂದು ಮಂತ್ರ ಮಾಡಬೇಕು ಅಥವಾ ಏನಾದರೂ ನಿಮ್ಮನ್ನು ಮೆನಿಪ್ಯುಲೇಟ್ ಮಾಡಬೇಕು, ನಿಮ್ಮನ್ನು ತೆಗೆಯಬೇಕು ಅಥವಾ ನಾವು ನಿಮ್ಮನ್ನು ತೆಗೆದು ಪರ್ಯಾಯವಾಗಿ ಅಧಿಕಾರಕ್ಕೆ ಬರಬೇಕು, ಅದು ಯಾವುದೂ ಇಲ್ಲ. ನಮ್ಮದು ಸ್ಪಷ್ಟವಾದಂಥ ಅಭಿಪ್ರಾಯ ಇದೆ. ನಿಮ್ಮನ್ನು ತೆಗೆದು ಮೆನಿಪ್ಯುಲೇಟ್ ಮಾಡಿ ನಮಗೆ ಅಧಿಕಾರ ಹಿಡಿಯತಕ್ಕಂಥ ಇಚ್ಛೆ ಇಲ್ಲ. ನೀವು ಬಿದ್ದರೆ ನಾವು ಚುನಾವಣೆಗೇ ಹೋಗುವುದು. ನೀವು ಬಿದ್ದರೆ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರುವುದು. ಪಾಪ, ಅವರಿಗೆ ಏನೂ ಲಾಭ ಬರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ನೀವು ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಲಿ : ಒಂದು ನಾವು ಬರಬೇಕು ಇಲ್ಲ, ನೀವು ಬರಬೇಕು.

(ಗೊಂದಲ)

ಶ್ರೀ ಎ. ರಾಮದಾಸ್ : ಕೋಟಿ ಕೋಟಿ ಜನರಿದ್ದಾರೆ, ಅವರು ಬದಲಾವಣೆ ಮಾಡುತ್ತಾರೆ. ಯಾರನ್ನು ಬದಲಾವಣೆ ಮಾಡಬೇಕೆಂದು ಅವರಿಗೆ ಗೊತ್ತಿದೆ.

ಮಾನ್ಯ ಸದಸ್ಯರು : ಈಗನ ಪರಿಸ್ಥಿತಿಯಲ್ಲಿ ಅದು ಕಾಂಗ್ರೆಸ್ಸಿಗೇ ಎಂದು ಜನರಿಗೆ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) : ನಾವೇ ಪುನಃ ಬರಬೇಕು. ಜನರಿಗೆ ವಿಶ್ವಾಸ ಇದೆ ನಾವು ಪುನಃ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು. ಪುನಃ ಚುನಾವಣೆ ಬಂದರೆ ನಾವೇ ಅಧಿಕಾರಕ್ಕೆ ಬರುತ್ತೇವೆ. ಆದರೆ ಒಂದು ವೇಳೆ ಜನ ನಮ್ಮ ಮೇಲೆ ವಿಶ್ವಾಸ ಇಡದೇ ಹೋದರೆ ಕಾಂಗ್ರೆಸ್ ಬರಬೇಕು ಎಂದು ನಾವು ಅನ್ನುವುದು. ಬಿ.ಜೆ.ಪಿ. ಬೇಡ ಎಂದು ಹೇಳುವುದು. ಇದರಲ್ಲಿ ನಮ್ಮಲ್ಲಿ ಒಮ್ಮತ ಇದೆ, ಅಂಡರ್‌ಸ್ಟಾಂಡಿಂಗ್ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೇ, ನಮಗೆ ಇದೇ ಬೇಕಿತ್ತು. ಏನು ಡೆಲ್ಲಿಯಲ್ಲಿ ಮೊನ್ನೆ ತರಾತುರಿಯಲ್ಲಿ ಹೋಗಿಬಂದಿರಿ. ನಿಮ್ಮ ಲೆಕ್ಕಾಚಾರದಂತೆ ಹೇಗಾದರೂ ಮಾಡಿ ಈ ಕಾಂಗ್ರೆಸ್ ನೀವು ಸೇರಿ ಕರ್ನಾಟಕ ರಾಜ್ಯದಲ್ಲಿ ಪಟೇಲರನ್ನು ಮನೆಗೆ ಕಳುಹಿಸಿ ಅಧಿಕಾರ ನಡೆಸಬೇಕು ಎನ್ನುವುದು ಮೊದಲನೆಯದು. ಎರಡನೆಯದು, ಮೊನ್ನೆ ನಡೆದಂಥ ....

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ಅವಿಶ್ವಾಸ ನಿರ್ಣಯ ತಂದಿರುವುದು ಪಟೇಲರನ್ನು ಉಳಿಸುವುದಕ್ಕೋ, ತೆಗೆಯುವುದಕ್ಕೋ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಮಾಡುತ್ತೇನೆ. ಆಮೇಲೆ ನೀವು ಹೇಳಿ. ಈಗ ಮೊನ್ನೆ ನಡೆದಂಥ ಲೋಕಸಭೆ ಚುನಾವಣೆಯಲ್ಲಿ ನಾವು ಮೊದಲನೇ ಸ್ಥಾನದಲ್ಲಿದ್ದೇವೆ. ನಿಮ್ಮನ್ನು ಯಾವ ಸ್ಥಿತಿಗೆ ತಂದಿದ್ದಾರೆ, ಕಾಂಗ್ರೆಸ್ಸನ್ನು ಜನರು ಯಾವ ಸ್ಥಿತಿಗೆ ತಂದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವಂಥ ಸಂಗತಿ. ಈಗ ನೀವು ಬಹಳ ಸ್ಪಷ್ಟ ಮಾಡಿದ್ದೀರಿ. ಈ ದೇಶವನ್ನು 52 ವರ್ಷಗಳಲ್ಲಿ ಸುಮಾರು 45 ವರ್ಷ ಅಧಿಕಾರದಲ್ಲಿ ಇದ್ದು ಸರ್ವನಾಶ ಮಾಡಿದಂಥ ಮತ್ತೆ ಜಯಪ್ರಕಾಶ್ ನಾರಾಯಣರನ್ನು ಒಂದು ರೀತಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜೈಲಿನಲ್ಲಿಟ್ಟು ಜೀವಂತವಾಗಿ ಕೊಂದಂತಹವರ ಜೊತೆಗೆ ಸೇರಿ ಅವರು ಅಧಿಕಾರಕ್ಕೆ ಬರಬೇಕು, ಇಲ್ಲದಿದ್ದರೆ ನಾವು ಬರಬೇಕು ಎಂದರೆ ಒಳಒಪ್ಪಂದ ಏನಾಗಿದೆ ಎಂಬುದನ್ನು ನಾಡಿನ ಜನರಿಗೆ ಬಹಿರಂಗ ಮಾಡಿದ್ದೀರಿ. ಜನರು ತೀರ್ಮಾನ ಮಾಡಲಿ. ನಿಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದೆ ಈ ರಾಜಕೀಯ ಧ್ರುವೀಕರಣ ಹೇಗೆ ಆಗುತ್ತದೆ ಎಂಬುದು ಸ್ಪಷ್ಟವಾಗಿದೆ. ನಾನು ದೇವರ ಮೇಲೆ ಆಣೆ ಇಟ್ಟು ಹೇಳುತ್ತೇನೆ. ಯಾವ ಕ್ಷಣಕ್ಕೂ, ಒಂದು ಕ್ಷಣವೂ ನೀವು ಅಧಿಕಾರದಲ್ಲಿ ಮುಂದುವರೆಯುವದಕ್ಕೆ ನಾವು ಬಿಡುವುದಿಲ್ಲ. ಭಾರತೀಯ ಜನತಾ ಪಾರ್ಟಿ ಯಾರ ಮಾತಿಗೂ ಮನ್ನಣೆ ಕೊಡುವುದು ಪ್ರಶ್ನೆ ಇಲ್ಲ. ಆದಷ್ಟು ಬೇಗ ಈ ಅನಿಷ್ಟ ಸರ್ಕಾರ ಹೋಗಬೇಕು ಇದೇ ನಮ್ಮ ಗುರಿ.

(ಗೊಂದಲ)

ಉಪಾಧ್ಯಕ್ಷರು : ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ದೇವೇಗೌಡರು ಶ್ರೀಮತಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿ ನಿನ್ನೆ ಡೆಲ್ಲಿಯಲ್ಲಿ ಅವರ ಮಾತುಕತೆ ಆಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಂತಹ ವೀರಾವೇಶದ ಘೋಷಣೆಗಳನ್ನು ಈ ಸದನದಲ್ಲಿ ಅನೇಕ ಸಾರಿ ಕೇಳಿದ್ದೇವೆ. ಜನಗಳ ಮೇಲೆ ಆಣೆ ಇಟ್ಟು, ದೇವರ ಮೇಲೆ ಆಣೆ ಇಟ್ಟು ಹೇಳುವುದಕ್ಕೆ ನೀವು ಬಂದಿದ್ದೀರಾ ? ನೀವು ಬರುವುದಕ್ಕೆ ಸಾಧ್ಯವೇ ಇಲ್ಲ. ದೇವರ ಮೇಲೆ ಆಣೆ ಇಟ್ಟು ಬರುತ್ತಾರಂತೆ ಇವರು ....

ಶ್ರೀ ಬಿ.ಎಸ್. ಯಡಿಯೂರಪ್ಪ : ಡೆಲ್ಲಿಯಲ್ಲಿ ಸೋನಿಯಾ ಗಾಂಧಿ ಮತ್ತು ದೇವೇಗೌಡರ ಭೇಟಿಯಾಗುವಾಗ ನೀವು ಹೋಗಿದ್ದೀರಾ?

(ಗೊಂದಲ)

ಶ್ರೀ ಧರ್ಮಸಿಂಗ್ : ಸೋನಿಯಾ ಗಾಂಧಿ ಬಗ್ಗೆ ಏಕೆ ಮಾತನಾಡುತ್ತೀರಿ?

ಉಪಾಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಇದು ಒಳ್ಳೆಯದಲ್ಲ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಸದಸ್ಯರಾಗಿ ಈ ರೀತಿ ವರ್ತನೆ ಮಾಡುವುದು ಸರಿಯಲ್ಲ.

ಶ್ರೀ ಧರ್ಮಸಿಂಗ್ : ಸೋನಿಯಾಗಾಂಧಿ ಅವರ ಬಗ್ಗೆ ಏಕೆ ಮಾತನಾಡುತ್ತೀರಿ? ಅವರ ಹೆಸರು ಏಕೆ ತೆಗೆಯುತ್ತೀರಿ?

ಉಪಾಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮೊಯಿಲಿಯವರು ಮಾತನಾಡುತ್ತಿದ್ದಾರೆ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಹೇಳಿದರು? ಇವರು ನಿನ್ನೆ ಕೂಡ ಮಾತನಾಡಿದ್ದಾರೆ. ನಾನು ನಿನ್ನೆ ಡೆಲ್ಲಿಯಲ್ಲಿದ್ದೆ, ಇಲ್ಲಿ ಇರಲಿಲ್ಲ. ಅವರು ಮಾತನಾಡುತ್ತಾ ಏನು ಹೇಳಿದ್ದಾರೆ? ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಮಾಡಬೇಕು ಇಲ್ಲವಾದರೆ ಜನತಾದಳ ಸೆಕ್ಯುಲರ್ ಫೋರ್ಸಸ್ ಬಗ್ಗೆ ಮಾತನಾಡಿದ್ದಾರೆ. ಇವತ್ತು ನಾವು ಏನು ಹೇಳುತ್ತಿದ್ದೇವೆ ಎಂದರೆ ಜೆ.ಹೆಚ್. ಪಟೇಲರನ್ನು ತೆಗೆದುಹಾಕುವಂಥ ರೀತಿಯಲ್ಲಿ ನೀವು ಇದ್ದರೆ ನಿಮ್ಮ ಪಾರ್ಟನರ್ ಆದಂಥ ಶ್ರೀ ರಾಮಕೃಷ್ಣ ಹೆಗಡೆಯವರು ಇವತ್ತು ಜೆ.ಎಚ್. ಪಟೇಲ್ ಅವರಿಗೆ ಬೆಂಬಲ ಕೊಡಬೇಕೆಂದು ಈಗಾಗಲೇ ಹೇಳಿದ್ದಾರೆ. ಅದು ನಿಮಗೆ ಬಿಟ್ಟಿದ್ದು. ಶ್ರೀ ಸೋನಿಯಾ ಗಾಂಧಿ ಅವರ ಜತೆ ದೇವೇಗೌಡರು ಮಾತನಾಡಿದ್ದುದನ್ನು ನೀವು ಹೇಗೆ ನೋಡಿದ್ದೀರಿ? ನೀವು ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿ ಈ ಸದನದಲ್ಲಿ ಯಾವಾಗಲೂ ಕೂಡ ಜವಾಬ್ದಾರಿಯುತವಾಗಿ ಮಾತನಾಡಬೇಕು. ಸೋನಿಯಾಗಾಂಧಿ ಅವರನ್ನು ಕುರಿತು ಮಾತಾನಾಡುವುದಕ್ಕೆ ನಿಮಗೆ ಹಕ್ಕಿಲ್ಲ. ಆ ತರಹ ಮಾತನಾಡುವುದಕ್ಕೆ ಆಗುವುದಿಲ್ಲ. ನೀವು ಹೋಗಿ ನೋಡಿದ್ದೀರಾ?

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ನನಗೆ ಸನ್ಮಾನ್ಯ ಧರ್ಮಸಿಂಗ್ ಅವರ ಬಗ್ಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಬಗ್ಗೆ ತುಂಬಾ ಗೌರವ ಇದೆ. ನಾನು ಏನು ಹೇಳಿದೆ? ಕಾಂಗ್ರೆಸ್ಸಿನ ಅಧ್ಯಕ್ಷಿಣಿ ಶ್ರೀಮತಿ ಸೋನಿಯಾ ಗಾಂಧಿ ಅವರ ಜೊತೆ ಈಗಾಗಲೇ ಒಂದೆರಡು ಬಾರಿ ಸನ್ಮಾನ್ಯ

ದೇವೇಗೌಡರು ಮಾತುಕತೆ ನಡೆಸಿದ್ದಾರೆ. ನಿನ್ನೆ ನಮ್ಮ ಸಿದ್ದರಾಮಯ್ಯನವರು ಹೋದಾಗ ಏನಾದರೂ ಮಾತುಕತೆ ನಡೆಯಿತೇನು? ಏಕೆಂದರೆ ಸಿದ್ದರಾಮಯ್ಯನವರು ಹೇಳಿದರು ಏನೆಂದರೆ ನೀವು ಅಧಿಕಾರಕ್ಕೆ ಬರಬೇಕು ಇಲ್ಲದಿದ್ದರೆ ನಾವು ಅಧಿಕಾರಕ್ಕೆ ಬರಬೇಕು ಎಂದು. ಇವೆರಡೂ ಹೊಂದಾಣಿಕೆ ನಿಮ್ಮದು ಆಗಿದೆ. ನಿನ್ನೆ ದೇವೇಗೌಡರ ಜತೆಗೆ ಮಾತುಕತೆಗೆ ಹೋದಾಗ ನೀವು ಏನಾದರೂ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಮಾನ್ಯ ಧರ್ಮಸಿಂಗ್ ಅವರು ಸಿಟ್ಟು ಏಕೆ ಮಾಡಬೇಕು? ಈ ದೇಶದ ಕಾಂಗ್ರೆಸ್ ಪಕ್ಷದ ಅಧ್ಯಕ್ಷಿಣಿ ಹೆಸರನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ನಾನು ಏನಾದರೂ ಬೇರೆ ತಪ್ಪು ಹೇಳಿದ್ದೇನಾ? ನಾನು ಆರೋಪ ಮಾಡಿದ್ದೇನಾ? ಈ ಹೊಂದಾಣಿಕೆ ಆಗಿಲ್ಲವೆಂದು ನೀವು ಬಹಿರಂಗವಾಗಿ ಒಪ್ಪಿಕೊಳ್ಳಿ. ಇಲ್ಲ ಎಂದು ಹೇಳಿ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ಏಕೆ ನೋಡಿಕೊಳ್ಳಬೇಕು?

ಶ್ರೀ ಧರ್ಮಸಿಂಗ್ : ಇವತ್ತು ರಾಮಕೃಷ್ಣ ಹೆಗಡೆಯವರಿಗೂ ನಿಮಗೂ ಏನು ಮೈತ್ರಿ ಇತ್ತಲ್ಲಾ ಹೋದ ಚುನಾವಣೆಯಲ್ಲಿ, ಈಗ ನಿಮ್ಮ ಬೆಂಬಲ ಯಾರಿಗೆ ಕೊಡುತ್ತಿದ್ದೀರಿ ಎಂಬುದನ್ನು ಸ್ಪಷ್ಟಪಡಿಸಿರಿ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆ ಡೆಲ್ಲಿಗೆ ಹೋಗಿದ್ದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮಾತನಾಡಿದ್ದಾರೆ. ನಾನು ಭೇಟಿ ಮಾಡಿದ್ದು ನಿಮ್ಮ ಪಕ್ಷದವರೇ ಆದಂಥ ಯೋಜನಾ ಆಯೋಗದ ಉಪಾಧ್ಯಕ್ಷರಾದಂಥ ಶ್ರೀ ಜಸ್ವಂತ್‌ಸಿಂಗ್ ಅವರನ್ನು. ಅದು ತಪ್ಪಾ? ರಾಜ್ಯದ ವಾರ್ಷಿಕ ಯೋಜನೆ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರವಾಗಿ ನಾನು ಡೆಲ್ಲಿಗೆ ಹೋಗಿರುವುದು. ದೇವೇಗೌಡರನ್ನು ಭೇಟಿ ಮಾಡಿದ್ದೀರಾ ಎಂದರೆ ಅವರು ಸಹ ಈ ದೇಶದ ರಾಜಕಾರಣಿಗಳು ಹಾಗಾದರೆ ಅವರು ಅಸ್ಪೃಶ್ಯರೇನು? ನೀವು ಯಾರಾದರೂ ನಮಗೆ ಅಸ್ಪಶ್ಯರು ಎಂದು ನಾವು ಹೇಳಿದ್ದೀವಾ? ಆದರೆ ನೀವು ಮಾಡತಕ್ಕಂಥ ರಾಜಕೀಯ ವಿಚಾರ ಇದೆಯಲ್ಲಾ, ಕೋಮುವಾದಿ ಶಕ್ತಿಯನ್ನು ಬಲಪಡಿಸುವುದಕ್ಕೆ ನೀವೇನು ಪ್ರಯತ್ನ ಮಾಡುತ್ತಿದ್ದೀರಲ್ಲಾ, ಅದರ ವಿರುದ್ಧ ನಾವು ಇರತಕ್ಕಂಥಾದ್ದು. ಜಾತ್ಯಾತೀತ ಶಕ್ತಿಗಳು ಅವರು ಯಾರೇ ಇದ್ದರೂ ಕೂಡ, ಈ ದೇಶದಲ್ಲಿ ಅವರು ಮಾತ್ರ ಇರಬೇಕು. ಅವರು ಕಾಂಗ್ರೆಸ್‌ನವರಾಗಲೀ, ಜನತಾದಳದವರಾಗಲೀ, ಕಮ್ಯುನಿಸ್ಟರಾಗಲಿ. ಯಾರಿಗೆ ಜಾತಿಯ ವಿಷಯದಲ್ಲಿ ನಂಬಿಕೆ ಇರುತ್ತದೋ ಅವರು ಭಾರತದಂಥ ಅನೇಕ ಜಾತಿಗಳು, ಧರ್ಮಗಳು ಇರತಕ್ಕಂಥ ದೇಶದಲ್ಲಿ ಜಾತ್ಯಾತೀತ ತತ್ವಗಳ ಬಗ್ಗೆ ಬಲವಾದ ನಂಬಿಕೆ ಇಟ್ಟುಕೊಂಡಿರತಕ್ಕಂಥವರು ಅವರು ಮಾತ್ರ ಅಧಿಕಾರದಲ್ಲಿ ಇರಬೇಕು. ನೀವು ಜಾತ್ಯಾತೀತ ತತ್ವಕ್ಕೆ ವಿರೋಧಿಯಾಗಿರುವುದರಿಂದ, ನೀವು ಯಾವ ಕಾರಣಕ್ಕೂ ಕೂಡ ಅಧಿಕಾರಕ್ಕೆ ಬರಬಾರದು ಎನ್ನತಕ್ಕಂಥ ವಿಚಾರ ನಮ್ಮದು ಇದೆ. ನಾವೇ ಅಧಿಕಾರಕ್ಕೆ ಬರಬೇಕು. ಜನರ ವಿಶ್ವಾಸವನ್ನು ನಾವು ಇಟ್ಟುಕೊಂಡಿದ್ದೇವೆ. ಇವರು ಜಗಳ ಆಡುವುದನ್ನು ನೋಡಿದರೆ ಅವಿಶ್ವಾಸ ನಿರ್ಣಯ ಏಕೆ ತಂದಿದ್ದಾರೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ನೀವು ಬಹಳ ಚೆನ್ನಾಗಿ ಜಗಳವಾಡುತ್ತಿದ್ದೀರಿ. ಆದ್ದರಿಂದ ಈ ಸದನದಲ್ಲಿ ನಮಗೆ ವಿಶ್ವಾಸ ಇದೆ, ಜನರ

ವಿಶ್ವಾಸ ಇದೆ. ಆದರೆ ನಮಗೆ ಕಾಂಗ್ರೆಸ್ ಪಕ್ಷದ ಬಗ್ಗೆಯೂ ವಿರೋಧ ಇದೆ. ಅವರ ಫಿಲಾಸಫಿ, ಐಡಿಯಾಲಜಿ ಬಗ್ಗೆ, ಅವರ ಕಾರ್ಯಕ್ರಮದ ಬಗ್ಗೆ ನಮ್ಮ ವಿರೋಧವಿದೆ. ಆದರೆ ಜಾತ್ಯಾತೀತ ವಿಷಯದಲ್ಲಿ ನಂಬಿಕೆ ಇಟ್ಟಿರತಕ್ಕಂಥವರು ಕೂಡ ಕಾಂಗ್ರೆಸಿನವರು. ಆದ್ದರಿಂದ ನೀವು ಮಾತ್ರ ಬರಬಾರದು ಎನ್ನುವುದು ಇಷ್ಟೇ ಹೊರತು ನಾವು ಇಲ್ಲದಿದ್ದರೆ ಅವರೇ ಬರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ್ದು ಸರಿಯಿದೆ. ಅವರ ಮುಂದಿನ ಕನಸು ಏನಿದೆ, ಅವರ ಕಲ್ಪನೆ ಏನಿದೆ ಅದನ್ನು ಹೇಳಿದರು. ಆದರೆ ಇದನ್ನು ತೀರ್ಮಾನ ಮಾಡುವವರು ಯಾರು? ಈ ದೇಶದ 95 ಕೋಟಿ ಜನ ಇದ್ದಾರೆ. ತಾವು ಜಾತ್ಯಾತೀತ ವಾದಿಗಳೆಂದು ಹೇಳಿಕೊಂಡು ಮತ್ತು ನಮ್ಮನ್ನು ಕೋಮುವಾದಿಗಳೆಂದು ಕರೆಯತಕ್ಕಂಥವರು ನೀವು. ದೇಶದ ಜನತೆ ಏನು ತೀರ್ಮಾನ ಮಾಡಿದರು? ನಿಮ್ಮಿಬ್ಬರನ್ನೂ ಮನೆಗೆ ಕಳುಹಿಸಿ ಭಾರತೀಯ ಜನತಾ ಪಾರ್ಟಿಯನ್ನು ಆಯ್ಕೆ ಮಾಡಿದರು.

ಶ್ರೀ ಧರ್ಮಸಿಂಗ್ : ಡೆಲ್ಲಿಯಲ್ಲಿ ಜನ ತೀರ್ಮಾನ ಕೊಡುತ್ತಾರೆ. ಅದನ್ನು ನೋಡಿ. ನಾಲ್ಕು ರಾಜ್ಯಗಳ ತೀರ್ಪು ಬಂದಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸಮತಾ ಪಾರ್ಟಿಗೆ ನಿಮ್ಮ ಪರವಾಗಿ ತೀರ್ಪು ಕೊಟ್ಟಿದ್ದಾರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡೆಲ್ಲಿಯ ಚುನಾವಣೆಯಾಗಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಕಾಲಿದಳದವರು ನಿಮ್ಮ ಪರವಾಗಿ ತೀರ್ಪು ಕೊಟ್ಟಿದ್ದಾರಾ? ಅವರ ಪರವಾಗಿ ತೀರ್ಪು ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹೇಳಿದರು. ಅವರಿಗೆ ಈ ದೇಶದ ಜನ ಬೆಂಬಲ ಕೊಟ್ಟು ಅಧಿಕಾರದಲ್ಲಿ ಕೂಡಿಸಿದ್ದಾರೆ. ಜನ ಯಾವಾಗ ಬೆಂಬಲ ಕೊಡುತ್ತಾರೋ ಆಗ ಕೊಡಲಿ. ಆದರೆ ಇವರಿಗೆ ಬೆಂಬಲ ಇರತಕ್ಕಂತಾದ್ದು ಜನರದ್ದು ಅಲ್ಲ. ಇವರಿಗೆ ಯಾರ ಬೆಂಬಲ ಇದೆಯೆಂದರೆ, ಮಮತಾ, ಲಲಿತಾ, ಸಮತಾ, ಅಕಾಲಿ ಇವರ ಬೆಂಬಲದಿಂದ ಕುಳಿತಿದ್ದಾರೆಯೇ ಹೊರತಾಗಿ, ಸಾಮಾನ್ಯ ಜನರ ಬೆಂಬಲದಿಂದ ಅವರು ಅಧಿಕಾರದಲ್ಲಿ ಕುಳಿತಿಲ್ಲ. ಅದಕ್ಕೆ ಅವರಿಗೆ ಏನು ಬೆನ್ನುಹತ್ತಿದೆ, ಈ ನಾಲ್ಕು ಜನರು ಬೆನ್ನುಹತ್ತುವುದಲ್ಲದೆ ಬೆಳ್ಳುಳ್ಳಿ, ಈರುಳ್ಳಿ ಇವರೂ ಬೆನ್ನುಹತ್ತಿದ್ದಾರೆ. ಇವರಿಗೆ ಜನ ಬೆಂಬಲ ಇಲ್ಲ. 23 ಪಕ್ಷದವರು ಸೇರಿ ಅಧಿಕಾರದಲ್ಲಿ ಕೂಡಿಸಿದ್ದಾರೆ. ಇವತ್ತು ಈಗಾಗಲೇ ಮಮತಾ ವಾಪಸ್ ತೆಗೆದುಕೊಂಡಿದ್ದಾರೆ. ಆಮೇಲೆ ಜಯಲಲಿತಾರವರೂ ಕೂಡ ಹೊರಕ್ಕೆ ಬರುತ್ತಾರೆ. ಏಕೆಂದರೆ ಹೈಕೋರ್ಟಿನಲ್ಲೂ ಕೂಡ ಅವರ ವಿರುದ್ಧ ತೀರ್ಮಾನವಾದ ಕಾರಣ ಯಾವಾಗ ಇವರ ಮೇಲೆ ಬೀಳುತ್ತಾರೋ ಗೊತ್ತಿಲ್ಲ. ಹೀಗಾಗಿ, 6-7 ತಿಂಗಳುಗಳಲ್ಲೇ ನಿಮ್ಮ ಪರಿಸ್ಥಿತಿ ಹೀಗಾಗಿದೆ. ನೀವು ಬಹಳ

ದಿವಸ ಅಧಿಕಾರದಲ್ಲಿ ಉಳಿಯುವುದಿಲ್ಲ. ಅದಕ್ಕಾಗಿ ಸುಮ್ಮನೆ ಎಲ್ಲರ ಮೈಮೇಲೆ ಬೀಳುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾವು ಪೂರ್ತಿ ಒಪ್ಪಿಕೊಳ್ಳುತ್ತೇವೆ. ನಾವು ಸಮತಾ ಮತ್ತು ಎಲ್ಲರ ಬೆಂಬಲ ತೆಗೆದುಕೊಳ್ಳುತ್ತೇವೆ. ಆದರೆ ಎಂ.ಪಿ.ಗಳ ಬೆಂಬಲ ತೆಗೆದುಕೊಳ್ಳುವುದಕ್ಕೋಸ್ಕರ ಜಾರ್ಖಂಡ್ ಮುಕ್ತಿ ಮೋರ್ಚಾಗೆ, ಪಾರ್ಲಿಮೆಂಟ್ ಮೆಂಬರ್ಸ್‌ಗೆ ಕೋಟಿ ರೂಪಾಯಿಗಳನ್ನು ಕೊಟ್ಟು, ಅವರ ಬೆಂಬಲದಿಂದ ನಮ್ಮ ಸರ್ಕಾರ ನಡೆಯುಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಕೊಟ್ಟಿದ್ದೇವೋ, ನಿಮ್ಮ ಕಡೆಯಿಂದ ಬಂದಿದೆಯೋ ನೋಡೋಣ. ಏಕೆಂದರೆ ನಿಮ್ಮ ಪಾರ್ಟಿಯಲ್ಲೂ ಆ ಕ್ರಿಮಿನಲ್ಸ್ ಇದ್ದಾರೆ, ಈಗಾಗಲೇ ಹೊರಗಡೆ ಬಂದಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗದರೆ, ಪಿ.ವಿ. ನರಸಿಂಹರಾವ್ ಅವರನ್ನು ಕ್ರಿಮಿನಲ್ಸ್ ಎಂದು ಕರೆಯುತ್ತೀರಾ? ಪಾರ್ಲಿಮೆಂಟ್ ಸದಸ್ಯರಿಗೆ ಕಾಸು ಕೊಟ್ಟು ಸರ್ಕಾರ ನಡೆಸಿದ್ದನ್ನು ನಾನು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಯು.ಪಿ.ಯಲ್ಲಿ ದುಡ್ಡು ಕೊಟ್ಟು ಚೇರ್ಮನ್‌ಗಿರಿ ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ. ಅಲ್ಲಿ ಬೇರೆ ಪಾರ್ಟಿಗಳಾದ ಬಿಎಸ್‌ಪಿ, ಜನತಾ ದಳ ಹೀಗೆ ಎಲ್ಲಾ ಸದಸ್ಯರನ್ನೂ ಕರೆಸಿ, ಅವರಿಗೆ ಹಣ, ಅಧಿಕಾರ ಎಲ್ಲಾ ಕೊಟ್ಟು ಬೇರೆಯವರಿಗೆ ಚಾಲೆಂಜ್ ಮಾಡುವುದಕ್ಕೆ ಮತ್ತು ಅಧಿಕಾರ ನಡೆಸುವುದಕ್ಕೆ ನೈತಿಕ ಹಕ್ಕಿದೆಯೇ? ನಿಮಗೆ ಬೇರೆಯವರಿಗೆ ಹೇಳತಕ್ಕ ನೈತಿಕ ಹಕ್ಕೆಲ್ಲಿದೆ? ಕಳ್ಳರನ್ನು, ಸುಳ್ಳರನ್ನು, ಗೂಂಡಾಗಳನ್ನು, ಎಲ್ಲರನ್ನೂ ಸೇರಿಸಿಕೊಂಡು ಅಧಿಕಾರ ಮಾಡತಕ್ಕಂಥವರು ಬೇರೆಯವರಿಗೆ ಬುದ್ಧಿ ಹೇಳುವುದಕ್ಕೆ ಬಂದಿದ್ದಾರೆ.

ಶ್ರೀ ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷರೇ, ಈ ಘಟನೆ ನಡೆಯುತ್ತಾ ಇರುವುದಕ್ಕೆ ನಾನು ಹೊಣೆ ಅಲ್ಲ. ಬಹಳ ಚರ್ಚೆಯಾಗಿದೆ, ಅದರ ಮೇಲೆ ನಾನು ಹೋಗುವುದಿಲ್ಲ. ಒಂದು ರೀತಿ ಮ.ಜ.ಸ.ಅ. ಬೆಂಬಲ ಎಂದು ಯಾರೋ ಹೇಳುತ್ತಾ ಇದ್ದರು. ಮ.ಜ.ಸ.ಅ. ಎಂದರೆ, ಮಮತಾ, ಜಯಲಲಿತಾ, ಸಮತಾ ಮತ್ತು ಅಕಾಲಿ. ಮ ಜ ಸ ಅ ಬೆಂಬಲದಿಂದ ಇವರು ಅಧಿಕಾರಕ್ಕೆ ಬಂದಿದ್ದಾರೆ. ನಮಗೇನೂ ಅಸೂಯೆ ಇಲ್ಲ. ಮಾನ್ಯ ಸುರೇಶ್ ಕುಮಾರ್ ಅವರು ಇತ್ತೀಚೆಗೆ ಅಸೆಂಬ್ಲಿಗೆ ಬಂದಿದ್ದಾರೆ. ಅವರಿಗೆ ಅನೇಕ ವಿಚಾರಗಳು ಗೊತ್ತಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ನಿಮಗಿಂತ 20 ವರ್ಷ ಲೇಟಾಗಿ ಹುಟ್ಟಿದೆ, ಅದಕ್ಕೋಸ್ಕರ ಈಗ ಬಂದಿರುವುದು.

ಶ್ರೀ ಎಂ. ವೀರಪ್ಪ ಮೊಯ್ಲಿ : ಲೇಟಾಗಿ ಹುಟ್ಟಿದ್ದೇ ತಪ್ಪಾಯಿತು. ಇಲ್ಲದೇ ಇದ್ದರೆ ಲೋಕ ನೋಡಬಹುದಿತ್ತು. ನೀವು ಲೋಕ ನೋಡುವಾಗ ಸ್ವಲ್ಪ ತಡವಾಯಿತು. ಅಷ್ಟೇ ವ್ಯತ್ಯಾಸ. ಈಗ ಪ್ರಶ್ನೆ

ಇರುವುದು ನಿಮ್ಮ ವೈಯಕ್ತಿಕ ಅಲ್ಲ. ಅಂದರೆ, ತಾವು ಅನಾವಶ್ಯಕವಾದ ವಿಷಯಗಳನ್ನು ಇದರಲ್ಲಿ ಎಳೆಯುತ್ತಿದ್ದೀರಿ. ಆದರೆ, ವಿಷಯ ಇವತ್ತು, ಯಾರು ಯಾರು ಹಣ ತೆಗೆದುಕೊಂಡು ಬಂದಿದ್ದಾರೆ, ಅದೆಲ್ಲಾ ಕೋರ್ಟಿನಲ್ಲಿದೆ, ತೀರ್ಮಾನವಾಗುತ್ತದೆ. ಈಗ ಇರತಕ್ಕಂಥ ಪ್ರಶ್ನೆ ಏನೆಂದರೆ, ನಮ್ಮ ನಾಯಕರು ಹೇಳಿದರು. 91 ಜನ ಮಂತ್ರಿಮಂಡಲ ಮಾಡಿ, ಯು.ಪಿ.ಯಲ್ಲಿ ಬಹುಶಃ ಜಗತ್ತಿನಲ್ಲೇ ಇಲ್ಲದೇ ಇದ್ದಂಥ ಒಂದು ಅಸಹ್ಯವಾದಂಥ, ಜಿಗುಪ್ಸೆ ತರತಕ್ಕಂಥ ಒಂದು ಸರ್ಕಾರ, ಭ್ರಷ್ಟ ಸರ್ಕಾರವನ್ನು ಅಲ್ಲಿ ಮಾಡಿಬಿಟ್ಟಿರಿ. ಅದಕ್ಕೆ ಅನುಮಾನ ಇಲ್ಲ. ಅದು ಎಲ್ಲರಿಗೂ ಗೊತ್ತಿದೆ. ಅದರಲ್ಲಿ ಡಕಾಯಿತಿಗಳಿದ್ದಾರೆ, ಶಿಕ್ಷೆಗೆ ಗುರಿಯಾಗಿರುವ ಜನ ಇದ್ದಾರೆ, ಕ್ರಿಮಿನಲ್ಸ್ ಇದ್ದಾರೆ. ಎಲ್ಲಾ ಇದ್ದಾರೆ. ಈಗ ವಿಷಯಾಂತರವಾಗುತ್ತಿದೆ, ಅದಕ್ಕೆ ನಾನು ಹೊಣೆಯಾಗುವುದಿಲ್ಲ. 1996ರಲ್ಲಿ ನರಸಿಂಹರಾಯರು ಸೋತರು. ನರಸಿಂಹರಾಯರ ಹತ್ತಿರ ಹೋಗಿ, ನೀವೇ ಸರ್ಕಾರ ಮಾಡಿ ಎಂದು ಹೇಳಿದವರು ಇವರೇ. ನಾನು ಅವರ ಹೆಸರನ್ನು ಹೇಳಬೇಕೇ, ಇದೊಂದು ಎವಿಡೆನ್ಸ್, ಅವರು ಇಲ್ಲ ಎಂದು ಹೇಳಲಿ. ಅವರು ಇಷ್ಟೆಲ್ಲಾ ಹೇಳುತ್ತಾರೆ, 1996ರಲ್ಲಿ ನರಸಿಂಹರಾಯರು ಸೋತಮೇಲೆ, ಇವರ ನಾಯಕರೇ ಹೋಗಿ, ನೀವೇ ಸರ್ಕಾರ ಮಾಡಿ ಎಂದು ಹೇಳಿದ್ದಾರೆ. ಅವರ ನಾಯಕರು ಹೇಳಿದ್ದನ್ನು ನಾವು ಕೇಳಿದ್ದೇವೆ, ಡೆಲ್ಲಿಯಲ್ಲಿ ಅನೇಕ ನಾಯಕರ ಪರಿಚಯ ನಮಗೂ ಇದೆ. ಸರ್ಕಾರ ನೀವೇ ಮಾಡಿ, ಇಲ್ಲದೇ ಇದ್ದರೆ ನಮಗೆ ಬೆಂಬಲ ಕೊಡುವುದಕ್ಕೆ ನೀವೇ ಏನಾದರೂ ಮಾಡಿ ಎಂದು ಹೇಳಿದ್ದಾರೆ. ದುಡ್ಡು ನಿಮಗೆ ಕೊಟ್ಟಿದ್ದಾರೋ, ಅವರಿಗೆ ಕೊಟ್ಟಿದ್ದಾರೋ ನೋಡೋಣ. ನಿಮಗೂ ಗೊತ್ತಿರಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬೆಂಗಳೂರಿನಿಂದಲೇ ಹೋಯಿತು ....

ಶ್ರೀ ಎಂ. ವೀರಪ್ಪ ಮೊಯಿಲಿ : ಏನು ಬೇಜವಾಬ್ದಾರಿ. ಆಯಿತು, ದುಡ್ಡು ಕೊಟ್ಟ ವಿಷಯವನ್ನು ಮಾತನಾಡೋಣ. ಆದರೆ, ಈಗ ಪ್ರಶ್ನೆ ಏನೆಂದರೆ, ನಮ್ಮ ಮಾಜಿ ಮುಖ್ಯಮಂತ್ರಿಯವರು ಕೇಂದ್ರದಲ್ಲಿ ಸಚಿವರಾಗಿರುವಂಥ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಲೋಕಶಕ್ತಿ ನಾಯಕರು ಸ್ವಲ್ಪ ಮನಸ್ಸು ಮಾಡಲಿಲ್ಲ, ಇಲ್ಲದೇ ಹೋಗಿದ್ದರೆ ಅವರು ಕಾಂಗ್ರೆಸಿಗೇ ಬೆಂಬಲ ಕೊಡುತ್ತಿದ್ದರು. ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ, ಇದು ರಹಸ್ಯವೇನಿಲ್ಲ. ಅವರು ಹೇಳಿದರು, ಇವರು ಒಂಭತ್ತು ಸೀಟು ಕೇಳಿದರು, ಇವರು ಎರಡು ಸೀಟು ಕೊಡುತ್ತೇನೆಂದು ಹೇಳಿದರು. ಈ ಚರ್ಚೆಯಲ್ಲಿ ಮಾತುಕತೆ ಬಿದ್ದುಹೋಯಿತು. ಇಲ್ಲದೇ ಇದ್ದರೆ, ಅವರು ಅಲ್ಲಿ ಮಂತ್ರಿಗಳೇ ಆಗುತ್ತಿರಲಿಲ್ಲ. ಅಥವಾ ಬೇರೆ ರೀತಿಯಲ್ಲಿ ಆಗುತ್ತಿದ್ದರೋ ಏನೋ. ಇವತ್ತು ಅವರೇ ಹೇಳಿದ್ದಾರೆ. ಬಿಜೆಪಿ ಮತ್ತು ಲೋಕಶಕ್ತಿ ಬೆಂಬಲ ಜೆ.ಹೆಚ್. ಪಟೇಲರಿಗೆ, ಅವರ ಸರ್ಕಾರವನ್ನು ನಾವು ಉಳಿಸುತ್ತೇವೆಂದು ಹೇಳಿದ್ದಾರೆ. ಅವರು ಬಹಳ ಖಡಾಖಂಡಿತವಾಗಿ ಹೇಳಿದ್ದಾರೆ. ಆದರೆ, ಒಂದು ವಿಷಯವನ್ನು ಒಪ್ಪುತ್ತೇನೆ. ನಮ್ಮ ಈಶ್ವರಪ್ಪನವರಾಗಲೀ, ಮಾನ್ಯ ಸದಸ್ಯರಾದಂಥ ಯಡಿಯೂರಪ್ಪನವರಾಗಲೀ ಅವರ ಹತ್ತಿರ ಹಿಡನ್ ಅಜೆಂಡಾ ಇಲ್ಲ. ಏನಿದ್ದರೂ ಅವರು ನೇರವಾಗಿ ಹೇಳಿಬಿಡುತ್ತಾರೆ. ಆ ವ್ಯಕ್ತಿತ್ವವನ್ನು ನಾನು ಮೆಚ್ಚುತ್ತೇನೆ. ಪ್ರಧಾನಿಯವರ ಹತ್ತಿರ ಕೂಡ ಹಿಡನ್ ಅಜೆಂಡಾ ಇದೆಯೆಂದು ನಾನು ಹೇಳುವುದಿಲ್ಲ. ಅವರೂ ನೇರವಾಗಿ ಮಾತನಾಡುತ್ತಾರೆ. ಆದರೆ, ಇವರ ಪಕ್ಷದಲ್ಲಿ ಹಿಡನ್ ಅಜೆಂಡಾ ಎಂದು ಇದ್ದೇ ಇದೆ. ಬಹುಶಃ ಆ ಹಿಡನ್ ಅಜೆಂಡಾವನ್ನು ರಾಮಕೃಷ್ಣ ಹೆಗಡೆಯವರು ಇವತ್ತು ಹೇಳಿದ್ದಾರೆ. ಹಿಡನ್ ಅಜೆಂಡಾ ಒಂದು

7444-145

ಮತ್ತು ಪ್ರತ್ಯಕ್ಷವಾಗಿ ಹೇಳುವುದು ಮತ್ತೊಂದು ಇದೆ. ನಾನು ರಾಮಕೃಷ್ಣರ ಹೆಸರನ್ನು ಹೇಳುವುದಕ್ಕೆ ತಯಾರಿಲ್ಲ. ಏಕೆಂದರೆ, ಅವರು ಉತ್ತಮ ಮಾನವ ಪುರುಷರು. ಅವರು ಯಾರಿಗೂ ಗುತ್ತಿಗೆ ಕೊಟ್ಟಂಥ ಮನುಷ್ಯರೂ ಅಲ್ಲ. ಕೆಲವರು, ಅವರು ಗುತ್ತಿಗೆ ತೆಗೆದುಕೊಳ್ಳುವುದಕ್ಕೆ ಏನೋ ಪ್ರಯತ್ನ ಮಾಡುತ್ತಿದ್ದಾರೆ. ಅವರೆಲ್ಲಾ ಈ ರಾಷ್ಟ್ರದ ಒಬ್ಬ ಶ್ರೇಷ್ಠ ಮಾನವ ಪುರುಷರು. ಇವತ್ತು ನಿಮ್ಮ ಸರ್ಕಾರದ ಮೇಲೆ ರೋಷ ಇತ್ತು, ದೇವೇಗೌಡರ ಮೇಲೆ ರೋಷ ಇತ್ತು. ನಾವು ಕೇಂದ್ರ ಸರ್ಕಾರದಲ್ಲಿ ಬೆಂಬಲ ಕೊಟ್ಟೆವು. ಬೆಂಬಲ ಕೊಟ್ಟ ಕಾರಣ, ಆಂಟಿ ಇನ್‌ಕಂಬೆನ್ಸಿ ಓಟು, ಏನು ಜನತಾ ದಳ ಸರ್ಕಾರ ರಾಜ್ಯದಲ್ಲಿತ್ತು, ಆಗ, ಅಧಿಕೃತವಾದ ವಿರೋಧ ಪಕ್ಷ ಕಾಂಗ್ರೆಸ್‌ಗೆ ಬರಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ಅಂದರೆ ನಿಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟ ಕಾರಣ, ನಮ್ಮ ಶ್ರೀರಾಮರೆಡ್ಡಿಯವರ ಸರ್ಕಾರಕ್ಕೆ ಬೆಂಬಲ ಕೊಟ್ಟ ಕಾರಣ........... ಆಗ ನೀವು ಇದ್ದೀರಿ. ನಿಮ್ಮದು ರಾಷ್ಟ್ರೀಯ ಪಕ್ಷವಲ್ಲವೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪಾರ್ಟಿ ಇರಬಹುದು, ಸರ್ಕಾರ ನಮ್ಮದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನ್ಯಾಷನಲ್ ಫ್ರಂಟ್ ಸರ್ಕಾರದಲ್ಲಿ ನೀವು ಪಾರ್ಟನರ್, ಮೇಜರ್ ಪಾರ್ಟನರ್. ನೀವು ಆ ಸರ್ಕಾರದಲ್ಲಿ ವಕ್ತಾರರಾಗಿ ಕೆಲಸ ಮಾಡಿದ್ದೀರಿ. ನಿಮ್ಮ ಮೇಲೆ ನಮಗೇನೂ ಭಿನ್ನಾಭಿಪ್ರಾಯವಿಲ್ಲ. ಏಕೆಂದರೆ ನಮ್ಮ ಕಡೆ ನೀವು ಬೆಂಬಲ ಕೊಡುತ್ತಾ ಇದ್ದೀರಿ. ಒಳ್ಳೆಯ ಸರ್ಕಾರ ಮಾಡುವುದಿದ್ದರೆ, ನಾವು ಬೆಂಬಲ ಕೊಡಲು ಸಿದ್ಧರಿದ್ದೇವೆಂದು ಹೇಳುತ್ತಲೇ ಇದ್ದೀರಿ. ನಾವು ಇಲ್ಲಿಯವರೆಗೂ ಒಪ್ಪಿಲ್ಲ. ಆದರೆ, ಇಲ್ಲೇನಾಗಿದೆ ಎಂದರೆ, 12ಪರ್ಸೆಂಟ್ ಓಟು, ಆಂಟಿ ಇನ್‌ಕಂಬೆನ್ಸಿ ಓಟು, ಜನತಾ ದಳ ಓಟು, ಆಂಟಿ ದೇವೇಗೌಡರ ಓಟು ಲೋಕಶಕ್ತಿಗೆ ಹೋಯಿತು. ಅದು ಬಿಜೆಪಿಗೆ ಸೇರಿಕೊಂಡಿತು. ಮೊನ್ನೆ ಲೋಕಸಭೆಯಲ್ಲಿ ಬಿ.ಜೆ.ಪಿ.ಗೆ ಬಂದಂಥ ಓಟ್ಟು 28 ಪರ್ಸೆಂಟ್ ಮಾತ್ರ. 11 ಪರ್ಸೆಂಟ್ ಲೋಕಶಕ್ತಿಗೆ ಸಿಕ್ಕಿದೆ. ಇದು ನಮ್ಮ ಅಧ್ಯಕ್ಷರು ಕೊಟ್ಟಂಥ ಅಂಕಿ ಸಂಖ್ಯೆ ಇದು ಸರಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದೇ ಇದ್ದರೆ, ನೀವು ಕರೆಕ್ಟ್ ಮಾಡಿ. ಆಂಟಿ ಇನ್‌ಕಂಬೆನ್ಸಿ ಓಟು ನಿಮ್ಮ ಬಿ.ಜೆ.ಪಿ. ಗೆ ಅಥವಾ ಲೋಕಶಕ್ತಿಗೆ ಶತಾಯ ಗತಾಯ ನಮ್ಮ ರಾಜ್ಯದ ಜನ ಕೊಡುವುದೇ ಇಲ್ಲ. ಎಲ್ಲಾ ಮುಖ ನೋಡಿ ಸಾಕಾಗಿದ್ದಾರೆ. ಆದ್ದರಿಂದ, ವಿರೋಧವಾದಂಥ ಓಟು, ಅದು ಕಾಂಗ್ರೆಸ್ಸಿಗೇ ಬರುವುದು. ಇನ್ನೂ ಹೆಚ್ಚು ಬರುತ್ತದೆ, ಜನತಾ ದಳದಿಂದ ಕಾಂಗ್ರೆಸ್ಸಿಗೆ. 1996ರಲ್ಲಿ ಬಿ.ಜೆ.ಪಿ.ಗೆ ಪಾರ್ಲಿಮೆಂಟ್‌ನಲ್ಲಿ 24 ಪರ್ಸೆಂಟ್ ಬಂದರೆ, 1998ರಲ್ಲಿ 28 ಪರ್ಸೆಂಟ್ ಬಂತು, ಲೋಕಶಕ್ತಿಗೆ 11 ಪರ್ಸೆಂಟ್ ಬಂತು. ಕಾಂಗ್ರೆಸ್ಸಿಗೆ 1996ರಲ್ಲಿ 30 ಪರ್ಸೆಂಟ್ ಬಂದಿದ್ದರೆ, 1996ರಲ್ಲಿ 36 ಪರ್ಸೆಂಟ್ ಬಂದಿದೆ. ನಮ್ಮ ಓಟು ಪರ್ಸೆಂಟೇಜ್ ಜಾಸ್ತಿಯಾಗಿದೆ. ಅನಂತರ ಉಪಚುನಾವಣೆಯಾಯಿತು. ಆಗ ನಾವು ನಮ್ಮ ಸೀಟನ್ನು ಉಳಿಸಿಕೊಂಡಿದ್ದಲ್ಲದೆ ಬಿಜೆಪಿಯವರಿಂದ ಒಂದು ಸೀಟನ್ನುಳಿಸಿಕೊಂಡಿದ್ದೇವೆ. ಅದೂ ಇಪ್ಪತ್ತೆರಡು ಸಾವಿರ ಅಂತರದಲ್ಲಿ ಈ ಸೀಟನ್ನುಳಿಸಿಕೊಂಡಿದ್ದೇವೆ. ಜನತಾದಳಕ್ಕೆ ಮೂರು ಸೀಟು, ಬಿಜೆಪಿ ಗೆ ಎರಡು ಸೀಟುಗಳು ಬಂತು. ಅಂದರೆ ಬಿಜೆಪಿ ಯವರ ಪ್ರಮಾಣ ಕೆಳಗೆ ಹೋಗುತ್ತಿದೆ. ಜನತಾ ದಳದವರ ಅಂಕಿಅಂಶ ಕೆಳಕ್ಕೆ ಬರುತ್ತಲೇ ಇದೆ. ಪೊಲೆಟಿಕಲ್ ಸಿನಾರಿಯೋವನ್ನು ಜನರಿಗೆ ಸರಿಯಾಗಿ ತಿಳಿಹೇಳಬೇಕಾಗುತ್ತದೆ. ರಾಜ್ಯದ ಜನರಿಗೆ ಅದು ಗೊತ್ತಾಗಬೇಕಾಗುತ್ತದೆ. ಏಕೆಂದರೆ ನಾನು

ರಾಜ್ಯದ ಜನರಿಗೆ ಉದ್ದೇಶಿಸಿ ಮಾತನಾಡುತ್ತಿದ್ದೇನೆ. I am answerable to the people of Karnataka. This is a mid-term appraisal of your performance. ಇದರ ಸಂಖ್ಯೆ ಸಹ ಎಷ್ಟಿದೆ ಇವರಿಗೆ ನಾವು ತಂತಿಯ ಮೇಲೆ ಅಥವಾ ಅಗ್ನಿಯ ಮೇಲೆ ನಡೆಯುತ್ತಿದ್ದೇವೆಂಬುದೇ ಅರ್ಥ ಆಗುವುದಿಲ್ಲ. ಒಂದು ರೀತಿಯಲ್ಲಿ ರಾಜಾರೋಷದಿಂದ ನಡೆಯುತ್ತಿದ್ದಾರೆ. ನಾನು ಮಾನ್ಯ ಜೆ.ಹೆಚ್. ಪಟೇಲರನ್ನು ಕಾಂಪ್ಲಿಮೆಂಟ್ ಮಾಡಬಯಸುತ್ತೇನೆ. ಏಕೆಂದರೆ he has no hidden agenda. ಒಳಗೆ ಇದ್ದದನ್ನು ಹೊರಗೆ ಹೇಳುತ್ತಾರೆ, ಹೊರಗೆ ಇದ್ದದ್ದನ್ನು ಹೇಳಿಯೇ ಹೇಳುತ್ತಾರೆ. ಏನಿದ್ದರೂ ಎಲ್ಲವನ್ನೂ ಹೇಳುತ್ತಾರೆ, ಅವರಿಗೆ ಯಾವುದೇ ಭಯವಿಲ್ಲ, ಅವರ ಹತ್ತಿರ ಹಿಡನ್ ಅಜೆಂಡಾ ಇಲ್ಲವೇ ಇಲ್ಲ. ಆದರೆ ತಮ್ಮ ಮಾಜಿ ಮುಖ್ಯಮಂತ್ರಿಗಳು, ಮಾಜಿ ಪ್ರಧಾನಮಂತ್ರಿಗಳಿಗೆ ಹಿಡ್ಡನ್ ಅಜೆಂಡಾ ಜಾಸ್ತಿ, ಓಪನ್ ಅಜೆಂಡಾ ಕಡಿಮೆ, ನಮ್ಮ ಅಪ್ರಹೆನ್‌ಷನ್ It is a contrast between ದೇವೇಗೌಡರ ಅವಧಿ ಮತ್ತು ಜೆ.ಹೆಚ್. ಪಟೇಲರ ಅವಧಿ. ಇವರಿಬ್ಬರ ಅವಧಿಯ ಬಗ್ಗೆ ನಾವು ಇವತ್ತು ಅವಿಶ್ವಾಸ ನಿರ್ಣಯದಲ್ಲಿ ವ್ಯಾಖ್ಯಾನ ಮಾಡಬಯಸುತ್ತಿದ್ದೇವೆ. Because it is your Government and that is why he becomes relevant. ಇವತ್ತು ಜನತಾದಳದವರು ಇಲ್ಲಿ 112 ಸದಸ್ಯರಿದ್ದಾರೆ, ನವನಿರ್ಮಾಣ ವೇದಿಕೆಯವರು 7, ಅಂದರೆ 105 ಮಾತ್ರ ಜನತಾದಳದವರು ಆಗುತ್ತಾರೆ. ಇದರ ಜೊತೆಗೆ 10-15 ಸ್ವತಂತ್ರ ಅಭ್ಯರ್ಥಿಗಳು ಸೇರಬಹುದು. ಆದರೆ ಅವರುಗಳು ಎಂದೆಂದೂ ಇಂಡಿಪೆಂಡೆಂಟ್ಸ್ ಅಭ್ಯರ್ಥಿಗಳೇ. ಅವರು ಸರ್ಕಾರ ಯಾವುದು ಇರುತ್ತದೆ ಆ ಕಡೆಗೆ ಬಂದೇ ಬರುತ್ತಾರೆ. ಈಗ ಮಾನ್ಯ ಶಿವರಾಮೇಗೌಡರು ತಮಗೆ ಬೆಂಬಲ ಕೊಟ್ಟಿದ್ದಾರೆ. ಈ ಹಿಂದೆ ಅವರು ನಮ್ಮ ಪಕ್ಷಕ್ಕೂ ಬೆಂಬಲವನ್ನು ಕೊಟ್ಟಿದ್ದರು. ಇದರಲ್ಲಿ ತಪ್ಪೇನಿಲ್ಲ. ಸ್ವತಂತ್ರ್ಯ ಅಭ್ಯರ್ಥಿಗಳೆಂದರೆ ಬಹಳಷ್ಟು ಸಂದರ್ಭದಲ್ಲಿ ಸರ್ಕಾರ ಯಾವುದು ಅಧಿಕಾರದಲ್ಲಿರುತ್ತದೋ ಆ ಕಡೆ ಹೋಗುತ್ತಾರೆ. ನಮ್ಮಲ್ಲಿ ಮೂರು ಜನರಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರವಿದ್ದೂ ತಮ್ಮ ಕಡೆ ಕೆಲವು ಜನ ಇಂಡಿಪೆಂಡೆಂಟ್ ಅಭ್ಯರ್ಥಿಗಳಿದ್ದಾರೆ, ಇದಕ್ಕೇನು ಹೇಳುತ್ತೀರಿ? You cannot take us for a ride. ತಾವು ಸಾರಾಸಗಟಾಗಿ ಆ ರೀತಿ ಇಂಡಿಪೆಂಡೆಂಟ್ಸ್‌ಗೆಲ್ಲಾ ಹೇಳಲು ಬರುವುದಿಲ್ಲ.

SRI M. VEERAPPA MOILY : There is nothing wrong about it.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು 1989ರಲ್ಲಿ ಸ್ವತಂತ್ರ್ಯ ಅಭ್ಯರ್ಥಿಯಾಗಿ ಗೆದ್ದಾಗ ಕಾಂಗ್ರೆಸ್‌ಗೆ ಸಪೋರ್ಟ್ ಕೊಟ್ಟೆ. ಆದರೆ 1989ರಲ್ಲಿ ನನಗೆ ಟಿಕೇಟ್ ಕೊಡದೆ ಪಿತೂರಿ ಮಾಡಿದ ಮೇಲೆ ನಾನು ಜನತಾದಳಕ್ಕೆ ಸಪೋರ್ಟ್ ಮಾಡಿದ್ದೇನೆ ಹೊರತು ಇಲ್ಲದಿದ್ದರೆ ನಾನು ಜನತಾದಳಕ್ಕೆ ಹೋಗುವ ಪ್ರಶ್ನೆಯೇ ಇರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ತಾವು ಹೇಳುವುದು ಸರಿ. ನಮ್ಮ ಪಕ್ಷದಲ್ಲಿ ತಮ್ಮನ್ನು ಕಳೆದುಕೊಂಡೆವು. ತಮ್ಮಿಂದ ಅದನ್ನು ಗೆಲ್ಲಬಹುದಿತ್ತು. ಅದನ್ನು ನಾನು ಒಪ್ಪುತ್ತೇನೆ. ಇಲ್ಲಿ ನಾವು ಬೇರೆ ಏನೂ ಮೋಟೀವ್ಸ್ ಅನ್ನು ಆಟ್ರಿಬ್ಯೂಟ್ ಮಾಡುವುದಿಲ್ಲ. ಭಿನ್ನಮತಿಯರು 50, 51 ಎಂದು ಹೇಳುತ್ತಾರೆ. ಅದರಲ್ಲಿ ಸುಮಾರು 10-15 ಮಂದಿ ಮಂತ್ರಿಗಳೂ ಇದ್ದಾರೆ ಎಂಬ ವಿಚಾರವನ್ನು

ಪತ್ರಿಕೆಯಲ್ಲಿ ನೋಡಿದ್ದೇವೆ. ಇದನ್ನೆಲ್ಲಾ ನೋಡಿದಾಗ ತಮ್ಮ ಪಕ್ಷ ಸಂಖ್ಯೆಯಲ್ಲಿ ಬಹುಮತವನ್ನು ಹೊಂದಿದೆಯೇ ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ. ಇದು ಜನತೆಗೆ ಗೊತ್ತಾಗಬೇಕಾದರೆ ತಾವುಗಳು ಬೀದಿಯಲ್ಲಿ ಬಂದು ಜಗಳ ಮಾಡಿ ಗೊತ್ತು ಮಾಡುವುದಲ್ಲ. ಪ್ರಜಾಪ್ರಭುತ್ವದ ಪದ್ಧತಿಯ ಪ್ರಕಾರ ಜನತೆಯ ಹಿತಕ್ಕಾಗಿ, ತಮ್ಮ ಹಿತಕ್ಕಾಗಿ ಬಹುಮತವು ವಿಧಾನಸಭೆಯಲ್ಲಿ ಗೊತ್ತಾಗಬೇಕಾಗುತ್ತದೆ. ಇವೆಲ್ಲಾ ನೋಡಿದರೆ ತಮ್ಮ ಸಂಖ್ಯೆ 40-42 ಇದ್ದಿರೋ ಎಂಬ ಅನುಮಾನ ಬರುತ್ತದೆ. ಪಕ್ಷದ ನಾಯಕತ್ವದಲ್ಲಿ ಸೋಲು, ಗೆಲವು ಇರುತ್ತದೆ. ಪ್ರಜಾಪ್ರಭುತ್ವದಲ್ಲಿ ನೇರವಾಗಿ ಯುದ್ಧಗಳು ನಡೆಯುವುದಿಲ್ಲ. ಪ್ರಾಕ್ಸಿ ಯುದ್ಧಗಳು ನಡೆಯುತ್ತವೆ. ನವೆಂಬರ್ 22, 1994ರಲ್ಲಿ ಲಕ್ನೋದಲ್ಲಿ ಮುಸ್ಲಿಂ ಹಾಸ್ಟೆಲ್ ರೈಡ್ ಆಯಿತು. 25ರಂದು ಶುಕ್ರವಾರ, 26ರಂದು ಮೊದಲ ಫೇಸ್ ಚುನಾವಣೆ, ಮುಸ್ಲಿಂ ಮತಗಳೇನು ಹತ್ತು ಪರ್ಸೆಂಟ್ ಇತ್ತು ಅದರಿಂದ ಸುಮಾರು 106 ಸೀಟುಗಳು ನಮ್ಮಿಂದ ಕೈತಪ್ಪಿಹೋದವು. 36 ಸೀಟುಗಳು ಮಾತ್ರ ನಮಗೆ ಉಳಿಯಿತು. ಇದೊಂದು ಅಚಾತುರ್ಯ. ಪ್ರಜಾಪ್ರಭುತ್ವದಲ್ಲಿ ಇಂಥ ಅವಗಢ ನಮಗೂ ಬರಬಹುದು, ನಿಮಗೂ ಬರಬಹುದು. ಈ ರಾಷ್ಟ್ರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಗೂ ಈ ರೀತಿ ಪ್ರಸಂಗಗಳು ಬರಬಹುದು. ಇದನ್ನು ಯಾರೂ ತಪ್ಪಿಸಲು ಆಗುವುದಿಲ್ಲ. ಈ ತಿಂಗಳ ಎರಡನೇ ತಾರೀಖಿನ ಹಿಂದೂ ಪತ್ರಿಕೆಯಲ್ಲಿ ಮಾನ್ಯ ಜೆ.ಹೆಚ್. ಪಟೇಲರು ಕೊಟ್ಟಿರುವ ಒಂದು ಸ್ಟೇಟ್‌ಮೆಂಟ್ ಬಂದಿದೆ. ಅದೇನೆಂದರೆ ``Patel pleads for one more chance" ಎಂದು ಬಂದಿದೆ. ಬೇರೆ ಪತ್ರಿಕೆಯಲ್ಲಿ ಸಹ ಬಂದಿದೆ. ಜವಾಬ್ದಾರಿಯುತ ಪತ್ರಿಕೆಯಾದ ಹಿಂದೂ ಪತ್ರಿಕೆಯಲ್ಲಿ ಒಂದು ಟೈಟಲನ್ನೇ ಕೊಟ್ಟು Hindu is a very responsible paper. It says, "Patel pleads for one more chance" ಎಂದು ಬಂದಿದೆ. ಉಜ್ವಲವಾದಂಥ ಪರಂಪರೆಯನ್ನು ಹೊಂದಿರುವಂಥ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು Mr. Patel has come to this stage of a rock bottom position of pleading for a chance. This is a very bad reflection on the political scenario of Karnataka. ಇದು ತಮಗೆ ಮಾತ್ರವಲ್ಲ ನಮಗೆಲ್ಲರಿಗೂ ಅನ್ವಯವಾಗುತ್ತದೆ. The Chief Minister of the State after all. It is not J.H. Patel, it is the Chief Minister of Karnataka who pleads for a chance. The question is whether he should have a chance or not. The question is when he pleads, should we not give a chance on humanitarian grounds because chance has to be given on humanitarian grounds. ನಮ್ಮ ವಿರೋಧಪಕ್ಷದ ನಾಯಕರು ಬಹಳ ಕ್ರೂರಿಗಳಾಗಬಾರದು, ಏಕೆಂದರೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಬಾರದು. ಇಡೀ ರಾಷ್ಟ್ರದಲ್ಲಿ ಜನತಾದಳದ ಒಂದೇ ಒಂದು ಸರ್ಕಾರ ನಮ್ಮ ರಾಜ್ಯದಲ್ಲಿದೆ. ನಮ್ಮ ನಾಯಕರು 25-26 ದೋಷಣೆಗಳನ್ನು ಸರ್ಕಾರದ ಮೇಲೆ ಹೊರಿಸಿರುವ ಬಗ್ಗೆ ನಾನು ಅವರ ವಿವೇಚನೆಯ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆತ್ಮಹತ್ಯೆ ಮಾಡಿಕೊಂಡು ಸಾಯುವ ಸರ್ಕಾರಕ್ಕೆ ಈ ರೀತಿ 25-26 ದೋಷಾರೋಪಣೆಯನ್ನೇಕೆ ಮಾಡುತ್ತೀರಿ, ಅವರಾಗಿ ಅವರು ಸಾಯುತ್ತಿದ್ದಾರೆ ಎಂದು ಮಾನ್ಯ ವೀರಪ್ಪ ಮೊಯ್ಲಿಯವರು ವ್ಯಾಖ್ಯಾನ ಮಾಡುತ್ತಿದ್ದಾರೆ. ಅವರಾಗಿ ಅವರು ಸಾಯುವಾಗ ತಾವೇಕೆ ಅವಮಾನ ಮಾಡುತ್ತೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ರಣರಂಗದಲ್ಲಿ ಯಾವ ವಸ್ತುವಿನ ಮೇಲೆ ಯಾವ ಶಸ್ತ್ರವನ್ನು ಪ್ರಯೋಗ ಮಾಡಬೇಕೆಂಬ ಬಗ್ಗೆ ತಮಗೆ ಗೊತ್ತಿಲ್ಲವೆಂದು ಮೊಯ್ಲಿರವರು ಹೇಳಿದ್ದುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಯಾವ ಧಾಟಿಯಲ್ಲಿ ಹೇಳಿದ್ದಾರೆಂದರೆ, ತಾವೇ ತಾವಾಗಿ ಸರ್ಕಾರ ಸಾಯುತ್ತಿರಬೇಕಾದರೆ ನೀವೇಕೆ ಅವರ ಮೇಲೆ ಇಷ್ಟು ದೊಡ್ಡ ದೋಷಾರೋಪಣೆ ಮಾಡಿ ಅವರನ್ನು ದೊಡ್ಡವರನ್ನಾಗಿ ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ : ಆತ್ಮಹತ್ಯೆಗೆ ಪ್ರಯತ್ನ ಪಡುವುದು ತಪ್ಪಲ್ಲವೇ ? ತಾವು ಆತ್ಮಹತ್ಯೆಗೆ ಪ್ರಯತ್ನವೂ ಮಾಡಬಾರದು. ಏಕೆಂದರೆ because you are all forcing him ತಾವು ವರದಕ್ಷಣೆಯ ವಿಚಾರ ಕೇಳಿರಬಹುದು. ಡೌರಿ ಪ್ರಾಹಿಬಿಷನ್ ಆ್ಯಕ್ಟ್‌ನ ಪ್ರಕಾರ ಸತ್ತರೂ ಅಫೆನ್ಸ್ ಬೇರೆಯವರ ಮೇಲೆ ಆಗುತ್ತದೆ. We don't want that all of you should be the offenders. Dowry death is not a murder actually, but it amounts to murder. ಏಕೆಂದರೆ ಅತ್ತೆ, ಮಾವ, ನಾದಿನಿ, ಗಂಡ ಎಲ್ಲರೂ ಸೇರಿ ಕೊಲ್ಲುವುದು. ನನಗನ್ನಿಸುತ್ತದೆ ಇಂದು ಏನು ಸರ್ಕಾರದಲ್ಲಿ ಭಿನ್ನಮತೀಯ ಚಟುವಟಿಕೆ ನಡೆಯುತ್ತಿದೆ ಇದರಲ್ಲಿ ಅತ್ತೆ, ಮಾವ ಯಾರು ಎಂದು ಗುರುತಿಸಬೇಕಾಗಿದೆ. ಆ ಮಾವ ಕಂಸನಂತವರು ಆಗಬಹುದು. ನಮಗೆ ಜೆ.ಹೆಚ್. ಪಟೇಲರ ಬಗ್ಗೆ ಸಿಂಪತಿ ಇದೆ. ಏಕೆಂದರೆ he has no hidden agenda at all. ಇಂಥ ಒಬ್ಬರು ಫ್ರಾಂಕ್ ಮುಖ್ಯಮಂತ್ರಿಗಳು ಸಿಗುವುದು ಬಹಳ ಅಪರೂಪ. ಯಾವುದರಲ್ಲೂ ಗೌಪ್ಯವನ್ನಿಡದೆ ಎಲ್ಲವನ್ನೂ ಹೇಳುತ್ತಾರೆ. In a way he is better. ಬಹಳ ಜನರು ಒಳಗೇ ಇಟ್ಟುಕೊಳ್ಳುತ್ತಾರೆ. ಬೇರೆಯವರಿಂದ ಬಹಳ ಉಪಕಾರ ಪಡೆದುಕೊಳ್ಳುತ್ತಾರೆ, ಆದರೆ ಅವರ ಹಿಡನ್ ಅಜೆಂಡಾ ಇದ್ದೇ ಇರುತ್ತದೆ.

1.40 ಪಿ.ಎಂ.

ನಾವು ಓಪನ್, ನಾವು ಫ್ರಾಂಕ್ ಜಾಸ್ತಿಯಾಗಿಯೇ ಸೋತದ್ದು. ಸ್ವಲ್ಪಮಟ್ಟಿಗೆ ಹಿಡನ್ ಅಜೆಂಡಾ ಇರಬೇಕಾಗುತ್ತದೆ. ರಾಜಕೀಯದಲ್ಲಿ ಮಾನ್ಯ ಯಡಿಯೂರಪ್ಪನವರಲ್ಲಿ, ನಮ್ಮಲ್ಲಿ ಯಾವ ಹಿಡನ್ ಅಜೆಂಡಾ ಇಲ್ಲ. ಯಡಿಯೂರಪ್ಪನವರ ಹತ್ತಿರ ಹಿಡನ್‌ಅಜೆಂಡಾ ಇಲ್ಲ ಎನ್ನುವ ಬಗ್ಗೆ ನಾನು ಖಂಡಿತವಾಗಿ ಸರ್ಟಿಫಿಕೇಟನ್ನು ಕೊಡುತ್ತೇನೆ. ಆದರೆ ಅವರ ಪಕ್ಷದಲ್ಲಿ ಮಾತ್ರ ಹಿಡನ್ ಅಜೆಂಡಾ ಇದ್ದೇ ಇದೆ. ಅವರು ಇದರಿಂದಾಗಿ ಬಹಳ ಸಂದಿಗ್ಧತೆಯಲ್ಲಿ ಇದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದಲ್ಲ, ಎರಡಲ್ಲ, ಮೂರು ಸ್ಟೇಟ್‌ಮೆಂಟನ್ನು ಕೊಡುತ್ತಾ ಇದ್ದಾರೆ. ಅವರು ಸೆಂಟ್ರಲ್ ಕ್ಯಾಬಿನೆಟ್‌ನಲ್ಲಿ ಪ್ರಮುಖ ಸ್ಥಾನದಲ್ಲಿರುವವರು. ನಾನು ಸುಮ್ಮನೆ ಯಡಿಯೂರಪ್ಪನವರಿಗೆ ಎಂಬರಾಸ್ ಆಗಬಾರದು ಎಂದು ಹಿಂಟ್ ಕೊಡುತ್ತಿದ್ದೇನೆ. Mr. Yediyurappa is our colleague friend since so many years and he has an open heart. ಮಾನ್ಯ ವೆಂಕಯ್ಯ ನಾಯ್ಡುರವರೂ ಕೂಡ ಸ್ಪಷ್ಟವಾಗಿ ಏನನ್ನೂ ಹೇಳುತ್ತಾ ಇಲ್ಲ Mr. Hegde is a National leader. He is an important Cabinet Minister. ಮಾನ್ಯ ಯಡಿಯೂರಪ್ಪನವರಿಗೆ ಅಂಥ ಒಂದು ಕ್ರೆಡಿಟನ್ನು ನಾನು ಕೊಡಬೇಕಾಗುತ್ತದೆ. ಆದ್ದರಿಂದ ಈ ಹೇಳಿಕೆ Mr. Patel pleads for one more chance ಬಹುಶಃ ಈ ಹೇಳಿಕೆಯು ನಮ್ಮ

ನಾಯಕರಿಗೆ ಮೊದಲೇ ಗಮನಕ್ಕೆ ಬಂದಿದ್ದರೆ, ಬಹುಶಃ ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡುತ್ತಿದ್ದರೋ ಇಲ್ಲವೋ? ನನಗೆ ಅದು ಗೊತ್ತಿಲ್ಲ........ ಒಟ್ಟಿನಲ್ಲಿ ಅವಿಶ್ವಾಸ ನಿರ್ಣಯದಲ್ಲಿ ಸಾಧಕ-ಬಾಧಕಗಳೇನೇ ಇದ್ದರೂ ಈ ವಾತಾವರಣದಲ್ಲಿ 'ಮಾವ' ಯಾರು ಎಂಬುದು ಗೊತ್ತಾಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಮಾವ ಯಾರು? ಅವರು ಬೆಂಗಳೂರಿನಲ್ಲಿದ್ದಾರೋ ಡೆಲ್ಲಿಯಲ್ಲಿದ್ದಾರೋ ಎಂಬುದನ್ನು ಹೇಳಿದರೆ ಮುಂದಿನ ವಿಚಾರಗಳೆಲ್ಲಾ ಬಂದು ಬಿಡುತ್ತವೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈ ನೊ-ಕಾನ್ಫಿಡೆನ್ಸ್ ಮೋಷನ್‌ನಲ್ಲಿ ಗೆದ್ದರೂ, ಬಿದ್ದರೂ ಡೌರಿ ಡೆಥ್ ಆಗಿಯೇ ಆಗುತ್ತದೆ ಅಲ್ಲವೇ? ಯಾರೂ ರಕ್ಷಿಸಲು ಆಗುವುದಿಲ್ಲ. ಒಂದು ವೇಳೆ ಆ ಡೆಥ್‌ನಿಂದ ಸರ್ವೈವ್ ಮಾಡಬೇಕಾದಲ್ಲಿ ಈ ಅವಿಶ್ವಾಸನಿರ್ಣಯವು ಸಹಾಯ ಆಗಬಲ್ಲದು. ಆದ್ದರಿಂದ ಆ ಮಾವನಿಂದ ಸ್ವಲ್ಪ ಎಚ್ಚರಿಕೆಯಿಂದ ಇರಿ, ಸ್ವಲ್ಪ ಜಾಗ್ರತೆ ಇಂದ ಇರಲಿ ಎಂದು ಮಾನ್ಯ ಸಿದ್ಧರಾಮಯ್ಯನವರ ಮುಖಾಂತರ ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಅವಿಶ್ವಾಸ ನಿರ್ಣಯದ ಮುಖಾಂತರ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.42ಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 3.10 ಗಂಟೆಗೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ **(ಶ್ರೀ ರಮೇಶ್ ಕುಮಾರ್)** ಪೀಠವನ್ನು ಅಲಂಕರಿಸಿದರು)

ಶ್ರೀ ಜೆ.ಹೆಚ್. ಪಟೇಲ್ ಸರ್ಕಾರದ ಮೇಲಿನ ಅವಿಶ್ವಾಸ ನಿರ್ಣಯದ ಚರ್ಚೆ (ಮುಂದುವರಿದ್ದುದು)

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಆಲಮಟ್ಟಿಯ ಬಗ್ಗೆ ಸಾಕಷ್ಟು ವಿವರವನ್ನು ಹೇಳಿದ್ದಾರೆ. ನಾನು ಹೆಚ್ಚು ವಿವರಕ್ಕೆ ಹೋಗಲಿಕ್ಕೆ ಅಪೇಕ್ಷೆಪಡುವುದಿಲ್ಲ. ಆದರೆ ಈಗ ನಾನು ನಿನ್ನೆ ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಈ ರಾಷ್ಟ್ರದ ಶ್ರೇಷ್ಠ ನ್ಯಾಯಲಯದಲ್ಲಿ ನಡೆದಂಥ ಕೆಲವು ವಿದ್ಯಮಾನಗಳನ್ನು ಇವತ್ತು ನಾವು ಅವಲೋಕಿಸಿದರೆ ನಾವು ಇವತ್ತು ಆಲಮಟ್ಟಿ ಡ್ಯಾಮ್ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಅತ್ಯಂತ ಒಂದು ಅಪಾಯದ ಅಂಚಿನಲ್ಲಿ ಇವತ್ತು ಇದ್ದೇವೆ. ಒಂದು ರೀತಿಯಲ್ಲಿ ನಮ್ಮ ನಾಡಿನ ರೈತರ ಎಲ್ಲಾ ಆಸೆಗಳು ಇವತ್ತು ಮಣ್ಣು ಪಾಲಾಗತಕ್ಕಂಥ ಒಂದು ದಿವಸ ಬಹಳ ದೂರ ಇಲ್ಲ. ಎಂಬುದು ಇವತ್ತು ನಮಗೆ ಭಯ. ಇವತ್ತೊಂದು ರೀತಿಯ ಶಂಕೆ. ಏಕೆಂದರೆ ಜೂನ್ 99 ನಮ್ಮ ಪಾಲಿನ ನೀರನ್ನು ಬಚಾವತ್ ಆಯೋಗದ ಪ್ರಕಾರ ನಮ್ಮ ಪಾಲಿಗೆ ಬಂದಂಥ ನೀರನ್ನು ಹಿಡಿದಿಟ್ಟುಕೊಳ್ಳತಕ್ಕಂಥ ಕೊನೆಯ ತಿಂಗಳು ಅದು. ಒಮ್ಮೆ ಅದು ಕೈ ತಪ್ಪಿಹೋಯಿತು ಎಂದರೆ ಜೂನ್ 99ಕ್ಕೆ ನಾವು ನಮ್ಮ ಪಾಲಿಗೆ ಬಂದಂಥ ನೀರನ್ನು ಉಳಿಸಿಕೊಳ್ಳಲಾಗದಿದ್ದರೆ ಜೂನ್ ಎರಡು ಸಾವಿರ ಇಸವಿಗೆ ಆ ಹಕ್ಕು ಉಳಿಯುವುದೇ ಇಲ್ಲ ಹೊರಟುಹೋಗುತ್ತದೆ. ಬಹುಶಃ ಅದನ್ನು ಪೂಲ್ ಮಾಡಿಕೊಂಡು ಪುನಃ

ವಿತರಣೆ ಮಾಡುವ ಒಂದು ಪರಿಸ್ಥಿತಿಗೆ ನಾವು ಹೋಗುತ್ತೇವೆ. ಈಗ ಪ್ರಶ್ನೆ ಏನೆಂದರೆ ಜೂನ್ 99ಕ್ಕೆ ನಾವು ಹಿಡಿದಿಟ್ಟುಕೊಳ್ಳುವುದಕ್ಕೆ ಸಾಧ್ಯ ಇದೆಯೇ ಎಂಬ ಒಂದು ಪ್ರಶ್ನೆ ಆದರೆ ಇತ್ತೀಚೆಗೆ ನಡೆದಿರುವ ವಿದ್ಯಮಾನಗಳಿಂದ ನಾನು ಆಲಮಟ್ಟಿ ಡ್ಯಾಮ್ ಬಗ್ಗೆ ಸೀಮಿತವಾಗಿ ಹೇಳುವುದಿದ್ದರೆ ಈ ಸೂಚನೆ ಇವತ್ತು ಕಾಣುತ್ತಿಲ್ಲ. ಇವತ್ತು ನಮ್ಮ ಸರ್ಕಾರ ಮಾಡಿದಂಥ ಒಂದು ಗೋಜಲು ಇದು. ಆರ್ಟಿಫಿಷಿಯಲಿ ಕ್ರಿಯೇಟೆಡ್ ಬೈ ಯು. ಏಕೆಂದರೆ ಇದರಲ್ಲಿ ಕೆಲವು ಸೂಕ್ಷ್ಮತೆಗಳು ಇವೆ. ನಾನು ಮಾನ್ಯ ಮುಖ್ಯಮಂತ್ರಿಗಳಿರುವಾಗ, ಮಾನ್ಯ ನಾಗೇಗೌಡರಿಗೆ ಅನೇಕ ಬಾರಿ ಹೇಳಿದ್ದೆ. ನೀವು ನೀರಾವರಿ ಬಗ್ಗೆ ಹೇಳಿಕೆಯನ್ನು ಕೊಡುವಾಗ ಯಾರಾದರೂ ಒಬ್ಬರೂ ಕೊಡಿ. ಅಥವಾ ಯಾರನ್ನಾದರೂ ನೇಮಕಮಾಡಿ ಮುಖ್ಯಮಂತ್ರಿಗಳೇ ಕೊಡಲಿ. ಯಾರಾದರೂ ಆಥರೈಸ್ಡ್ ಪರ್ಸನ್ಸ್ ಏಕೆಂದರೆ ಅದು ಬ್ರೀಫಿಂಗ್ ಇರಬೇಕು. ಇಂಥ ಸಂದರ್ಭದಲ್ಲಿ ನಾವು ಯಾವಾಗಲೂ ಕೂಡ ನಮ್ಮ ಸರ್ಕಾರ ಇರುವಾಗಲೂ ಹೇಳಿದ್ದು ನಾನು. ಪ್ರತಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಾವು ಸಾಧಕ ಬಾಧಕಗಳ ಬಗ್ಗೆ ಮಾತನಾಡಬಹುದು. ಅದು ಕಾವೇರಿ ಇರಬಹುದು, ಯುಕೆಪಿ ಇರಬಹುದು, ಇದರ ಸಾಧಕ-ಬಾಧಕಗಳನ್ನು ನಾವು ಆ ಮೀಟಿಂಗ್‌ನಲ್ಲಿ ಚರ್ಚೆ ಮಾಡುತ್ತಲೇ ಇರುತ್ತೇವೆ. ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಆ ಕ್ಯಾಬಿನೆಟ್ ಸಬ್ ಕಮಿಟಿಯವರು ಪ್ರತೀ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಲ್ಲಿ ವರದಿಯನ್ನು ಕೊಡಬೇಕು. ಪ್ರತಿ ವಾರ ಕ್ಯಾಬಿನೆಟ್ ಮೀಟ್ ಆಗಬೇಕು. ಸುಪ್ರೀಂ ಕೋರ್ಟಿನಲ್ಲಿ ಕೇಸ್ ಆಗುತ್ತದೆ, ಹೈಕೋರ್ಟಿನಲ್ಲಿ ಕೇಸ್ ಆಗುತ್ತದೆ, ಏನೋ ಘಟನೆಗಳು ನೀರಾವರಿ ಬಗ್ಗೆ ನಡೆಯುತ್ತದೆ. ಅದು ಆ ವಿಷಯಗಳು ಬಂದಕೂಡಲೇ ಕ್ಯಾಬಿನೆಟ್ ಸಬ್ ಕಮಿಟಿ ಮೀಟ್ ಆಗಬೇಕು. ಆ ಕ್ಯಾಬಿನೆಟ್ ಸಬ್ ಕಮಿಟಿ ಮೀಟ್ ಆದಮೇಲೆ ಕ್ಯಾಬಿನೆಟ್ ಮೀಟ್ ಆಗಬೇಕು. ಇಷ್ಟು ಮಾತ್ರವಲ್ಲ, ಒಂದು ಟೆಕ್ನಿಕಲ್ ಸೆಲ್ ಎಂದು ಹೇಳಿ ನಾವು ಮಾಡುತ್ತಿದ್ದೆವು. ಮತ್ತೊಂದು ಲೀಗಲ್ ಸೆಲ್ ಎಂದು ಹೇಳಿ ಮಾಡಿಕೊಳ್ಳುತ್ತಿದ್ದೆವು. ಅಲ್ಲಿ ಹೋಗಿ ನಾವು ಕಾವೇರಿ ಸೆಲ್ ಎಂದು ಆಮೇಲೆ ಅದಕ್ಕೆ ಆಲಮಟ್ಟಿ, ಯುಕೆಪಿ ವ್ಯವಹಾರವನ್ನೂ ಕೂಡ ದೆಹಲಿಯಲ್ಲಿ ಮಾಡಿ ಒಂದು ರೀತಿಯ ಸಮನ್ವಯತೆಯಿಂದ ಇವತ್ತು ಒಂದು ಸೂಕ್ಷ್ಮವಾದ ವಿಚಾರಗಳಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬ ಅಧಿಕಾರಿ ಏನೋ ತಕ್ಷಣ ಒಂದು ಅಭಿಪ್ರಾಯವನ್ನು ಕೊಡುತ್ತಾನೆ, ಲಾ ಸೆಕ್ರೆಟರಿ ಒಂದು ಅಭಿಪ್ರಾಯವನ್ನು ಕೊಡುತ್ತಾನೆ. ಅಥವಾ ಟೆಕ್ನಿಕಲ್ ಮ್ಯಾನ್ ಅಭಿಪ್ರಾಯ ಕೊಡುತ್ತಾನೆಂದು ಇವೊತ್ತಿನ ದಿವಸ ನಾವು ಒಮ್ಮೆಲೆ ಜಂಪ್ ಮಾಡುವುದಲ್ಲ ಅಥವಾ ನಮ್ ಲಾಯರ್, ಅಡ್ವೋಕೇಟ್ ಜನರಲ್‌ರವರು ದೆಹಲಿಯಲ್ಲಿರಲಿ ಎಲ್ಲಿಯೇ ಇರಲಿ Advocate General should be always kept in picture.ಅವರ ಅಭಿಪ್ರಾಯಗಳನ್ನೂ ಸಹ ಸಂಪೂರ್ಣವಾಗಿ ಕೊಟ್ಟು, ಏಕೆಂದರೆ, ಯಾವುದೇ ಸಣ್ಣ ವಿಷಯವಾಗಿದ್ದರೂ ಅದಕ್ಕೆ ಇವೊತ್ತು ನಾವು ಸಮಗ್ರವಾದ ಅಭಿಪ್ರಾಯ ಕಂಡುಕೊಳ್ಳಬೇಕಾಗುತ್ತದೆ. ಈ ತರಹದ ಕೆಲಸವನ್ನು ತಾವು ಎಷ್ಟು ಮಾಡಿದ್ದೀರಿ ? Have you done this kind of an exercise? Over and above that ಆಗಿಂದಾಗ್ಗೆ ಸಮಸ್ಯೆ ಉದ್ಭವಿಸುತ್ತಿದ್ದಾಗ ನಾವು, ವಿರೋಧ ಪಕ್ಷದ ನಾಯಕರೆಲ್ಲರೂ ಸೇರಿಕೊಂಡು ಒಂದು ಹೈ ಪವರ್ ಕಮಿಟಿ ಮಾಡುತ್ತಿದ್ದೆವು. ಅದರಲ್ಲಿ ಎಲ್ಲರೂ ಸಮಾಲೋಚನೆ ಮಾಡಿ, ಯಾವುದೇ ಸಣ್ಣ ವಿಷಯವಿದ್ದರೂ ಒಮ್ಮತದ ಒಂದೇ ಧ್ವನಿ ಇರುತ್ತಿತ್ತು. ಕಾರಣ ನಾವೆಲ್ಲಿಯೂ ಕೂಡ ಸಿಕ್ಕಿ ಹಾಕಿಕೊಳ್ಳಬಾರದು. We have

also faced this situation but at no timeಸುಪ್ರೀಂ ಕೋರ್ಟ್‌ನಲ್ಲಾಗಲಿ, ಹೈಕೋರ್ಟ್‌ನಲ್ಲಾಗಲಿ ಪರಿಸ್ಥಿತಿ ಬಿಗಡಾಯಿಸಿ, ನಾವೇ ಸ್ವಯಂ ಕೃತಾಪರಾಧವನ್ನು ಮಾಡಿದಂಥ ಪ್ರಸಂಗ ಇಲ್ಲವೇ ಇಲ್ಲವೆಂದು ಹೇಳಬಹುದು. ಈಗ ಯು.ಕೆ.ಪಿ. ಅಥವಾ ಆಲಮಟ್ಟಿ ಅಣೆಕಟ್ಟಿನ ಬಗ್ಗೆ ತಮಗೆ ಗೊತ್ತಿದೆ. Andhra Pradesh was in the duck, when we were in the Government. ತೆಲುಗು ಗಂಗಾ ಬಗ್ಗೆ ಚಡಪಡಿಸುತ್ತಿದ್ದರು, ಕೇಂದ್ರ ಸರ್ಕಾರ ಆ ಬಗ್ಗೆ ತನ್ನ ಕ್ಲಿಯರೆನ್ಸ್ ಕೊಡುವುದಕ್ಕೆ ನಾವು ಬಿಡುತ್ತಿರಲಿಲ್ಲ, ನಾವು ಇಲ್ಲಿ ಗೊಂದಲ ಮಾಡುತ್ತಿದ್ದೆವು. They were in the dock, not Karnataka. ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ತೆಲುಗು ಗಂಗಾ ಯೋಜನೆಯಡಿ ಪರಿಹಾರ ಕೊಡಿಸಬೇಕೆಂದು ನಾವು ಹೇಳಿದೆವು, ಈ ದಿಸೆಯಲ್ಲಿ ಮೂರು ಸಭೆಗಳಾದುವು. ಸದರಿ ಯೋಜನೆಯಿಂದ ಅವರಿಗೂ ನೀರು ಇರುತ್ತದೆ, ನಮಗೂ ನೀರು ಇರುತ್ತದೆ, ಆಗ ಯಾವ ತಾಪತ್ರಯವೂ ಇರುವುದಿಲ್ಲ, ಆಲಮಟ್ಟಿ ಅಣೆಕಟ್ಟು ಕೂಡ ಏರಿಸಬಹುದೆಂದು ಬಚಾವತ್ ತೀರ್ಪಿನಲ್ಲಿ ಸ್ಕೀಮ್ 'ಬಿ' ಎನಿದೆ ಕ್ರಿ.ಶ.2000 ಇಸವಿಯವರೆಗೆ ಕಾಯುವ ಬದಲು ಇವೊತ್ತೇ ಅಡ್ವಾನ್ಸ್ ಮಾಡಿಕೊಂಡು ಅದರ ಬಗ್ಗೆ ನಾವು ಸರಿಯಾದ ಸೂಚನೆ ಮಾಡಿದರೆ ಅಲ್ಲಿಗೆ ಎಷ್ಟು ಪ್ರಮಾಣದಲ್ಲಿ ಹೆಚ್ಚುವರಿಯಾಗಿ ನೀರು ಬರುತ್ತದೆಂದು ತಿಳಿದು ಹಂಚುಕೊಂಡು ನಮ್ಮ ಅಣೆಕಟ್ಟು ನಿರ್ಮಾಣ ಕಾರ್ಯಗಳನ್ನು ನಾವು ಮುಗಿಸಿಕೊಂಡು ಹೋಗೋಣವೆಂದು ಒಟ್ಟಾಭಿಪ್ರಾಯಕ್ಕೆ ಬಂದಿದ್ದೆವು. ಸನ್ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ತಿರುಪತಿಯಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಸಭೆ ನಡೆಸಲಾಗಿತ್ತು. ಆಗ ನಾನು ಕಾನೂನು ಮಂತ್ರಿಯಾಗಿದ್ದು ಆ ಸಭೆಗೆ ನಾನೂ ಸಹ ಹೋಗಿದ್ದೆ. ತಿರುಪತಿಯಲ್ಲಿ ಸಭೆ ನಡೆದಾಗ ಎಲ್ಲಾ ಮುಖ್ಯಮಂತ್ರಿಗಳು ತಾತ್ವಿಕವಾಗಿ ಒಪ್ಪಿದ್ದರು. ಒಪ್ಪಿದ ನಂತರ ಅಧಿಕಾರಿಗಳು ಇದರ ಬಗ್ಗೆ ಇಶ್ಯೂಸ್ ಫ್ರೇಮ್ ಮಾಡಬೇಕು. ನಂತರ ಮೈಸೂರಿನಲ್ಲಿ ಸಭೆ ನಡೆಸಿದಾಗ, ಇಶ್ಯೂಸ್ ಮೇಲೆ ನಾವು ಡಿಸೈಡ್ ಮಾಡಿ ಫ್ರೇಮ್ ಮಾಡಿದೆವು. ಯಾವ ಇಶ್ಯೂಸ್ ಮೇಲೆ ತಾಂತ್ರಿಕ ವರದಿ ಬರಬೇಕು, ಕಾನೂನು ವರದಿ ಬರಬೇಕೆಂದು ನಿರ್ಣಯ ಮಾಡಿದ ನಂತರ we decided to meet at Mahabaleshwar.ಮಹಾಬಲೇಶ್ವರದಲ್ಲಿ ನಾವು ಸೇರಿದೆವು. ನಾವು ಆಗ ಮುಖ್ಯಮಂತ್ರಿಯಾಗಿದ್ದೆ. We met, again we discussed. ಚುನಾವಣೆ ಬರುತ್ತಿದ್ದು, ಚುನಾವಣೆ ನಂತರ ನಾವು ತೀರ್ಮಾನಿಸೋಣವೆಂದು next meeting could be in Srisailam, Andhra Pradesh.ಆಂಧ್ರಪ್ರದೇಶದಲ್ಲಿ ಶ್ರೀಶೈಲದಲ್ಲಿ ಸಭೆ ಸೇರಬೇಕೆಂದು ನಿರ್ಣಯ ತೆಗೆದುಕೊಂಡೆವು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇನಿಷಿಯೇಟಿವ್ ಅನ್ನು ಅಲ್ಲಿಗೇ ನಿಲ್ಲಿಸಿದಿರಿ. ಅದನ್ನು ನಿಲ್ಲಿಸದೆ ತಾವು ಮುಂದೆ ಕೊಂಡೊಯ್ದಿದ್ದರೆ ಇವೊತ್ತು ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ವಿವಾದಗಳು ತೀರ್ಮಾನವಾಗುತ್ತಿದ್ದವು, ಸಂಘರ್ಷವೇ ಬರುತ್ತಿರಲಿಲ್ಲ. ಸಂಘರ್ಷವು ಇಲ್ಲದಿಲ್ಲ, ಸಂಘರ್ಷವಿಲ್ಲದೆ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ we got the clearance in 1990 from the Central Water Resources Commission.

1990ರಲ್ಲಿ ಅಲ್ಲಿಂದ ಕ್ಲಿಯೆರೆನ್ಸ್ ಬಂದಿದೆ, ಯಾರೂ ಸಹ ಅಬ್ಜೆಕ್ಟ್ ಮಾಡಲಿಲ್ಲ. 519 ಮೀಟರ್‌ನಿಂದ 524 ಮೀಟರ್‌ವರೆಗೆ ಅಣೆಕಟ್ಟನ್ನು ಎತ್ತರಗೊಳಿಸತಕ್ಕಂಥಾದ್ದು ಇದೆ. 1994ರಲ್ಲಿ

ನಾನು ಮುಖ್ಯಮಂತ್ರಿಯಾಗಿದ್ದಾಗ the Director of Gates Design ಆ ನಮೂನೆಯ ಗೇಟ್ ಏನಿದೆ, ಅದನ್ನು ಕೂಡ ಬಹುಶಃ ಪವರ್ ಕಮೀಷನ್ ಅಧೀನದಲ್ಲಿ ಬರುವ ಕೇಂದ್ರ ಸರ್ಕಾರದ Director of Gates Design, he had also given the approval. Central Water Resources Commission had given a go ahead for the investment with regard to the entire Almatti Dam. They have given the clearance at all levels. ಇವೊತ್ತು ಈ ಪರಿಸ್ಥಿತಿಯಲ್ಲಿರುವಾಗ ನೀವೇನು ಮಾಡಿದ್ದೀರಿ? ಇದನ್ನು ಇವೊತ್ತು ಯಾವ ಪರಿಸ್ಥಿತಿಗೆ ತಂದಿಟ್ಟಿದ್ದೀರಿ? 5ನೇ ಮೇ, 1988ರ ವಿಷಯವನ್ನು ನಾನು ಈಗ ಪುನರುಚ್ಚಾರಗೊಳಿಸಲು ಹೋಗುವುದಿಲ್ಲ. ಸದನದಲ್ಲಿ ಸಣ್ಣ ನೀರಾವರಿ ಸಚಿವರಿದ್ದು, ಉಪ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಿರುವುದು 'ದಿ ಹಿಂದು' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಏಳು ಕ್ರೆಸ್ಟ್ ಗೇಟುಗಳನ್ನು ಹಾಕಿದ್ದೇವೆಂದು ಭಾರಿ ನೀರಾವರಿ ಸಚಿವರು ಹೇಳಿದ್ದಾರೆ. Somewhere it has been mentioned but I am not sure about it. Anyway I am subject to correction.

ಶ್ರೀ ಸಿದ್ದರಾಮಯ್ಯ : ಅದು ಪ್ರೆಸ್ ಸ್ಟೇಟ್‌ಮೆಂಟ್ ಅಲ್ಲ, ಬಜೆಟ್‌ನಲ್ಲಿ ಹೇಳಿರುವುದನ್ನು ಅವರು ಉದ್ಧೃತಗೊಳಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಭಾರಿ ನೀರಾವರಿ ಸಚಿವರು ಬಹಳ ಕ್ಯಾಟಗಾರಿಕಲ್ ಆಗಿ ಹೇಳಿದ್ದು, ಅದರ ಬಗ್ಗೆ ಪುನಃ ನಾನು ಒತ್ತಿ ಹೇಳಲು ಹೋಗುವುದಿಲ್ಲ. ಮಾತನಾಡಲು ಬಹಳ ವಿಷಯಗಳಿರುವುದರಿಂದ ಇದನ್ನು ಪುನರುಚ್ಚಾರಗೊಳಿಸುವುದಿಲ್ಲ. ಅದರ ಬಗ್ಗೆ ಹೇಳಿದ ನಂತರ, ಇಂತಹ ವಿಷಯದಲ್ಲಿ ಆದಷ್ಟು why don't you restrain from making statements? You go there and work. ಇಲ್ಲಿ ಹೇಳಿಕೆ ಕೊಟ್ಟು ಏನು ಪುರುಷಾರ್ಥ ಸಾಧನೆ ಮಾಡಿದ ಹಾಗಾಯಿತು? ಇಕ್ಕಳದಲ್ಲಿ ಸಿಕ್ಕಿ ಹಾಕಿಕೊಂಡಂತಾಗಿದೆ ನಿಮ್ಮ ಪರಿಸ್ಥಿತಿ. ನಮ್ಮ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವ ಗಾದೆಯನ್ನು ನಾನು ಹೇಳುವುದಿಲ್ಲ, ನಮ್ಮ ಕಡೆ ಆ ಗಾದೆಯಿಲ್ಲ. ಅವರು ಹೇಳಿದಂತೆ ನಾನು ಹೇಳುವುದಕ್ಕಾಗುವುದಿಲ್ಲ. ಉತ್ತರ ಕರ್ನಾಟಕದವರು ಆ ಗಾದೆಯನ್ನು ಬಹಳ ಚೆನ್ನಾಗಿ ಹೇಳುತ್ತಾರೆ, ಅದು ಸೂಕ್ತವಾಗಿದೆ. 10ನೇ ಮೇ, 1988ರಲ್ಲಿ ಆಂಧ್ರಪ್ರದೇಶ ಸರ್ಕಾರದವರು ಒಂದು ಲೀಗಲ್‌ನೋಟೀಸ್ ಕೊಟ್ಟಿರುವುದಕ್ಕೆ ಉತ್ತರ ಕೊಡಬೇಕಾಗಿತ್ತು.

ಅಧ್ಯಕ್ಷರು : ನಾಗೇಗೌಡರ ಹೇಳಿಕೆ ಇವರು ಹೇಳಿದ ಗಾದೆಯಲ್ಲಿ ಪರಿಣಾಮ ಆಯಿತು. Training periodನಲ್ಲಿ inaccuracies ಇವೆಲ್ಲಾ.

SRI M. VEERAPPA MOILY : Inaccuracies in my training. I agree ಇಂತಹ ಹೇಳಿಕೆಗಳನ್ನು ಕೊಡಬಾರದೆಂದು ನಾನು ಅವರಿಗೆ ಆಗಾಗ್ಗೆ ಹೇಳುತ್ತಿದ್ದೆ. He was one of my most favourite Ministers. ಹೇಳಿಕೆಗಳನ್ನು ಕೊಟ್ಟು ಸಿಕ್ಕಿಹಾಕಿಕೊಳ್ಳುತ್ತಾರೆ. He lost his MLC ship. He is a googd man, well intentioned man, very dynamic Minister. ಆದುದರಿಂದ ಇಂತಹ ಸೂಕ್ಷ್ಮ ವಿಚಾರಗಳಲ್ಲಿ ಬಹಳ ಜಾಗೃತಿಯಿಂದಿರಬೇಕಾಗುತ್ತದೆ. ಭಾರೀ

7444-146

ನೀರಾವರಿ ಸಚಿವರಾದ ನಾಗೇಗೌಡರ ವಿಚಾರದಲ್ಲಿ ನನಗೆ ಈಗಲೂ ವೈಯಕ್ತಿಕವಾಗಿ ಬಹಳ ಪ್ರೀತಿ ಇದೆ. I don't hide it. No hidden agenda. ಮಾನ್ಯ ಅಧ್ಯಕ್ಷರೆ, ಇದರ ಪರಿಣಾಮ ಬಹಳ ದುಸ್ತರವಾಗಿದೆ. ಕಂಟೆಂಪ್ಟ್ ಪಿಟಿಶನ್ ಹಾಕಿದರು. ಇದರಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ನಂ. 1 ರೆಸ್ಪಾಂಡೆಂಟ್ ಆಗಿದ್ದರೆ, ನಾಗೇಗೌಡರು ಮತ್ತೊಬ್ಬ ರೆಸ್ಪಾಂಡೆಂಟ್ ಆಗಿದ್ದಾರೆ. ಇವರಿಬ್ಬರನ್ನು ರೆಸ್ಪಾಂಡೆಂಟ್ ಮಾಡಿಕೊಂಡು ಇವೊತ್ತು ಯಾವ ಒಂದು ಕಂಟೆಂಪ್ಟ್ ಪಿಟಿಶನ್ ಅನ್ನು ಹಾಕಿದರೋ, ಅದನ್ನು ರಿಗ್ರೆಟ್ ಅಥವಾ ಡಿನೈಯಲ್ ಮಾಡಬಹುದಾಗಿತ್ತು. He could have regretted. I don't know why Nagegowda could have regretted before the Supreme Court or somebody and withdrawn from the whole thing. But be got into a legal battle. He has given a statement. This is not a personal matter. It is a State issue. When 7 crest gates were not put up, the first thing that would have been done you know many times this happens, Mr. Speaker Sir, some times contempt petition is sorted out even by our senior Advocates approaching or going to the Chief Justices chamber and explaining the position. Many times the contempt petitions are closed like this. I have also practised in the High Court and many times we ....

ಅಧ್ಯಕ್ಷರು : ಹಾವನೂರ್‌ರವರ ಕೇಸ್‌ನಲ್ಲಿ ಆಯಿತಲ್ಲಾ?

ಶ್ರೀ ವೀರಪ್ಪ ಮೊಯ್ಲಿ : ಹೌದು ಆ ರೀತಿಯಾಗುತ್ತದೆ. After all it is of State interest. When it is a question of a State interest, he should have sorted out this matter at the very initial stage. ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ಡಿಪ್ಲೊಮ್ಯಾಟಿಕ್ ರಿಲೇಷನ್ ಇರಬೇಕಾಗುತ್ತದೆ. Even my Chief Minister or somebody talking to Mr. Chandrababu Naidu and sorting out these matters, that could have been done. That could have been resorted to. ನಾವು ಅವರುಗಳೇನು ಎನಿಮೀಸ್ ಅಲ್ಲ. ಸುಪ್ರೀಂ ಕೋರ್ಟ್‌ಗೆ ಹೋದ ಮೇಲೂ at the first instance, it could have been sorted out. ಅದೂ ಆಗಿಲ್ಲ. ಅವರು ಕಮಿಷನರ್ ಅಪಾಯಿಂಟ್ ಮಾಡಿದರು, ಆ ಕಮೀಷನರ್‌ರವರು ಆಲಮಟ್ಟಿಗೆ ಭೇಟಿ ಮಾಡಿದರು, ಆನಂತರ ಸುಪ್ರೀಂ ಕೋರ್ಟಿನವರು ಮಧ್ಯಾಂತರ ಆದೇಶವನ್ನು ಕೊಟ್ಟು ನಾಲ್ಕನೇ ಜನವರಿಯವರೆಗೆ ಯಾವುದೇ ಕ್ರಸ್ಟ್ ಗೇಟನ್ನು ಅಲ್ಲಿ ಹಾಕಬಾರದೆಂದು ಹೇಳಿದರು. ನಂತರ ನಮ್ಮ ವಕೀಲರು ಇದರಿಂದ ನಮ್ಮ ಶೆಡ್ಯೂಲ್‌ಗೆ ತೊಂದರೆಯಾಗುತ್ತದೆ, ಡಿಸೆಂಬರ್ 98ರ ಒಳಗಾಗಿ ಕ್ರಸ್ಟ್‌ಗೇಟನ್ನು ಹಾಕಲೇ ಬೇಕಾಗುತ್ತದೆ, ಕೆಲವು ಕಾರ್ಯಕ್ರಮವನ್ನು ಮಾಡಲೇಬೇಕು ಎಂದು ಕೋರಿಕೊಂಡ ಮೇಲೆ ಸುಪ್ರೀಂ ಕೋರ್ಟ್‌ನವರು ಡಿಸೆಂಬರ್‌ಗೆ ಈ ಕೇಸನ್ನು ಪೋಸ್ಟ್ ಮಾಡಿದ್ದಾರೆ. ಅಲ್ಟಿಮೇಟಲಿ ಇದರಿಂದ ಏನಾಗುತ್ತದೆಂದರೆ ಇವತ್ತು ಕ್ರಸ್ಟ್ ಗೇಟನ್ನು ಅಳವಡಿಸುವ ಕಾರ್ಯಕ್ರಮವನ್ನು ನಿಲ್ಲಿಸಬೇಕಾದ ಪರಿಸ್ಥಿತಿ ಬಂದಿದೆ. It may work out as a permanent blockade. You could have pleaded with

the Supreme Court that by withholding the installation of the crest gates......... the credibility of the Government of Karnataka itself has become suspect. You could have promised to the Supreme court that we will hold water only up to 519 meters and storage can be controlled at any level. When the storage could be controlled at any level, you could have given a promise or an assurance by affidavit that you will hold water upto 519 meters. I have not found any of our Senior Advocates advocating for it. What happens is if there is a time lapse, the Parties stick to their lines because they want to win a victory over us. They want that we should not utilise or store the water before June 1999. June 1999 is the only season available. Next season is not available for you. If you cannot store by June 1999, you lave lost your right, you have forfeited your right. I have not found anybody pleading for it. I have my own report that even this request is not made. When are you going to do it? Is it not your duty to make a request? Are we bankrupt with the legal advice? That is why I said there should be a permanent legal cell with you, permanent technical cell with you. You can interact with them. When all this was going on, you could have called for an emergency Cabinet meeting you could have had the views of the Advocate General, legal cell, technical cell. For 6 lakh acres of land of Karnataka water is to be given. We are at the threshold of losing it, and there is no seriousness. I have not heard of any emergent Cabinet meeting. There was nothing more urgent than this. I don't think you should have wasted your time at Delhi or anybody and everybody need not have been there. Emergency Cabinet could have been called, and discussed about it. That seriousness is not seen. When that seriousness is not there, do they have a right to exist as a Government? At what cost? Now I am realising a bit, why our Leader moved it as an emergent issue. Yes, even if a day they continue, they will destroy the case of Karnataka.

MR. SPEAKER : If who continues?

SRI M. VEERAPPA MOILY : If the Government continues. I am referring to the Government. Because after all the advocates plead our case. It is client who loses a case. I am speaking with all my responsibility. It is the client who loses the case, it is the client who wins the case not the advocate. Of course, the advocate gives a shape to it. When you spoil everything and give only the case for the post mortem to the advocate or the doctor, he will do only the post mortem. Nothing else. This is a very important issue.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, there are two important points that were raised by Hon'ble Shri. Veerappa Moily. One is State credibility and second whether our Advocates pleaded the emergency to the Court. You know better than me about this Almatti Case. 1997ರಲ್ಲಿ ಆಂಧ್ರ ಪ್ರದೇಶದವರು ಓ.ಎಸ್. (1)ನ್ನು ಹಾಕಿ ಇನ್‌ಜನ್‌ಕ್ಷನ್ ಕೇಳಿದ್ದರು. ಅದಾದಮೇಲೆ ಇಂಟರೀಮ್ ಅರ್ಜಿಯನ್ನು ಹಾಕಿದರು. ಆ ರೀತಿ ಇಂಟರೀಮ್ ಅರ್ಜಿಯನ್ನು ಹಾಕುವಾಗ, 1997ನೇ ಸೆಪ್ಟೆಂಬರ್ 30ರಂದು ನಾವು ಒಂದು ಅಫಿಡವಿಟನ್ನು ಕೊಟ್ಟೆವು. ಅಫಿಡವಿಟ್‌ನಲ್ಲಿ ಏನು ಇತ್ತು ಎಂದರೆ ಇಡೀ ಯೋಜನೆಯ ಕೆಲಸವನ್ನು ನಿಲ್ಲಿಸುವ ಅವಶ್ಯಕತೆ ಇಲ್ಲ, ನಾವು ಕ್ರಸ್ಟ್ ಗೇಟನ್ನು ನವೆಂಬರ್ 98ರ ಮಧ್ಯ ವಾರದಲ್ಲಿ ಹಾಕುತ್ತೇವೆ, ಆದ್ದರಿಂದ ಈ ಯೋಜನೆಯ ಮೇಲೆ ಯಾವುದೇ ರೀತಿಯಾದ ಪರಿಣಾಮವಾಗದ ರೀತಿಯಲ್ಲಿ ಇನ್‌ಜನ್‌ಕ್ಷನ್ ಕೊಡಬಾರದೆಂದು ಆಂಧ್ರ ಪ್ರದೇಶದವರ ಓ.ಎಸ್. (1) ಏನು ಇತ್ತೋ ಅದಕ್ಕೆ ಅಫಿಡವಿಟ್ ಹಾಕಿದ ಮೇಲೆ ಸುಪ್ರೀಂ ಕೋರ್ಟ್ ಯಾವುದೇ ತೀರ್ಮಾನ ಕೊಡಲಿಲ್ಲ. ಈ ತಿಂಗಳ ಮೂರನೇ ವಾರದಿಂದ ಕ್ರಸ್ಟ್ ಗೇಟನ್ನು ಇನ್‌ಸ್ಟಾಲ್ ಮಾಡುವ ಕೆಲಸವನ್ನು ನಾವು ಪ್ರಾರಂಭ ಮಾಡಬೇಕಿತ್ತು. ತಾವು ಕಂಟೆಮ್ಪ್ಟ್ ಪಿಟಿಶನ್ ಬಗ್ಗೆ ಮಾತನಾಡಿದಿರೆಂದು ನಾನು ಕೇಳಿದೆ. ಅದು ನಮ್ಮ ಸ್ಟೇಟ್‌ಮೆಂಟ್ ಅಲ್ಲ. ಅಂದು ಹಿಂದೂ ಪತ್ರಿಕೆಯಲ್ಲಿ ಇದರ ಬಗ್ಗೆ ಬರೆದಿದ್ದ ಮಾನ್ಯ ರಾಮಯ್ಯನವರೇ ಈಗ ಮೇಲ್ಮನೆಯ ಸದಸ್ಯರಾಗಿದ್ದಾರೆ, ಅವರೇ ಇದರ ಬಗ್ಗೆ ಮೊನ್ನೆ ಪ್ರಸ್ತಾಪ ಮಾಡುತ್ತಾ ಹಣಕಾಸು ಸಚಿವರಾದ ಸಿದ್ದರಾಮಯ್ಯನವರ ಬಜೆಟ್ ಭಾಷಣವನ್ನು ನೋಡಿ ನಾನು ಆ ರೀತಿ ಬರೆದೆ. ನಾನು ಓವರ್ ಹಿಯರ್ ಮಾಡಿರುವುದು ಅದು ತಪ್ಪಾಗಿದೆ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ರಾಮಯ್ಯನವರು ಆವತ್ತು ಏನಾಗಿದ್ದರು?

ಶ್ರೀ ಮಲ್ಲಿಕಾರ್ಜುನ ಖರ್ಗೆ : 5ನೇ ತಾರೀಖು ಪತ್ರ ಬಂದ ದಿವಸ ತಾವು ಇದನ್ನು ಡಿನ್ಯೈ ಮಾಡಿದಿರಾ? ಅದರ ಮಾರನೆ ದಿವಸ ಮಾಡಿದಿರಾ? ಹದಿನೈದು ದಿವಸಗಳ ನಂತರ ಮಾಡಿದಿರಿ?

ಶ್ರೀ ಕೆ.ಎನ್. ನಾಗೇಗೌಡ : ಅಂದು ಅವರು ಏನಾಗಿದ್ದರು ಎಂಬುದಕ್ಕಿಂತ ಇಂದು ಏನಾಗಿದ್ದಾರೆ ಎನ್ನುವುದು ಮುಖ್ಯ. ಯಾವುದೋ ಒಂದು ವಿಚಾರವನ್ನಿಟ್ಟುಕೊಳ್ಳತಕ್ಕದಲ್ಲ. ಅನಂತರ ನಮ್ಮ ಅಡ್ವೋಕೇಟ್‌ಗಳೆಲ್ಲರೂ ತೀರ್ಮಾನ ಮಾಡಿ, ಕ್ರಸ್ಟ್ ಗೇಟನ್ನು ಹಾಕದಿರುವ ಹಿನ್ನೆಲೆಯಲ್ಲಿ we don't want to hide anything to the court, let the Court appoint a Commissioner, let them see the project ಎಂದು ಹೇಳಿದ ಮೇಲೆಯೇ ಆ ಕಮೀಷನರ್‌ರವರು ಭೇಟಿ ನೀಡಿ ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದಾರೆ. ಇದುವರೆಗೆ ಆಗಿರತಕ್ಕದ್ದು ಐ.ಎ. ಮೇಲೆ ಆಗಿರತಕ್ಕದ್ದು. ನಿನ್ನೆ ಸುಪ್ರೀಂ ಕೋರ್ಟ್‌ನವರು ಇದರ ಬಗ್ಗೆ ಜನವರಿಯಲ್ಲಿ ಹಿಯರಿಂಗ್ ಮಾಡಬೇಕೆಂದು ತೀರ್ಮಾನ ಕೊಟ್ಟ ಮೇಲೆ ನಮ್ಮ ವಕೀಲರಾದ ನಾರಿಮನ್‌ರವರು ``The Supreme Court, upon mentioning by Sri F.S. Nariman, Senior Counsel on behalf of the State of Karnataka, modified and verified the order passed yesterday, 2nd November

1998. The Supreme Court, in the new modification Order, has directed the Karnataka Government not to erect the crest gates at Alamatti until further order. They listed the I.A. of Andhra Pradesh on 3rd December, 1998. This modification was because necessary schemes submitted by Shri. F.S. Nariman to the court that Karnataka's work to start the erection of the crest gates from the end of January 1999, then it will not be able to complete the process of erection before April 1999 and hold water during the Monsoon. Appreciating this point of the matter and pointed out by Nariman, the court, after hearing the opposition side also, modified the order.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೂ ಪತ್ರಿಕೆಯಲ್ಲಿ ತಮ್ಮ ಸ್ಟೇಟ್‌ಮೆಂಟ್ ಬಂದ ಮೇಲೆ ಸಂಬಂಧಪಟ್ಟಂತೆ ಆಂಧ್ರ ಪ್ರದೇಶದವರು ತಮಗೆ ಒಂದು ಪತ್ರವನ್ನು ಬರೆದರು, ಆಗ ತಾವೇಕೆ ಇದನ್ನು ಡಿನೈ ಮಾಡಲಿಲ್ಲ?

3.40 ಪಿ.ಎಂ

ಶ್ರೀ ಕೆ.ಎನ್. ನಾಗೇಗೌಡ : ಪೇಪರ್‌ನಲ್ಲಿ ಬಂದಿದ್ದರ ಬಗ್ಗೆ ನಾನು ತಮಗೆ ಒಂದೇ ಒಂದು ಅಂಶ ಹೇಳಲಿಚ್ಛಿಸುತ್ತೇನೆ. ಈಗ ಏನು ಆರ್ಡರ್ ಆಗಿದೆಯೋ ಅದು ಕಂಟೆಂಪ್ಟ್ ಕೇಸ್ ಮೇಲೆ ಆಗಿರುವ ಡಿಸಿಷನ್ ಅಲ್ಲ. ಈಗ ಡಿಸಿಷನ್ ಆಗಿರುವಂತಾದ್ದು ಒರಿಜಿನಲ್ ಐಎ ಮೇಲೆ. ಕಂಟೆಫ್ಟ್ ಕೇಸ್ ಇನ್ನೂ ಡಿಸ್ಪೋಸ್ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಆಗಲೇ ಪತ್ರ ಬರೆದು ನಾನು ಆ ರೀತಿ ಹೇಳಲಿಲ್ಲವೆಂದು ಡಿನೈ ಮಾಡಬೇಕಾಗಿತ್ತು.

ಶ್ರೀ ಕೆ.ಎನ್. ನಾಗೇಗೌಡ : ನಾನು ಈಗಲೂ ಹೇಳುತ್ತಿದ್ದೇನೆ, ಆ ಕಂಟೆಂಪ್ಟ್ ಕೇಸ್ ಡಿಸ್ಪೋಸ್ ಆಗಿಲ್ಲ. ನಾವು ಆ ಪ್ರೆಸ್ ಸ್ಟೇಟ್‌ಮೆಂಟ್ ಅನ್ನು ಡಿನೈ ಮಾಡಿದ್ದೇವೆ. ಆ ಬಗ್ಗೆ ನಾನು ಮತ್ತು ಮಾನ್ಯ ಸಿದ್ದರಾಮಯ್ಯ ಇಬ್ಬರೂ ಸಹ ಪತ್ರಿಕಾ ಹೇಳಿಕೆ ಡಿನೈ ಮಾಡಿ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದ್ದೇವೆ. ಒರಿಜಿನಲ್ ಐಎ ಮೇಲೆ ಆಗಿರತಕ್ಕ ಡಿಸಿಷನ್ ಇದು. ಕಂಟೆಂಪ್ಟ್ ಕೇಸ್ ಮೇಲೆ ಆಗಿರತಕ್ಕ ಡಿಸಿಷನ್ ಇದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವತ್ತು ನಿಮಗೆ ಆಂಧ್ರ ಪ್ರದೇಶದಿಂದ ಪತ್ರ ಬಂದಾಗ ನೀವು ನಿಮ್ಮ ಹೇಳಿಕೆಯನ್ನು ಡಿನೈ ಮಾಡಿ ಅವರಿಗೆ ಪತ್ರ ಬರೆಯಬೇಕಾಗಿತ್ತು.

ಶ್ರೀ ಕೆ.ಎನ್. ನಾಗೇಗೌಡ : ಕಂಟೆಂಪ್ಟ್ ಕೇಸ್ ಇನ್ನೂ ಡಿಸ್ಪೋಸ್ ಆಗಿಲ್ಲ. ನಾವು ಅಫಿಡವಿಟ್ ಹಾಕಿದ್ದೇವೆ. ಕೋರ್ಟ್‌ನಲ್ಲಿ ನಾವು ಪತ್ರಿಕಾ ಹೇಳಿಕೆ ಡಿನೈ ಮಾಡಿದ್ದೇವೆ. ಅದಕ್ಕೆ ಕೋರ್ಟ್ ಓರ್ವ ಕಮೀಷನರ್ ಅನ್ನು ನೇಮಕ ಮಾಡಿತು. ಕಮೀಷನರ್ ಪರಿಶೀಲಿಸಿ ಕೋರ್ಟ್‌ಗೆ ಒಂದು ರಿಪೋರ್ಟ್ ಸಬ್‌ಮಿಟ್ ಮಾಡಿದ್ದಾರೆ. ಕಂಟೆಂಪ್ಟ್ ಕೇಸ್ ಮೇಲೆ ಇನ್ನೂ ಆರ್ಡರ್ ಆಗಿಲ್ಲ. ಒರಿಜಿನಲ್ ಐಎ

ಮೇಲೆ ಇವರು ಡಿಸೆಂಬರ್ ಎಂಡ್‌ನೊಳಗೆ ಗೇಟ್ ಹಾಕುತ್ತಾರೆ ಎಂಬ ಹಿನ್ನೆಲೆಯೊಳಗೆ ಆಂಧ್ರಪ್ರದೇಶ ಮೂವ್ ಮಾಡಿದ ಮೇಲೆ ಅದನ್ನು ಕೋರ್ಟ್‌ನವರು ಡಿಸೆಂಬರ್ 3 ರಂದು ವಿಚಾರಣೆ ಇಟ್ಟುಕೊಂಡಿದ್ದಾರೆ. ಸ್ಟೇಟ್‌ಮೆಂಟ್ ವಿಷಯ ಇಲ್ಲಿ ಬರುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಬಹಳ ಉತ್ಸಾಹದಲ್ಲಿ ಆಲಮಟ್ಟಿ ಅಣೆಕಟ್ಟಿನಲ್ಲಿ ಕ್ರೆಸ್ಟ್ ಗೇಟ್ ಕೂಡಿಸುವ ವಿಚಾರದ ಬಗ್ಗೆ ಈಗಾಗಲೇ ನಾವು 7 ಕ್ರೆಸ್ಟ್ ಗೇಟ್ ಕೂಡಿಸಿದ್ದೇವೆ ಎಂಬ ಪತ್ರಿಕಾ ಹೇಳಿಕೆ ನೀಡಿದಿರಿ. ಅದು ಪತ್ರಿಕೆಯಲ್ಲಿ ಬಂತು. ನೀವು ಈ ರೀತಿಯ ಒಂದು ಹೇಳಿಕೆಯನ್ನು ಕೊಟ್ಟಿದ್ದರಿಂದ ಸರ್ವೋಚ್ಛ ನ್ಯಾಯಾಲಯ ವಾಸ್ತವಾಂಶ ತಿಳಿಯುವ ಸಲುವಾಗಿ ಒಂದು ಕಮೀಷನರ್ ಅನ್ನು ನೇಮಕ ಮಾಡುವಂತಹ ಸ್ಥಿತಿ ಒದಗಿ ಬಂತು. ನಾನು ನಿಮಗೆ ಇನ್ನೊಂದು ಉದಾಹರಣೆ ಕೊಡುತ್ತೇನೆ, ಹಿಂದೆ ಮಾನ್ಯ ಚನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅವತ್ತು ನಾಗಾರ್ಜುನ ಸಾಗರ ಅಣೆಕಟ್ಟಿಗೆ ಕ್ರೆಸ್ಟ್ ಗೇಟ್ ಹಾಕುವಂತಹ ಸಂದರ್ಭ ಬಂದಿತು. ಅವರು ಗೇಟ್ ಹಾಕುತ್ತಿದ್ದರೂ ಆಂಧ್ರದ ಮುಖ್ಯಮಂತ್ರಿಗಳು ಅದನ್ನು ಬಹಿರಂಗ ಮಾಡಲಿಲ್ಲ. ಅವತ್ತು ಮಾನ್ಯ ಚನ್ನಬಸಪ್ಪನವರು ವಿರೋಧ ಮಾಡಿದರು. ಬುದ್ಧಿವಂತಿಕೆಯಿಂದ ಕ್ರೆಸ್ಟ್ ಗೇಟ್ ಹಾಕಿಸುವುದರಲ್ಲಿ ಆಂಧ್ರದವರು ಯಶಸ್ವಿಯಾದರು. ಅಂದರೆ ಈ ಕೆಲಸ ಮಾಡುವಂತಾದ್ದು ಬಹಿರಂಗ ಮಾಡುವುದಲ್ಲ, ಜಗತ್ ಜಾಹೀರು ಮಾಡುವುದಲ್ಲ. ಪ್ರಚಾರಕ್ಕಾಗಿ ಮಾಡುವಂತಾದ್ದು ಅಲ್ಲ. ನಾಗಾರ್ಜುನ ಸಾಗರ ಅಣೆಕಟ್ಟು ಕಟ್ಟುವಂತಹ ಕಾಲದಲ್ಲಿ ಆಂಧ್ರದವರು ಕ್ರೆಸ್ಟ್ ಗೇಟ್ ಹಾಕಿ ನಾವು ಹಾಕಿಯೇ ಇಲ್ಲವೆಂದು ಹೇಳಿ ಅದರಲ್ಲಿ ಯಶಸ್ವಿಯಾಗಿ ಬಿಟ್ಟರು. ಮಾನ್ಯ ಚನ್ನಬಸಪ್ಪನವರು ಇಲ್ಲಿ ನೀರಾವರಿ ಸಚಿವರಾಗಿದ್ದಾಗ ಇದರ ಬಗ್ಗೆ ಒಂದು ದೊಡ್ಡ ಗಲಾಟೆಯಾಗಿರುವುದಕ್ಕೆ ಇವತ್ತು ದಾಖಲೆಗಳು ಇವೆ. ನೀವು ಪ್ರಚಾರ ಪ್ರಿಯರು, ನೀವು ಈ ರೀತಿ ಹೇಳಿಕೆ ನೀಡಿದ್ದರಿಂದಲೇ ನಾವು ಇವತ್ತು ಗೊಂದಲದಲ್ಲಿ, ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ಕೈಕಟ್ಟಿಕೊಳ್ಳುವಂತಹ ಸ್ಥಿತಿಗೆ ಬಂದಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಯಡಿಯೂರಪ್ಪನವರೇ, ನೀವೇನು ಆಂಧ್ರದ ಪರವಾಗಿ ವಾದ ಮಾಡುತ್ತಿದ್ದೀರಾ ? ಆ ಪತ್ರಿಕಾ ಹೇಳಿಕೆಯನ್ನು ಡಿನೈ ಮಾಡಿದ್ದೇನೆ ಎಂದು ನಾನು ಹೇಳುತ್ತಿದ್ದೇನಲ್ಲಾ. ಆ ಬಗ್ಗೆ ಅಫಿಡವಿಟ್ ಕೂಡ ಹಾಕಿದ್ದೇವೆ. That is not our statement. No other paper except one paper.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವರ ಮಿಸ್ಟೇಕ್‌ನಿಂದ ಆದಂತಹ....

ಶ್ರೀ ಕೆ. ಎನ್. ನಾಗೇಗೌಡ : ಇದರಲ್ಲಿ ನಮ್ಮ ಮಿಸ್ಟೇಕ್ ಏನೂ ಇಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಆ ಪತ್ರಕ್ಕೆ ಏಕೆ ಉತ್ತರ ಕೊಡಲಿಲ್ಲ? ನೀವು ಅಥವಾ ನಿಮ್ಮ ಸರ್ಕಾರದ ನೀರಾವರಿ ಇಲಾಖೆ ಕಾರ್ಯದರ್ಶಿಯವರು ಆಂಧ್ರ ಸರ್ಕಾರದ ಪತ್ರಕ್ಕೆ ಉತ್ತರ

ಕೊಡದಿದ್ದರಿಂದಲೇ ಅವರು ಕೋರ್ಟ್‌ನಲ್ಲಿ ಕಂಟೆಂಪ್ಟ್ ಕೇಸ್‌ದಾಖಲು ಮಾಡಬೇಕಾಯಿತು, ನಂತರ ಕೋರ್ಟ್ ಇದಕ್ಕೆ ರಿಸೀವರ್ ನೇಮಕ ಮಾಡಬೇಕಾಯಿತು. 18ನೇ ತಾರೀಖು ಕೋರ್ಟಿನ ನೇಮಿಸಿದ ರಿಸೀವರ್ ಕೂಡ ವಸ್ತುಸ್ಥಿತಿ ನೋಡಿಕೊಂಡು ಕೋರ್ಟಿಗೆ ವರದಿ ಸಲ್ಲಿಸಿದ್ದಾರೆ. ಇಷ್ಟೆಲ್ಲಾ ಗೊಂದಲವಾಗಿ ಈ ಸ್ಥಿತಿಗೆ ಬರುವುದಕ್ಕೆ ನೀವೇ ಕಾರಣ.

ಶ್ರೀ ಕೆ.ಎನ್. ನಾಗೇಗೌಡ : ಈ ಕಂಟೆಂಪ್ಟ್ ಕೇಸ್ ಮೇಲೆ ಏನಾದರೂ ಆರ್ಡರ್ ಆಗಿದ್ದರೆ ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ನವೆಂಬರ್‌ನಲ್ಲಿ ಗೇಟ್ ಹಾಕತಕ್ಕಂಥದ್ದಕ್ಕೆ ನಾವು ಅಫಿಡವಿಟ್ ಕೊಟ್ಟಿದ್ದೇವೆ, ಟೈಮ್ ಬಂದಿದೆ, ಒರಿಜಿನಲ್ ಅಪ್ಲಿಕೇಷನ್ ಮೇಲೆ ಅವರು ಡಿಮ್ಯಾಂಡ್ ಮಾಡಿದ್ದಾರೆ. ಅದರ ಮೇಲೆ ಇವತ್ತು ಆದೇಶವಾಗಿದೆ ಎಂದು ಹೇಳಿದರೆ ನೀವು ಕೇಳುತ್ತಿಲ್ಲವಲ್ಲಾ. If you want to politicalise the issue, you politicalise. That is not the fact. The Contempt petition has not been disposed of.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ನಾಗೇಗೌಡರೇ, ಈ ಗೊಂದಲ ಯಾವಾಗ ಪ್ರಾರಂಭವಾಯಿತು? ತಜ್ಞರಲ್ಲದ ಒಂದು ಸಮಿತಿಯನ್ನು ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ನೀವು ಆಲಮಟ್ಟಿ ಅಣೆಕಟ್ಟಿಗೆ ಭೇಟಿ ನೀಡಲು ಅವಕಾಶ ಮಾಡಿಕೊಟ್ಟಿದ್ದೇ ತಪ್ಪಾಯಿತು. ನಾವು ಆಗ ಅಲ್ಲಿ ಹೋಗಿ ಧರಣಿ ಕುಳಿತಿದ್ದೆವು. ನಾನು ಮತ್ತು ಅಲ್ಲಿಯ ಶಾಸಕರಾದ ಬಸವನಗೌಡ ಪಾಟೀಲರು ಇಬ್ಬರೂ ಆಗ ನಡೆದ ಲಾಠಿ ಚಾರ್ಜ್‌ನಿಂದಾಗಿ ಹಣ್ಣಾದದ್ದು ನಿಮಗೆ ಗೊತ್ತಿದೆ. ಅಂದರೆ ಈ ಗೊಂದಲ ಅಲ್ಲಿಂದ ಪ್ರಾರಂಭವಾಯಿತು. ಈ ದೇಶದ ಜನರ ಮುಂದೆ ಕಾವೇರಿ ವಿಷಯದಲ್ಲಿ ನಮಗೆ ಬಹಳ ದೊಡ್ಡ ಅನ್ಯಾಯವಾಗುತ್ತಿದೆ ಎಂಬ ವಾತಾವರಣವನ್ನು ಈಗ ನಾವು ಹೇಗೆ ಮೂಡಿಸಿದ್ದೇವೋ ಅದೇ ರೀತಿಯಲ್ಲಿ ಅವತ್ತು ಸನ್ಮಾನ್ಯ ಮಾಜಿ ಪ್ರಧಾನಿಗಳು ತಾವು ಅಧಿಕಾರದಲ್ಲಿದ್ದ ಕಾಲದಲ್ಲಿ ಕಾನೂನು ಬಾಹಿರವಾದ ಒಂದು ತಜ್ಞರ ಸಮಿತಿಯನ್ನು ಆಲಮಟ್ಟಿ ಅಣೆಕಟ್ಟಿನ ಜಾಗಕ್ಕೆ ಕಳುಹಿಸಿಕೊಟ್ಟರು. ಕುರ್ಚಿ ಉಳಿಸುವುದಕ್ಕೋಸ್ಕರ ನೀವು ಮಾಡಿದ ಈ ಕ್ರಮದಿಂದಲೇ ಗೊಂದಲಗಳು ಶುರುವಾದವು. ಇದು ನಿಜವೋ ಅಲ್ಲವೋ ಎಂಬದನ್ನು ನೀವೇ ಹೇಳಿ. ನೀವ್ಯಾಕೆ ಆ ಕಮಿಟಿ ಇಲ್ಲಿಗೆ ಬರಲು ಅವಕಾಶ ಮಾಡಿ ಕೊಟ್ಟಿರಿ?

ಶ್ರೀ ಕೆ.ಎನ್. ನಾಗೇಗೌಡ : ನಾವು ಆ ಕಮಿಟಿ ಅಫಿಷಿಯಲ್ ಕಮಿಟಿ ಅಲ್ಲ, ನಾವು ಆ ಕಮಿಟಿ ವರದಿಗೆ ಅಧಿಕೃತ ಮಾನ್ಯತೆ ಕೊಡುವುದಿಲ್ಲ ಎಂಬ ಮಾತನ್ನು ನಾವು ಆಗಲೇ ಹೇಳಿದ್ದೆವು.

ಶ್ರೀ ಎಂ. ವೀರಪ್ಪ ಮೊಯಿಲಿ : ಕೋರ್ಟ್ ಕಮೀಷನರ್ ಅನ್ನು ಏಕೆ ನೇಮಕ ಮಾಡಬೇಕಾಯಿತು? ಕಮೀಷನರ್ ನೇಮಕ ಪ್ರಶ್ನೆ ನಿಮ್ಮ ಪತ್ರಿಕಾ ಹೇಳಿಕೆಯಿಂದ ಉದ್ಭವವಾಯಿತು. ರಾಮಯ್ಯನವರು ಮೇ 4ರಂದು ತಮ್ಮ ವರದಿಯನ್ನು ಪತ್ರಿಕೆಯಲ್ಲಿ ಬರೆದರು that appeared on 5th. He is not a mere writer..

'Mr. Nagegowda said that the work on the installation of crest gates was going on. Already 7 gates have been erected and the remaining 8 would be

installed in due course taking the height of the dam to the 524 meters from the crest of the spill over at the level of 509 meters.

That is his statement. It is not write up of Mr. Ramaiah. ಪುನಃ ದಿನಾಂಕ 7ರಂದು ಮೈಸೂರಿನಲ್ಲಿ ಮಾನ್ಯ ನಾಗೇಗೌಡರು ಅದೇ ಹೇಳಿಕೆಯನ್ನು ಪುನರುಚ್ಚರಿಸಿದರು. ಅದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಬಂದಿದೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, "ವಾರಾಹಿ ಕಾಮಗಾರಿ ವೀಕ್ಷಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಮಾನ್ಯ ಸಚಿವರು ವಿಶ್ವದಲ್ಲೇ ಎರಡನೇ ದೊಡ್ಡ ಯೋಜನೆಯಾದ ಆಲಮಟ್ಟಿ ಅಣೆಕಟ್ಟಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ 17 ಬಾಗಿಲುಗಳಲ್ಲಿ 8 ಬಾಗಿಲುಗಳು ನಿರ್ಮಾಣಗೊಂಡಿದ್ದು ಉಳಿದ 9 ಮುಂದಿನ ವರ್ಷ ಅಂತ್ಯದೊಳಗೆ ಪೂರ್ಣಗೊಳ್ಳಲಿವೆ. ಆಲಮಟ್ಟಿ ಅಣೆಕಟ್ಟು ವಿಸ್ತರಣಾ ಕಾಮಗಾರಿ ...." ಈಗ ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ?

SRI K.N. NAGEGOWDA : Gate is ready not erected. That is the correct statement. ಗೇಟ್ ರೆಡಿಯಾಗಿದೆ, ಆದರೆ ಎರೆಕ್ಟ್ ಆಗಿಲ್ಲವೆಂದು ಹೇಳಿದ್ದೇನೆ. I am also an Engineer. I know what is gate, what is erection, what is other things.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ನಾಗೇಗೌಡರೇ, ತಾವು ಇಂಟರ್‌ಪ್ರಿಟೇಷನ್ ಚೆನ್ನಾಗಿ ಮಾಡಬಹುದು. ಆದರೆ ದಯಮಾಡಿ ತಾವು ನೋಡಬೇಕು.

MR. SPEAKER : What is not erected and what is not fit for erection is as good as useless, go ahead. I have not reached that stage yet.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪದೇ ಪದೇ ನಾನು ಎರೆಕ್ಷನ್ ಮಾಡಿದ್ದೇನೆ, ನಾನು ಎರೆಕ್ಷನ್ ಮಾಡಿದ್ದೇನೆ ಎಂದು ನೀವು ಹೇಳಿದ್ದರಿಂದ. ಈ ಎಲ್ಲಾ ತೊಂದರೆ ಉದ್ಭವಿಸಿದೆ. ಆದ್ದರಿಂದ ನಾನು ಹೇಳುತ್ತೇನೆ, you are not fit for erection....... ನೀವು ಎರೆಕ್ಷನ್ ಮಾಡಿದ್ದೇವೆ ಎಂದು ಏಕೆ ಹೇಳಿ ಈ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದೀರಿ ಎಂದು ನಾನು ನಿಮಗೆ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖರ್ಗೆಯವರೇ, ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

SRI M. VEERAPPA MOILY : My submission to the Hon'ble Minister is instead of speaking on that he should have realised the seriousness and act accordingly. ಸುಮ್ಮನೆ ಇದನ್ನು ನೀವು ಡಿಫೆಂಡ್ ಮಾಡಿಕೊಳ್ಳಲು ಹೋಗಬೇಡಿ. ನೀವು ಕೋರ್ಟಿನಲ್ಲಿ ಡಿಫೆಂಡ್ ಮಾಡಿಕೊಳ್ಳಿ. ಇಲ್ಲಿ ಏಕೆ ಮಾಡುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ : ಯಾರೂ ಕೂಡ ಇದನ್ನು ರಾಜಕೀಯವಾಗಿ ಲಾಭ ತೆಗೆದುಕೊಳ್ಳಲು ಬಳಸುವುದಕ್ಕೆ ನಾನು ಬಿಡುವುದಿಲ್ಲ. I am sorry not to you. If anybody wants to take political advantage out of it I am not going to allow but in reality

I am a qualified Engineer, I can understand what is gate, what is erection of gate, ಅಷ್ಟು ಫೂಲಿಷ್ ಆಗಿ ಹೇಳುವಂತಾದ್ದು ಅಲ್ಲ. ನಾನು ಹೇಳಿದ್ದುದು ಏನೆಂದರೆ ಗೇಟ್ ರೆಡಿ ಇವೆ, ಆದರೆ ಎರೆಕ್ಟ್ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಾದರೆ ರಾಮಯ್ಯ ಏಕೆ ಹಾಗೆ ಬರೆಯುತ್ತಾರೆ?

ಶ್ರೀ ಕೆ.ಎನ್. ನಾಗೇಗೌಡ : ಈಗ ವಿಧಾನ ಪರಿಷತ್ತಿನ ಸದಸ್ಯರಾಗಿರುವ ರಾಮಯ್ಯನವರೇ ಈ ಬಗ್ಗೆ ನಿನ್ನೆ ವಿಧಾನ ಪರಿಷತ್ತಿನಲ್ಲಿ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. Am I responsible for it if only one paper writes.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಇಲ್ಲಿ ರಾಮಯ್ಯನವರನ್ನು ಸೇಫ್‌ಗಾರ್ಡ್ ಮಾಡುವುದಕ್ಕೆ ಹೋಗಬೇಡಿ. Hindu is a reputed paper. ಅದೊಂದು ಒಳ್ಳೆಯ ಪತ್ರಿಕೆ. ಅದರಲ್ಲಿ ಯಾವಾಗಲೂ ಕೂಡ ಆ ರೀತಿ ಸುಮ್ಮನೆ ಸುಮ್ಮನೆ ಏನೂ ಬರೆಯುವುದಿಲ್ಲ.

ಅಧ್ಯಕ್ಷರು : ಬೇರೆ ಪೇಪರ್ಸ್ ರೆಪ್ಯೂಟೆಡ್ ಅಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಪೇಪರ್‌ಗಳೂ ರೆಪ್ಯೂಟೆಡ್ ಪೇಪರ್‌ಗಳೇ. ಅದರಲ್ಲಿ ವಿಶೇಷವಾಗಿ ನೀವು ರಾಮಯ್ಯ ಅವರಿಗೆ ಏಕೆ ರೆಫರ್ ಮಾಡುತ್ತಿದ್ದೀರಿ ಎಂದರೆ ನೇರವಾಗಿ ಇವರೇ ಅವರಿಗೆ ಇಂಟರ್‌ವ್ಯೂ ಕೊಟ್ಟಿದ್ದು. ಸುಮ್ಮಸುಮ್ಮನೆ ರಾಮಯ್ಯನವರು ಬರೆಯುವುದಕ್ಕೆ ಹೋಗುವುದಿಲ್ಲ. ನಾವು ಹೇಳಿದ್ದೇ ಅನೇಕ ಸಾರಿ ಪತ್ರಿಕೆಗಳಲ್ಲಿ ಬರುವುದಿಲ್ಲ, ಇನ್ನು ನೀವು ಹೇಳದೇ ಇರುವುದು ಬರುತ್ತದೆಯೇ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖರ್ಗೆಯವರೇ, ತಾವು ಒಂದು ತಿಳಿದುಕೊಳ್ಳಬೇಕು.......

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಹೇಳಿಕೆ ಮೇಲೆ ಆಂಧ್ರ ಸರ್ಕಾರದವರು ಒಂದು ಕಾಗದ ಬರೆದರು. ಅದಕ್ಕೆ ಉತ್ತರ ಕೊಡುವುದಕ್ಕೆ ಇವರಿಗೆ ಏನಾಗಿತ್ತು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವರಿಗೆ ಅದೇನೂ ಗೊತ್ತಿಲ್ಲ. ಊರಿನ ಚಿಂತೆ ತೆಗೆದುಕೊಂಡು ಮುಲ್ಲಾ ಬಡವ ಆದನಂತೆ, ಹಾಗೆ ಇವರಿಗೆ ಏಕೆ ಬೇಕಾಗಿತ್ತು ಅದು?

ಶ್ರೀ ಕೆ.ಎನ್. ನಾಗೇಗೌಡ : ಇವರ ಇಂಟೆನ್‌ಷನ್ ಏನು ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. Are they want to help Andhra Pradesh or what?

SRI MALLIKARJUNA KHARGE : You are helping.

SRI K.N. NAGEGOWDA : Definitely, you are helping.

(Interruptions)

7444-147

SRI MALLIKARJUNA KHARGE : Because of your statement you have not replied to the irrigation Secretary and therefore your Irrigation Secretary and you have failed to respond. 11ನೇ ತಾರೀಖಿಗೇ ಬಂದ ಪತ್ರಕ್ಕೆ ಮೂರು ತಿಂಗಳಿನಿಂದ ಇವರು ಏಕೆ ರಿಪ್ಲೈ ಮಾಡಲಿಲ್ಲ?

MR. SPEAKER : What I appeal to Government is, please note down all those points that are made out during your reply, you can make a statement or reply. ಮಧ್ಯೆ ಮಧ್ಯೆ ಏನೂ ಹೇಳುವುದು ಬೇಡ. ನಿನ್ನೆ ಕೂಡ ಸ್ವಲ್ಪ ಹೀಗೇ ಆಗಿ, ಮಾನ್ಯ ಈಶ್ವರಪ್ಪನವರು ತಮ್ಮ ಭಾಷಣಕ್ಕೆ ಬಹಳ ಡಿಸ್ಟರ್‌ಬೆನ್ಸ್ ಆಯಿತೆಂದು ಬೇಸರ ಮಾಡಿಕೊಂಡು ತಮ್ಮ ಭಾಷಣವನ್ನೇ ಮುಂದುವರೆಸಲಿಲ್ಲ. ಮಾನ್ಯ ಮೊಯ್ಲಿಯವರೇ, ತಾವು ಮುಂದುವರೆಸಿ.

ಶ್ರೀ ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಕೋರ್ಟಿನಲ್ಲಿ ಒಂದು ಆಶ್ವಾಸನೆ ಕೊಟ್ಟ ಮೇಲೆ ಇವರು ಆ ರೀತಿಯ ಒಂದು ಹೇಳಿಕೆಯನ್ನು ಪತ್ರಿಕೆಗೆ ಕೊಡಬಾರದಿತ್ತು. ಕನ್ನಡದಲ್ಲಿ ನಿರ್ಮಾಣ ಎಂದರೆ, ಕ್ರಸ್ಟ್ ಗೇಟ್ ತಯಾರಾಗುತ್ತಿದೆ, ಇನ್‌ಸ್ಟಾಲ್ ಆಗಿಲ್ಲ ಎಂದು. I agree with you; but Hindu is a paper I have seen in my life of 30 years. ಒಂದು ಕೊಟ್ಟ ಸ್ಟೇಟ್‌ಮೆಂಟನ್ನು ಇವತ್ತಿನವರೆಗೆ ಹಿಂದೆ ತೆಗೆದುಕೊಳ್ಳಲಿಲ್ಲ. Mr. Speaker, Sir, I have not heard in my 30 years of public life, Hindu paper anybody could dare enough to say that it is not correct. Anybody dare enough cannot say or deny it. ಹಾಗೆ ಇಲ್ಲೂ ಕೂಡ ಒಂದು ಕ್ಲಾರಿಫಿಕೇಷನ್ ಇದುವರೆಗೂ ಕೊಟ್ಟಿದ್ದು ನನ್ನ ಅನುಭವದಲ್ಲಿಲ್ಲ. Anyway, I leave it to the Hon'ble Minister for his own wisdom, to realise. but it is said here it is installed now. It says, it has been erected and installed and the process of erection in respect of 22 others are going on, ಅದು ನಡೆಯುತ್ತಾ ಇದೆ, ಇದು ಆಗುವುದಿಲ್ಲ. ಅದು ಏನು ಅರ್ಥ it is so simple English ಆದ್ದರಿಂದ ಇದರ ಮೇಲೆ ದಯಮಾಡಿ ಇಂಜಿನಿಯರಿಂಗ್ ಇಂಟ್ರ್‌ಪ್ರಿಟೇಷನ್ ಮಾಡುವುದಕ್ಕೆ ಹೋಗಬಾರದು. I know you are an Engineer, we can realise; I appreciate you are a real by a good spokesman but in this you have totally failed. That is what we are concerned. It is a major issue. Suppose any other Government worth it salt should step down only on one this issue. All of you are responsible for this. Any Government worth it salt for having abdicated your duty to the State, duty to the farmers, I think you cannot remain in power. Perhaps in the Western World of European countries, ನಮ್ಮ ದೇಶದಲ್ಲಿ ಪೊಲಿಟಿಷಯನ್ನಿಗೆ ಬಹಳ ದಪ್ಪ ಚರ್ಮ ಆಗಿದೆ. ಮತ್ತು ಆಡಳಿತಗಾರರಿಗೂ ಮತ್ತು ಸರ್ಕಾರಕ್ಕೂ ದಪ್ಪ ಚರ್ಮವಾಗಿದೆ. Don't you think it is totally criminal act against the State? ಇದನ್ನು ರಿಪೇರ್ ಮಾಡುವುದಕ್ಕೆ ಆಗುತ್ತಾ? Who can repair it? Irreparable damage has been caused for

this. One, not 24-25. This one issue alone enough for throwing away this Government. I don't think people of this State will pardon you. A major damage has done to the farmers in this regard. ಇದು ಆಲಮಟ್ಟಿ ಡ್ಯಾಂ ಬಗ್ಗೆ ಆಯಿತು. ಇವತ್ತು ಕೆನಾಲ್ ವರ್ಕ್, ಏಕೆಂದರೆ ತಾವು ಹೇಳಿಕೆ ಕೊಡುತ್ತಿದ್ದೀರಿ, ನಾನು ಇಷ್ಟು ಖರ್ಚು ಮಾಡಿದ್ದೇನೆ, ಇಷ್ಟು ಜಲ ಭಾಗ್ಯ ನಿಗಮದಿಂದ ಮೊಬಲೈಸ್ ಮಾಡಿದ್ದೇವೆ. ವರ್ಕ್ ಇಷ್ಟು ಆಗಿದೆ ಎಂದು ತಾವು ಹೇಳಿಕೆ ಕೊಡುತ್ತಿದ್ದೀರಿ ? but I must tell you the Hon'ble Speaker, the work is on a stand still, ಕೃಷ್ಣ ಜಲ ಭಾಗ್ಯ ನಿಗಮದ ರಿಸೋರ್ಸಸ್ ಮೊಬಲೈಸ್ ಮಾಡಬೇಕು, ಇದು ಬರೀ ಅಥಾರಿಟೀಸ್‌ಗಳಿಂದ ಆಗುವುದಿಲ್ಲ, ಸರ್ಕಾರದ ರಿಸೋರ್ಸಸ್‌ನಿಂದ ಆಗುವುದಿಲ್ಲ. 2,000 ವರ್ಷಕ್ಕೆ ಮೊದಲು ನಾವು ಕಂಪ್ಲೀಟ್ ಮಾಡಲು ಬೇಕಾದ ಹಣವನ್ನು ನಾವು ಸಂಗ್ರಹ ಮಾಡಬೇಕೆಂದು ನಾನು ವಾಶಿಂಗ್‌ಟನ್‌ನಲ್ಲಿ ವರ್ಲ್ಡ್ ಬ್ಯಾಂಕ್ ಹತ್ತಿರ ಮಾತನಾಡುವುದಕ್ಕೆ ಹೋದಾಗ, ರಿಸರ್ವ್ ಬ್ಯಾಂಕ್‌ನಲ್ಲಿ ಮಾತನಾಡಿದೆ first time in the country this kind of a Institution was created. I was the first Chairman of this Krishna Jala bhagya Nigama, ಮೊಬಲೈಸ್ ಮಾಡಬೇಕು, ಅಥಾರಿಟಿ ಮಾಡಿದರೆ ಆಗುವುದಿಲ್ಲ. ಯಾರೋ ನಮ್ಮವರೇ ಸ್ವಲ್ಪ ಮಿಸ್ಟೇಕ್ ಮಾಡಿದ್ದಾರೆ. ಅಥಾರಿಟಿಯಿಂದ ಹಣ ಮೊಬಲೈಸ್ ಮಾಡುವುದಕ್ಕಾಗುವುದಿಲ್ಲ. It has to be Body incorporated who can get a rating from the crisil ಎಲ್ಲಾ ಫಾರ್ಮಲಿಟೀಸ್ ಮಾಡಿ ಜಲ ಭಾಗ್ಯ ನಿಗಮ ಮಾಡಿ ಕ್ರೈಸಿಲ್‌ಗೆ ಕೂಡ ಹೋಗಿ ಅದರ ರೈಟಿಂಗ್ ತೆಗೆದುಕೊಂಡು ಎಲ್ಲಾ ರೆಡಿ ಮಾಡಿ ಇಟ್ಟರೆ, ಇದು ನಿಜವಾಗಿ ಮಾರ್ಚ್ 1995 ಮೊದಲು 500 ಕೋಟಿ ರೂಪಾಯಿ ನಾವು ಟಾರ್ಗೆಟ್ ಮಾಡಬೇಕೆಂದು ಇದ್ದೆವು, ಆದರೆ ಮೊಬಲೈಸ್ ಮಾಡುವಾಗ ಸೆಪ್ಟೆಂಬರ್ 1995 ಆಯಿತು. This Government slept over the matter not Mr. J.H. Patel at that time the former Prime Minsiter and the former Chief Minister, I think he was the Chief Minister incharge of the portfolio, Sir, the day I left the Government, from the day the former Chief Minister took over the reigns of the Government. ಮಾರ್ಚ್‌ರವರೆಗೆ ಎಲ್ಲಾ ಸ್ಟಾಪ್ ಮಾಡಿದರು. ಅದು ಕಾವೇರಿ ಇರಬಹುದು, ಕೃಷ್ಣ ಜಲ ಭಾಗ್ಯ ನಿಗಮ ಇರಬಹುದು ,he has stopped the work totally, ಕೃಷ್ಣ ಜಲಭಾಗ್ಯ ನಿಗಮ ಕೂಡ ಅದರ ವರ್ಕ್ ಮುಂದುವರೆಸುವುದಕ್ಕೆ ಬಿಡಲಿಲ್ಲ. for obvious reasons known to him he has collected all the files of the Government at that time, ಅವರ ಗೋಡೋನ್‌ನಲ್ಲಿ ಫೈಲ್ ಇಟ್ಟುಕೊಂಡು ಅದರ ಮೇಲೆ of coures he has the sleeping habit he must have slept or I don't know what he has done with those files... ಆದರೆ ಎಲ್ಲಾ ಮಾಡಿದರು ವೀರಾವೇಶದಿಂದ ಒಂದು ದೊಡ್ಡ ಹೇಳಿಕೆ ಕೊಡಿದರು, ಯಾವ ಎನ್‌ಕ್ವೈರಿ ಇಲ್ಲ, ಯಾವ ಫೈಂಡಿಂಗ್‌ಗೂ ಇಲ್ಲ. But the work was stopped... ನಾನು ಹೇಳುತ್ತೇನೆ, ಏನಾದರೂ ಇದರಲ್ಲಿ ಇದ್ದರೆ ಹುಡುಕಿಕೊಂಡು ಹೋಗಿ ಏನಾದರೂ ಮಾಡಲಿ ಎಂದರೆ, ನಾವು ಕಾದು ಕೂತರೆ perhaps I remember so if I am not incorrect, till March 1995, ವರ್ಕ್ ಇಲ್ಲ. ಹೇಮಾವತಿ ಕೆನಾಲ್ ಇಲ್ಲ, ಕಾವೇರಿ ಇಲ್ಲ. ಅಪ್ಪರ್ ಕೃಷ್ಣಾ

.ಛಾನಲ್ ಇಲ್ಲ ಮತ್ತು ಆಲಮಟ್ಟಿ ಡ್ಯಾಮ್ ಇಲ್ಲ. ತಮಗೆ ಗೊತ್ತಿದೆ 1983ರಲ್ಲಿ ಮಲಗಿದಂತಹ ಆಲಮಟ್ಟಿ ಡ್ಯಾಂ ಅದು ಕೆಲಸ ಪ್ರಾರಂಭವಾಗಿ ಒಂದು ಹಿಡಿ ಮಣ್ಣು 1988-89ರವರೆಗೆ ಆಗಲಿಲ್ಲ. ಕೆನಾಲ್ ವರ್ಕ್ ಆಗಲಿಲ್ಲ, ಅರ್ಬಿಟ್ರೇಷನ್ ಪ್ರೊಸೀಡಿಂಗ್ಸ್ ಮತ್ತೊಂದು ಇನ್ನೊಂದು ಇದರಲ್ಲೇ ಕಳೆದು ಹೋಯಿತು. not even Rs. 25-30 crores used to be spent every year. Then we revived it and it came to a good pitch. 1994ಆಗುವಾಗ 506ಅಡಿ ಹೈಟಿಗೆ ಬಂದಿತ್ತು. 506 ಹೈಟಿಗೆ ಬಂದಾಗಲೂ, ಪ್ರೋಗ್ರೆಸ್‌ಆಗುತ್ತಿದ್ದಾಗಲೂ ಯಾರಿಗೂ ಒಂದು ಸ್ಟೇಟ್‌ಮೆಂಟ್ ನಾವು ಕೊಡಲಿಲ್ಲ. You just cull out all the papers. ನಾವು ಬಹಳ ವೀರಾವೇಶದಿಂದ ಏನು ಮಾಡುತ್ತಿದ್ದೇವೆ, ಮಾಡಿದ್ದೇವೆ ಎಂದು ಯಾವುದೂ ಹೇಳುತ್ತಿರಲಿಲ್ಲ. ಆ ಕಾಲದಲ್ಲಿ ಆಂಧ್ರದ ಎಂಪಿಗಳೂ ವಿಸಿಟ್ ಮಾಡಲಿಲ್ಲ. ಅವರಿಗೆ ಬಹುಶಃ they were taken aback also, this kind of a progress they took it for a granted, till 2000 AD we will not do anything because 1983-89 no work was done,- ಇದರಿಂದ ನಮಗೆ ಏನೂ ಅನಾಹುತ ಇಲ್ಲ. ಗಲಾಟೆ ಪ್ರಾರಂಭವಾಗಿದ್ದು ಯಾವಾಗ ಎಂದರೆ, ನಮ್ಮ ಆಲಮಟ್ಟಿ ಡ್ಯಾಂ 506 ಮೀಟರಿಗೆ ಬಂದ ಮೇಲೆ, ನಾವೆಲ್ಲಾ ಕ್ಲೀಯರೆನ್ಸ್ ತೆಗೆದುಕೊಂಡು ಮೇಲೆ ಅವರು ಹುಡುಕಲಿಕ್ಕೆ ಹೋಗಿದ್ದು. I am tell you then they started how did they get the clearance ಎಂದು ಆ ಮೇಲೆ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಪ್ರಾರಂಭ ಮಾಡಿದರು. Work should be like that. It is now Andhra succeded. As I know till September 95, work was stopped, work of all the canals was stopped. ಆ ಮೇಲೆ ಸ್ವಲ್ಪ ಕೆಲಸ ಪ್ರಾರಂಭವಾಯಿತು. one credit should go to Mr. Devegowda that after September the work picked up, ಆಮೇಲೆ ಸಿವಿಲ್ ವರ್ಕ್ಸ್ ಎಲ್ಲಾ ಆದಮೇಲೆ for 18 months from September 95, the work went on in a good pitch because money was made available and work went on, ಮಧ್ಯದಲ್ಲಿ ಕಂಟ್ರ್ಯಾಕ್ಟರ್ ಮತ್ತೊಂದು ಡೀಲ್ ಮಾಡಿದ್ದಾರೆ, ಆ ವಿಷಯಕ್ಕೆ ನಾನು ಹೋಗುವುದಿಲ್ಲ. Suddenly two orders have been passed appointing contractors, ಎಂಟ್ರಸ್ಟ್‌ಮೆಂಟ್ , ಕೊಡುವುದು, 2.5ಕೋಟಿಯವರೆಗೆ ತುಂಡು ಗುತ್ತಿಗೆ ಕೊಡುವುದು, extension upto Rs. 5 crores, 2.5 crores piece work-for about 18 months work, went on. Then, for $1^1/_2$ years again the work has stopped, come to a grinding halt. We are not bothered, ಹಿಂದಿನ ಕಾಂಟ್ರ್ಯಾಕ್ಟರ್ಸ್ ಮಾಜಿ ಪ್ರಧಾನಿ ಅಥವಾ ಮಾಜಿ ಮುಖ್ಯಮಂತ್ರಿಗಳ ಕಡೆಯವರು, ಹಿಂದಿನ ಕಾಂಟ್ರ್ಯಾಕ್ಟರ್ ಆಗಿದ್ದರಿಂದ ಅವರಿಗೆ ಕೊಡಬಾರದು, ಹೊಸ ಕಾಂಟ್ರ್ಯಾಕ್ಟರ್ಸ್‌ಗೆ ಶೋಧನೆ ಮಾಡಿಕೊಂಡು ಹೋಗುವುದು, we are not concerned about that, but the State is bothered about the work. ಎಸ್ಟಿಮೇಟ್ ಕಮಿಟಿ ವೈಜನಾಥ್ ಪಾಟೀಲರು ಒಂದು ವರದಿ ಕೊಟ್ಟರು, of which I was also the Member, of course, it is an illustrative report, no doubt. But atleast the former Chief Minister, the former Prime Minsiter, he has cleared about 200

works over-night. I must appreciate for his capacity. How he has cleared, why he has cleared ಏಕೆಂದರೆ ಅವರು ಪ್ರಧಾನಿ ಆಗುವ ಮೊದಲು that was his great contribution to the State because he cleared about 200 works overnight by means of two government Orders. ಆ ಡೈನಾಮಿಸಂ ಬೇಕು. ಕಡೇ ಪಕ್ಷ ಜೆ.ಹೆಚ್. ಪಟೇಲ್‌ರವರಿಗೆ ಆ ಡೈನಾಮಿಸಂ ಆದರೂ ಇರಬೇಕಾಗಿತ್ತಲ್ಲಾ, ಈ ಆ ಡೈನಾಮಿಸಂ ಡೈರೋಮೈಟ್ ಆಗಿಹೋಯಿತು. ವರ್ಕ್ ಸ್ಟಾಪ್ ಆಯಿತು. Not even Rs.400 crores was spent since 1½ years. ನಾವು ಇದನ್ನು ಹೇಳಿದ ಕೂಡಲೇ ನೀವು ಲೆಕ್ಕ ಕೊಡುತ್ತೇವೆಂದು ಎದ್ದು ನಿಲ್ಲುತ್ತೀರಿ ಎಂಬುದು ನನಗೆ ಗೊತ್ತು. ನೀವು 400 ಕೋಟಿ ರೂ.ಗಳು ಖರ್ಚಾಗಿಲ್ಲವೆನ್ನುತ್ತೀರಿ. ಕೃಷ್ಣಾ ಜಲಭಾಗ್ಯ ನಿಗಮದಲ್ಲಿ ಸಾಲವನ್ನು ಏನು ತೆಗೆದುಕೊಂಡಿದ್ದಾರೆ ಅದರ ಮೇಲಿನ ಬಡ್ಡಿಯನ್ನೂ ಕೂಡ ಅವರು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಅದನ್ನು ಖರ್ಚು ಎಂದು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಇದಲ್ಲದೆ ಕ್ಲೈಮ್ಸ್ ಮತ್ತು ಅರ್ಬಿಟ್ರೇಷನ್‌ಗೆ ಕೊಡಬೇಕಾದಂಥ ಹಣವನ್ನೂ ಕೂಡ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. Actual work in that period that is important. ಆ ಪಿರಿಯಡ್‌ನಲ್ಲಿ ಆದಂಥ ವರ್ಕ್ಸ್‌ಗಳು ಏನು, ಇವಕ್ಕೆ ಎಷ್ಟು ಖರ್ಚಾಯಿತು ಮತ್ತು ಎಷ್ಟು physical and fiscal. Performace ಆಯಿತು, ಇದು ನಮಗೆ ಬೇಕು, ಅದನ್ನು ಬಿಟ್ಟು ನೀವು ಬಡ್ಡಿಯನ್ನು ಖರ್ಚಾಗಿ ತೆಗೆದುಕೊಂಡು ಅದನ್ನು ಬಿಟ್ಟ ಇನ್ನುಳಿದವನ್ನೂ ಕೂಡ ಖರ್ಚೆಂದು ಪರಿಗಣಿಸಿ ಅದನ್ನೆಲ್ಲಾ ತೆಗೆದುಕೊಂಡು ಇದೇ ಲೆಕ್ಕವೆಂದು ನಮಗೆ ಕೊಡುವುದಕ್ಕೆ ನೀವು ದಯಮಾಡಿ ಪ್ರಯತ್ನಿಸಬೇಡಿ. ಇನ್ನು ಲಿಫ್ಟ್ ಇರಿಗೇಷನ್‌ನಲ್ಲಿ ಕೆನಾಲ್ಸ್ ವರ್ಕ್ಸ್‌ನಲ್ಲಿ ಮುಳುವಾಡ ಪ್ರಾಜೆಕ್ಟ್‌ನಲ್ಲಿ installation of pumps, parallel canal system ಇದು ಯಾವುದೂ ಆಗಿಲ್ಲ. ಆಲಮಟ್ಟಿ ಎಡದಂಡೆಯ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಕೆಲಸ ಕೂಡ ಯಾವುದೂ ಆಗಿಲ್ಲ. ಇದರಲ್ಲಿ ಇನ್ಸ್‌ಸ್ಟಲೇಷನ್ ಆಫ್ ಪಂಪ್ಸ್ ಕೆಲಸವಾಗಲಿಲ್ಲ, ಅದಕ್ಕೆ ಬೇಕಾದಂಥ ಸಲಕರಣೆಗಳನ್ನೂ ಕೂಡ ಒದಗಿಸಲಿಲ್ಲ. ಈ ರೀತಿಯಾದರೆ ಜೂನ್ 99 ರಲ್ಲಿ ಈ ಕೆನಾಲ್ ಸಿಸ್ಟಂನಲ್ಲಿ ನೀರನ್ನು ಬಿಡುವುದಕ್ಕೆ ಆಗುವುದಿಲ್ಲ. ಏಕೆಂದರೆ these are all the practical problems on the spot. ಮುಳುಗಡೆಯಾದ ಮೇಲೆ ಈ ಕೆಲಸಗಳಾಗಬೇಕಾದರೆ ನೀರೆಲ್ಲಾ ಇಳಿದಮೇಲೆಯೇ ಆಗಬೇಕಾಗುತ್ತದೆ. ಆದುದರಿಂದ ತದನಂತರ ನೀರನ್ನು ಖಂಡಿತವಾಗಿ ಬಿಡಬೇಕಾಗುತ್ತದೆ. ನೀವು ಏನು ಮಾಡಿದಿರೆಂದರೆ You have indirectly helped Andhra pradesh. ನೀವೇನು ನೀರನ್ನು ಹಿಡಿದುಕೊಳ್ಳುತ್ತೀರಿ ಅದರಲ್ಲಿ ಮೂರನೇ ಒಂದು ಭಾಗದಷ್ಟು ನೀರನ್ನೂ ಕೂಡ ನೀವು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಆ ಕೆನಾಲ್ ಸಿಸ್ಟಂ ವರ್ಕನ್ನು ನೀವು ಕಂಪ್ಲೀಂಟ್ ಮಾಡಿಲ್ಲ. You are not ready, full utility of canal system can never be done. ಆದುದರಿಂದ ನೀವು ಒಂದು ಡ್ಯಾಮ್ ಮಾಡಿ ಆಂಧ್ರಪ್ರದೇಶಕ್ಕೆ ನೀರು ಕೊಡತಕ್ಕಂಥ ದೊಡ್ಡ ಕೆಲಸವನ್ನು ಮಾಡುತ್ತಿದ್ದೀರಿ. ಏಕೆಂದರೆ ನೀರು ಇಡೀ ರಾಷ್ಟ್ರಕ್ಕೆ ಸೇರಿದಂಥದ್ದು ತಾನೇ. ಆದುದರಿಂದ ನೀವೇನು ಮಾಡಿದ್ದೀರೆಂದರೆ ನೀರನ್ನು ಶೇಖರಣೆ ಮಾಡಿ ಆಂಧ್ರಕ್ಕೆ ಕೊಡತಕ್ಕಂಥ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಏಕೆಂದರೆ ಆಂಧ್ರ ಕಂಟ್ರಾಕ್ಟರ್ಸ್ ಕೂಡ ಅಲ್ಲಿದ್ದಿದ್ದರಿಂದ ಇವೊತ್ತು Andhra Pradesh Contractors and Karnataka Government

joined together and they are helping Andhra Pradesh to get more water. ಇಷ್ಟೇ ಇಲ್ಲಿ ನಡೆದಿರುವ ಕೆಲಸ. ಆದುದರಿಂದ ನೀವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಎಷ್ಟು ಹೆಕ್ಟೇರ್ಸ್ ಭೂಮಿಗೆ ಇರಿಗೇಷನ್ ಮಾಡಲು ತಯಾರಾಗಿದ್ದೀರಿ ? ಅದನ್ನು ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಬೇಕು Narayanapura Phase III of Stage I physical works have not been done; there is no integrated approach and the entire UKP work no planning at all. ಈ ರೀತಿಯಲ್ಲಿ ನೀವು ಲೆಕ್ಕ ಹಾಕಿಕೊಂಡು ಕುಳಿತುಕೊಂಡಿದ್ದೀರಿ. ಆದರೆ ನಿಜವಾದ ಫಲ ನಮಗೆ ಏನು ಸಿಗಬೇಕೋ ಅದು ಸಿಗುತ್ತಿಲ್ಲ. ಇದು ಸತ್ಯವಾದ ಮಾತು. ಆದುದರಿಂದ ಈ ಸರ್ಕಾರ ಈ ವಿಚಾರದಲ್ಲಿ ಒಂದೊಂದು ನಿಮಿಷ ಕೂಡ ನಿಮಿಷ ಕೂಡ ಮುಂದುವರಿದರೂ ಕೂಡ ನಮ್ಮ ರಾಜ್ಯದ ರೈತರ ಸಮಗ್ರವಾದ ಅಭಿವೃದ್ಧಿಗೆ ಕುತ್ತು ಬರುತ್ತದೆ. ಈ ಒಂದು ಮೂಲ ಉದ್ದೇಶ ನಾವು ಮಂಡಿಸಿರುವ ಅವಿಶ್ವಾಸ ನಿರ್ಣಯದಲ್ಲಿ ಇದೆ ಎಂಬುದನ್ನು ನಾನು ತಮ್ಮ ಮೂಲಕ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕಾವೇರಿ ಬಗ್ಗೆ ಮಾತನಾಡುವುದಾದರೆ ನಮ್ಮ ಮೇಲೆ ನಮಗೇ ಅನುಮಾನ ಬಂದಿದೆ. ಏಕೆಂದರೆ ಇವರೇನು ಹೀಗೆ ಕಾವೇರಿ ಬಗ್ಗೆ ಅಗ್ರಿಮೆಂಟ್ ಮಾಡಿಕೊಂಡು ಬಂದಿದ್ದಾರೆ. National consensus for the first time, even ಆಗಸ್ಟ್ 15ರಂದು ರೆಡ್‌ಫೋರ್ಟ್‌ನಲ್ಲಿ ಪ್ರಧಾನಿಯವರು ಹೇಳಿದಮೇಲೆ ನಾವು ಒಂದು ರೀತಿಯಲ್ಲಿ ಆಲೋಚನೆ ಮಾಡಿದೆವು. ಒಂದು ರೀತಿಯ introspection. ಏನಪ್ಪಾ, ನಾವೇ ಎಲ್ಲಿಯಾದರೂ ತಪ್ಪು ಮಾಡುತ್ತಿದ್ದೇವೆಯೇ ಎಂದು ನಮ್ಮಲ್ಲಿಯೇ ಒಂದು ರೀತಿಯಲ್ಲಿ ಆಲೋಚನೆ ಮಾಡುವ ಹಾಗಾಯಿತು. ಯೋಚನೆಗೆ ಅದನ್ನು ಬಿಟ್ಟುಬಿಟ್ಟೆವು. ಅಧ್ಯಕ್ಷರೆ, ದಿನಾಂಕ 25-6-91ಕ್ಕೆ ಇಂಟರಿಮ್ ಆರ್ಡರ್ ಬಂದಮೇಲೆ ಅಲ್ಲಿಯವರೆಗೆ ಸದನದಲ್ಲಿ ಆದ ನಿರ್ಣಯಗಳನ್ನು ತಾವು ದಯಮಾಡಿ ನೋಡಬೇಕು. ಎಲ್ಲರೂ ಮಾತನಾಡಿದ್ದಾರೆ. ರಕ್ತ ನೀರಾಗಿ ಸದನದಲ್ಲಿ ಹರಿದಿದೆ, ಅಥವಾ ನೀರು ರಕ್ತವಾಗಿ ಹರಿದಿದೆ, ಹೊರಗೆ ಮತ್ತು ಒಳಗಡೆ ಹೀಗೆಲ್ಲಾ ಮಾತನಾಡಿದ್ದಾರೆ. ಆದರೆ ನಾವೇನೂ ಆ ರೀತಿಯಲ್ಲಿ ರಕ್ತ ಮತ್ತು ನೀರು ಎಂದು ಆಪಾಶನ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಕಾವೇರಿ ವಿಚಾರದಲ್ಲಿ ನಮ್ಮ ಹಕ್ಕಿನ ನೀರಿಗೆ ಏನು ಪ್ರೊಟೆಕ್ಟ್ ಮಾಡಬೇಕಾಗಿತ್ತೋ ಅದನ್ನು ನಾವು 1991 ರಿಂದ 1994ರವರೆಗೆ ಆ ಕೆಲಸವನ್ನು ಮಾಡಿದ್ದೇವೆ. We have not taken a blind view. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದರೂ ಕೂಡ ಅವರು ಹಾಕಿದ ತಾಳಕ್ಕೆ ತಕ್ಕಂತೆ ನಾವು ಕುಣಿಯಲಿಲ್ಲ. No. When you are holding the power here, it is your paramount interest to protect the interests of the farmers of Karnataka. ಇದರಿಂದ ನಮ್ಮ ನಾಗೇಗೌಡರು ಬಲಿಪಶುವಾದರು. He spoke against it. Yes, I must appreciate his patriotism and his dedication to the people of Karnataka and particularly to this area. He lost his MLC-ship. ಆ ರೀತಿ ಮಾಡಿದ್ದರಿಂದ ನಾಗೇಗೌಡರು ಬಲಿಪಶುವಾಗಿ ಎಂ.ಎಲ್.ಸಿ. ಸೀಟನ್ನು ಕಳೆದುಕೊಂಡರು. ಮಧ್ಯರಾತ್ರಿಯವರೆಗೆ ನಮಗೆ ಒತ್ತಾಯ ಮಾಡಿ ಕಡೇಪಕ್ಷ ಇದರ ಬಗ್ಗೆ ರೆಗ್ಯುಲೇಟೆಡ್ ಬಾಡಿ ಮಾಡಿ ಎಂದರು. ಆಗ ನಾನು ಮಧ್ಯರಾತ್ರಿ ನಾನು ಕ್ಯಾಬಿನೆಟ್ ಮೀಟಿಂಗನ್ನು ಕರೆದೆ. I never took an arbitrary decision. ನಾನು ಬಹಳ

ಬುದ್ಧಿವಂತನೆಂದು ಹೇಳಿ, ನಮ್ಮಲ್ಲಿ ಬಹಳ ಬುದ್ಧಿವಂತರು ಎಂದು ಹೇಳುವುದರಿಂದಲೇ ಇಂದು ಕಾವೇರಿ ಬಗ್ಗೆ, ಆಲಮಟ್ಟಿ ಬಗ್ಗೆ ಮತ್ತು ಯು.ಕೆ.ಪಿ. ಬಗ್ಗೆ ಬಂದಿರುವ ಪರಿಸ್ಥಿತಿ ಈ ರೀತಿಯದಾಗಿದೆ. ಪ್ರಕಾಶ್‌ರವರೇ ನಿಮಗೂ ಗೊತ್ತಿದೆ. ಬಹಳಷ್ಟು ಬುದ್ಧಿವಂತರು ಜಾಸ್ತಿಯಾಗಿ ಇರುವುದರಿಂದ ಈ ಪರಿಸ್ಥಿತಿ ಬಂದಿದೆ. ನಾನು ಆಗ ಸ್ವಲ್ಪ ನನ್ನ ವೈಯಕ್ತಿಕ ಬುದ್ಧಿವಂತಿಕೆಯನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. I took the entire Cabinet into confidence and then I called the Opposition Leaders and took them into confidence and then told Shri. Shukla, the then Irrigation Minister and I wrote a letter to the Prime Minister. I spoke to him over phone, it will be detrimental to the interests of farmers of Karnataka and I cannot concede to this, even if i lose my Chief Ministership. ಆ ಧೈರ್ಯವನ್ನು ನಾನು ಅಂದು ತೋರಿಸಿದೆ. ಅದು ಕೇವಲ ಧೈರ್ಯವಲ್ಲ, ಮೊಂಡು ಧೈರ್ಯವದು. ಏಕೆಂದರೆ ನಾವು ಇಂದು ಕಾವೇರಿಯ ನೀರನ್ನು ಕುಡಿದು, ಅನ್ನವನ್ನು ತಿಂದು ಇಲ್ಲಿ ಕುಳಿತು ಕೊಂಡಿದ್ದೇವೆ. ಆದುದರಿಂದ ಆ ನಮ್ಮ ತಾಯಿಗೆ ದ್ರೋಹ ಬಗೆಯತಕ್ಕಂಥ ಕೆಲಸವನ್ನು ನಾವ್ಯಾರೂ ಮಾಡಬಾರದು. You cannot be blind to the situation. Our loyalty to this land, our loyalty is not the political expediency, our loyalty cannot be surrendered at the altar of some political hierarchy, whichever party I belong or anybody belongs. ನಾವು ರಕ್ತ ಕೊಡುತ್ತೇವೆ ಎಂದು ಹೇಳುವುದಿಲ್ಲ. ಆದರೆ we have demonstrated 1991-to 1994, yes, we have not done any Negotiation, yes. ಆದರೆ ನೀವು ಡ್ರಾಫ್ಟ್ ಸ್ಕೀಮ್ ನೋಟಿಫಿಕೇಷನ್ ಏಕೆ ಬಂತು ಎಂಬುದಕ್ಕೆ ರಾಜಕೀಯವಾಗಿ ಮಾತನಾಡುತ್ತೀರಿ. ಇದರಲ್ಲಿ ರಾಜಕೀಯವೇನೂ ಇಲ್ಲ. Whether fortunate or unfortunate, Shri V.P. Singh, the then Prime Minister, abdicated the duty of the Government of India, surrendered the rights to appoint a Tribunal to the Supreme Court. No diplomacy used, no statesmanship used, a brute bias to a particular State. That is all. There is no other logic behind it. Again when the Negotiation was going on, ಮೂರನೇ ನೆಗೋಸಿಯೇಶನ್‌ಗೆ ಡೇಟ್ ಫಿಕ್ಸ್ ಮಾಡಿ ಮತ್ತು ಟೈಮ್ ಫಿಕ್ಸ್ ಮಾಡಿ ಬೆಂಗಳೂರಿನಲ್ಲಿ ವೀರೇಂದ್ರ ಪಾಟೀಲರು ಸಭೆ ಸೇರಬೇಕು ಎನ್ನುವಂಥ ಸಂದರ್ಭದಲ್ಲಿ `negotiation has failed'... it was a betrayal.

MR. SPEAKER : Was it an arbitrary decision by Mr. V.P. Singh?

SRI M. VEERAPPA MOILY : Yes. His Additional Solicitor General, submitted to the Supreme Court that negotiations have failed so we leave it to the court to appoint. This is the decision. It was only thereafter the Supreme Court assumed the right.

MR. SPEAKER : Who constituted the Tribunal?

SRI M. VEERAPPA MOILY : It is the Government which constituted the Tribunal, but on the specific categorical direction given by the Supreme Court.

MR. SPEAKER : So Mr. V.P. Singh has only complied with the directions of the Supreme Court.

SRI M. VEERAPPA MOILY : No. If you want I can submit all the files. Additional solicitor General Mr. Goswamy, on behalf of the Government of India,....

MR. SPEAKER : I intervened only for the simple reason, I have also known the person Mr. V.P. Singh, he would not do such things.

4.10 ಪಿ.ಎಂ

SRI M. VEERAPPA MOILY : It may not be himself, it is the Government of India. Alright if it is not Mr.V.P. Singh it is the V.P. Singh Government.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಷಯವಾಗಿದ್ದು, ಮಾನ್ಯ ವೀರಪ್ಪಮೊಯಿಲಿಯವರು ಕೂಡ ಮುಖ್ಯಮಂತ್ರಿಗಳಾಗಿದ್ದವರು, ಇಲ್ಲಿ ಪ್ರಶ್ನೆ ಇರುವಂಥಾದ್ದು ಟ್ರಿಬ್ಯೂನಲ್ ಆಗುವುದಕ್ಕೆ ತಾವು ಹೇಳಿದಂತೆ ಇದರಲ್ಲಿ ಏನೂ ಪ್ರಶ್ನೆ ಇಲ್ಲ. ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಒಂದು ರೀತಿಯಲ್ಲಿ ಕಾಂಪ್ರೊಮೈಸ್ ಅಲ್ಲಿ ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಸುಪ್ರೀಂ ಕೋರ್ಟಿನ ಡೈರಕ್ಷನ್‌ನಿಂದ ಟ್ರಿಬ್ಯೂನಲ್ ಆಗಿರುವಂಥಾದ್ದು. But you cannot say he has betrayed Karnataka. Why will he betray Karnataka? What is the vested interest he has got? ನಿಮ್ಮ ರಥಯಾತ್ರೆ ಕಾಂಪ್ರೊಮೈಸ್ ಮಾಡಿಕೊಂಡಿದಿದ್ದರೆ he could have continued as the Prime Minister.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಆಗ ಅವರ ಜೊತೆಯಲ್ಲೇ ಇದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲ, ನಾವು ನೀವು ಜೊತೆಗೆ ಇದ್ದೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ನೀವು ಜೊತೆಗೆ ಇರುವ ಪ್ರಶ್ನೆಯೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಆಗ ಕ್ಯಾಬಿನೆಟ್‌ನಲ್ಲಿ ಇರಲಿಲ್ಲ, ನಾನು ಆಗ ವಿರೋಧಪಕ್ಷದಲ್ಲಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ವೀರಪ್ಪಮೊಯಿಲಿಯವರಿಂದ ಈ ಸದನದ ಮೂಲಕ ಮಾರ್ಗದರ್ಶನ ಬೇಕೆಂದು ಹೇಳುತ್ತಿದ್ದೇನೆ. ಇದು ಸರಿಯೋ ತಪ್ಪೋ ಅಂತೂ ಯಾವುದೋ ಕಾರಣಕ್ಕೆ ಈ ಟ್ರಿಬ್ಯೂನಲ್ ನೇಮಕ ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಆಯಿತು. ಈ ಸದನದಲ್ಲಿ ಆವತ್ತಿನಿಂದ ಇವತ್ತಿನವರೆಗೂ ಬಹುತೇಕ ಸದಸ್ಯರು ಈ ಭಾಗದಲ್ಲಿ ಕುಳಿತಿರುವಂತಹ ಸದಸ್ಯರುಗಳು ಟ್ರಿಬ್ಯೂನಲ್ ನ್ಯಾಯಬದ್ಧವಾದಂತಹ ತೀರ್ಪನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ಇಂಟರೀಮ್ ಆರ್ಡರ್ ಅನ್ನು ನೋಟಿಫೈ ಮಾಡಬೇಡಿ ಎಂದು ಹೇಳಿದೆವು. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗದೇ ಇರುವಂತಹ ಸಂಗತಿ ಎಂದು ನಾವು ಇವತ್ತಿನವರೆಗೂ ಹೇಳಿಕೊಂಡು ಬಂದಿದ್ದೇವೆ. ಎರಡನೆಯದು 5 ಟಿ.ಎಂ.ಸಿ. ನೀರನ್ನು ಆಗ ಮಾನ್ಯ ಪ್ರಧಾನಮಂತ್ರಿಯವರು ಕೊಡಬೇಕೆಂದು ಒತ್ತಾಯ ಮಾಡದಂತಹ ಸಂದಿಗ್ಧ ಸಂದರ್ಭದಲ್ಲಿ ಪತ್ರ ಏನಿದೆ, ರಾಷ್ಟ್ರೀಯ ಜಲ ಮಾರ್ಗಸೂಚಿಯನ್ನು ಜಾರಿಗೆ ತರುತ್ತೇವೆಂದು ಆ ಕಾರಣಕ್ಕಾಗಿ ಸುಪ್ರೀಂ ಕೋರ್ಟ್ ಏನಾದರೂ ಮಾಡಿ ಎಂದು ಹೇಳಿದಾಗ ಮಾನ್ಯ ಪ್ರಧಾನ ಮಂತ್ರಿಯವರು ಇದೆಲ್ಲವನ್ನೂ ಬಗೆಹರಿಸಬೇಕೆಂದು ಹೇಳಿ ಎಲ್ಲಾ ವಾಸ್ತವಿಕ ಸ್ಥಿತಿ ಇರುವಂಥಾದ್ದನ್ನು ತರಿಸಿ, 5 ಟಿ.ಎಂ.ಸಿ. ನೀರನ್ನು ಬಿಡಿ ಎಂದು ಹೇಳಿದ್ದಕ್ಕೆ ನಾವು ಅದಕ್ಕೆ ಒಪ್ಪಿಗೆ ಕೊಟ್ಟೆವು. ಇದಾದ ಮೇಲೆ ರಾಷ್ಟ್ರೀಯ ಜಲ ನೀತಿಯ ಮಾರ್ಗ ಸೂಚಿಯನ್ನು ಜಾರಿಗೆ ತರುವಂಥಾದ್ದಕ್ಕೆ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಆಗ ನಮ್ಮ ಕರ್ನಾಟಕ ರಾಜ್ಯದವರೇ ಆದ ಸನ್ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಯಾವುದೇ ಪ್ರಯತ್ನ ಇದರ ಬಗ್ಗೆ ಆಗಲಿಲ್ಲ. ಈಗ ನಾನು ಏನು ಹೇಳುತ್ತೇನೆಂದರೆ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನಮಂತ್ರಿಗಳಾದ ಮೇಲೆ ನಾವು ಒಕ್ಕೊರಲಿನಿಂದ ಏನು ಚರ್ಚೆ ಮಾಡಿದೆವು. ನಾವು ಸುಪ್ರೀಂ ಕೋರ್ಟ್‌ನಿಂದ ಹೊರಗಡೆ ಬರಬೇಕೆಂದರೆ ಟ್ರಿಬ್ಯೂನಲ್‌ನಿಂದ ಪೂರ್ಣ ಫೈನಲ್ ಆರ್ಡರ್ ಬರುವುದಾದರೆ ಇದನ್ನು ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಮ್ಮೆಲ್ಲರ ನಿಲುವು ಇತ್ತು. ಅದೇ ಸಂದರ್ಭದಲ್ಲಿ ಕಾವೇರಿ ನದಿ ಪ್ರಾಧಿಕಾರ ರಚನೆಯಾಗುವಂತಹ ಪ್ರಯತ್ನವೂ ನಡೆಯಿತು. ಅದು ಯಾವ ರೀತಿ ಮತ್ತು ಕೈ ಕಾಲನ್ನು ಬಂಧನದ ರೀತಿಯಲ್ಲಿ ಇತ್ತು ನಮಗೆ ಗೊತ್ತಿದೆ. ಈಗ ಇದೆಲ್ಲದರಿಂದ ಹೊರಗೆ ತಂದು ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ನಮ್ಮ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ರೀತಿ ಡಿಸ್ಟ್ರೆಸ್ ಸಂದರ್ಭ ಬಂದಾಗ ಮಾತುಕತೆಯ ಮೂಲಕ ಬಗೆಹರಿಸುವಂತಹ ಸೂತ್ರವೊಂದರಿಂದ ಪರಿಹಾರವನ್ನು ಹುಡುಕುವಂತಹ ಪ್ರಯತ್ನವನ್ನು ಮಾಡಿದರಲ್ಲಾ, ಇದನ್ನು ಬಿಟ್ಟು ಮಾನ್ಯ ಪ್ರಧಾನಮಂತ್ರಿಯವರು ಏನು ಮಾಡಬೇಕಾಗಿತ್ತು ಎಂಬ ಬಗ್ಗೆ ಒಂದು ಸಲಹೆಯನ್ನು ಕೊಡಿ ಎಂದು ಕೇಳುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು "ಕಾವೇರಿ ಒಪ್ಪಂದ ಕರ್ನಾಟಕ ರಾಜ್ಯಕ್ಕೆ ಮಾರಕ" ಎಂಬ ಪುಸ್ತಕವನ್ನು ಏನು ಹೊರಡಿಸಿದ್ದಾರೆ. ಅದರಲ್ಲಿ ಏನೂ ಪರಿಹಾರ ಕಾಣುತ್ತಿಲ್ಲ. ಆದುದರಿಂದ ಈಗಲಾದರೂ ನೀವು ಸಲಹೆಯನ್ನು ಕೊಡಿ ಎಂದು ಹೇಳುತ್ತೇನೆ. ಇದನ್ನು ಬಿಟ್ಟು ಇನ್ನು ಏನನ್ನು ಪ್ರಧಾನಮಂತ್ರಿಗಳಾದ

7444-148

ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಮಾಡಬೇಕಾಗಿತ್ತು. ಈ ಒಂದು ತೀರ್ಮಾನದಿಂದ ಕನ್ನಡನಾಡಿನ ಜನರಿಗೆ ಹೇಗೆ ಅನ್ಯಾಯವಾಗಿದೆ. ಇವತ್ತು ಎರಡು ರಾಜ್ಯಗಳವರು ಒಪ್ಪಿಕೊಳ್ಳುತ್ತಿದ್ದಾರೆ. ಈಗ ಇರುವಂತಹ ಒಂದೇ ಒಂದು ನೋವು ಎಂದರೆ ಈ ಗೊಂದಲ ಬಡಿದಾಟ, ಕಚ್ಚಾಟ, ರಕ್ತ ಹರಿಯುವಂಥಾದ್ದು ತಪ್ಪಿ ಹೋಯಿತು, ಎಂದರೆ ಅದು ಬೇರೆಯವರ ಮಾತು. ಇದನ್ನು ಮಾನ್ಯ ವೀರಪ್ಪಮೊಯಿಲಿಯವರು ಒಪ್ಪುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದು ಅವರ ಬಾಯಲ್ಲಿ ಬರುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದು ಅವರ ಬಾಯಲ್ಲಿ ಬರುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಈ ರೀತಿಯಾಗಿ ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವಂತಹ ಚರ್ಚೆಯಾದಂತಹ ಸಂದರ್ಭದಲ್ಲಿ ಎಲ್ಲಾ ಕಾಂಗ್ರೆಸ್ ಪಕ್ಷದ ಮುಖಂಡರು ಸಹಿ ಮಾಡಿದ್ದೀರಿ, ಸನ್ಮಾನ್ಯ ನಾಗೇಗೌಡರೇ ಈ ರೀತಿ ಎನ್‌ಲೈಟ್ ಮಾಡಬಹುದು. ಈಗ ನಾನು ತಮ್ಮಲ್ಲಿ ಏನು ವಿನಂತಿ ಮಾಡುವುದಕ್ಕೆ ಹೊರಟಿದ್ದೇನೆಂದರೆ ಮಾನ್ಯ ಪ್ರಧಾನಮಂತ್ರಿಯವರು ತೆಗೆದುಕೊಂಡಿರುವಂತಹ ತೀರ್ಮಾನವನ್ನು ಬಿಟ್ಟು ಬೇರೆ ಏನು ಮಾಡುವುದಕ್ಕೆ ಈ ಸಂದರ್ಭದಲ್ಲಿ ಸಾಧ್ಯವಿತ್ತು. ಇದು ಕರ್ನಾಟಕ ರಾಜ್ಯಕ್ಕೆ ಹೇಗೆ ಮಾರಕ ಎಂಬುದನ್ನು ದಯಮಾಡಿ ಎನ್‌ಲೈಟ್ ಮಾಡಿ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜೀವ್ ಗಾಂಧೀಯವರು ಪ್ರಧಾನಮಂತ್ರಿಗಳಾಗಿದ್ದಾಗ 1986ರಲ್ಲಿ "ನ್ಯಾಷನಲ್ ವಾಟರ್ ಪಾಲಿಸಿ" ಯನ್ನು ಮಾಡಿದರು. ಇದಾದ ಮೇಲೆ Guidelines under the National Water Policy should have been evolved. I agree with you. National Water policy was accepted by the N.D.C. National Water Policy was evolved and accepted in the meeting of 1986. ಆಮೇಲೆ ಅದರ ರೂಲ್ಸ್ ಫ್ರೇಮ್ ಆಗಿಲ್ಲ, ಗೈಡ್ ಲೈನ್ ಫ್ರೇಮ್ ಆಗಿಲ್ಲ. But the policy was accepted during our regime. ನಂತರ ಗೈಡ್ ಲೈನ್ ಫ್ರೇಮ್ ಆಗಬೇಕೆಂದು, I will come back to the guidelines a little later. ಇದರಲ್ಲಿ ಟ್ರಿಬ್ಯೂನಲ್ ಡೈರೆಕ್ಷನ್ ದಿ: 25-6-1991ರವರೆಗೆ ಏನಿದೆ. "Direction to Karnataka to ensure availability of 205 TMC water to TamilNadu's Mettur reservoir from June to May according to the Schedule which is prescribed". The second direction is, "not to increase the area of irrigation beyond 11.2 lakh acres". These are the two directions. ಈಗ ಪರಿಸ್ಥಿತಿ ಏನಾಗಿದೆ. What has happened today? I will illustrate later. ಇಂಟರೀಮ್ ಆರ್ಡರ್‌ನಲ್ಲಿ ಏನು ಕಾಣಿಸಿದ್ದಾರೆ, ಇದನ್ನು ಚಾಚೂತಪ್ಪದೆ ಇಂಪ್ಲಿಮೆಂಟ್ ಮಾಡುವಂತಹ ಕೆಲಸವನ್ನು ನಿಮ್ಮ ಸರ್ಕಾರದವರು ಮತ್ತು ತಮಿಳುನಾಡಿನ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಮಾಡಿದೆ. I don't take the name of the Prime Minister. These two things have been done. ತಾವು ದಯಮಾಡಿ ರೆಕಾರ್ಡ್ ತರಿಸಿ ನೋಡಬೇಕು. ಮೊನ್ನೆ ನಡೆದಂತಹ Monitoring Committee, now they are preparing the format for limiting the irrigation to the extent of 11.2 lakhs Am I not correct? Please check with the Officers. I have got authentic information, authentic

record. 205, ಟಿ.ಎಂ.ಸಿ. ನೀರನ್ನು ಕೊಡುವಂಥಾದ್ದು ಅದನ್ನು ಒಪ್ಪಿದ್ದಾರೆ. Format has been prepared to limit to 11.20 lakh acres. ಆಯಿತಲ್ಲಾ, ಇದರಲ್ಲಿ ಯಾವ ಪುರುಷಾರ್ಥಕ್ಕಾಗಿ ಈ ನೆಗೋಸಿಯೇಷನ್? ಇದಕ್ಕೆ ಪ್ರಧಾನಮಂತ್ರಿಯವರು ಬರಬೇಕಾ? ಇದಕ್ಕೆ ಮುಖ್ಯಮಂತ್ರಿಯವರು ಹೋಗಬೇಕಾ? ಇದಕ್ಕೆ ನಾವೆಲ್ಲಾ ದೆಹಲಿಗೆ ಹೋಗಬೇಕಾ? ನಮ್ಮ ಕರ್ನಾಟಕದ ರೈತರ ತಲೆಗೆ ತೂಗುವ ಕತ್ತಿಯನ್ನು ಹಾಕಿದ್ದೀರಿ, ಅದು ತೂಗುವುದು ಬೇಡ ಬಿದ್ದು ಬಿಡಲಿ ಎಂದು ಅಷ್ಟೇ ಈಗ ಮಾಡಿರುವಂಥಾದ್ದು. If this is to be claimed as a credit point, if this is to be taken as a national consensus for killing the farmers of the State, I leave it to the people to decide. ನನಗೆ ಇದರ ಮೇಲೆ ಕಾಮೆಂಟ್ಸ್ ಮಾಡುವುದಕ್ಕಾಗುವುದಿಲ್ಲ. ಇದರ ಮೇಲೆ ಯಾರು ಬೇಕಾದರೂ ಕ್ರೆಡಿಟ್ ತೆಗೆದುಕೊಳ್ಳಲಿ, ಈ ಕತ್ತಿ ಹಾಕಿದ್ದಕ್ಕೆ ಮಾನ್ಯ ಪಟೇಲ್‌ರವರೇ ಯಾರಾದರೂ ಕ್ರೆಡಿಟ್ ತೆಗೆದುಕೊಳ್ಳುವುದಿದ್ದರೆ ನೀವು ತೆಗೆದುಕೊಳ್ಳಿ. ಜನರು ನಿಮ್ಮನ್ನು ನೋಡುತ್ತಾರೆ.

ಅಧ್ಯಕ್ಷರು : ಸಿದ್ದನಗೌಡರೇ,

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಶ್ರೀ ಸಿದ್ದನಗೌಡರಿಗೂ ಹಾಗೂ ಎಲ್ಲರಿಗೂ 13ನೇ ತಾರೀಖಿನಂದು ಮೀಟಿಂಗ್ ಇರುವುದು, ಈಗಲೇ ಕಾನ್ಸ್ಪಿರೆಸಿ ನಡೆಸಿದರೆ ಹೇಗೆ ಎಂದು ಹೇಳಿ.

ಅಧ್ಯಕ್ಷರು : ಇಲ್ಲ, ಅವರು ಫಿಲಿಪ್ಸ್ ಕಂಪನಿಯ ಶೇರ್‍ಸ್ ಏನೋ ಪ್ರಾಬ್ಲಂ ನಲ್ಲಿದೆ, ಅದರ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ 13ನೇ ತಾರೀಖಿನಂದು ಜೆ.ಎಲ್.ಪಿ.ಡಿ. ಮೀಟಿಂಗ್ ಫಿಕ್ಸ್ ಆಗಿದೆ, ಅಲ್ಲಿಯವರೆಗೆ ಸ್ವಲ್ಪ ಶಾಂತಿಯಾಗಿ ಇರುವುದಕ್ಕೆ ಹೇಳಿ ಇಲ್ಲೇ ಮೀಟಿಂಗ್ ಮಾಡಿದರೆ ಹೇಗೆ?

ಅಧ್ಯಕ್ಷರು : ಇಲ್ಲ ಎಲ್ಲಾ ಸರಿಹೋಗುತ್ತದೆ, ಸ್ವಲ್ಪ ಮೆತ್ತಗೆ ಮಾತನಾಡಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸರಿಯೆಂದರೆ ಥೀನ್ ಥೆರಾ ಆಮೇಲೆ ನೌ ಅಟರಾಯಾಗುತ್ತದೆ.

ಅಧ್ಯಕ್ಷರು : ಅಟರಾನಾದರೂ ಆಗಲಿ, ಇಕ್ಕೀಸ್ ಆದರೂ ಆಗಲಿ ಅವರಿಗೆ ಮೆತ್ತಗೆ ಮಾತನಾಡಿ ಎಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತೀನ್ ಎಂದರೆ ಶ್ರೀ ಬೊಮ್ಮಾಯಿಯವರು, ಶ್ರೀ ಪಟೇಲರವರು, ಹಾಗೂ ಶ್ರೀ ದೇವೇಗೌಡರು ಆಗುತ್ತಾರೆ, ತೇರಾ ಎಂದರೆ ಜೆ.ಡಿ.ಎಲ್.ಪಿ. ಮೀಟಿಂಗ್ ಇರುವುದು 13ನೇ ತಾರೀಖಿನಂದು ಫಿಕ್ಸ್ ಮಾಡಿಕೊಂಡಿದ್ದಾರೆ. ಅದಕ್ಕೆ ತೀನ್ ತೇರಾ, ಮುಂದು ಆಗುವುದು ನೌ ಅಟರಾ..

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಹೋಗಿದ್ದೇ ತಪ್ಪಾಯಿತಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಎಂದು ಸಲಹೆ ಕೊಡಿರಿ, ಮಾನ್ಯ ಪ್ರಧಾನ ಮಂತ್ರಿಯವರು ಏನು ಮಾಡಬಹುದಾಗಿತ್ತು ಎಂಬ ಸಲಹೆಯನ್ನು ಕೊಟ್ಟರೆ ಏನು ವ್ಯತ್ಯಾಸವಾಯಿತೆಂದು ಹೇಳಿದರೆ ನಮಗೂ ಜ್ಞಾನೋದಯವಾಗುತ್ತದೆ.

SRI M. VEERAPPA MOILY : This was a note circulated among us. ಮಾನ್ಯ ಪ್ರಧಾನಮಂತ್ರಿಯವರು ಅಧಿಕಾರಕ್ಕೆ ಬಂದಮೇಲೆ ಇದು ಕೊನೆಯ ನೋಟ್. This is what I expressed. ಇದನ್ನು ನಾನು ಕರೆಕ್ಟ್ ಮಾಡಿ ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಅಬ್ಜರ್ವೇಷನ್ ಏನೆಂದರೆ you attended the meeting, you agreed to the proposal. ನೀವು ಬ್ಯಾಕ್ ಟ್ರಾಕ್ ಎಂದು ಏನೋ ಅವರು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ನಾವು ಏನು ಸಲಹೆ ಕೊಟ್ಟೆವು ಎಂದರೆ, ನಾನು ಕಾವೇರಿಯ ಮೇಲೆ ಅಣೆ ಇಡಬಹುದೇ, ಆ ಕಾವೇರಿಯ ಅಣೆಯಾಗಿ ಕೂಡ ನಾನು ಕೊಟ್ಟಂಥ ಸಲಹೆ ಇದು. What I corrected and given to them, This is what I said there will be a scheme for giving effect to the implementation of the interim orders of the tribunal and relevant subsequent orders. What I have amended is, there will be a scheme relating to the Interim order of the tribunal and all relevant subsequent orders. Under the scheme, there be a Authority which will comprise of the Prime Minister and Chief Minister of the States concerned. This we have agreed. The Prime Minister to decide, yes we have agreed, Under this, there may be a Monitoring Committee consisting of designated officers the State Governments concerned and officers of the Central Government. We have agreed ಆದರೆ ನಾವು ಬಹಳ ಸ್ಟ್ರಿಕ್ಟ್ ಆಗಿ ಹೇಳಿದ್ದೇನೆಂದರೆ ಇದು ಸೆಕ್ಷನ್ 6-ಎ ಪ್ರಕಾರ ಆಗಬಾರದು ಎಂದು. It should not be constituted as per Section 6 (a) ಪ್ರಧಾನಿಯವರ ಅಧ್ಯಕ್ಷತೆಯಲ್ಲಿರತಕ್ಕಂಥ ಪ್ರಾಧಿಕಾರ ಇಂಟರ್ ಸ್ಟೇಟ್ ವಾಟ್ ಡಿಸ್ಪ್ಯೂಟ್ ಆ್ಯಕ್ಟ್‌ನ ಸೆಕ್ಷನ್- 6-ಎ ಪ್ರಕಾರ ಆಗಬಾರದು ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ, ಬರೆದು ಕೂಡ ಕೊಟ್ಟಿದ್ದೇವೆ. ಮತ್ತು ನಮ್ಮ ರಾಜ್ಯ ಸರ್ಕಾರ ಫಾರ್ಮುಲೇಟ್ ಮಾಡಿದಂಥ ಸಲಹೆಗಳು ಪೇಜ್-2ರಲ್ಲಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಸಭೆಗೆ ಹೋದಿರಿ. ಹಾಸನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಏನು ಹೇಳಿದ್ದೀರಿ ಎಂದರೆ, ಸಂಯುಕ್ತ ಕರ್ನಾಟಕದ ಬಗ್ಗೆ ನಿಮಗೆ ಗೌರವವಿದೆ, 'ದಿ ಹಿಂದೂ' ಗೌರವ ಕೊಡುವ ಹಾಗೆ ಇದಕ್ಕೂ ಗೌರವ ಇಟ್ಟುಕೊಂಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, 'ಕಾವೇರಿ ಒಪ್ಪಂದ ರಾಜ್ಯದ ಹಿತಕ್ಕೆ ಧಕ್ಕೆ ಇಲ್ಲ' ಸನ್ಮಾನ್ಯ ಮೊಯ್ಲಿಯವರು.

"ಮಾತುಕತೆ ವೇಳೆಯಲ್ಲಿ ಈ ಹಿಂದೆ ರೂಪಿಸಿದ್ದ ಕರಡು ಯೋಜನೆ ಹಾಗೂ ಪರಿಷ್ಕೃತ ಕರಡು ಯೋಜನೆಗಳನ್ನು ತಿರಸ್ಕರಿಸುವುದು ಒಂದು ಅರ್ಥದಲ್ಲಿ ಕರ್ನಾಟಕದ ವಿಜಯ ಎಂದು ಅರ್ಥ ಪಟ್ಟರು. ಪ್ರಧಾನ ಮಂತ್ರಿಗಳೇ ಈಗ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಆಸಕ್ತಿ ತಾಳಿರುವುದರಿಂದ, ಅವರ ಬಗ್ಗೆ ವಿಶ್ವಾಸ ಇಡಬೇಕೆಂದು ಮೊಯ್ಲಿ, ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರ ಮಾತ್ರ ಇರಬಾರದೆಂದು ಒತ್ತಿ ಹೇಳಿದರು. ನಾವು ಶಾಸನಬದ್ಧ ಅಧಿಕಾರವನ್ನು ಕೊಡಲಿಲ್ಲ. ಆದರೆ ದೆಹಲಿಯಿಂದ ಆದೇಶ ನಿಮಗೆ ಬಂತು ಎಂದು ಅದನ್ನು ವಿರೋಧ ಮಾಡುವವರು ನೀವು.

ಶ್ರೀ ಎಂ. ವೀರಪ್ಪ ಮೊಯ್ಲಿ : ದೆಹಲಿಯಲ್ಲಿ ಏನು ಹೇಳುತ್ತಾರೆ, ಅದಕ್ಕೆ ತಲೆಬಾಗಿ ನಡೆಯತಕ್ಕಂಥ ಪ್ರವೃತ್ತಿ ಈ ಕಡೆ ಇಲ್ಲ, ಆ ಕಡೆ ಇದೆ. ದೆಹಲಿಯವರ ಬಗ್ಗೆ ಏನು ಹೇಳಿದರೂ ಆಕಾಶ ತಲೆಯ ಮೇಲೆ ಬಿದ್ದವರ ಹಾಗೆ ಮಾಡುತ್ತಾರೆ. ನಾವು ಏನೂ ಹಾಗೆ ಮಾಡಲಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಕಾಲದಲ್ಲಿ ಯಡಿಯೂರಪ್ಪನವರು ಮತ್ತು ನಂಜೇಗೌಡರು ಅಡ್ಡಾಡುತ್ತಿದ್ದರು, ಏನೆಂದರೆ ನ್ಯಾಷನಲ್ ವಾಟರ್ ಪಾಲಿಸಿ ಆಗುವವರೆಗೆ ಒಪ್ಪಿಕೊಳ್ಳಬಾರದು ಎಂದು ಹಾರಾಡಿದ್ದೇ ಹಾರಾಡಿದ್ದು, ಚೀರಾಡಿದ್ದೇ ಚೀರಾಡಿದ್ದು, ಕೂಗಿದ್ದೇ ಕೂಗಿದ್ದು. ಈಗ ಎಲ್ಲಿ ಹೋಯಿತು, ಆ ನ್ಯಾಷನಲ್ ವಾಟರ್ ಪಾಲಿಸಿ, ಆಮೇಲೆ ಇಂಟರಿಂ ಆರ್ಡರ್ ಅನ್ನು ಒಪ್ಪಿಕೊಳ್ಳಬಾರದು ಎಂದು ಇಲ್ಲಿ ಹೇಳಿ, ಅದಕ್ಕೆ ಯುನಾನಿಮಸ್ ರೆಸೊಲ್ಯೂಷನ್ ಪಾಸ್ ಆದರೂ ಕೂಡ ಅದಕ್ಕೆ ಏಕೆ ನೀವು ಸ್ಟಿಕ್‌ಆನ್ ಆಗಲಿಲ್ಲ. ನಾವು ನಮ್ಮ ಹೈಕಮಾಂಡಿನಿಂದ ಆರ್ಡರ್ ಬಂದರೂ ಕೂಡ ಕೇಂದ್ರದ ಮಂತ್ರಿಗಳು ಬಂದು ಇಲ್ಲಿ ಕುಳಿತಿದ್ದರೂ ಕೂಡ ಅವರ ಆರ್ಡರ್‌ಗಳನ್ನು ಮತ್ತು ಇನ್ಸ್‌ಟ್ರಕ್ಷನ್‌ಗಳನ್ನು ಧಿಕ್ಕರಿಸಿ ನೀವು ಹೇಳಿದ ಹಾಗೆ ನಾವು ಕೇಳಿದೆವು. ಆದರೆ ನೀವು ಮಾಡಿದ್ದೇನು? ಅವರು ಏನು ಹೇಳುತ್ತಾರೋ ಅದನ್ನು ಕೇಳಿ ತಲೆಬಗ್ಗಿಸಿಕೊಂಡು ಬಂದು ಇಲ್ಲಿ ಇವತ್ತು ಡಿಫೆಂಡ್ ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ : ಇದು ನಡೆದಾಗ ಖರ್ಗೆಯವರು ಇಲ್ಲಿ ಇರಲಿಲ್ಲ. ಅವರು ವಿದೇಶ ಯಾತ್ರೆಯಲ್ಲಿದ್ದರು. ಆದ್ದರಿಂದ ಅವರಿಗೆ ವಿಚಾರ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಲಿ : ನಾನು ಮಾತನಾಡಿ ಮುಗಿಸುತ್ತೇನೆ. ಆಮೇಲೆ ನೀವು ಹೇಳಿ. The Authority shall frame rules and regulations for conduct of its business. ಅದಕ್ಕೆ ರಾಜ್ಯ ಸರ್ಕಾರದ ಸಲಹೆ ಏನಿತ್ತು ಎಂದರೆ, " decision of the authority shall be by consensus". ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಪೇಪರ್‌ನಲ್ಲಿ ಬಂದಿರುವುದನ್ನು ತಾವು ಏನು ಓದಿದಿರಿ. ಅದರಲ್ಲಿ ಕೂಡ ..... ನಮಗೆ ಮುಖ್ಯ ಮಂತ್ರಿಗಳು ಏನು ಹೇಳಿ ಹೋದರು ಅದರಂತೆ ಅಲ್ಲಿ ಹೋಗಿ ಹೇಳಿದ ಮೇಲೆ ಫೈನಲ್‌ಆಗಿ ಅಗ್ರೀ ಮಾಡುವ ಮೊದಲು ಪುನಃ ನಮ್ಮನ್ನು ಮುಖ್ಯಮಂತ್ರಿಗಳು ಕನ್ಸಲ್ಟ್ ಮಾಡಲಿಲ್ಲ. ನಾನೂ ಅಲ್ಲೇ ಇದ್ದೆ. ನಾನೂ ಮೀಟಿಂಗ್ ಅಟೆಂಡ್ ಮಾಡಿದ್ದೆ. I was present in the last meeting also. I stayed back.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿಂದ ಏಕೆ ಓಡಿ ಬಂದಿರಿ?

ಶ್ರೀ ಧರ್ಮಸಿಂಗ್ : ಏಕೆ ಓಡಿ ಬಂದಿರಿ ಎಂದು ಕೇಳಿದಿರಿ. 5ನೇ ತಾರೀಖಿನ ದಿವಸದ ಸಭೆಯಲ್ಲಿ ನಾವೂ ಇದ್ದೆವು, ತಾವೂ ಇದ್ದಿರಿ. ನಾವು ಮುಖ್ಯಮಂತ್ರಿಗಳಿಗೆ ಏನು ಹೇಳಿದೆವು ಎಂದರೆ, ತಮಿಳುನಾಡಿನಲ್ಲಿರತಕ್ಕಂಥ ಸಮಸ್ಯೆ ತಮಗಿಲ್ಲ. ಕರುಣಾನಿಧಿ ಏನಾದರೂ ತೀರ್ಮಾನ ತೆಗೆದುಕೊಂಡರೆ Jayalalitha will oppose Karunanidhi. ಈ ಕಾವೇರಿ ವಿಷಯದಲ್ಲಿ ಕರ್ನಾಟಕದ ಎಲ್ಲಾ ಪಕ್ಷಗಳೂ ಕೂಡ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ರೀತಿಯಲ್ಲಿ ತಮಗೆ ಪೂರ್ಣವಾದ ಬೆಂಬಲ ಇದೆ, ತಾವು ಪ್ರಧಾನ ಮಂತ್ರಿಗಳ ಸಭೆಗೆ ಹೋದಾಗ ಬಹಳಷ್ಟು ಧೈರ್ಯದಿಂದ ಇದನ್ನು ಪ್ರತಿಪಾದನೆ ಮಾಡಬೇಕು ಎಂದು ಹೇಳಿದೆವು. ನೀವು ನೋಡಿ, ನಾನು ಯಾವ ರೀತಿಯಾಗಿ ಸಭೆಯಲ್ಲಿ ಗಟ್ಟಿಯಾಗಿ ಪ್ರತಿಪಾದನೆ ಮಾಡುತ್ತೇನೆ ಎನ್ನುವ ಮಾತನ್ನೂ ಕೂಡ ಹೇಳಿದರು. ಇವತ್ತು ಯಡಿಯೂರಪ್ಪನವರನ್ನು ಮತ್ತು ತಮ್ಮನ್ನು ಕೇಳುತ್ತಿದ್ದೇನೆ, ಈ ವಿಷಯ ಎರಡು ಸಲ ಈ ಸದನದಲ್ಲಿ ಚರ್ಚೆಯಾಗಿದೆ, ರೆಸೊಲ್ಯೂಷನ್ ಪಾಸ್ ಆಗಿದೆ. ಏಳು ವರ್ಷಗಳ ಕಾಲ ಎರಡೂ ಸದನದಲ್ಲಿ ಪಾಸ್ ಆಗಿ 205 ಟಿ.ಎಂ.ಸಿ. ನೀರು ತಮಿಳುನಾಡಿಗೆ ಹೋಗಬಾರದು ಎನ್ನುವ ನಿರ್ಣಯದ ಮೇಲೆ ಇವತ್ತು ನೀವು ಯಾವ ಆಧಾರದ ಮೇಲೆ ತೀರ್ಮಾನ ತೆಗೆದುಕೊಂಡಿರಿ. Since prime Minister is heading the authority, psychologically you have created an atmoshere. ಈಗ ಪ್ರಧಾನ ಮಂತ್ರಿಗಳಾಗಿದ್ದಾರೆ, ಸಮಸ್ಯೆ ಬಗೆಹರಿಯುತ್ತದೆ ಎಂದು ತಾವೂ ಕೂಡ ಹೇಳಿದಿರಿ. ತಮ್ಮ ಪ್ರತಿಪಾದನೆ ಏನಿತ್ತು, ಈಗ ಏನಾಗಿದೆ ಎಂದು ಈಗಾಗಲೇ ಮೊಯ್ಲಿಯವರು ಪ್ರಸ್ತಾಪ ಮಾಡಿದ್ದಾರೆ, ಖರ್ಗೆಯವರೂ ಕೂಡ ಪ್ರಸ್ತಾಪ ಮಾಡಿದ್ದಾರೆ. You have betrayed the people of Karnataka and both the Houses. ಕಾವೇರಿ ಜಲಾನಯನ ಪ್ರದೇಶದಲ್ಲಿ ಇರತಕ್ಕಂಥ ಜನರಿಗೆ ಮತ್ತು 11.20 ಲಕ್ಷ ಹೆಕ್ಟೇರ್‌ಗೆ ಇವತ್ತು ಅದು ಮರಣ ಶಾಸನವಾಗಿದೆ. ನಾವು ನಿಮಗೆ ಹೇಳಿದ್ದೆವು. ಆದರೆ ನೀವು ಯಾವ ಹಿನ್ನೆಲೆಯಲ್ಲಿ ತೀರ್ಮಾನ ತೆಗೆದುಕೊಂಡಿರಿ. ಇವತ್ತು ನಿಮಗೆ ಒಂದು ಫೋರ್ಸ್ ಬಂದಿದೆ, ಈ ರೀತಿಯ ತೀರ್ಮಾನವಾಗಿದೆ. ಕರ್ನಾಟಕದ ಜನತೆಗೆ ಈ ಒಂದು ತೀರ್ಮಾನದಿಂದ ಏನು ಲಾಭವಾಗುತ್ತದೆ ಎನ್ನತಕ್ಕಂಥಾದ್ದನ್ನೂ ಕೂಡ ಕರ್ನಾಟಕದ ಜನತೆಗೆ ಹೇಳಬೇಕು. ಎಲ್ಲಾ ರಾಜಕೀಯ ಪಕ್ಷಗಳನ್ನು ಕೂಡ ಕರೆಸಿ ಹೇಳಬೇಕು ಮತ್ತು ಸ್ಪೆಷಲ್ ಸೆಷನ್ ಕರೆದು ಇದರ ಬಗ್ಗೆ ವಿಚಾರ ಮಾಡಬೇಕು ಎನ್ನುವುದು ನಮ್ಮ ಇಚ್ಛೆ. ನಾವು ಯಾರೂ ಓಡಿ ಬಂದಿಲ್ಲ. ನಮ್ಮದು ಒಂದೇ ನಿಲುವು. ಹೈಕಮಾಂಡ್ ಆದೇಶ ಮಾಡಲಿಲ್ಲ. ನರಸಿಂಹರಾಯರು ನಮ್ಮ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ, ಬಂಗಾರಪ್ಪನವರು ಇಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ we have taken a confrontation attitude on that issue. ಇವತ್ತು ಜಸ್ವಂತ್ ಸಿಂಗ್ ಬಂದು ಮೆಡಲ್ ಮಾಡತಕ್ಕಂಥ ರೀತಿಯಲ್ಲಿ ಪೊಲಿಟಿಕಲ್ ಆಗಿ ನಾವು ಹೋಗುವುದಿಲ್ಲ. ಮೊನ್ನೆ 7ನೇ ತಾರೀಖು ಆದಂಥ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ಸರಿಯಾಗಿ ಸ್ಪಷ್ಟವಾಗಿ ಅಭಿಪ್ರಾಯ ಇಟ್ಟಿದ್ದಾರೆ. ಮೆಟ್ಟೂರು ಡ್ಯಾಂನಲ್ಲಿ ಆಗತಕ್ಕಂಥಾದ್ದು ತಮಿಳುನಾಡಿಗೆ ಆಗುತ್ತದೆ, ಸಾಕಷ್ಟು ವ್ಯತ್ಯಾಸವಿದೆ. ನೀವು ಏನೇ ಹೇಳಿ, ನೀರಾವರಿಯ ಬಗ್ಗೆ ಪ್ರತಿಪಾದನೆ ಮಾಡತಕ್ಕಂಥ

ನಾಗೇಗೌಡರು ಇವತ್ತು ಕರ್ನಾಟಕ ರಾಜ್ಯದ ಹಿತರಕ್ಷಣೆ ಮಾಡಲಿಲ್ಲ. ನಿಮ್ಮ ಮುಖ್ಯ ಮಂತ್ರಿಗಳು ಮತ್ತು ಈ ಸರ್ಕಾರ ಇದರಲ್ಲಿ ವಿಫಲವಾಗಿದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆವತ್ತಿನ ದಿವಸ ಯಾರು ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳಾಗಿದ್ದರು ಅವರು ಒಪ್ಪಿಗೆ ಕೊಟ್ಟಿದ್ದಾರೆ, ಅಗ್ರಿಮೆಂಟ್ ಆಯಿತು, ಸಹಿ ಮಾಡಿದ್ದಾರೆ. ಅದನ್ನು ದಯಮಾಡಿ ತರಿಸಿ ರೆಕಾರ್ಡ್‌ಗೆ ಹೋಗಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಟೆಂಡೆನ್ಸ್ ದಸ್ತಕ್ ತೆಗೆದುಕೊಂಡು ಬಂದು, ಅಗ್ರಿಮೆಂಟ್ ದಸ್ತಕ್ ಹಾಕಿರುವುದನ್ನು ಪ್ರೊವೈಡ್ ಮಾಡಿದರೆ, I will file a case against this government. You cannot do it. ನಾನು ಯಾವತ್ತೂ ಅಗ್ರಿಮೆಂಟ್ ದಸ್ತಕ್ ಹಾಕಿದ್ದೇನೆ? I am sorry, I know you have a criminal conspiracy. What you have done is death warrant against people of Karnataka. We cannot agree with you.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನೀವು ಇಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿ ಅವರ ಜೊತೆ ಸೇರಿಕೊಂಡು ವಾದ ಮಾಡುತ್ತೀರಿ. ಬೇರೆ ಯಾವುದಕ್ಕೂ ಅಲ್ಲ.

ಶ್ರೀ ಎ. ರಾಮದಾಸ್ : ಇಡೀ ರಾಜ್ಯದ ಹಿತರಕ್ಷಣೆಯನ್ನು ನೋಡಬೇಕು, ಪಕ್ಷದ ಹಿತಕ್ಕಾಗಿ ನೀವು ಬದಲಾವಣೆಯಾಗಬಾರದು.

ಶ್ರೀ ಎಂ. ವೀರಪ್ಪ ಮೊಯ್ಲಿ : ಯಾರು ಬದಲಾವಣೆ ಮಾಡಿದ್ದಾರೆ?

ಶ್ರೀ ಧರ್ಮಸಿಂಗ್ : ಇದ್ದಕ್ಕಿದ್ದಂತೆ ಸಿಟ್ಟಿಗೆದ್ದಿದ್ದಾರೆ ಎಂದು ಹೇಳಿದರು. ಇದ್ದಕ್ಕಿದ್ದ ಹಾಗೆ ಸಿಟ್ಟು ಬಂದಿಲ್ಲ. ಸೋನಿಯಾ ಗಾಂಧಿಯವರು ಮತ್ತು ದೇವೇಗೌಡರು ಭೇಟಿಯಾಗಿದ್ದಾರೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದಾಗ ನಾನು ಹೇಳಿದೆ, ಅವರು ಈ ದೇಶದ ಮುಖ್ಯವಾದಂಥ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾರೆ, ಅವರು ಈ ಸಭೆಯಲ್ಲಿಲ್ಲ. ನೀವು ಯಾವಾಗ ದೇವೇಗೌಡರು ಮತ್ತು ಸೋನಿಯಾ ಗಾಂಧಿಯವರು ಭೇಟಿಯಾಗಿದ್ದಾರೆ ಎನ್ನುವ ಮಾತನ್ನು ಎತ್ತಿದಿರಿ, ಅದು ಊಹಾಪೋಹದ ಮಧ್ಯದಲ್ಲಿ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಗೊತ್ತಿಲ್ಲದೇ ಇರುವುದನ್ನು, ನಮಗೆ ಗೊತ್ತಿರುವುದನ್ನು ಹೇಳುತ್ತೇವೆ.

ಶ್ರೀ ಧರ್ಮಸಿಂಗ್ : ನಿನ್ನೆ ಕೂಡ ಹೇಳಿದಿರಿ, ಇವತ್ತು ಕೂಡ ಇದನ್ನು ಪ್ರಸ್ತಾಪ ಮಾಡಿದಾಗ, ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಹೇಳಲೇಬೇಕಾಗುತ್ತದೆ, ನಮ್ಮ ಪಕ್ಷದ ಅಧ್ಯಕ್ಷಿಣಿಯವರ ಹೆಸರನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಸಿಟ್ಟು ಬರುತ್ತದೆ, ಬೇರೆ ಭಾವನೆಯಿಂದ ಅಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಚರ್ಚೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮೊಯ್ಲಿಯವರು ಮಾತನಾಡುತ್ತಿದ್ದಾರೆ, ಅವರಿಗೆ ಅಡ್ಡಿ ಮಾಡಬೇಕು ಎನ್ನುವ ದೃಷ್ಟಿಯಿಂದ ಖಂಡಿತ ಅಲ್ಲ. ವಾಸ್ತವಾಂಶಗಳನ್ನು ತಮ್ಮ ಗಮನಕ್ಕೆ ತಂದರೆ ಸ್ವಲ್ಪ ಸಹಾಯವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಮಾನ್ಯ ಧರ್ಮಸಿಂಗ್ ಅವರೂ ಕೂಡ ಇದ್ದರು, ಮಾನ್ಯ ಖರ್ಗೆಯವರು ಇರಲಿಲ್ಲ, ಅವರು ಅವತ್ತು ವಿದೇಶ ಯಾತ್ರೆಯಲ್ಲಿದ್ದರು, ಉಪನಾಯಕರಾದ ಜಯಚಂದ್ರರವರು ಇದ್ದಾರೆ.

ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ಎರಡು ಅಂಶಗಳನ್ನು ಮಾನ್ಯ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ 1991ರಿಂದ 94ರ ವರೆಗೆ ನಾವು ಇದ್ದಾಗ ರಾಜ್ಯಕ್ಕೆ ಯಾವುದೇ ರೀತಿಯ ಧಕ್ಕೆ ಆಗಲಿಲ್ಲ, ರಾಜ್ಯದ ಹಿತವನ್ನು ಬಹಳಷ್ಟು ಕಾಪಾಡಿಕೊಂಡು ಬಂದಿದ್ದೆವು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಿಜ, ಶ್ರೀ ವಿ.ಸಿ. ಶುಕ್ಲಾ ಅವರು ಬಂದಾಗ ನಾನು ಮತ್ತು ಶ್ರೀ ಮೊಯಿಲಿಯವರು ಕೂಡಿಯೇ ಮಾಡಿ ಒಬ್ಬ ಕೇಂದ್ರ ಮಂತ್ರಿಗಳ ಮೇಲೆ ಅದೇ ಪಕ್ಷದ ಮಂತ್ರಿಗಳು ಹೇಳಿಕೆ ಕೊಡತಕ್ಕಂಥ ಒಂದು ದ್ರಾಷ್ಟ್ಯತೆಯನ್ನು ಮಾಡಿದ್ದು ನಿಜ. ಆದರೆ ಅದರ ಪ್ರತಿಫಲ ಏನಾಯಿತು? ಕಾವೇರಿ ನದಿ ನೀರಿನ ವಿಚಾರದ ಬಗ್ಗೆ ಶ್ರೀ ವಿ.ಪಿ. ಸಿಂಗ್‌ರ ಕಾಲದಲ್ಲಿ ಟ್ರಿಬ್ಯುನಲ್ ಆಯಿತು ಎಂದು ಮಾನ್ಯ ಮೊಯ್ಲಿಯವರು ತಮ್ಮ ಭಾಷಣದಲ್ಲಿ ಹೇಳಿದರು. ಆ ಟ್ರಬ್ಯೂನಲ್ ಗೆಜೆಟ್ ನೋಟಿಫಿಕೇಷನ್ ಆಗಿ ಶ್ರೀ ಪಿ.ವಿ. ನರಸಿಂಹರಾಯರ ಕಾಲದಲ್ಲಿ ಮಾಡಿದರು. ಆ ಗೆಜೆಟ್ ನೋಟಿಫಿಕೇಷನ್ ಆಗದೇ ಹೋಗಿದ್ದರೆ ಈ ಆ್ಯಕ್ಟ್ ಯಾವುದೂ ಜಾರಿಗೆ ಬರುತ್ತಿರಲಿಲ್ಲ. ಅವೆಲ್ಲವನ್ನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಮೊನ್ನೆ ಆದಂಥ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ವಿಚಾರ ಬಂದಾಗ ಅಂತಿಮವಾಗಿ ಸುಪ್ರೀಂ ಕೋರ್ಟ್ ತಮಿಳುನಾಡಿನ ದಾವೆಯನ್ನು ತೆಗೆದುಕೊಳ್ಳುವಂಥ ವಿಚಾರ ಬಂದಾಗ ಮಾನ್ಯ ಪ್ರಧಾನಮಂತ್ರಿಗಳು ಕರೆದಂಥ ಹಿನ್ನೆಲೆಯೊಳಗೆ ಈ ಮೀಟಿಂಗ್‌ಗೆ ಎಲ್ಲರೂ ಅಟೆಂಡ್ ಆಗಿದ್ದರು. ನಾವು ಬೇಕೆಂತಲೇ ಬೆಂಗಳೂರಿನಲ್ಲಿ ಮೀಟಿಂಗ್ ಕರೆಯಲಿಲ್ಲ. ನಾವು ದೆಹಲಿಯಲ್ಲಿ 4, 5, 6, ಮತ್ತು 7 ರಂದು ಪ್ರತಿಯೊಂದು ಹಂತಹಂತದಲ್ಲಿ ಆ ಮೀಟಿಂಗ್‌ನಲ್ಲಿ ಈಶ್ವರಪ್ಪನವರು, ಶ್ರೀ ಎಸ್.ಎಂ. ಕೃಷ್ಣ ಅವರು, ಶ್ರೀ ರಾಜಶೇಖರ ಮೂರ್ತಿಯವರು, ಶ್ರೀ ವೀರಪ್ಪ ಮೊಯಿಲ್ಲಿಯವರು, ಶ್ರೀ ಧರ್ಮಸಿಂಗ್‌ರವರು ಮೀಟಿಂಗ್‌ನಲ್ಲಿ ಇದ್ದರು. ನಂತರ ಶ್ರೀ ಹೆಚ್.ಕೆ. ಪಾಟೀಲರು ಅಲ್ಲಿಗೆ ಬಂದರು. ಪ್ರತಿಯೊಂದು ಅಂಶವನ್ನು ಅವರಿಗೆ ತಿಳಿಸಿಕೊಟ್ಟಿದ್ದೇವೆ. 1) ಕಾವೇರಿ ಪ್ರಾಧಿಕಾರವನ್ನು ಮಾಡುವುದಕ್ಕೆ ತಮ್ಮ ಒಪ್ಪಿಗೆ ಇದೆಯೇ ಎಂದು ಶ್ರೀ ಸಿದ್ದರಾಮಯ್ಯನವರು ಓದಿ ಹೇಳಿದರು. ಆಗ ಎಲ್ಲರೂ 'ಒಪ್ಪಿಗೆ' ಇದೆ ಎಂದು ಹೇಳಿದರು. ಈ ಪ್ರಾಧಿಕಾರದ ಅಧ್ಯಕ್ಷತೆಯನ್ನು ಪ್ರಧಾನಿಯವರು ವಹಿಸಬಹುದೇ ಎಂದು ಕೇಳಿದ್ದಕ್ಕೆ 'ಯಸ್'ಎಂದು ಹೇಳಿದರು. ಮಾನಿಟರಿಂಗ್ ಕಮಿಟಿ ಮಾಡಬಹುದೇ ಎಂದು ಕೇಳಿದಾಗ, ಆವಾಗ ಶ್ರೀ ವೀರಪ್ಪ ಮೊಯಿಲಿಯವರು "Monitoring Committee should not be an independent committee. It should assist the Authority".ಎಂದು ಹೇಳಿದರು. ನಾವು ಸುಮಾರು ಒಂದು ಗಂಟೆಗಳ ಕಾಲ ಮಾನ್ಯ ಪ್ರಧಾನಿಯವರ ಮುಂದೆ ಮಾನಿಟರಿಂಗ್ ಕಮೀಟಿ ರೋಲ್ ಅಂಡ್ ಫಂಕ್ಷನ್ಸ್ ಬಗ್ಗೆ ಚರ್ಚೆ ಮಾಡಿ, ಮಾನಿಟರಿಂಗ್ ಕಮಿಟಿ ಕೇವಲ ಅಥಾರಿಟಿಗೆ ಅಸಿಸ್ಟ್ ಮಾಡುವುದಕ್ಕೆ ಇರಬೇಕೇ

ವಿನಃ ಅದಕ್ಕೆ ಪವರ್ ಅಂಡ್ ಫಂಕ್ಷನ್ಸ್ ಇಂಡಿಪೆಂಡೆಂಟ್ ಆಗಿ ಇರಕೂಡದು ಎನ್ನತಕ್ಕಂಥ ವಾದವನ್ನು ಒಪ್ಪಿಸಿ ಜಯಗಳಿಸಿಕೊಂಡದ್ದು ಶ್ರೀ ಮೊಯಿಲಿಯವರ ಸಲಹೆಯಿಂದ ಮತ್ತು ಅದನ್ನು ಶ್ರೀ ಮೊಯಿಲಿಯವರಿಗೆ, ಶ್ರೀ ಎಸ್.ಎಂ. ಕೃಷ್ಣರವರಿಗೆ ಮತ್ತು ಶ್ರೀ ರಾಜಶೇಖರ ಮೂರ್ತಿಯವರಿಗೆ ನಾವು ತಿಳಿಸಿದ್ದೇವೆ. ಸ್ಟಾಟ್ಯೂಟರಿ ಅಥಾರಿಟಿಯನ್ನು ಸೆಕ್ಷನ್ 6(ಎ) ಕೆಳಗಡೆ ಮಾಡಕೂಡದೆಂದು ಶ್ರೀ ಮೊಯಿಲಿಯವರು ತಮ್ಮ ಭಾಷಣದಲ್ಲಿ ಹೇಳಿದರು. ಆ ಅಥಾರಿಟಿ ಬಿಟ್ಟು ಬೇರೆ ಸಲಹೆ ಏನಾದರೂ ಇದೆಯಾ ಎಂದು ಕೇಳಿದಾಗ ' ಅಥಾರಿಟಿ ದಿ ಬೆಸ್ಟ್' ಎಂದು ಹೇಳಿದರು. ಮಾನಿಟರಿಂಗ್ ಕಮಿಟಿ ದಿ ಬೆಸ್' ಎಂದು ಹೇಳಿದರು. ಮಾನ್ಯ ಸಿದ್ದರಾಮಯ್ಯನವರು, ಶ್ರೀ ನಾಣಯ್ಯನವರು ಮತ್ತು ನಾನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಶ್ರೀ ಕರುಣಾನಿಧಿಯವರಿಗೆ 'ಆ ಏರಿಯಾ ರಿಸ್ಟ್ರಿಕ್ಷನ್ಸ್ ಏನಾದರೂ ನೀವು ಮಾಡಿದರೆ ನಾವು ಯಾವುದಕ್ಕೂ ಒಪ್ಪುವುದಿಲ್ಲ ಎನ್ನುವಂಥ ಮಾತನ್ನು ಹೇಳಿದ್ದೇವೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಈಗ ಮಾನಿಟರಿಂಗ್ ಕಮಿಟಿಯಲ್ಲಿ, ಮುಖ್ಯ ಕಾರ್ಯದರ್ಶಿಗಳ ಕಮಿಟಿಯಲ್ಲಿ ಏರಿಯಾ ಆಫ್ ರಿಸ್ಟ್ರಿಕ್ಷನ್ಸ್ ಬಂದಿದೆ ಎಂದು ತಾವು ಹೇಳಿದಿರಿ. ನನಗೆ ಅನುಮಾನ ಆಗಿ ಇಲ್ಲಿ ಪ್ರೊಸೀಡಿಂಗ್ಸನ್ನು ನಾನು ತರಿಸಿ ನೋಡಿದೆ, ಇದರಲ್ಲಿ ತಾವು ಹೇಳಿದ್ದು ಇಲ್ಲ. ತಮಿಳುನಾಡಿನರವು 11.2 ಲಕ್ಷ ಹೆಕ್ಟೇರ್ ವಿಚಾರದಲ್ಲಿ ಇಲ್ಲಿಯವರೆಗೆ ಎಲ್ಲೂ ಚಕಾರವೆತ್ತಿಲ್ಲ. ನೀವು ಕಾಂಗ್ರೆಸ್‌ನವರು ಚಕಾರವೆತ್ತುತ್ತಿರುವುದೇ ಹೊರತು ತಮಿಳುನಾಡಿನವರು ಅದರ ಪ್ರಸ್ತಾಪ ಮಾಡಿಲ್ಲ. ಇಲ್ಲಿ 205 ಟಿಎಂಸಿ ನೀರು ಬಿಡತಕ್ಕಂಥದ್ದು ಮೇನ್ ಇಶ್ಯೂಸ್ ಆಗಿದೆ. ನಾವು ತಮಿಳುನಾಡಿಗೆ ವಾರ್ಷಿಕ 205 ಟಿಎಂಸಿ ನೀರನ್ನು ಬಿಡುತ್ತೇವೆ ಎಂಬುದನ್ನು ಒಪ್ಪಿಕೊಂಡದ್ದು ಬಿಟ್ಟರೆ, ನೀರು ಇಲ್ಲದೆ ಡಿಸ್ಟ್ರೆಸ್ ಆದಾಗ ಇನ್ನು ಮುಂದೆ ಚರ್ಚೆ ಮಾಡಬೇಕು ಎಂಬುದು ಬಿಟ್ಟರೆ ಬಹುಶಃ ಯಾವ ಪ್ರಧಾನಮಂತ್ರಿಗಳು ಇದ್ದರೂ ಇದನ್ನು ಬಗೆಹರಿಸುವುದಕ್ಕೆ ಆಗುತ್ತಿರಲಿಲ್ಲ. I should congratulate Mr. Vajpayee on behalf of Karnataka. It is a real fact. ನಾವು ಕಳೆದ 20 ವರ್ಷ ಕಾವೇರಿ ವಿಚಾರದ ಬಗ್ಗೆ ಹೋರಾಟ ಮಾಡಿದ್ದೇವೆ. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಸರ್ಕಾರಗಳು ಏನೇನು ಮಾಡಿವೆ ಎಂಬುದನ್ನು ನೋಡಿದ್ದೇವೆ. ಆದ್ದರಿಂದ ಇದು ಇಡೀ ಭಾರತ ದೇಶದ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್‌ನಲ್ಲಿ ಚರಿತ್ರಾರ್ಹ ಬೆಳವಣಿಗೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರೆ, ಇಂಟರಿಮ್ ಆರ್ಡರನ್ನು ನೀವು ಓದಿ ನೋಡಿ. ಅದರಲ್ಲಿ 11.2 ಲಕ್ಷ ಹೆಕ್ಟೇರ್ ಮತ್ತು ಬೇರೆ ಯಾವುದೇ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬಾರದು ಎಂದು ಅದರಲ್ಲೆ ಇರುವುದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಇಂಟೆರಿಮ್ ಆರ್ಡರ್ ಮತ್ತು ಸಬ್‌ಸಿಕ್ವೆಂಟ್ ಆರ್ಡರ್ ವಿಚಾರ ಬಂದಾಗ ನಮ್ಮ ಸ್ಟೇಟ್‌ನ ನಾಯಕರು ಇನ್‌ಕ್ಲೂಡಿಂಗ್ ಚೀಫ್‌ಮಿನಿಸ್ಟರ್ ಪ್ರಧಾನ ಮಂತ್ರಿಯವರಿಗೆ, ಕಮಿಟಿಗೆ ಹೇಳಿದ್ದೇವೆ. ಇಲ್ಲಿಯವರೆಗೆ ಆ ವಿಚಾರ ಪ್ರಸ್ತಾಪ ಆಗಿಲ್ಲ. ಮಾನಿಟರಿಂಗ್ ಕಮೀಟಿಲ್ಲಿ, ಫಸ್ಟ್ ಮೀಟಿಂಗ್‌ನಲ್ಲಿ, ಅಥಾರಿಟಿ ಮೀಟಿಂಗ್‌ನಲ್ಲಿ ಆ ವಿಚಾರ ಪ್ರಸ್ತಾಪವಾಗಿಲ್ಲ. ಆದರೆ ಇವರು ಆ ಪಾಯಿಂಟನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಪ್ರತಿಯೊಂದು ಹಂತದಲ್ಲಿ ಇವರು ಒಪ್ಪಿಕೊಂಡು ಬಂದರು, ಎಲ್ಲರೂ ಕೂಡ ಸಲಹೆಗಳನ್ನು ಕೊಟ್ಟರು, ಎಲ್ಲರೂ ಕೂಡ ತೆಗೆದುಕೊಂಡಿರುವ ಡಿಸಿಷನ್ ಬಗ್ಗೆ ಅಪ್ರೀಶಿಯೇಟ್ ಮಾಡಿದರು, ಎಲ್ಲರೂ ನಮಗೆ ದೆಹಲಿಯಲ್ಲಿ ಕಂಗ್ರಾಜ್ಯುಲೇಟ್ ಮಾಡಿದರು. ನಂತರ ಬೆಂಗಳೂರಿಗೆ ಬಂದು ನಾಟಕ, ರಾಜಕೀಯವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು.

ಶ್ರೀ ಧರ್ಮಸಿಂಗ್ : ಈ ರಾಜಕೀಯ ಯಾರೂ ಮಾಡಿಲ್ಲ. ನಾವು ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಜೊತೆಗೂಡಿ ನೀವು ರಾಜಕೀಯ ಮಾಡಿದ್ದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯದ ಹಿತ ಕಾಪಾಡುವ ಇವರ ಶೈಲಿ ಹೇಗಿದೆಯೆಂದರೆ ದೆಹಲಿಯಲ್ಲಿ ಕಾವೇರಿ ವಿಚಾರಧ ಬಗ್ಗೆ ನಡೆದ ಮೀಟಿಂಗ್‌ನಲ್ಲಿ ಇವರು ಒಪ್ಪಿಕೊಂಡು ಬಂದು ಇಲ್ಲಿ ಚಳುವಳಿಗೆ ಕರೆಕೊಟ್ಟರು.ಆದರೆ ರಾಜ್ಯದ ಜನತೆ ನಮ್ಮ ಕೈ ಬಿಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ವಿಚಾರದ ಬಗ್ಗೆ ಸರ್ಕಾರದವರು ಲೋಪ ಮಾಡಿದ್ದಾರೆ. ಮಾನ್ಯ ನಾಗೇಗೌಡರೆ, ನಿಮಗೆ, ನಿಮ್ಮ ಸರ್ಕಾರಕ್ಕೆ ಕಾವೇರಿ ಬಗ್ಗೆ ಏನು ಹೇಳುವುದಕ್ಕೂ ಅಧಿಕಾರ ಇಲ್ಲ. ಕಾವೇರಿ ವಿಚಾರದ ಬಗ್ಗೆ ಈ ಸದನದಲ್ಲಿ ಏನೇನು ನಿರ್ಣಯ ಆಯಿತು, ಆ ನಿರ್ಣಯಕ್ಕೆ ಸರ್ಕಾರ ಬೆಲೆ ಕೊಡಲಿಲ್ಲ. ಈ ಸದನವನ್ನು ಬಹಳ ಬೇಜವಾಬ್ದಾರಿತನದಿಂದ ನಡೆಸಿಕೊಂಡಿದ್ದಾರೆ. ಕಾವೇರಿ ಪ್ರಾಧಿಕಾರದ ರಚನೆ ಮಾಡುವುದಕ್ಕೆ ಮುಂಚೆ ಸರ್ಕಾರದವರು ಜವಾಬ್ದಾರಿಯಿಂದ ತುರ್ತು ಸದನವನ್ನು ಕರೆಯಬೇಕಿತ್ತು. ಆದರೆ ಸರ್ಕಾರದವರು ತುರ್ತು ಸದನ ಕರೆಯಲಿಲ್ಲ. ಸರ್ಕಾರ ನಡೆಸುವವರೇ ತೀರ್ಮಾನ ತೆಗೆದುಕೊಂಡಿದ್ದಾರೆ. ಮತ್ತು ಇವರು ತಮಿಳುನಾಡಿಗೆ ಹೋಗಿ ಅಲ್ಲಿಂದ ದೆಹಲಿಗೆ ಚರ್ಚೆಗೆ ಹೋದರು. ಎಲ್ಲಾ ತೀರ್ಮಾನಗಳು ಯಾರಿಗೂ ಗೊತ್ತಿಲ್ಲದೆ ಗೋಪ್ಯವಾಗಿ ನಡೆದಿರುವಂಥದ್ದು ಆಗಿದೆ. ಈ ಪ್ರಾಧಿಕಾರ ರಚನೆ ಮಾಡಿ ಅದರಲ್ಲಿ ಬಿಜೆಪಿಯವರು ಮತ್ತು ದಳದವರು ಹೊಂದಿಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶ್ರೀ ವಾಟಾಳ್ ನಾಗರಾಜ್‌ರವರಿಗೆ ಹೋರಾಟ ಮಾಡುವುದಕ್ಕೆ ಈ ಇಶ್ಯೂ ಇರುತ್ತಿತ್ತು. ಈಗ ಈ ಇಶ್ಯೂ ಕೂಡ ಇಲ್ಲದ ಹಾಗೆ ಮಾನ್ಯ ಪ್ರಧಾನಿಯವರು ಮಾಡಿಬಿಟ್ಟಿದ್ದಾರೆ. ಅದಕ್ಕೋಸ್ಕರ ಈಗ ವಾಟಾಳ್‌ರವರು ಸಂಕಟ ಪಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನಗೆ ಜ್ಞಾಪಕ ಇರುವ ಹಾಗೆ ಶ್ರೀ ಯಡಿಯೂರಪ್ಪನವರು ಹೇಳಿದ ಒಂದೇ ಒಂದು ವಾಕ್ಯವನ್ನು ನಾನು ಈಗ ನೆನಪಿಸಿಕೊಳ್ಳುತ್ತೇನೆ. ಅದೇನೆಂದರೆ - ರಕ್ತ ಬೇಕಾದರೆ ಕೊಟ್ಟೇವು, ನೀರು ಕೊಡುವುದಿಲ್ಲ' ಎಂದು ಹೇಳಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಆ ರೀತಿ ಹೇಳಲಿಲ್ಲ. ಕಾವೇರಿ ನೀರಿನ ಹಂಚಿಕೆ ಬಗ್ಗೆ ನ್ಯಾಯಬದ್ಧವಾಗಿ ಆಗಬೇಕು ಎಂದು ಹೇಳಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಮಿಳುನಾಡಿನ ಮುಖ್ಯಮಂತ್ರಿಗಳು, ಮಾನ್ಯ ನಾಗೇಗೌಡರು ಹೀಗೆ ಎಲ್ಲರೂ ಕೂಡಿ ಮಾನ್ಯ ಪ್ರಧಾನಮಂತ್ರಿಯವರ ಹತ್ತಿರ ಹೋಗಿ ಒಪ್ಪಿಕೊಂಡು ಬಂದಿದ್ದಾರೆ ಅಲ್ಲವೇ ? ತಮಿಳುನಾಡಿನ ಮುಖ್ಯಮಂತ್ರಿಯವರು ಏನೇನು ಕೇಳಿದರು ಅವೆಲ್ಲಕ್ಕೂ ಇವರು ಆಯಿತು ಎಂದು ಒಪ್ಪಿಕೊಂಡಿದ್ದಾರೆ. ನೀವು ಏನು ಕ್ಲಿಯರ್ ಮಾಡಿಕೊಂಡು ಬಂದಿದ್ದೀರಿ ಎಂಬುದನ್ನು ಹೇಳಿ ಎಂದು ಮಾನ್ಯ ನಾಗೇಗೌಡರನ್ನು ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಎರಡೇ ಎರಡು ವಿಚಾರ ಒಪ್ಪಿಕೊಂಡು ಬಂದಿದ್ದೇವೆ. ಮಳೆ ಬಂದು ನೀರು ಇದ್ದರೆ ನೀರು ಬಿಡುತ್ತೇವೆ. ಮಳೆ ಇಲ್ಲದೆ ನೀರಿಲ್ಲ, ಇಲ್ಲ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಶ್ರೀ ನಾಗೇಗೌಡರು ಅಲ್ಲಿ ಆ ತರಹ ಮಾತನಾಡಿಲ್ಲ. ನಾಗೇಗೌಡರೆ, ನೀವು ಹೃದಯ ಬಿಚ್ಚಿ ಪ್ರಾಮಾಣಿಕವಾಗಿ ಮಾತನಾಡಬೇಕು. ಹಿಂದೆ ತಾವು ಕರ್ನಾಟಕ ಭವನದಲ್ಲಿ ಪಟ್ಟಂಥ ನೋವು, ಹಿಂದೆ ಶ್ರೀಮಾನ್ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಕೇಂದ್ರಸರ್ಕಾರದಲ್ಲಿ ಪ್ರಧಾನಮಂತ್ರಿಯಾಗಿದ್ದ ಶ್ರೀ ಪಿ.ವಿ. ನರಸಿಂಹರಾವ್‌ರವರು ಕರೆದು ಮಾತನಾಡಿದಾಗ, 5ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುತ್ತೇವೆಂದು ಹೇಳಿದಾಗ, ನಿಮ್ಮ ನೋವು ಎಷ್ಟು ಇತ್ತು ಎನ್ನುವುದು ತಿಳಿದಿದೆ. ಆದರೆ ಈಗ ಆ ರೀತಿಯ ನೋವು ಇದೆಯೇ ಎಂಬುದನ್ನು ತಾವು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ ಎರಡು ಸಮಸ್ಯೆ ಬಗೆಹರಿಯಿತು. ಮಾತುಕತೆ ಮುರಿದು ಹೋದನಂತರ ಯಾವಾಗ ತಮಿಳುನಾಡು ಆ ವಿಚಾರದ ಬಗ್ಗೆ ಸುಪ್ರೀಂಕೋರ್ಟಿಗೆ ಅಪ್ರೋಚ್ ಮಾಡಿತು, ಸುಪ್ರೀಂಕೋರ್ಟ್ ಅದನ್ನು ಡಿಸ್‌ಮಿಸ್ ಮಾಡಿತು. ಅಲ್ಲಿಂದ ಮುಂದೆ ಕಾವೇರಿ ವಿಚಾರದ ಬಗ್ಗೆ ಮುಂದೆ ಬರಬೇಕಾಯಿತು. ಆ ಸಂದರ್ಭದಲ್ಲಿ ನೀರು ಇದ್ದರೆ ನೀರು ಬಿಟ್ಟುಕೊಡುತ್ತೇವೆ, ನೀರು ಇಲ್ಲ ಎಂದರೆ ನೀರು ಬಿಡುವುದಿಲ್ಲ ಎಂದು ಹೇಳುತ್ತೇವೆ, ಡಿಸ್ಟ್ರೆಸ್ ಬಂದರೆ ಚರ್ಚೆ ಮಾಡುತ್ತೇವೆ, ಯಾವುದೇ ಏರಿಯಾ ರಿಸ್ಟ್ರಿಕ್ಷನ್ಸ್ ಇಲ್ಲ, ಇದು ಒಂದು ಹಿಸ್ಟೋರಿಕಲ್ ಡಿಸಿಷನ್ ಎಂದು ನಾನು ಹೇಳಿದೆ. ಇಡೀ ಭಾರತ ದೇಶದಲ್ಲಿರುವ ನದಿ ನೀರಿನ ಹಂಚಿಕೆಯ ವಿವಾದಗಳನ್ನು ಬಗೆಹರಿಸಲು ನಾಲ್ಕು ಪ್ರಾಧಿಕಾರ ಮಾಡಿ ಅದಕ್ಕೆ ಮಾನ್ಯ ಪ್ರಧಾನಮಂತ್ರಿಗಳು ಅಧ್ಯಕ್ಷರಾಗಿ 'ನಾನು ನೀರಗಂಟಿ ಕೆಲಸ ಮಾಡುತ್ತೇನೆಂದು ಹೇಳಿದ್ದಾರೆ' ಅದೇ ಚಾರಿತ್ರಾರ್ಹವಾಗಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗೇಗೌಡರು ಮಾತನಾಡುತ್ತಾ 'ನಮಗೆ ಏರಿಯಾ ರಿಸ್ಟ್ರಿಕ್ಷನ್ಸ್ ಇಲ್ಲವೆಂದು' ಹೇಳಿದರು. Don't-misguide the House you have agreed for area restriction. Don't misguide the House. Otherwise, you will have to face the privilege motion.

4.40 ಪಿ.ಎಂ

ಶ್ರೀ ಕೆ.ಎನ್. ನಾಗೇಗೌಡ : ಹತ್ತು ಸಾರಿಯಲ್ಲ, ನೂರು ಸಾರಿ ಹೇಳುತ್ತೇನೆ. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ನಾನು ಮತ್ತು ಕಾನೂನು ಮಂತ್ರಿಗಳು ನಾಲ್ಕೂ ಜನರು ಪ್ರಾರಂಭದಿಂದ ಇಲ್ಲಿಯವರೆಗೂ ಏರಿಯಾ ರಿಸ್ಟ್ರಿಕ್ಷನ್‌ಗೆ ಅವರು ಒಪ್ಪಿದರೆ, ನಾವು ಯಾವುದಕ್ಕೂ ಒಪ್ಪಿಕೊಳ್ಳುವುದಿಲ್ಲವೆಂಬ ಮಾತನ್ನು ಪ್ರಧಾನಿಯವರಿಗೆ ಸ್ಪಷ್ಟ ಮಾಡಿದ್ದೇವೆ. ಅದರ ಮೇಲೆ, ಇವರು ರಾಜಕೀಯ ಮಾಡಬೇಕೆಂದಿದ್ದರೆ, ಮಾಡಿಕೊಂಡು ಹೋಗಲಿ, ತೊಂದರೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಇಂಟರಿಂ ಅವಾರ್ಡನ್ನೂ ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಅಥಾರಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ನೀವು ಮತ್ತೊಂದು ಅವಾರ್ಡನ್ನು ಮಾಡುವುದಕಲ್ಲ. 11.25ಲಕ್ಷ ಎಕರೆಯನ್ನು ಮಾಡುವುದಕ್ಕೆ ಬರುವುದಿಲ್ಲವೆಂದರೆ, ಮತ್ತೊಂದು ಅವಾರ್ಡನ್ನು ಮಾಡಬೇಕು. ನಿಮಗೆ ಅವಾರ್ಡ್ ಮಾಡುವ ಅಧಿಕಾರವನ್ನು ಕೊಟ್ಟಿಲ್ಲ. ಈ ಎರಡೇ ಪಾಯಿಂಟು ಆ ಇಂಟರಿಂ ಆರ್ಡರ್‌ನಲ್ಲಿರುವುದು.

ಶ್ರೀ ಕೆ.ಎನ್. ನಾಗೇಗೌಡ : ಅದನ್ನು ನಾನು ಸ್ಪಷ್ಟವಾಗಿ ಹೇಳಿದ್ದು. ಇಂಟರಿಂ ಆರ್ಡರ್ ಮಾಡುವ ಕಾಲದಲ್ಲಿ ಇರುವ ಎರಡು ವಿಷಯಗಳು ಚರ್ಚೆಗೆ ಬಂದಾಗ, ಒಂದೇ ಒಂದು ವಿಚಾರವನ್ನು ಒಪ್ಪಿಕೊಂಡಿದ್ದೇವೆಯೋ ವಿನಃ ಮತ್ತೊಂದು ವಿಚಾರವನ್ನು ನಾವು ಒಪ್ಪಿಕೊಂಡಿಲ್ಲ.

SRI D.R. PATIL : It must be reduced into writing ಎಲ್ಲಿದೆ ತೋರಿಸಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಗೇಗೌಡರು ಬಹಳ ಜೋರು ಜೋರಾಗಿ ಮಾತನಾಡಿ, ನಮ್ಮಿಂದ ಏನೋ ದೊಡ್ಡ ತಪ್ಪಾಗಿ, ಇವರೆಲ್ಲಾ ಸರಿಪಡಿಸಿದ್ದಾರೆಂದು ಹೇಳುತ್ತಿದ್ದಾರೆ."The Tribunal passed an interim order on 25-6-1991 on the application of Tamil Nadu seeking injunction on Karnataka Projects and seeking regulated releases at Mettúr. The Tribunal directed Karnataka a) to release water from its reservoirs so as to ensure 205 TMC of water at Mettur in a particular year from June to May b) not to exceed its area under irrigation beyond its existing 11.20 Lakh acres c) The Tribunal had directed that Regulation of flow shall be on a monthly Schedule to be given in four weekly equal instalments. The deficiency in any week to be made good in the subsequent week. "This is the interim order. ಇಂಪ್ಲಿಮೆಂಟ್ ಮಾಡುತ್ತೇವೆಂದು ಒಪ್ಪಿಕೊಂಡು ಬಂದ ಇವರು,11.2ಲಕ್ಷಕ್ಕಿಂತಲೂ ಜಾಸ್ತಿ ನಾವು ಒಪ್ಪಿಕೊಂಡಿಲ್ಲವೆಂದು ಹೇಳಿದರೆ, ಇಂಟರಿಮ್ ಆರ್ಡರ್‌ನಲ್ಲೇನಿದೆ? ಸದನದಲ್ಲಿ ಈ ವಿಷಯ ಹೇಳಿದ್ದಾರೆ.

(Interruptions)

SRI K.N. NAGEGOWDA : I am sorry; if you don't believe my words I cannot help it. word by word. 205 ಟಿಎಂಸಿ ಬಗ್ಗೆ ವಿಷಯ ಬಂತು. ನಾವು ಅಗ್ರೀಡ್ ಎಂದೆವು. ಬಿಳಗೊಂಡ್ಲು, ಮೆಟ್ಟೂರು ಬಗ್ಗೆ ವಿಷಯ ಬಂತು.

ಶ್ರೀ ಎಂ. ವೀರಪ್ಪಮೊಯಿಲಿ : ಅದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಮೂರನೆಯದಾಗಿ, ನಾವು ಏರಿಯಾ ರಿಸ್ಟ್ರಿಕ್ಷನ್‌ಗೆ ಒಪ್ಪಿಲ್ಲ, ಜನರ ನೆಮ್ಮದಿ ಕೆಡಿಸಬೇಕೆಂದಿದ್ದರೆ, ಕೆಡಿಸಲಿ. ಈ ಮಾತನ್ನು ನಾನು ನೂರು ಸಾರಿ ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ನೀವು ಒಪ್ಪಿಲ್ಲ ಎನ್ನುವುದು ಎಲ್ಲಿದೆ?

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾವೇರಿ ವಿಚಾರದಲ್ಲಿ ನಿಮ್ಮ ನಿಲುವೇನಿದೆ ಎಂಬುದು ಜನರಿಗೆ ಅರ್ಥವಾಗಿದೆ. ಜನರು ನಿಮ್ಮ ಹಿಂದೆ ಬರುವುದಿಲ್ಲ. ಇದರ ಬಗ್ಗೆ ನಿಮ್ಮ ಚರ್ಚೆ ಅಗತ್ಯವಿಲ್ಲವೆಂಬ ತೀರ್ಮಾನಕ್ಕೆ ಜನರು ಬಂದಿದ್ದಾರೆ.

MR. SPEAKER : Mr. D.R. Patil has raised a very relevant question. ನೀವು ಕರುಣಾನಿಧಿಯವರಿಗೆ ಅವರು ಹೇಳಿದ್ದೆಲ್ಲಾ ಒಪ್ಪಿಕೊಂಡು ಬಂದಿರಿ, ನೀವೇನು ಹೇಳಿ ಅವರು ಒಪ್ಪಿಕೊಂಡರು, ನಿಮಗೇನು ಬೆನಿಫಿಟ್ ಆಗಿದೆ ಎನ್ನುವ ಮಾತನ್ನು ಶ್ರೀ ಡಿ.ಆರ್. ಪಾಟೀಲರು ರೈಸ್ ಮಾಡಿದರು. ಅದಕ್ಕೆ ನೀವು ಎರಡು ಇಷ್ಯೂ ಹೇಳಿದಿರಿ. ಮಳೆ ಇದ್ದಾಗ ಮಾತ್ರ 205ಟಿಎಂಸಿ ನೀರನ್ನು ಬಿಡುತ್ತೇವೆ. I am not telling. ನಿಮ್ಮ ರಿಪ್ಲೈನಲ್ಲಿ ನೀವು, only if surplus water is there ಬಿಡುತ್ತೇವೆ ಎಂದು. ಏರಿಯಾ ಎಂಬುದು, ಎರಡನೆಯದು 11.2ಲಕ್ಷ ಎಕರೆ ಸೀಲಿಂಗ್ ಏನಿದೆ ಅದಕ್ಕೆ ಬೈಂಡಿಂಗ್ ಇಲ್ಲ ಎಂಬ ಮಾತನ್ನು ಹೇಳಿದಿರಿ. ಶ್ರೀ ಖರ್ಗೆಯವರು ಅದಕ್ಕೆ ಪ್ರತ್ಯುತ್ತರವಾಗಿ ಆ ತರಹದ ಒಪ್ಪಂದವೇನಾದರೂ ಆಗಿದ್ದರೆ, that should be a part of the Proceedings. ಅದೆಲ್ಲಾ ಓರಲ್ ಆಗಿ ಆಗುವುದಿಲ್ಲವೆಂಬ ಮಾತನ್ನು ಹೇಳಿದರು. All these things will go into the records. ನಾಳೆ ಯಾರಾದರೂ ಬಂದು ಈ ಕಡತಗಳನ್ನು ತೆಗೆದು ನೋಡಿದಾಗ, I can't be guilty of not conducting the proceedings regularly. Even now I request the Hon'ble Irrigation Minister, what he has said is a part of the proceedings and if such an agreement has been arrived at the time of formation of this, please educate of House. Even now he has the liberty to correct his position. ಏಕೆಂದರೆ, I will have to move privilege ಎಂಬ ಮಾತನ್ನು ಹೇಳಿದರು.

SRI M.P. PRAKASH : All that our Irrigation Minister has submitted to this house was that there was subsequently a clarificatory order. The very fact that the distress formula had been drawn itself goes to show that 205 TMC of water.

MR. SPEAKER : My fervent appeal to the Government is...

(Interruptions)

SRI M.P. PRAKASH : We have not agreed on that.

MR. SPEAKER : My fervent appeal to the begin Government even at this stage is, whatever has been agreed upon, if you have the relevant documentary evidence for that, that would extricate me from the predicament into which I have landed myself as a presiding Officer. If such documentary evidence is not available with the Government, please try to retrace your step, because, it is the Hon'ble Prime Minister of this country who is heading this Tribunal and whatever statements that are made which will form a part of the proceedings would become history for the next generation. Let us be very clear.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವಾಗ ಆರೋಪ ಮಾಡಬೇಕೆಂದರೆ, ನಿಮ್ಮ ಜಲಾಶಯದಲ್ಲಿ ನೀರಿದ್ದಾಗ ಪ್ರಧಾನಮಂತ್ರಿಗಳು ನೀರು ಬಿಡಿ ಎಂದು ಹೇಳಿದರೆಂದು ಹೇಳಿ, ನಾವು ಬರುತ್ತೇವೆ. ಇವತ್ತು ಪ್ರಧಾನಿಯವರ ಮುಂದೆ ಹೋಗಿ ಸಮಸ್ಯೆ ಬಗಹರಿಸಬೇಕು.

(ಗೊಂದಲ)

ಅಧ್ಯಕ್ಷರು : ನೀವು ನನ್ನ ಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಡೆಲ್ಲಿ ಮೀಟಿಂಗ್ ಮುಗಿಸಿಕೊಂಡು ಬಂದು ಹೇಳಿದ್ದೀರಿ, ಸುಮ್ಮನೆ ಇಲ್ಲಿ ಗೊಂದಲ ಮಾಡುತ್ತಾರೆ.

ಅಧ್ಯಕ್ಷರು : ಇಲ್ಲಿ ನಾನು ಪ್ರಿಸೈಡಿಂಗ್ ಆಫೀಸರ್ ಆಗಿ ಕುಳಿತಿದ್ದೇನೆ. I have been observing the whole thing.

ಶ್ರೀ ಡಿ.ಆರ್. ಪಾಟೀಲ್‌ರವರು ಒಂದು ವಿಷಯ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ಮಾನ್ಯ ಮಂತ್ರಿಗಳೂ ಒಂದು ಉತ್ತರ ಹೇಳಿದ್ದಾರೆ. ಅವರು ಮತ್ತೆ ಇದಕ್ಕೆಲ್ಲಾ ಡಾಕ್ಯುಮೆಂಟರಿ ಎವಿಡೆನ್ಸ್ ಇದೆಯೇ, ಇಲ್ಲವಾದರೆ ನಾನು ಪ್ರಿವಿಲೆಜ್ ಮೋಷನ್ ಮೂವ್ ಮಾಡಬೇಕಾಗುತ್ತದೆಂಬ ವಿಷಯ ಪ್ರಸ್ತಾಪಿಸಿದ್ದಾರೆ. ಸರ್ಕಾರಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ, ಅವರು ಹೇಳಿದ ಎರಡು ವಿಚಾರಗಳು ಲಿಖಿತ ಮೂಲಕವಾಗಿ ಇತ್ಯರ್ಥವಾಗಿದ್ದರೆ ಅದನ್ನು ಸದನದ ಮುಂದಿಟ್ಟರೆ ಅಥವಾ ತಿಳುವಳಿಕೆ ಕೊಟ್ಟರೆ ನನಗೆ ಯಾವ ಸಂಶಯವೂ ಇರುವುದಿಲ್ಲ. ಇಲ್ಲದೇ ಹೋದರೆ ಓರಲ್ ಆಗಿ ನಾವು ಮಾತನಾಡಿದ್ದೇವೆ, ನಾವು ನಾಲ್ಕು ಜನ ಹೇಳಿದ್ದೆವು ಎಂದು ಹೇಳುವುದು, ಇದೆಲ್ಲಾ ಕಡತಕ್ಕೆ ಹೋಗುತ್ತದೆ. ನಾಳೆ ಯಾರೋ ಒಬ್ಬರು ಬಂದು ದಾಖಲೆಗಳನ್ನು ವಿಮರ್ಶೆ ಮಾಡಿ ನೋಡಿದಾಗ, ಆ ತರಹದ ದಾಖಲೆಗಳು ಇಲ್ಲಿ

ಇಲ್ಲದಿದ್ದರೆ ಕಷ್ಟವಾಗುತ್ತದೆ. It becomes difficult. ನಾನೂ ಕೂಡ ಈ ರಾಜ್ಯದ ಪ್ರಜೆ ಅಲ್ಲವೇ? ನನ್ನ ಕಷ್ಟದಿಂದ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. You must appreciate my difficulty.

SRI M. VEERAPPA MOILY : We totally agree with you.

SRI K.N. NAGE GOWDA : Give me an opportunity. He has asked certain clarifications.

MR. SPEAKER : In the meanwhile, you can get those papers.

SRI K.N. NAGE GOWDA : I am very confident of giving reply. He has asked certain clarifications.

(Interrupitons)

ಶ್ರೀ ವಾಟಾಳ್ ನಾಗರಾಜ್ : ಒಪ್ಪಂದವೇನಾಯಿತು?

ಅಧ್ಯಕ್ಷರು : ಶ್ರೀ ವೀರಪ್ಪ ಮೊಯಿಲಿಯವರು ಅವರ ಮಾತನ್ನು ಮುಂದುವರಿಸಲಿ. ಅನಂತರ, ತಾವು ಉತ್ತರ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಯಾವಾಗಲೂ ದಾಖಲೆಗಳ ಆಧಾರದಿಂದಲೇ ಮಾತನಾಡುತ್ತೇವೆ. ಈಗ ನಾವು ಹೇಳಿದ ಪ್ರಕಾರ, ಸರ್ಕಾರದ ಅಥವಾ ಮಾನ್ಯ ಮೇಜರ್ ಇರಿಗೇಷನ್ ಮಂತ್ರಿಗಳ ಹತ್ತಿರ ಪ್ರಧಾನಿಗಳು ನೀರು ಇಲ್ಲದಾಗ ಬಿಡುವ ಅವಶ್ಯಕತೆ ಇಲ್ಲ, ಜಾಸ್ತಿ ನೀರಿರುವಾಗ ಮಾತ್ರ ಬಿಟ್ಟರೆ ಸಾಕು, 11.25 ಲಕ್ಷ ಎಕರೆಗೆ ಏರಿಯಾ ಲಿಮಿಟ್ ಇಲ್ಲವೆಂದು ಹೇಳಿರುವ ಬಗ್ಗೆ ಕೇಂದ್ರ ಸರ್ಕಾರದಿಂದ ತಾವು ಕ್ಲಾರಿಫಿಕೇಟರ್ ಆರ್ಡರ್ ಕೊಡಿ. ನಾವು ಪ್ರಧಾನಿಗಳಿಗೂ, ನಿಮಗೂ ಸಲ್ಯೂಟ್ ಮಾಡುತ್ತೇವೆ. ಆಮೇಲೆ, ಪ್ರಧಾನಿಗಳಿಂದ ಅಥವಾ ಪ್ರಾಧಿಕಾರದಿಂದ ಮುಂದಿನ ಮೀಟಿಂಗ್‌ನಲ್ಲಿ ನಿರ್ಣಯ ತೆಗೆದುಕೊಳ್ಳಿ. 1991ರಲ್ಲಿ ಪ್ರಾಧಿಕಾರ ಏನು ಇಂಟರೀಮ್ ಆರ್ಡರ್ ನೀಡಿದೆ, ಅದನ್ನು ಇಂಪ್ಲಿಮೆಂಟ್ ಮಾಡತಕ್ಕದ್ದಲ್ಲ, ಯಾವುದೇ ಶರತ್ತು ಇಲ್ಲ ಎಂಬ ರೆಸಲ್ಯೂಷನ್ ಮಾಡಿ ಇಲ್ಲಿ ತೆಗೆದುಕೊಂಡು ಬನ್ನಿ ನಾವು ಒಪ್ಪಿಕೊಳ್ಳುತ್ತೇವೆ. ಪವರ್ಸ್ ಅಂಡ್ ಫಂಕ್ಷನ್ಸ್ ಆಫ್ ದಿ ಅಥಾರಿಟಿ. ಪ್ರಧಾನಿಗಳ ಅಧ್ಯಕ್ಷತೆಯಲ್ಲಿ ಏನು ಪ್ರಾಧಿಕಾರ ರಚನೆಯಾಗಿದೆ, ಅಲ್ಲಿ ಬಹಳ ಸ್ಪಷ್ಟವಿದೆ.

(1) The Role of the Authority shall be to give effect to. The word used is "Shall``, "Shall be`` to give effect to the implementation of the interim order dated 25-6-1991 of the Tribunal and all its related subsequent orders. The function of the Tribunal Authority is not to give effect to the understanding arrived at between the Chief Minister and the Prime Minister. What happened, what consensus has taken, what discussion has taken place, what agreements

have taken place in the presence of the Chief Minister and the prime minister is not a thing to be given effect to. The word used is " SHALL``.

ಇದು ಆಂಗ್ಲ ಭಾಷೆಯಲ್ಲಿದೆ ಏನು ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಆಮೇಲೆ The Authority shall frame Rules and Regulations for conduct of its business. ಇದು ಬಹಳ ಸ್ಪಷ್ಟವಾಗಿದೆ. ಪ್ರಧಾನ ಮಂತ್ರಿಗಳು ಚೆನ್ನೈಗೆ ಹೋದರು. This is the statement. ``The Hon'ble Prime Minister Atal Bihari Vajpayee on Wednesday allayed the apprehensions that the accord he had forged recently with the four State Chief Ministers on the Cavuery Water sharing problems would affect the interest of the farmers." What is the interest? The interest as envisaged in the interim order. I further would like to quote: "I would like to assure the people of Tamilnadu that their interests have been fully safeguarded. ``Fully Safeguared" in the Cauvery Agreement. People should not have any misgivings on that account, told a press Conference at Raj Bhavan``. ಇದೇ ಭರವಸೆಯನ್ನು ಕರ್ನಾಟಕ್ಕೆ ಬಂದಾಗ ಅಥವಾ ಡೆಲ್ಲಿಯಲ್ಲಿ ಕರ್ನಾಟಕ್ಕೆ ಕೊಡಲಿ ಆಗ ನಾವು ಮಾನ್ಯ ಈಶ್ವರಪ್ಪನವರಿಗೆ ಹಾಗೂ ಮಾನ್ಯ ಯಡಿಯೂರಪ್ಪನವರಿಗೆ ನಾವು ತಲೆ ಬಾಗುತ್ತೇವೆ. Let him give one Statement that he will fully safeguard the interests of Karnataka in the Cauvery Agreement. You get one statement from the Prime Minister, we will bow down.

SRI B.S. YEDIYURAPPA : He will safeguard the interest of not only Karnataka, but of the entire country.

SRI M. VEERAPPA MOILY : He should have told, " to safeguard the interest of the entire country". It is not there, only Tamil Nadu exclusively.

(Interruptions)

ಶ್ರೀ ಎಂ. ವೀರಪ್ಪ ಮೊಯ್ಲಿ : ವಾಟಾಳ್ ನಾಗರಾಜ್‌ರವರೆ, ನೀವೇನು ಇಲ್ಲಿ ಕೆಲವೊಂದು ಬಾರಿ ಇಲ್ಲಿ ಕಾಗದ ಪತ್ರಗಳನ್ನು ಹರಿದು, ಸುಡುತ್ತೀರಲ್ಲಾ, ಈಗ ಆ ಕೆಲಸ ನೀವು ಮಾಡಬೇಕು. ಸದನದಲ್ಲಿ ಸರ್ವಾನುಮತದಿಂದ ಮಾಡಿಕಳುಹಿಸಿದಂಥ ನಿರ್ಣಯವನ್ನು ದಯಮಾಡಿ ನಮಗೆ ವಾಪಸ್ ಕೊಡಿ. It is the privilege of the House. Get back that decision and burn it. ಕರ್ನಾಟಕ ವಿಧಾನ ಸೌಧದ ಇತಿಹಾಸದಲ್ಲಿ ಇದೊಂದು ಘಟನೆ ನಡೆದು ಹೋಗಲಿ. ಸರ್ವಾನುಮತದಿಂದ ಮಾಡಿ ಕಳುಹಿಸಿದಂಥ ನಿರ್ಣಯವನ್ನು ತಮ್ಮ ಅಧ್ಯಕ್ಷತೆಯಲ್ಲಿ ಸರ್ಕಾರದವರು ಚಿಂದಿಮಾಡಿ ಸುಡತಕ್ಕಂಥ ಕೆಲಸ ಮಾಡಿದರೆ ಯಾವ ಸ್ವಾಭಿಮಾನಿಯೂ ಕೂಡ ಈ ಸದನದ ಸದಸ್ಯನಾಗ ಬಯಸುವುದಿಲ್ಲ ಹಾಗೂ ಈ ಸದನದ ಸಭಾಪತಿಗಳಾಗುವುದಕ್ಕೆ ಬಯಸುವುದಿಲ್ಲ. How are you

going to restrain them? ದಯಮಾಡಿ ತಾವು ಇದರ ಬಗ್ಗೆ ಹೇಳಬೇಕಾಗುತ್ತದೆ. How can this Government can flout it outside the House? They could have as well come here, called an emergency meeting. ಅದನ್ನು ರಿಸಿಂಡ್ ಮಾಡಬೇಕು. ಬದಲಾವಣೆ ಮಾಡಬೇಕು. ಮಾಡಿಫೈ ಮಾಡಬೇಕು ಎಂದು ಈ ಸದನದ ಬಗ್ಗೆ ತಮಗೆ ಕಿಂಚಿತ್ತಾದರೂ, ಲವಲೇಶವಾದರೂ, ಆಸಕ್ತಿ ಇಲ್ಲದಿದ್ದರೆ, ಸ್ವಾಭಿಮಾನ ಇಲ್ಲದಿದ್ದರೆ ಬಹುಶಃ ಕರ್ನಾಟಕ ರಾಜ್ಯದ ವಿಧಾನ ಸಭೆಯ ಇತಿಹಾಸದಲ್ಲಿ ಇದು ಪ್ರಥಮ. A Government openly aggressively flouting an unanimous resolution of this House. ಇದಕ್ಕೆ ನಾವು ತಲೆ ಬಾಗಬೇಕೇ? Do you want us to surrender to this vicious interest of the Government? To conspire for political expedience. We cannot agree with this, ಅಧ್ಯಕ್ಷರೆ, ಈಗ ನಾನು ಏನು ಹೇಳುತ್ತೇನೆಂದರೆ, ಸೆಕ್ಷನ್ 6ರ ವಿಚಾರವಾಗಿ ಹೇಳುವುದಾದರೆ, 1992ರಲ್ಲಿ ಪಿ.ವಿ. ನರಸಿಂಹರಾವ್ ಅವರ ಕಾಲದಲ್ಲಿ ಇದು ಗೆಜೆಟ್ ಆಯಿತು. ಆಗ ಇದು ಈ ಕೇಸ್ ಸುಪ್ರೀಂ ಕೋರ್ಟಗೆ ಹೋಯಿತು. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ನಾವು ಇಲ್ಲಿ ಸುಗ್ರೀವಾಜ್ಞೆ ತಂದಿದ್ದೇವೆ, to protect the interest. ಆ ಕೇಸ್ ಸುಪ್ರೀಂ ಕೋರ್ಟ್‌ಗೆ ಹೋದಾಗ ಆಗಿನ ಪ್ರಧಾನಿಮಂತ್ರಿಗಳು ಅದನ್ನು ರೆಫೆರೆನ್ಸ್ ಮಾಡಿದರು. About the ordiannce, implementation of the scheme. ಆಗ ಸುಪ್ರೀಂ ಕೋರ್ಟ್‌ನವರು ಆಫಿಷಿಯಲ್ ಗೆಜೆಟ್‌ನಲ್ಲಿ ಬಂತು."The Government of India shall Gazette``. It was not at the instance of the Solicitor General or Attorney General on behalf of the Government of India. It was a suo moto direction of the Supreme Court of India, not at the instance of Mr. P.V. Narashimha Rao. The constitution Bench has annulled it, said that the ordinance is null and void. I will read section 6 and 6A. ಏಕೆಂದರೆ, ವಾಸ್ತವಿಕತೆಗೆ ದೂರ ಇದೆ. ಸದನದಲ್ಲಿ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡುವಾಗ ಕಾನೂನಿಗೆ ವಿರುದ್ಧವಾಗಿ, ವಾಸ್ತವಿಕತೆಗೆ ವಿರುದ್ಧವಾಗಿ, ಹೇಳಿಕೆ ಕೊಡುವುದಾದರೆ, ಇವತ್ತು ನಾವು ಯಾವ ದಿಕ್ಕಿನಲ್ಲಿ ಈ ಸದನವನ್ನು ತೆಗೆದುಕೊಂಡು ಹೋಗುತ್ತಿದ್ದೇವೆಂದು ನನಗೆ ಬಹಳ ವ್ಯಸನ ಉಂಟಾಗುತ್ತದೆ. Section 6 : Publication of the decision of the Tribunal. "The Central Government shall publish". I repeat, The Central Government shall publish the decision of the Tribunal in the Official Gazette and the decision shall be final and binding on the parties to the dispute. The word used is " Shalll``.

ಆದರೂ ಕೂಡ ಕೇಂದ್ರ ಸರ್ಕಾರದವರು ಸೋಮೋಟಾಗಿ ಮಾಡಲಿಲ್ಲ. It is only after all these things were settled, reference of the President was answered, it was published. Section 6A- is it shall? Is it mandatory? Section 6A is not mandatory. Power to make schemes to implement : ಕೇಂದ್ರ ಸರ್ಕಾರ ಈಗೇನು ಸ್ಕೀಮ್ ಮಾಡಿದೆ, ಸೆಕ್ಷನ್ 6(ಎ) ಪ್ರಕಾರ ಪ್ರಾಧಿಕಾರದಲ್ಲಿ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾಡಿದೆ. I am reading

Thpky - 150

it. "Without prejudice to the provisions of Section 6, the Central Government ``may". In Section (6). the word used is ``shall" twice. not once. In Section 6A, the word used is ``May", by notification in the official Gazette, frame a scheme or schemes whereby provision may be made for all matters necessary to give effect to the decision of the Tribunal". So, it was not mandatory for the Prime Minister or the Government of India to frame Rules under 6A. We gave that warning. I stand by that statement. ಶಾಸನಾತ್ಮಕವಾಗಿ ಪ್ರಾಧಿಕಾರ ಮಾಡಬಾರದು, ಶಾಸನಾತ್ಮಕವಾಗಿ ಪ್ರಾಧಿಕಾರ ಸೆಕ್ಷನ್ 6(ಎ)ರ ಕೆಳಗಡೆ ಒಮ್ಮೆ ಮಾಡಿದರೆ ಅದರಿಂದ ಬರತಕ್ಕಂಥ ಕಾನೂನಿನ ಎಲ್ಲಾ ಸಾಧಕಭಾದಕಗಳನ್ನು ಚಾಚು ತಪ್ಪದೆ ಅನುಷ್ಠಾನ ಮಾಡಬೇಕಾಗುತ್ತದೆ. ನೀವು ಆ ಕಡೆ ಈ ಕಡೆ ಎಂದು ಹೇಳುವುದಕ್ಕಾಗುವುದಿಲ್ಲ, ಅವರೊಂದು, ನೀವೊಂದು ಮಾತನ್ನು ಹೇಳುವುದಕ್ಕಾಗುವುದಿಲ್ಲ. They will only see the letter and spirit of the order. ಇಂಟೀರಿಯಮ್ ಆರ್ಡರ್ ಹೊರತು, ಮಾನ್ಯ ಡಿ.ಆರ್. ಪಾಟೀಲ್ ಹಾಗೂ ತಾವು ಸೂಚನೆ ಕೊಟ್ಟಂತೆ ಇದು ಅನ್ಯಥಾ ಇಂಟರ್‌ಪ್ರಿಟೇಷನ್ ಮಾಡಲು it is not available at all. ಮಾನ್ಯ ನರಸಿಂಹರಾವ್ ಕಾಲದಲ್ಲಿ ಮಾನ್ಯ ಶುಕ್ಲಾ ಅವರು ನೀರಾವರಿ ಸಚಿವರು ಇದ್ದಾಗಲೂ ಕೂಡ they never wanted to invoke section 6A. Please get the records of the Government of India. We will ask some parliament Member to raise this question and get that record. ಏಕೆಂದರೆ ಅವರು ಹೇಳಿದ್ದು ನಾಟ್ ಅಂಡರ್ 6ಎ. ಫಾರ್ಮಲ್ ಆಗಿ ನಾವು ಒಂದು ಅನಧಿಕೃತವಾದಂಥ ಅಥವಾ ಶಾಸನಾತ್ಮಕವಾಗಿ ಅಲ್ಲ, ಒಂದು ರೆಗ್ಯುಲೇಷನ್ ಕಮಿಟಿ ಮಾಡುತ್ತೇವೆಂದು ಹೇಳಿದರೂ ಕೂಡ ನಾವು ಒಪ್ಪಲಿಲ್ಲ, not under section 6A. The proposal with the Government of India was only to negotiate to find certain data. ಈ ಕಮಿಟಿ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಕೇಂದ್ರದಲ್ಲಿದ್ದಂಥ ಕಾಂಗ್ರೆಸ್ ಸರ್ಕಾರ ಯಾವುದೇ ರೀತಿಯ ಶಾಸನಾತ್ಮಕವಾಗಿ ಸಮಿತಿಗಳನ್ನು ಮಾಡತಕ್ಕಂಥ ಪ್ರಸ್ತಾವನೆಯೂ ಇರಲಿಲ್ಲ. Forget about the decision. ಇದು ಏಕೆ ಬೇಕಾಗಿತ್ತು? If the Hon'ble Prime Minister or ಯಾರಾದರೂ ಲಾ ಸೆಕ್ರೆಟರಿ even 6A is not mandatory ಎಂದು ಹೇಳಿದ್ದರೆ ಪ್ರಧಾನ ಮಂತ್ರಿಗಳು ಒಪ್ಪಿಕೊಳ್ಳುತ್ತಿದ್ದರು. ಏಕೆಂದರೆ, ಪ್ರಧಾನ ಮಂತ್ರಿಗಳು, ಅಧ್ಯಕ್ಷರಾಗಿರುವಾಗ ಅವರನ್ನು ಶಾಸನಾತ್ಮಕವಾಗಿ ಬೈಂಡ್ ಮಾಡತಕ್ಕಂಥ ಅವಶ್ಯಕತೆ ಏಕೆ ಬೇಕಿತ್ತು? It is an unprecedented step. Please write down it will totally embarrass the Prime Minister which he never wants, does not want to invite it. But this has happened. ಅವರು ಇದನ್ನು ಬಹಳ ಚೆನ್ನಾಗಿದೆ ಎಂದು ಹೇಳುತ್ತಿರುವುದು ಬಹಳ ವಿಷಾದಪೂರ್ಣವಾಗಿದೆ ಎಂದು ನಾನು ಹೇಳಬೇಕಾಗುತ್ತದೆ. ನನ್ನ ಹತ್ತಿರ ಅನೇಕ ರೆಕಾರ್ಡ್ಸ್ ಇದೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ವಿರೋಧ ಪಕ್ಷದ ನಾಯಕರು, ಪಾರ್ಲಿಮೆಂಟಿನ ಸದಸ್ಯರು, ಎಲ್ಲರೂ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿಯಾದರು. ಒಂದು

ಮೆಮೊರ್‍ಯಾಡಂ ಕಾಪಿ ಕೂಡ ನನ್ನ ಬಳಿ ಇದೆ. ಅದೇ ರೀತಿ Meeting of the Chief Ministers of the Cauvery Basin. ಇದರ ಪ್ರೊಸೀಡಿಂಗ್ಸ್ ಕೂಡ ನನ್ನ ಹತ್ತಿರ ಇದೆ. ಮುಖ್ಯ ಕಾರ್ಯದರ್ಶಿಯವರು ಶಾಸನಾತ್ಮಕವಾಗಿ ಮಾಡುವುದನ್ನು ಒಪ್ಪಬಾರದು ಎಂದು ಕೊನೆಯವರೆವಿಗೂ ಮೀಟಿಂಗ್‌ನಲ್ಲಿ ಹೇಳಿದರು ಕೂಡ Monitoring Committee decisions should be consensus ಆಗ ಬೇಕು ಎಂದು ಹೇಳಿದರು. ಮುಖ್ಯ ಕಾರ್ಯದರ್ಶಿಯವರು, ಜುಲೈ-98ರಲ್ಲಿ ಬಹಳ ಸ್ಪಷ್ಟವಾಗಿ ಏನು ಹೇಳಿದರು ಎಂದರೆ, "under the circumstance, the solution of the implementation of the interim award of protect the interest of the farmers of both the states is to be left to the Basin States which should be sorted out by mutual dialogue. In case a consensus emerges that a machinery is at all necessary for implementation of the interim order, this can be done by forming a small co-ordination Committee``.

With the co-operation of the State as suggested by Karnataka Government while offering views on the draft scheme of the Central Government, he suggested, ಇವತ್ತು ಒಂದು ಚಿಕ್ಕಾಸು ಬೆಲೆ, ಮುಖ್ಯ ಕಾರ್ಯದರ್ಶಿಯವರಿಗೆ, ಮುಖ್ಯಮಂತ್ರಿಯವರಿಗೆ ಅಥವಾ ಪಾರ್ಲಿಮೆಂಟರಿ ಮೆಂಬರ್ಸ್ ಆಗಲಿ ಅಥವಾ ವಿರೋಧ ಪಕ್ಷದವರಿಗಾಗಲಿ ಬರಲಿಲ್ಲ. Ultimately it is Mr. Karunanidhi who succeded in hoisting the flag as against you; I have got those records; if you want you can go through it. ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಿರುವ ಪ್ರಾಧಿಕಾರದಿಂದ ಮಧ್ಯಂತರ ಆದೇಶ ಇಂಪ್ಲಿಮೆಂಟ್ ಆಗತಕ್ಕಂಥ ಪರಿಸ್ಥಿತಿಯಲ್ಲಿದೆ. 1892ನೇ ಇಸವಿಯಲ್ಲಿ ಬ್ರಿಟಿಷರು ಏರಿಯಾ ರಿಸ್ಟ್ರಿಕ್ಷನ್ ಮಾಡಿ, ಇಂತಿಷ್ಟೇ ನೀರನ್ನು ಉಪಯೋಗ ಮಾಡಬೇಕು ಮತ್ತು ಇಂತಿಷ್ಟೇ ನೀರನ್ನು ಮೆಟ್ಟೂರ್‌ಗೆ ಬಿಡಬೇಕೆಂದು ಏನು ಹೇಳಿದ್ದರು, there is no difference at all with this agreement of 1892 and what is agreed to. Am I to say the Government of India as bad as British Government as far as Karnataka people are concerned . I am just telling you. ದಿವಾನರಿಂದ ಮತ್ತೊಬ್ಬ ದಿವಾನರಿಗೆ ಅಥವಾ ಬ್ರಿಟಿಷ್ ರೆಸಿಡೆಂಟ್‌ಗೆ ಆದಂತಹ ಮಾತುಕತೆಗಳು, ವಾಗ್ವಾದಗಳ ಎಲ್ಲಾ ಪ್ರೊಸೀಡಿಂಗ್ ಪ್ರತಿಗಳು ನನ್ನ ಹತ್ತಿರ ಇದೆ. You can just go through that..

MR. SPEAKER : Are you referring to 1924 agreement?

SRI M. VEERAPPA MOILY : I am referring to 1892 agreement, what lead to 1892 and thereafter. It is as similar. 11.25 area restriction and all that they are all what is agreed to then and what is agreed to by the Chief Minister. At that time atleast those Dewans have protested it, they were not the representatives of the people. They have the courage to opposit. They know that they were losing the power. They know that they will lose their Dewanship. ಆದರೆ

ಜನಪ್ರತಿನಿಧಿಗಳಾಗಿ, ಜನಗಳಿಗೆ ಸ್ಪಂದನ ಮಾಡತಕ್ಕಂಥ ಆಯ್ಕೆಯಾದಂಥ ಸರ್ಕಾರದ ಪ್ರತಿನಿಧಿಗಳು, ಮುಖ್ಯಮಂತ್ರಿಗಳು, ಪ್ರಜಾಪ್ರಭುತ್ವದ ಒಂದು ಧ್ವಜವನ್ನು ಎತ್ತಿ ಹಿಡಿಯಬೇಕಾದ ಕೇಂದ್ರ ಸರ್ಕಾರದವರು ಇವತ್ತು ಬ್ರಿಟಿಷರು ಮಾಡಿದಂಥ ಪರಂಪರೆ ಲೆಗೆಸಿ ಕರ್ನಾಟಕದ ರೈತರಿಗೆ 100 ವರ್ಷದಿಂದ ಆದಂತಹ ಒಂದು ಸಮಾಧಿಗೆ ಇವತ್ತು ಒಂದು ದೊಡ್ಡ ಗೋಪುರವನ್ನು ಕಟ್ಟತಕ್ಕಂಥ ಕೆಲಸವನ್ನು ನೀವಿಬ್ಬರೂ ಕೂಡ ಮಾಡುತ್ತಿದ್ದೀರಿ. We cannot agree to this. ವಿಧಾನ ಸೌಧದಲ್ಲಿ ನಾವು ಏಕೆ ಇರಬೇಕು ? ಇತಿಹಾಸ, ಪರಂಪರೆ ಗೊತ್ತಿಲ್ಲದಂತಹ ಜನ ಮತ್ತು ಹೋರಾಟದ ಮನೋಭಾವಿಕೆ ಇಲ್ಲದಂತಹ ಜನ ಇವತ್ತು ಅಧಿಕಾರದ ಲಾಲಾಸೆಗಾಗಿ ಯಾರನ್ನೂ ಕೂಡ ಯಾವುದೇ ಪರಿಸ್ಥಿತಿಯಲ್ಲಿ ಬಲಿ ಕೊಡಬಹುದು ಎಂಬುದಕ್ಕೆ ಕಾವೇರಿಯ ಮರಣಶಾಸನವೇ ಒಂದು ದೊಡ್ಡ ನಿದರ್ಶನವಾಗಿದೆ ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಕಾವೇರಿಯ ಅಗ್ರಿಮೆಂಟ್ ಬಗ್ಗೆ ಇಷ್ಟು ವಿಚಾರಗಳನ್ನು ಹೇಳಿದ್ದೇನೆ. I have some more material with regard works in the Cauvery, ಇವರು 100 ವರ್ಷಗಳ ಹಿಂದೆ ಹೋಗಿಬಿಟ್ಟಿದ್ದಾರೆ. ಕರ್ನಾಟಕ ರಾಜ್ಯದ ರೈತರನ್ನು ತುಳಿಯುವುದು ಒಂದು ಸನಾತನ ಧರ್ಮ, ಇದೊಂದು ಪರಂಪರೆ, ಇದು ಭಾರತೀಯ ಸಂಸ್ಕೃತಿ...

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಇವರು ಸಂಸ್ಕೃತಿ ಬಗ್ಗೆಯೇ ಮಾತನಾಡುತ್ತಿರುತ್ತಾರೆ, ಆದ್ದರಿಂದ ಇವರಿಗೆ ಸಂಸ್ಕೃತಿ ಬಗ್ಗೆ ಸ್ವಲ್ಪ ಹೇಳಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವೀರಪ್ಪಮೊಯ್ಲಿರವರ ವೀರಾವೇಷ ಈಗ ಏಕೋ ಗೊತ್ತಿಲ್ಲ. ಏಕೆಂದರೆ, ಚುನಾವಣೆ ಇನ್ನು ಬಹಳ ದೂರ ಇದೆ. ನೀವು ಎರಡು ವರ್ಷ ಮುಖ್ಯಮಂತ್ರಿಗಳಾಗಿ ಏನೇನು ಆಗಿದೆ ಎಂದು ಕಾವೇರಿ ತಪ್ಪಲಿನಲ್ಲಿರುವ ನಮ್ಮೆಲ್ಲರಿಗೂ ಗೊತ್ತಿದೆ. ಈಗ ಆಗಿರತಕ್ಕಂಥ ತೀರ್ಪಿನಿಂದ ಕಾವೇರಿ ತಪ್ಪಲಿನಲ್ಲಿರುವವರು ನೆಮ್ಮದಿಯಿಂದ ಉಸಿರು ಬಿಡುತ್ತಿದ್ದೇವೆ. ನೀವೇಕೆ ಇವತ್ತು ಇಷ್ಟೊಂದು ವೀರಾವೇಷ ಮಾಡುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾಂಗ್ರೆಸ್ ಸರ್ಕಾರ ಇದ್ದಾಗ ಕೆಲಸ ಮಾಡಿದ್ದಕ್ಕೆ ನೀವು ಬದುಕಿಕೊಂಡಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾವೇರಿ ವಿಷಯದ ಬಗ್ಗೆ ಇಡೀ ರಾಜ್ಯದಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ಆಗ ಅಧಿಕಾರ ಮಾಡುತ್ತಿದ್ದ ನೀವು ಸುಮ್ಮನೆ ಇದ್ದು, ಈಗ ವೀರಾವೇಷ ಮಾಡುತ್ತಿದ್ದೀರಿ. ಚುನಾವಣೆ ಇನ್ನೂ ಒಂದು ವರ್ಷ ಇದೆ. ಆದ್ದರಿಂದ ಈಗಲೇ ವೀರಾವೇಷ ಬೇಡ.

ಶ್ರೀ ಹೆಚ್.ಡಿ. ಬಸವರಾಜ್ : ಈ ಮಾತನ್ನು ಬೇರೆಯವರು ಹೇಳಿದ್ದರೆ ನಾವು ಸಮಂಜಸವಾಗಿ ಕೇಳಬಹುದಿತ್ತು. ಆದರೆ, ನೀವು ಎರಡು ವರ್ಷ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ನಿಮ್ಮ ಕಾಲದಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಏಕೆ ಮಾಡಲಿಲ್ಲ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ಕೆಲವರಿಗೆ ಈ ಸಮಸ್ಯೆ ಬಗೆಹರಿಯುವುದು ಬೇಕಾಗಿಲ್ಲ. ರಾಜಕೀಯವಾಗಿ ಈ ಸಮಸ್ಯೆ ಜೀವಂತವಾಗಿರಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವತ್ತು...

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾವೇರಿ ವಿಚಾರಕ್ಕೋಸ್ಕರ ಜನರು ಬೇಸರವಾಗಿ ಮಾನ್ಯ ವಾಟಾಳ್‌ನಾಗರಾಜ್‌ರವರು ಕರೆದರೆ ಜನ ಯಾರೂ ಬರುತ್ತಿಲ್ಲ. ಮೊನ್ನೆ ಮಂಡ್ಯದಲ್ಲಿ ಸಭೆ ನಡೆಸಿದಾಗ ಮೊದಲು ಇದ್ದಂತಹ ಜನ ನಿಮ್ಮ ಪರವಾಗಿ ಬಂದಿಲ್ಲ. ನಮಗೆ ತೃಪ್ತಿಯಾಗಿದೆ. ಆದ್ದರಿಂದ ನಿಮಗೆಲ್ಲಾ ನೋವು ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಶಿವರಾಮೇಗೌಡ ಹೋದರೆ ಎಲ್ಲಾ ಕಡೆ ಜನ ಬರುತ್ತಾರೆ. ಇವರು ಬರುತ್ತಾರೆಂದು ಕೊಂಬು ಕಹಳೆ ಊದಿಕೊಂಡು ಬಾಗಿಲಿನಲ್ಲಿಯೇ ಕಾಯುತ್ತಿರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಕೆನಾಲ್ ಬಗ್ಗೆ ಹೇಳುತ್ತೇನೆ. ಮಾನ್ಯ ಶಿವರಾಮೇಗೌಡ ನಾನು ಮುಖ್ಯಮಂತ್ರಿಯಾಗಿದ್ದಾಗ ಏನೇನು ಮಾಡಿದ್ದೀರಿ ಎಂದು ಜ್ಞಾಪಿಸಿದ್ದು ಒಳ್ಳೆಯದಾಯಿತು 'ವೈ ಅಲೈನ್‌ಮೆಂಟ್' 20 ವರ್ಷದಿಂದ ಬಾಕಿ ಇತ್ತು, ಅದನ್ನು ಓಪನ್ ಮಾಡಿರಲಿಲ್ಲ. ನಾವು ಅರ್‌ಬಿಟ್ರೇಷನ್ ಮಾಡಿ ವೈ ಅಲೈನ್‌ಮೆಂಟ್ ಮಾಡಿದ ಕಾರಣ ಅವತ್ತು ನಾಗಮಂಗಲಕ್ಕೆ ನೀರು ಹೋಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡ : 50 ವರ್ಷದಿಂದ ಇರತಕ್ಕಂಥ ಕಾವೇರಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಆಗಲಿಲ್ಲ. ಅದನ್ನು ಬಿಟ್ಟು ನಮ್ಮಂಥ ಯುವಕರಿಗೆ ಉಪದೇಶ ಮಾಡಲು ಬಂದಿದ್ದೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ವಿಷಯದಲ್ಲಿ, ಇವರ ಕಾಲದಲ್ಲಿ ಆದಂತಹ ಮೋಸ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ ಆಗಲಿಲ್ಲ. ನೀವು ಸುಮ್ಮನೆ ರಾಜಕೀಯವಾಗಿ ಮಾತನಾಡಲು ಹೋಗಬೇಡಿ. ಪ್ರಾಮಾಣಿಕವಾಗಿ ಇವರು ಕೆಲಸ ಮಾಡಿದ್ದಾರೆ. ಅಲ್ಲಿ ಇರತಕ್ಕಂಥ ನೀರಾವರಿ ಸಚಿವರು ಅರ್ಧ ರಾತ್ರಿಯಲ್ಲಿ ಬಂದು ನೀರು ಬಿಡಬೇಕೆಂದು ಕೇಳಿದ್ದಾಗ ನೀರನ್ನು ಬಿಡತಕ್ಕಂಥ ನಿರ್ಧಾರಕ್ಕೆ ಅವತ್ತಿನ ದಿವಸ ಇವರು ಹೋಗಲಿಲ್ಲ. ಅವತ್ತು ಶುಕ್ಲಾರವರು ಬಂದಾಗ ಏನು ನಡೆಯಿತು? ಅವತ್ತು ನೀವಾಗಿದ್ದರೆ ನೀರನ್ನು ಬಿಟ್ಟು ಬಿಡುತ್ತಿದ್ದೀರಿ. ಇವತ್ತು ಇಡೀ ಕಾವೇರಿ ವಿಷಯ ಹಾಳಾಗುವುದಕ್ಕೆ ಸಂಪೂರ್ಣವಾಗಿ ಜನತಾ ದಳವೇ ಕಾರಣವಾಗಿದೆ. ಅದರ ಬಗ್ಗೆ ಬೇರೆ ಏನು ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಇವತ್ತು ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶವನ್ನು ಮಾಡುವುದಕ್ಕೂ ನಿಮ್ಮ ನ್ಯಾಷನಲ್ ಗೌರ್ನಮೆಂಟ್ ಕಾರಣವಾಗಿದೆ. ಅಲ್ಲಿ ಮತ್ತೆ ಸಾಲಿಸಿಟರ್

ಜನರಲ್‌ರವರು ಕೋರ್ಟ್‌ಗೆ ಡ್ರಾಫ್ಟ್ ಸ್ಕೀಂ ಕೊಡುತ್ತೇವೆಂದು ಮಾತು ಕೊಟ್ಟಿದ್ದು ನ್ಯಾಷನಲ್ ಗೌರ್ನಮೆಂಟ್ ಇದ್ದಾಗ. ನಾವು ಕೊಟ್ಟಿದ್ದಲ್ಲ ಅಥವಾ ಮಾನ್ಯ ನರಸಿಂಹರಾಯರ ಗೌರ್ನಮೆಂಟ್ ಕೊಟ್ಟಿದ್ದಲ್ಲ.

ಶ್ರೀ ಕೆ.ಎನ್.ನಾಗೇಗೌಡರು : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಹೇಳುತ್ತೇನೆ.

ಅಧ್ಯಕ್ಷರು : ವೀರಪ್ಪಮೊಯ್ಲಿಯವರು ಮಾತನಾಡುವುದನ್ನು ಮುಗಿಸಲಿ, ಅಲ್ಲಿಯವರೆಗೆ ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ. ಏಕೆಂದರೆ, ಬೇರೆ ಸದಸ್ಯರು ಇನ್ನು ಮಾತನಾಡಬೇಕಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರಿಗೆ ವೈ ಅಲೈನ್‌ಮೆಂಟ್ 20 ವರ್ಷದಿಂದ ತುಮಕೂರಿಗೆ ನೀರು ಹೋಗುವುದಕ್ಕೆ ಬಿಡುತ್ತಿರಲಿಲ್ಲ. ಇದನ್ನು ಯಾರು ಮಾಡಿದರು ಗೊತ್ತಿಲ್ಲ. ಇದು ಹಾಸನ ದಾಟಿ ಹೋಗಿರಲಿಲ್ಲ. ಹಾಸನ ಇವತ್ತು ಮಾನ್ಯ ಶಿವರಾಮೇಗೌಡರ ಜಿಲ್ಲೆಗೆ ಸೇರುವುದಿಲ್ಲ. ತಮ್ಮ ಜಿಲ್ಲೆಯಾದಂಥ ನಾಗಮಂಗಲಕ್ಕೆ ಮೈ ಅಲೈನ್‌ಮೆಂಟ್ ನಾಲೆಯ 20 ವರ್ಷದ ಸಮಸ್ಯೆಯನ್ನು ಬಿಡಿಸಿ ನಾಗಮಂಗಲಕ್ಕೆ ನೀರನ್ನು ಬಿಟ್ಟುಕೊಟ್ಟಿದ್ದೇವೆ. ಅಲ್ಲಿ ಶಿಂಷಾ ವ್ಯಾಲಿಗೆ ನೀರು ಹೋಯಿತು. ಕೆ.ಆರ್. ಪೇಟೆನಲ್ಲಿರತಕ್ಕಂಥ ಒಂದು ಕೆನಾಲ್ 16 ವರ್ಷದಿಂದ ಬಾಕಿ ಇತ್ತು. ಇನ್ನು ನೀರನ್ನು ಬಿಟ್ಟಿರಲಿಲ್ಲ.

5.10 ಪಿ.ಎಂ

ಇದಕ್ಕಾಗಿ 120 ಕೋಟಿ ರೂ.ಗಳನ್ನು ಖರ್ಚು ಮಾಡಿ ಓಪನ್ ಮಾಡಿದ್ದೇವೆ. ಇವೆ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಮ್ಮ ಕಾಲದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ಹಾಗೂ ಕೆ.ಆರ್. ಪೇಟೆಗಳಿಗೆ ನೀರನ್ನು ಕೊಟ್ಟಿದ್ದೇವೆ. ನಾನು ತುಮಕೂರಿಗೆ ಹೋಗಿದ್ದೆ, ನಾನು ಎಲ್ಲಾ ಅಧಿಕಾರಿಗಳನ್ನು ಕೇಳಿದೆ. ನೀವು ತಿಂಗಳಿಗೆ ಎಷ್ಟು ಕೆಲಸವನ್ನು ಮಾಡುತ್ತೀರೋ ಅಷ್ಟು ಹಣವನ್ನು ನಾನು ಕೊಡುತ್ತೇನೆಂದು ಹೇಳಿದೆ. It is on record.ಅವರು ತಿಂಗಳಿಗೆ 19ಕೋಟಿ ರೂ.ಗಳನ್ನು ಬೇಕಾಗುತ್ತದೆಂದು ಹೇಳಿದರು. I paid 10 crores per month. ದಯಮಾಡಿ ನಿಮ್ಮ ಎಲ್ಲಾ ಸ್ಟ್ಯಾಟಿಸ್ಟಿಕ್ಸ್ ನನಗೆ ಗೊತ್ತಿದೆ. ನಾನು ಕೊಟ್ಟಿಲ್ಲ ಎಂದು ಹೇಳುವುದಿಲ್ಲ. ಆದರೆ ಏನಾಗಿದೆ ಅದು ಮುಖ್ಯ. ತುಮಕೂರಿನ ಬುಗುಡನಹಳ್ಳಿ ಯವರೆಗೆ, ನಾನು ತುರುವೇಕೆರೆಗೆ ನೀರನ್ನು ತಂದೆವು. ತುಮಕೂರು ವಾಟರ್‌ಸಪ್ಲೈ ಪಾಯಿಂಟ್‌ವರೆಗೆ ನೀರು ತಂದು ನಿಲ್ಲಿಸಿದ್ದು ನಮ್ಮ ಸರ್ಕಾರದ ಕಾಲದಲ್ಲಿ ಆ ಮೇಲೆ ಆ ಕೆಲಸಗಳು ಮುಂದುವರಿಯಲೇ ಇಲ್ಲ. ಈಗ ಅದು ಕುಣಿಗಲ್‌ವರೆಗೆ ಹೋಗಬೇಕಾಗಿತ್ತು.

(ಗೊಂದಲ)

MR. SPEAKER : I think the House has enough of it. I appeal to all the Members kindly to come to their senses. Let us not forget the fact that this is the Assembly.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಕೈಗಾರಿಕೆಗಳ ಬಗ್ಗೆ very short statement, ಇದು ಬಿಸಿನೆಸ್ ಟೈಮ್ 15-12-1997 ಛೇಂಬರ್ಸ್ ಆಫ್ ಕಾಮರ್ಸ್‌ನವರು ಏನು ಹೇಳುತ್ತಾರೆಂದರೆ, ಅವರು according to the Federation of Chamber of Commerce. `Bangalore which has garnered the image of Hi-tech City can be a pro-runner and become pro-active in forcasting and seizing business opportunity by dissesminating the information to investment by business community on CDO. Indo-American Chamber of commerce said while a aggressive posture has been assumed by States like Andhra Pradesh and Tamil Nadu, no such effort is seen in Karnataka. State Government should speedily keeps, its promise on improving infrastructure and profile itself to the prime position that it holds now. The opening of one more US Commercial services. ಅದೆಲ್ಲವೂ ಬಂದಿತು. ಇದನ್ನು ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. ಇದು What is the position with regard to the State-wise distribution of investment under implementation? ಇಷ್ಟೇ ಒಂದು ಇಂಡಿಕೇಷನ್. ಇದರ ಪ್ರಕಾರ Gujarat was first. This refers to 1994. Shape of things to come December 94. Publication Gujarat-first, Maharastra - second, MP- third, Uttara Pradesh fourth, Karnaka -fifth. 21,133. ಇಡೀ ದೇಶದಲ್ಲಿ 6.1 ಪರ್ಸೆಂಟೇಜ್. ಇವತ್ತು ಅದು ಸ್ಟೇಟ್‌ವೈಸ್ ಅಗ್ರಿಗೇಟ್ ಇನ್‌ವೆಸ್ಟ್‌ಮೆಂಟ್‌ನಲ್ಲಿಯೂ ಕೂಡ we occupied that place, ಇನ್‌ವೆಸ್ಟ್‌ಮೆಂಟ್‌ನಲ್ಲಿಯೂ ಕೂಡ we had occupied that place, but the financial institutions as on that date, ಇನ್‌ವೆಸ್ಟ್‌ಮೆಂಟ್ ಮಾಡುವುದರಲ್ಲಿ we stood first. That was the place.. ಇನ್ನು ಹೆಚ್ಚು ಅದರ ವಿವರಣೆಗೆ ಹೋಗುವುದಿಲ್ಲ. ಈಗ ಆಂಧ್ರ came only next to Karnataka, ಒರಿಸ್ಸಾ ಆಮೇಲೆ ಕೆಳಗಡೆ ಇದೆ. ತಮಿಳುನಾಡು ಅದರ ಕೆಳಗಡೆ ಇದೆ. We are competing with those big States, in south we were the pioneers - No.1, ಇದ್ದದ್ದು, ಈಗ ನಾವು ತಮಿಳುನಾಡು, ಆಂಧ್ರಪ್ರದೇಶ ಇದರ ಕೆಳಗಡೆ ಬಂದಿದ್ದೇವೆ, may be we may first occupy the place above Bihar- that is all. ಸೌತ್‌ನಲ್ಲಿ ಕೇರಳದಲ್ಲಿ ಇಂಡಸ್ಟ್ರೀಸ್‌ಗಳೇ ಬರುವುದಿಲ್ಲ. We have reached the rock-bottom. This is the position with regard to Industrial Development in Karnataka. ಇನ್ನು ಅದನ್ನು ಬಹಳ ವಿವರಣೆ ಮಾಡಿ, ಆಂಧ್ರಪ್ರದೇಶದವರು ಅವರು ಏನು ನಮಗೆ ಲೆಕ್ಕಕ್ಕೆ ಇಲ್ಲ. ಮತ್ತು ನಮ್ಮ ಕಾಂಪಿಟೇಟರ್ಸ್ ಬರೀ ಚೈನಾ, ಸಿಂಗಾಪುರ್, ತೈವಾನ್ ಎಂದು ಹೇಳಿಕೊಂಡು ಹೋಗುವಂತಹ ಪ್ರಶ್ನೆ ಇವತ್ತು ಇಲ್ಲ. ಕೈಗಾರಿಕೆಯಲ್ಲಿ ನಾವು ಬಹಳ ಹಿಂದುಳಿದಿದ್ದೇವೆ. ಈಗ ಅನೇಕ ಇಂಡಸ್ಟ್ರೀಸ್‌ಗಳ ಪಟ್ಟಿ ನನ್ನ ಹತ್ತಿರ ಇದೆ. ಸುಮಾರು 50 ಕೈಗಾರಿಕೆಗಳು ಇಲ್ಲಿ 1994ನೇ ಇಸವಿಯವರೆಗೆ, ಇಲ್ಲಿಗೆ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಎಷ್ಟು ಬಂದಿದೆ. They were cleared by the High Power Committee as much as Rs. 42,000

crores investment. ಇವತ್ತು ಡಿಸಿಫಿಯೆಟೆಡ್. ಮೆಮೋರ್ಯಾಂಡಮ್ ಅಗ್ರಿಮೆಂಟ್‌ಗೆ ಸಹಿ ಆಗಿದೆ. ಸುಮಾರು 48 power projects have been cleared and they are all pending with the Government of India at that time they were all pending with the Government of India for clearance. ಆ ಕಾಲದಲ್ಲಿ. ನನ್ನ ಹತ್ತಿರ ಅದರ ಎಲ್ಲಾ ಪ್ರೋಫೈಲ್ಸ್ which I have collected from Government of India. ನಮ್ಮ ಸ್ಟೇಟ್‌ನಲ್ಲಿ ಅಲ್ಲ. ಕೇಂದ್ರ ಸರ್ಕಾರದಲ್ಲಿ ಸುಮಾರು ರೆಕಾರ್ಡ್ ಪ್ರಕಾರ 33 ಪ್ರಾಜೆಕ್ಟ್‌ಗಳು ಪೆಂಡಿಂಗ್ ಇತ್ತು which would have produced you as much as 5192.50 M.wltts of power. This I obtained from the Government of India, Ministry of Power & Investment Promotion Cell. ಈ ಪಟ್ಟಿ ನನ್ನ ಹತ್ತಿರ ಇದೆ. ಸಾಮಾನ್ಯವಾಗಿ ನಾವು ರೆಕಾರ್ಡ್ ಇಲ್ಲದೆ ಮಾತನಾಡುವುದಿಲ್ಲ. ಪ್ರತಿಯೊಂದು ಪ್ರಾಜೆಕ್ಟ್ ಯಾವ ಯಾವ ಸ್ಟೇಜ್‌ನಲ್ಲಿದೆ I have got the profiles which I have collected from the Ministry of Power, Project Monitoring system, ಇದೆಲ್ಲಾ ನನ್ನ ಹತ್ತಿರ ಇದೆ. ಸಣ್ಣದ್ದು ದೊಡ್ಡದು ಸೇರಿ ಈ 33 ಪ್ರಾಜೆಕ್ಟ್‌ಗಳಲ್ಲಿ ಒಂದನ್ನೂ ಇಂಪ್ಲಿಮೆಂಟ್ ಮಾಡಲು ಸಾಧ್ಯವಾಗಿಲ್ಲ. ಆ ಶಕ್ತಿ ನಿಮಗಿಲ್ಲ. ಆ ಕೋ ಆರ್ಡಿನೇಷನ್ ಇಲ್ಲ, ಇನ್‌ವೆಸ್ಟ್‌ಮೆಂಟ್ ಮಾಡುವಂತಹ ವಾತಾವರಣ ಏನಿತ್ತು. ಅದನ್ನು ಮುಂದುವರಿಸಿಕೊಂಡುಹೋಗಲಾರದಂತಹ ದುರ್ಬಲ ಸರ್ಕಾರವಿದೆ. That is why we have moved the No-confidence Motion ಅವರು ಅವರ ಭಾಷಣದಲ್ಲಿ ಕಾಂಗ್ರೆಸ್‌ನವರು ಒಂದು ಯೂನಿಟ್ ಎಲೆಕ್ಟ್ರಿಸಿಟಿ ಉತ್ಪಾದನೆಯನ್ನು ಆ್ಯಡ್ ಮಾಡಲಿಲ್ಲ. ಒಂದು ಮೆಗಾವ್ಯಾಟ್ ಕೂಡ ಮಾಡಿಲ್ಲ. Yes, we have produced particularly for those last four years -750 **MW**tt of power 9000 ಮಿಲಿಯನ್ ಯೂನಿಟ್ 1989ರಲ್ಲಿದ್ದರೆ we had added. 9000 million units during 1989 ನಲ್ಲಿ ಇದ್ದಾರೆ and to-day we have 16,000 more million units of power today which is contribution by the Congress Government, not you. Even many of the captive units, ಇವತ್ತಿಗೂ ಕ್ಲಿಯರೆನ್ಸ್ ಕೊಡುವ ಕೆಲಸವನ್ನು ಮಾಡದಿರುವ ತಾವು ಯಾವ ಇನ್‌ವೆಸ್ಟ್‌ಮೆಂಟ್ ಕ್ಲೈಮೇಟ್ ಸೃಷ್ಟಿಸುತ್ತೀರಿ. ಮಾನ್ಯ ಪ್ರಧಾನಮಂತ್ರಿಯವರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಕ್ಕೆ ಕುರಿತಂತೆ ಬೇಗ ಇತ್ಯರ್ಥ ಪಡಿಸುತ್ತೇನೆಂದು ಹೇಳಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಅದನ್ನು ನಾನು ಸ್ವಾಗತಿಸುತ್ತೇನೆ. ನಾನು ಕೂಡ ಸಿಲಿಕಾನ್ ವ್ಯಾಲಿಗೆ ಹೋಗಿ ಬಂದಿದ್ದೇನೆ. ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನನಿಲ್ದಾಣವಾದರೆ ಮಾತ್ರ ಇಲ್ಲಿಗೆ ಬರುತ್ತೇವೆಂದು ಅವರೆಲ್ಲಾ ಹೇಳುತ್ತಾರೆ. ಅದಕ್ಕೆ ಜಾಗ ಕ್ಲಿಯರಾಗಿತ್ತು. ಟೆಕ್ನಿಕಲ್ ಕಮಿಟಿಯೂ ಕ್ಲಿಯರ್ ಮಾಡಿತ್ತು. ನಾನು ಫಾರಿನ್ ಟ್ರಿಪ್‌ನಿಂದ ಬಂದ ಕೂಡಲೇ ಸಿಲಿಕಾನ್ ವ್ಯಾಲಿಯಲ್ಲಿದ್ದಂತಹ ಟ್ಯಾಂಡಮ್ ಆಗಲಿ, ಇಂಟೇಲ್‌ಗಳಾಗಲಿ, ಅನೇಕ ಸಂಸ್ಥೆಗಳು ಇಲ್ಲಿ ಬಂದು ಸ್ಥಾಪನೆ ಮಾಡಲು ತಯಾರಿದ್ದರೂ ಆದರೆ ಈವತ್ತು ಇವರು ಬೇರೆ ಬೇರೆ ರಾಜ್ಯಗಳಲ್ಲಿ ತಮ್ಮ ಯೂನಿಟ್‌ಗಳನ್ನು ಸ್ಥಾಪನೆ ಮಾಡುವಂತಹ ಪರಿಸ್ಥಿತಿ ಬಂದಿದೆ. ಕೆಇಬಿಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಸಾಕಷ್ಟು ಆದಾಯವನ್ನು ಸಂಗ್ರಹಿಸುವಲ್ಲಿ ಕೆ.ಇ.ಬಿ. ನಂ.1

ಸ್ಥಾನದಲ್ಲಿದೆ. ರೆವಿನ್ಯೂ ಬಗ್ಗೆ ಒಂದು ಶಬ್ದ ಹೇಳುತ್ತೇನೆ ನಾನು. 1992-93 ರಿಂದ 1997-98 ರವರೆಗೆ Revenue by sale of power has increased to 342%. Look at these other things. It has been eaten away by abnormal administrative and general expenditure. 1992-93ರಲ್ಲಿ 11 ಕೋಟಿ ಇದ್ದರೆ 64 ಕೋಟಿ ಜಾಸ್ತಿಯಾಗಿದೆ. ಇನ್‌ವೆಂಟ್ರೀಸ್ 85 ಕೋಟಿ ಇದ್ದರೆ 176 ಕೋಟಿಗೆ ಏರಿದೆ. 207 ಪರ್ಸೆಂಟ್ ಸೇಲ್ ಆಫ್ ಪವರ್ ಪರ್ಸೆಂಟೇಜ್ ಜಾಸ್ತಿ ಇದೆ. Inventory percentage is also commensurate to that. Assets not in use. 79 ಕೋಟಿ ಇದ್ದದ್ದು 161 ಕೋಟಿಗೆ ಹೋಗಿದೆ. ಕಾಸ್ಟ್ ಆಫ್ ಮ್ಯಾನ್ ಪವರ್ ತಾವು ಅರ್ಥಮಾಡಿಕೊಳ್ಳಿ, ಏಕೆ ಕಡಿಮೆಯಾಗಬೇಕು ಕಂಟ್ರಾಕ್ಟ್ ಸಿಸ್ಟಂ ಇದೆ. ಹಾಗಾದರೆ ಮ್ಯಾನ್‌ಪವರ್ ಅಷ್ಟು ಕೆಲಸ ಮಾಡಲಿಲ್ಲ. ಕಾಸ್ಟ್ ಆಫ್ ರಿಪೇರ್ಸ್ 27 ಕೋಟಿಯಿಂದ 60 ಕೋಟಿಗೆ ಹೋಗಿದೆ. ಇದು 201 ಪರ್ಸೆಂಟ್‌ಗೆ ಹೆಚ್ಚಿದೆ. ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಮಾತ್ರ there is drop of 56%. There is 362% rise in the revenue; drop in the capital expenditure is 56%. 56 ಪರ್ಸೆಂಟ್ ಡೌನ್ ಆಗಿದೆ. ಮೇಲೆ ಹೋಗಿಲ್ಲ. ಲೋಡ್‌ಫ್ಯಾಕ್ಟರ್ಸ್ ಟ್ರಾನ್ಸ್‌ಫಾರ್ಮರ್ ಲೈನಿಂಗ್‌ನಲ್ಲಾಗಲೀ ಇದರಲ್ಲಿ ಅಭಿವೃದ್ಧಿಯಾಗಿಲ್ಲ ಏನೂ ಇಲ್ಲ. I have got the sheet. I have prepared it. ಇವತ್ತು ಕೆಇಬಿಯಲ್ಲಿ ಎಲೆಕ್ಟ್ರಾನಿಕ್ ಮೀಟರ್ ಇಂಟರ್‌ಡ್ಯೂಸ್ ಮಾಡುವುದಕ್ಕೆ ಹೊರಟಿದ್ದಾರೆ. ಇಲ್ಲಿ ಲೋಕಲ್ ಬಿಹೆಚ್‌ಇಎಲ್ a known, reputed, standard, 300-400 ರೂಪಾಯಿಗಳಿಗೆ ಸಿಗುತ್ತಿದೆ. 4 ಸಾವಿರ ರೂಪಾಯಿಗೆ ಹೊರದೇಶದ ಕೊಲಾಬರೇಷನ್ ಕಂಪನಿಯಿಂದ ಎಲೆಕ್ಟ್ರಾನಿಕ್ ಮೀಟರ್ ತರುವುದಕ್ಕೆ ಹೋಗುತ್ತಿದ್ದಾರೆ. ಇಲ್ಲಿ ಲೋಕಲ್‌ನಲ್ಲಿ ಬಿಹೆಚ್‌ಇಎಲ್‌ನಲ್ಲಿ 300-400 ರೂಪಾಯಿಗಳಿಗೆ ಸಿಗುತ್ತದೆ. ಪಬ್ಲಿಕ್ ಸೆಕ್ಟಾರ್ ಕಂಪನಿಗಳನ್ನು ಮುಚ್ಚಿಸಬೇಕು ನೀವು. ಬಿಹೆಚ್‌ಇಎಲ್‌ನವರು ಕರ್ನಾಟಕ ರಾಜ್ಯದಲ್ಲಿ ಕೆಲಸ ಕಡಿಮೆ ಮಾಡುತ್ತಾರೆ ಬೇರೆ ಯಾವುದೋ ರಾಜ್ಯಕ್ಕೆ ಹೋಗುತ್ತಾರೆ. ಅವರು ಇಂಟರೆಸ್ಟ್ ಆಗಿ ಕೆಲಸ ಮಾಡುವುದಿಲ್ಲ. ಕನ್ನಡ ಚಳುವಳಿಗಾರರು ಎಲ್ಲಿ ಹೋದರೋ ಗೊತ್ತಾಗುತ್ತಿಲ್ಲ. ಇಂತಹದ್ದು ಅನ್ಯಾಯವಾಗಿದೆ ಇದಕ್ಕೆ ಕನ್ನಡಿಗರ ಚಳುವಳಿ ಇಲ್ಲ. ಕನ್ನಡಿಗರೆಲ್ಲಾ ಒಂದು ತರಹ ಏನೋ ಆಗಿ ಬಿಟ್ಟಿದ್ದಾರೆ. ಆ ಶಬ್ದ ನಾನು ಉಪಯೋಗ ಮಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಹೆಚ್ಚಿಗೆ ಧಕ್ಕೆಯಾಗುತ್ತಿರುವಾಗ ಚಳುವಳಿಗಾರರು ಎಲ್ಲಿ? ನಾನು ಮಾನ್ಯ ವಾಟಾಳ್ ನಾಗರಾಜ್‌ರವರ ಬಗ್ಗೆ ಹೇಳುತ್ತಿಲ್ಲ. ಅವರು ಯಾವಾಗಲೂ ಚಳುವಳಿಯನ್ನು ಸರಿಯಾಗಿ ಮಾಡಿಕೊಂಡು ಬಂದಿದ್ದಾರೆ. ಯಾವ ಕನ್ಸಿಡರೇಷನ್‌ಗೆ ಈ ಚಳುವಳಿಗಳು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಚಳುವಳಿಗಳು ಈಗ ಹೊಸದಾಗಿ ಹುಟ್ಟಿದೆ. ಆ ಚಳುವಳಿಗಾರರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸಭಾಧ್ಯಕ್ಷರೆ, ಕನ್ಸಿಡರೇಷನ್ ಅಂದರೆ is it under the Negotiable Instruments Act or what?

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಪವರ್ ಬಗ್ಗೆ ಬಹಳ ವಿವರಣೆಗೆ ಹೋಗುವುದಿಲ್ಲ. ಏಕೆಂದರೆ ಸಾಕಷ್ಟು ಸಮಯವಾಗಿದೆ. ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ ಕೂಡ ಅದನ್ನು ಡಿಲ್ಲಿ ಡ್ಯಾಲಿ ಮಾಡಬೇಕಾದ ಅವಶ್ಯಕತೆ ಇಲ್ಲ. ರಾಜ್ಯಸರ್ಕಾರ ತಪ್ಪು ಮಾಡಿದೆ. ತಮಗೆ ಕಂಪಲ್‌ಷನ್ಸ್

7444-151

ಇರಬಹುದು, ಕೇಂದ್ರದಲ್ಲಿ ನಿಷ್ಠೂರವಾಗಬೇಕು ಮತ್ತೊಬ್ಬರಿಗೆ ನಿಷ್ಠೂರವಾಗಬೇಕು ಅದರ ಬಗ್ಗೆ Ratan Tata ıd do wait for 45 minutes to meet the Chief Minister. For what investment? I can recall even now, that Ratan Tata and very same Aditya Birla who is no more now, they said if any new investment has to be done by Tatas and Birlas, it will be done in Karnataka. ಆ ಮಾತು ಬರುವುದು ಒಂದು ಕಾಲದಲ್ಲಿತ್ತು. ಇವತ್ತು ಇಲ್ಲಿಂದ ತಪ್ಪಿಸಿಕೊಳ್ಳತಕ್ಕ ವಾತಾವರಣದಲ್ಲಿ ನಾವಿದ್ದೇವೆ. ಇನ್ನೊಂದು ಪ್ರಾಮುಖ್ಯವಾದ ವಿಚಾರವನ್ನು ಸಂಕ್ಷಿಪ್ತವಾಗಿ ಕಡಿಮೆ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆ. ತಾವು ನನಗೆ ಅವಕಾಶ ಕೊಡಬೇಕು. ಬಾಗೂರು ನವಿಲೆ ಟನಲ್ ಬಗ್ಗೆ ರೈತರ ಒಂದು ಚಳುವಳಿ ಆಯಿತು. ಏಕೆ ಮಾನ್ಯ ನಾಗೇಗೌಡರು ನಗುತ್ತಿದ್ದಾರೆ ಏನಿದೆ?

ಶ್ರೀ ಕೆ.ಎನ್. ನಾಗೇಗೌಡ : ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಲ್ಲಿಗೆ ಹೋದಾಗ ನಾವು ನೀವು ಇದ್ದೆವು. ಅಲ್ಲಿ ರೆಪ್ರಸೆಂಟೇಷನ್ ಕೊಟ್ಟಾಗ ತಾವೇನು ಹೇಳಿದ್ದೀರಿ ಎನ್ನುವುದು ನನಗೆ ಜ್ಞಾಪಕಕ್ಕೆ ಬಂತು ಅದಕ್ಕೋಸ್ಕರ ನಾನು ನಕ್ಕೆ.

ಶ್ರೀ ಎಂ. ವೀರಪ್ಪಮೊಯಿಲಿ : ನಾವು ಆ ಪ್ರಾಜೆಕ್ಟನ್ನು ಮಾಡುವುದಕ್ಕೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ we had implemented the lift Irrigation Project. We had approved it. We had spent Rs. 6 to 7 crores on these Lift Irrigation Projects. ನೀವು ಬಂದಮೇಲೆ ಯಾವುದೋ ಕಾರಣದಿಂದ ನಿಲ್ಲಿಸಿದ್ದೀರಿ. ನಿಮ್ಮ ಕೈ ಸರ್ಕಾರದಲ್ಲಿ ಅಷ್ಟು ಉದ್ದ ಇಲ್ಲ ನನಗೆ ಗೊತ್ತಿದೆ ನಿಮ್ಮ ಲಿಮಿಟೇಷನ್. ಇವತ್ತು ಬಾಗೂರು ನವಿಲೆ ಟನಲ್ ವಿಚಾರದಲ್ಲಿ ನಾನು ಅಲ್ಲಿಗೆ ವಿಸಿಟ್ ಮಾಡಿದ್ದೇನೆ. 15 ಗ್ರಾಮಕ್ಕೆ ಎಫೆಕ್ಟ್ ಆಗಿದೆ. ನಾವು ಹೋದದ್ದು ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ವರದಿ ತರಿಸಿದ್ದಾರೆ. ಟನಲ್ ಪಕ್ಕದಲ್ಲಿರತಕ್ಕ ತೋಟಗಳಿಗೆ ಏನಾಗಿದೆ ಎನ್ನುವ ವರದಿಯನ್ನು ನಾವು ಪಬ್ಲಿಕ್ ಅಕಾಂಟ್ಸ್ ಕಮಿಟಿಯಲ್ಲಿದ್ದಾಗ ವರದಿ ಕೊಟ್ಟಿದ್ದೇನೆ. ನಮ್ಮ ಸರ್ಕಾರ ಬಂದಮೇಲೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದೇವೆ. ಅನೇಕ ತೆಂಗಿನ ಮರಗಳು ಒಣಗಿ ಹೋಗಿದೆ. ಲಿಫ್ಟ್‌ಇರಿಗೇಷನ್ ಸ್ಕೀಮ್ ಇಂಪ್ಲಿಮೆಂಟ್ ಮಾಡಿದ್ದನ್ನು ಇವರ ಸರ್ಕಾರ ಬಂದಮೇಲೆ ನಿಲ್ಲಿಸಿಬಿಟ್ಟಿದ್ದಾರೆ. ಈ ಬಗ್ಗೆ ರೈತರಿಗೆ ಆದಂತಹ ನಷ್ಟದ ಬಗ್ಗೆ ಒಂದು ವರದಿಯನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರಿಂದ ತರಿಸಿದ್ದಾರೆ. 25 ಕೋಟಿ ನಷ್ಟವಾಗಿದೆ ಎಂದು ಅಸೆಸ್ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟರು. ಆ ವರದಿಯನ್ನು ಅನುಷ್ಠಾನ ಮಾಡಲಿಲ್ಲ. ಈ ಬಗ್ಗೆ ವರದಿ ಇದೆ. ಅಲ್ಲಿ ಸತ್ಯಾಗ್ರಹ ಮಾಡಿದರು. ತುಮಕೂರಿಗೆ ಹೋಗುವ ನೀರನ್ನು ತಡೆಯುವ ಬಗ್ಗೆ ಸತ್ಯಾಗ್ರಹ ಮಾಡಿದರು. ಅದಕ್ಕೆ ನಾನು ಹೋಗಲಿಲ್ಲ. ಹೋಗುವ ನೀರನ್ನು ನಿಲ್ಲಿಸಬಾರದು. ನಾನು ಅದಕ್ಕೆ ವಿಸಿಟ್ ಮಾಡಲಿಲ್ಲ. ನಾವು ವಿಸಿಟ್ ಮಾಡಿದ್ದು ಯಾವಾಗ ಅಂದರೆ 90 ದಿವಸ ಸತ್ಯಾಗ್ರಹ ಮಾಡಿ ಓಪನ್ ಮಾಡಿದರು. ಓಪನ್ ಮಾಡಿದ ಮೇಲೆ ಪೋಲೀಸ್‌ನವರು ಅವರ ಮೇಲೆ ಲಾಟಿಚಾರ್ಜ್ ಮಾಡಿದ್ದಾರೆ. ನಾನು 8 ಗ್ರಾಮಗಳಿಗೆ ಹೋಗಿದ್ದೆ. ಇಂತಹ ಒಂದು ಧಾರುಣ ಪರಿಸ್ಥಿತಿ ಮಧುಗಿರಿ ಪ್ರಕರಣದಲ್ಲಿ ಕೂಡ ನನ್ನ ಜ್ಞಾಪಕದಲ್ಲಿರುವಂತೆ ಈ ತರಹ ಆಗಿರಲಿಲ್ಲ. ಎಷ್ಟು ಅತಿರೇಕವೆಂದರೆ ನನ್ನ

ಹತ್ತಿರ ಫೋಟೋಗಳಿವೆ. ದಯಮಾಡಿ ತಾವು ಫೋಟೋಗಳನ್ನು ಪರಿಶೀಲನೆ ಮಾಡಬೇಕು. ಜಲಿಯನ್ ವಾಲಾಬಾಗ್‌ದಲ್ಲಿ ಮಾಡಿದಹಾಗೆ ಗ್ರಾಮ ಗ್ರಾಮಕ್ಕೆ ಹೋಗಿ ಮನೆ ಮನೆಗೆ ಹೋಗಿ ಹೆಣ್ಣುಮಕ್ಕಳಿಗೆ ಯಾವ್ಯಾವ ಭಾಗಗಳಿಗೆ ಹೊಡೆದಿದ್ದಾರೆ ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಅನೇಕರಿಗೆ ಗಾಯಗಳಾಗಿವೆ. ಪೋಲೀಸ್ ಸ್ಟೇಷನ್‌ಗೆ ಹೆಣ್ಣುಮಕ್ಕಳನ್ನು ಕೊಂಡುಹೋಗಿ ಅಲ್ಲಿ ಸಾಕಷ್ಟು ಹೊಡೆದಿದ್ದಾರೆ. ಪತ್ರಿಕಾಕರ್ತರು ಫೋಟೋ ತೆಗೆಯಲು ಹೋದಾಗ, ಪತ್ರಿಕಾಕರ್ತರು ವರದಿ ಮಾಡುವುದಕ್ಕೆ ಹೋದಾಗ ಅವರಿಗೆ ಹೊಡೆದಿದ್ದಾರೆ. ಈ ರೀತಿಯಲ್ಲಿ ಆದಂತಹ ದೌರ್ಜನ್ಯ ಅದನ್ನು ನೋಡಿದರೆ ಯಾರಿಗಾದರೂ ಕರುಳು ಇದ್ದರೆ ಮನಸ್ಸು ಕರಗಬೇಕು. ಅವರಿಗೆ ಕರುಳು ಇದ್ದಹಾಗೆ ಇಲ್ಲ. ಅಲ್ಲಿ ಯಾವುದೋ ಒಂದು ಬಾರ್ ಇದ್ದರೆ ಅಲ್ಲಿ ಕುಡಿದು, ಊರಿನ ಕೋಳಿಯನ್ನು ಕಡಿದು ಊಟಮಾಡಿ ಮನೆಗೆ ಮನೆಗೆ ಹೋಗಿ ಬಡಿದಿದ್ದಾರೆ. ಇಂತಹ ಧಾರುಣಚಿತ್ರವನ್ನು ನನ್ನ ಸಾರ್ವಜನಿಕ ಜೀವನದಲ್ಲಿ ನೋಡೇ ಇಲ್ಲ. ನಮ್ಮ ಪಕ್ಷ ಅಲ್ಲ ಅಲ್ಲಿ ಕಾರ್ಯಕ್ರಮ ಮಾಡಿದ್ದು. ಕಿಸಾನ್ ಪಕ್ಷದ ಗೋಪಾಲ್ ಎಂಬುವರು ಪಬ್ಲಿಕ್ ಮೀಟಿಂಗ್ ಸೆಪ್ಟೆಂಬರ್ 12ನೇ ತಾರೀಖು ಮಾಡಬೇಕೆಂದು ಹೊರಟಾಗ ಒಂದು ಮೋಟಾರ್‌ಬೈಕ್‌ನಲ್ಲಿ ಬಂದು ಚೂರಿ ಹಾಕಿದ್ದಾರೆ. ತನ್ನಲ್ಲಿದ್ದ ಬ್ಯಾಗನ್ನು ಹೊಟ್ಟೆಗೆ ಹಿಡಿದು ಪಾರಾಗಿದ್ದಾರೆ. ಕೈಗೆ ಏಟಾಗಿದೆ ಅದನ್ನು ಇವತ್ತು ಅಪರೇಷನ್ ಮಾಡಬೇಕಾದ ಪರಿಸ್ಥಿತಿ ಇದೆ. ತಕ್ಷಣ ಅವರನ್ನು ಹಿಡಿದಿದ್ದಾರೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು 8 ಗ್ರಾಮಗಳಿಗೆ ವಿಸಿಟ್ ಮಾಡಿದ ಅಲ್ಲಿ ನಡೆದಿರತಕ್ಕ ವಿಚಾರಗಳ ಬಗ್ಗೆ ಫೋನ್ ಮಾಡಿದೆ. ನೀವು ಅಧಿಕಾರಿಗಳ ವರದಿಯನ್ನು ನಂಬಬೇಡಿ. ತಾವು ದಯಮಾಡಿ ನೋಡಿ, 22-7-98ಕ್ಕೆ ಒಂದು ಪತ್ರವನ್ನೂ ಕೂಡ ಬರೆದಿದ್ದೇನೆ. ಪತ್ರ ಬರೆದ ಮೇಲೆ ಅವರು ಹೋಗುತ್ತೇನೆಂದು ಹೇಳಿದರು. ಅವರಿಗೆ ಕೂಡ ತಾಪತ್ರಯ ಇದೆ. ಹಾಸನದ ಗಡಿಧಾಟಿ ಹೋಗುವುದು ಅಷ್ಟು ಸುಲಭವಲ್ಲ. ಅವರ ಅಸ್ತಿತ್ವದ ಪ್ರಶ್ನೆ ಬರುತ್ತದೆ. ಅವರು ಹೋಗಲಿಲ್ಲ. ಉನ್ನತ ಪೋಲೀಸ್ ಅಧಿಕಾರಿಗಳೂ ಕೂಡ ಹೋಗಲಿಲ್ಲ. 85-90 ವರ್ಷದ ಮುದುಕ ಮುದುಕಿಯರಿಗೆ ತೀವ್ರವಾಗಿ ಬಡಿದಿದ್ದಾರೆ. ಆಮೇಲೆ ಹ್ಯೂಮನ್ ರೈಟ್ಸ್ ಕಮೀಷನ್‌ಗೆ ದಿನಾಂಕ 14-8-98ಕ್ಕೆ ಬರೆದಿದ್ದೇನೆ. ಆಮೇಲೆ ದೆಹಲಿಗೆ ಹೋದಾಗ ಹ್ಯೂಮನ್ ರೈಟ್ಸ್ ಕಮೀಷನ್‌ನ ಅಧ್ಯಕ್ಷರಿಗೆ ಹೇಳಿದೆ. ಅವರು ಹೇಳಿದರು, ರೆಪ್ಯುಟೆಡ್ ಪೋಲೀಸ್ ಆಫೀಸರ್ ಡೆಪ್ಯುಟ್ ಮಾಡುತ್ತೇನೆಂದು ಹೇಳಿದರು. ಹ್ಯೂಮನ್ ರೈಟ್ಸ್ ಕಮಿಷನ್ ಕಡೆಯಿಂದ ಇವತ್ತಿನವರೆಗೆ ತನಿಖೆಗೆ ಬರಲಿಲ್ಲ. ಉನ್ನತಮಟ್ಟದ ಪೋಲೀಸ್ ಅಧಿಕಾರಿಗಳೂ ಕೂಡ ಬರಲಿಲ್ಲ. ಒಬ್ಬ ಪೋಲೀಸ್ ಪೇದೆ ಅಥವಾ ಯಾರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಸರ್ಕಾರದವರು ಒಬ್ಬರೂ ಹೋಗಿಲ್ಲ. ಅಧ್ಯಕ್ಷರೇ, ಇವತ್ತು ಈ ದೌರ್ಜನ್ಯ ಬಗ್ಗೆ ಅನೇಕ ಪ್ರಮುಖವಾದಂಥ ಪತ್ರಿಕೆಗಳು ಸಂಪಾದಕೀಯ ಬರೆದಿದ್ದಾರೆ. 'ಬಾಗೂರು ಕಾಶ್ಮೀರವೇ? ಎಂದು ಹೇಳಿ ಕನ್ನಡಪ್ರಭದವರು ಕೂಡ ಒಂದು ಸಂಪಾದಕೀಯವರನ್ನು ಬರೆದಿದ್ದಾರೆ.

"…. ಈ ಬಾಗೂರಿನ ಕರಾಳ ಪ್ರಕರಣಗಳು ಪತ್ರಿಕೆಗಳಲ್ಲಿ ಪ್ರತಿನಿತ್ಯ ಪ್ರಕಟವಾದಾಗಲೂ ಮುಖ್ಯಮಂತ್ರಿ, ಗೃಹಮಂತ್ರಿ, ವಾರ್ತಾಮಂತ್ರಿಗಳು ಮೌನವಾಗಿದ್ದಾರೆ. ಇದರ ಅರ್ಥ ಏನು? ಜಿಲ್ಲಾಧಿಕಾರಿ, ಪೋಲೀಸ್ ಅಧಿಕಾರಿಗಳ ಮಾತನ್ನು ನಂಬುವಂಥ ಹಂತವನ್ನು ಪಟೇಲರು ತಲುಪಬಾರದಿತ್ತು…" ಪುನ: ಕನ್ನಡ ಪ್ರಭ 23ನೇ ತಾರೀಖಿಗೆ ಬರೆದರು. ಅದರಲ್ಲಿ ಬಹಳ ಸ್ಪಷ್ಟವಾಗಿ

ಬರೆದಿದ್ದಾರೆ "ಚಳುವಳಿ" ಹಿಂಸಾತ್ಮಕ ರೂಪ ತಾಳಿದಾಗ ಅದಕ್ಕೆ ವ್ಯಾಪಕವಾದ ಪ್ರಚಾರ ಸಿಕ್ಕಿದಾಗ ಸರ್ಕಾರದ ದಂಡ ಪ್ರಯೋಗ ಜೋರಾಗಿ ಆಗಿದೆ. ಬಾಗೂರು ನವಿಲೆ ಪ್ರದೇಶದ ಸುಮಾರು 40 ಹಳ್ಳಿಗಳಲ್ಲಿ ಒಂದು ರೀತಿಯ ಅಘೋಷಿತ ಪೊಲೀಸ್ ರಾಜ್ಯವೇ ಸ್ಥಾಪನೆ ಆಗಿಬಿಟ್ಟಿದೆ ಎನ್ನುವಂಥ ಸಂಶಯ ಮೂಡುವಂತಾಗಿದೆ. ಪೊಲೀಸ್ ಅಧಿಕಾರಿಗಳು ಸಂತ್ರಸ್ತರ ಚಳುವಳಿಯನ್ನು ವರದಿ ಮಾಡಿದ ಪತ್ರಕರ್ತರನ್ನು ಚಳುವಳಿಯ ಪ್ರಚೋದಕರೆಂದು ಭಾವಿಸಿ ಹಾಗೆ ನಡೆಸಿಕೊಂಡಿರುವುದು ಖಂಡನಾರ್ಹ..."

ಅಧ್ಯಕ್ಷರೇ, ಪತ್ರಕರ್ತರಿಗೆ ಪೊಲೀಸರು ಪೆಟ್ಟು ಕೊಟ್ಟಾಗ ಸನ್ಮಾನ್ಯ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬೆಂಗಳೂರಿನ ಬಹಿರಂಗ ಸಭೆಯಲ್ಲಿ ಇಂದಿರಾಗಾಂಧಿಯವರ ಸಮ್ಮುಖದಲ್ಲಿ ಪತ್ರಿಕಾಕರ್ತರ ಕ್ಷಮೆ ಕೇಳಿದರು. ಅಂತಹ ಒಂದು ಸೆನ್ಸಿಟಿವಿಟಿ ಕೂಡ ಈ ಸರ್ಕಾರಕ್ಕೆ ಇವತ್ತು ಇಲ್ಲದೇ ಹೋಯಿತು. ಇವತ್ತು ಆ ಜಿಲ್ಲೆಯ ಪೊಲೀಸ್ ಅಧಿಕಾರಿ ಏನು ಹೇಳುತ್ತಿದ್ದಾರೆ ಎಂದರೆ, ಕಮ್ಯುನಿಸ್ಟ್ ಪಕ್ಷದ ಕಿಸಾನ್ ವಿಭಾಗದ ಗೋಪಾಲ್ ಅವರು ನೇತೃತ್ವ ವಹಿಸಿದ್ದಕ್ಕೆ ಅವರಿಗೆ ಚೂರಿ ಹಾಕಿದಾಗ, ಬಡಿದಾಗ ಪೊಲೀಸ್ ಜಿಲ್ಲಾಧಿಕಾರಿ ಏನು ಹೇಳುತ್ತಾರೆ? ಇದು ಉದಯವಾಣಿಯ 10.9.98ರ ಪತ್ರಿಕೆಯಲ್ಲಿ ಬಂದಿದೆ. ಇದನ್ನು ನೋಡಿದರೆ ಇದೇನು ಬ್ರಿಟಿಷರ ಕಾಲದಲ್ಲಿರುವ ಹೇಳಿಕೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ. ಅಧ್ಯಕ್ಷರೇ, ಆ ಎಸ್.ಪಿ. ಹೇಳುತ್ತಾರೆ.

"ನಾವು ಹೊಡೆಯುವುದಾಗಿದ್ದರೆ ಯಾವಾಗಲೋ ಹೊಡೆದುಹಾಕುತಿದ್ದೆವು. ಪೋಲೀಸರು ಏಕೆ ಗೋಪಾಲನ ಮೇಲೆ ಹಲ್ಲೆ ಮಾಡುತ್ತಾರೆ? ಅದರ ಅಗತ್ಯವೇ ಇಲ್ಲ. ನಾವು ಹೊಡೆಯುವುದಾಗಿದ್ದರೆ ಯಾವಾಗಲೋ ಹೊಡೆದು ಹಾಕುತ್ತಿದ್ದೆವು..."

ಇಂಥಾದ್ದು ನಡೆದಾಗ ಒಂದು ಇನ್ವೆಸ್ಟಿಗೇಷನ್ ಮಾಡಲಿಲ್ಲ. ಪೊಲೀಸ್ ಅತಿರೇಕ ಆಗಿದೆ ಎಂದು ಹೇಳಿ ಜಿಲ್ಲಾಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ.

"... ಬಾಗೂರು ನವಿಲೆ ಸುರಂಗ ಸಂತ್ರಸ್ತರ ಹಳ್ಳಿಗಳ ಮೇಲೆ ಪೊಲೀಸರ ಅತಿರೇಕ ನಡೆದಿರುವುದನ್ನು ಜಿಲ್ಲಾಧಿಕಾರಿ ರಾಕೇಶ್‌ಸಿಂಗ್ ಅವರು ಒಪ್ಪಿಕೊಂಡಿದ್ದಾರೆ. ನಗರದಲ್ಲಿ ಇಂದು ಪತ್ರಕರ್ತರೊಡನೆ ಮಾತನಾಡುತ್ತಿದ್ದ ಅವರ ಸುಮಾರು ನೂರು ಮಹಿಳೆಯರಿಗೆ ಲಾಠಿ ಏಟು ಬಿದ್ದಿದೆ. ಅವರಲ್ಲಿ ಕೆಲವರಿಗೆ ಮಾತ್ರ ಬಹಳ ಪೆಟ್ಟಾಗಿದೆ. ನಾನು ಬಾಗೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರತಿ ಮನೆಗಳಿಗೆ ಭೇಟಿ ನೀಡಿ ದೌರ್ಜನ್ಯ ಹಾಗೂ ಆಸ್ತಿಪಾಸ್ತಿಗಳಿಗೆ ಆಗಿರುವ ಹಾನಿಯನ್ನು ನೋಡಿದ್ದೇನೆ..."

ಯಾವ ಪರಿಹಾರವನ್ನೂ ಕೊಟ್ಟಿಲ್ಲ, ಯಾವ ಎನ್‌ಕ್ವೈರಿಯನ್ನೂ ಮಾಡಿಲ್ಲ. ಜಿಲ್ಲಾಧಿಕಾರಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರು ಇವತ್ತು ದೌರ್ಜನ್ಯವಾಗಿದೆ, ಅತಿರೇಕವಾಗಿದೆ ಎಂದು ಹೇಳಿದ್ದಾರೆ. ನೂರಾರು ಮಹಿಳೆಯರು ಪೆಟ್ಟು ತಿಂದಿದ್ದಾರೆ. ಅದು ಮಹಿಳಾ ಪೋಲಿಸರಿಂದ ಅಲ್ಲ, ಗಂಡಸರೇ ಹೊಡೆದಿದ್ದಾರೆ. ಇಷ್ಟು ಆದರೂ ಕೂಡ ನಮ್ಮ ಲೆಕ್ಕದ ಪ್ರಕಾರ ನಾಲ್ಕುನೂರು ಜನ ಮಹಿಳೆಯರನ್ನು ಥಳಿಸಿದ್ದಾರೆ. 60 ರಿಂದ 80 ವಯಸ್ಸಿನ ಸುಮಾರು 40 ಜನ ವೃದ್ಧರನ್ನು ಥಳಿಸಿದ್ದಾರೆ. ಆಮೇಲೆ ಕೈಗೆ

ಸಿಕ್ಕಿದವರನ್ನೆಲ್ಲಾ ಬಂಧಿಸಿದ್ದಾರೆ. ಒಬ್ಬ ಕುರುಡಿ ಹುಡುಗಿಯನ್ನು ನಾನು ಸ್ವತಃ ನೋಡಿದ್ದೇನೆ. ನಾಲ್ಕೈದು ವರ್ಷದ ಮಗು, ಬಿದ್ದ ಛಡಿ ಏಟುಗಳು ಅವಳ ಬೆನ್ನಮೇಲಿದೆ. ಈ ರೀತಿಯ ಒಂದು ದೌರ್ಜನ್ಯದ ಪರಿಸ್ಥಿತಿ ನಡೆದಿರುವ ಆ ಸುರಂಗದ ಕತೆ ಇದೆ. ಹೆಚ್ಚು ಹೇಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. "ಹರೆಯದ ಹೆಣ್ಣಿಗೂ ಕೂಡ ಹೊಡೆದು, ನೊಂದವರ ಅಳಲು" ಅಂತ ಇದೆ. ಅಧ್ಯಕ್ಷರೇ, ಶವಪೂಜೆಗೂ ಅವಕಾಶ ಕೊಡಲಿಲ್ಲ. ಅಲ್ಲಿ ಒಬ್ಬ ಶಂಕರಾಚಾರ್ಯ ಎಂದು ಹೇಳಿ ಒಬ್ಬರು ಈ ಪೋಲಿಸನವರ ದೌರ್ಜನ್ಯದ ಶಾಕ್‌ನಿಂದಾಗಿ ಸತ್ತಿದ್ದಾರೆ. ಅವರ ಹೆಣವನ್ನು ಹೂಳಬೇಕೆಂದು ಪ್ರಯತ್ನ ಮಾಡುವಾಗ ಶವಸಂಸ್ಕಾರ ಮಾಡುವುದಕ್ಕೆ ಕೂಡ ಬಿಡದೆ ಅವರಿಗೆ ಹೊಡೆದು ಅವರ ಹೆಂಡತಿಮೇಲೆ ಹಲ್ಲೆ ಮಾಡಿದ್ದಾರೆ. ಆಕೆ ಇವತ್ತು ರೋಧಿಸುತ್ತಿದ್ದಾಳೆ. ಅವಳನ್ನು ಹೊರಗೆಳೆದು ಅವಳ ತೊಡೆಗೆ ಛಡಿ ಏಟು ಕೊಡತಕ್ಕಂಥ ಅಮಾನುಷವಾದಂಥ, ದೌರ್ಜನ್ಯ ಮಾಡತಕ್ಕಂಥ, ಕೆಲಸ ನಮ್ಮ ಕರ್ನಾಟಕ ನಾಡಿನಲ್ಲಿ ಈ ಪೋಲಿಸಿನವರು ಮಾಡುವುದಿದ್ದರೆ ಇನ್ನು ಯಾರನ್ನು ಕೇಳಬೇಕು? ಹ್ಯೂಮನ್ ರೈಟ್ಸ್ ಕಮೀಷನ್‌ನವರಿಗೆ ಕಿವಿ ಇಲ್ಲ. ಅದು ಕುರುಡಾಗಿದೆ. ದಯಮಾಡಿ ಕ್ಷಮಿಸಬೇಕು. ಅಲ್ಲಿ ಬಹಳ ಒಳ್ಳೆಯ ಅಧ್ಯಕ್ಷರು ಜಸ್ಟೀಸ್ ವೆಂಕಟಾಚಲಯ್ಯನವರು ಇದ್ದಾರೆ. ನಾನು ಸ್ವತಃ ಹೋಗಿ ಬೇಡಿದ್ದೇನೆ 'ನೀವು ದಯಮಾಡಿ ಇನ್ವೆಸ್ಟಿಗೇಷನ್ ಮಾಡಿ, ಅಲ್ಲಿ ಪೊಲೀಸಿನವರು ಮಾಡುತ್ತಿಲ್ಲ, ಯಾರೂ ಮಾಡುತ್ತಿಲ್ಲ, ನೀವು ಮಾಡಬೇಕು' ಎಂದು ಹೇಳಿದಾಗಲೂ ಕೂಡ ಯಾರಿಗೂ ಕಿವಿ ಇಲ್ಲ, ಬಾಯಿ ಇಲ್ಲದಂಥ ಪರಿಸ್ಥಿತಿ ಇವತ್ತು ಬರಬೇಕಾದರೆ ತಾವು ದಯವಿಟ್ಟು ಆಲೋಚನೆ ಮಾಡಬೇಕು. ಆದ್ದರಿಂದ ಇವತ್ತು ಈ ರೀತಿಯ ದೌರ್ಜನ್ಯಗಳು ಆಗಿವೆ. ಒಬ್ಬ ಹೆಣ್ಣು ಮಗು ಕೂಡ ಅನೇಕ ಹೇಳಿಕೆಗಳನ್ನೂ ಕೊಟ್ಟಿದ್ದಾರೆ. ಜನ ರೊಚ್ಚಿಗೆದ್ದರೂ ಕೂಡ ಅದರ ಕಡೆಗೆ ಲಕ್ಷ್ಯ ಇಲ್ಲದೆ, ನಿರ್ಲಕ್ಷ್ಯತನ ತೋರಿ ಯಾವುದೇ ತನಿಖೆ ಮಾಡಿಲ್ಲ. ಗೃಹಮಂತ್ರಿಗಳು ಬರುತ್ತಾರೆ. ಅವರು ಹಾಸನಕ್ಕೆ ಬರುತ್ತಾರೆ, ಅವರ ಪ್ರಯಾಣ ಮುಂದೆ ಹೋಗುತ್ತಾರೆ. ನನಗೆ ತಿಳಿದ ಹಾಗೆ ಅವರು ಅಲ್ಲಿಗೆ ಬಂದಿದ್ದು ಗೊತ್ತಿಲ್ಲ. ತಾವು ದಯಮಾಡಿ ಅದನ್ನು ಕರೆಕ್ಟ್ ಮಾಡಬೇಕು. ಆದ್ದರಿಂದ ಅಧ್ಯಕ್ಷರೇ, ಇವತ್ತು ಇಂತಹ ಅನಾಹುತಗಳು ಅನೇಕ ನಡೆದಿವೆ.

ಅಷ್ಟು ಮಾತ್ರವಲ್ಲ ಇವತ್ತು ಬೆಂಗಳೂರು ನಗರದಲ್ಲಿ ನಾವು ಅನೇಕ ಪ್ರಾಜೆಕ್ಟ್‌ಗಳನ್ನು ಲೈಟ್‌ರೈಲ್ವೆ ಪ್ರಾಜೆಕ್ಟ್‌ಗಳನ್ನು ಇ.ಎಲ್.ಆರ್.ಟಿ.ಎಸ್. ಎಂಬ ಈ ಪ್ರಾಜೆಕ್ಟನ್ನು ನಮ್ಮ ಕಾಲದಲ್ಲಿ ಅಪ್ರೂವ್ ಮಾಡಿದ್ದೆವು. ರೈಲ್ವೆಯವರು ಅದು ಬ್ರಾಡ್‌ಗೇಜ್ ಎಂದು ಮಾಡಿದರು. ಅದು ಬ್ರಾಡ್‌ಗೇಜ್ ಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಸ್ಟ್ಯಾಂಡರ್ಡ್ ಗೇಜ್ ಬೇಕು. ಅದು ಡೆಟ್ರಾಯಿಟ್‌ನಲ್ಲಿದೆ ಅಥವಾ ಅನೇಕ ಕಡೆಗಳಲ್ಲಿ ಕೂಡ ಬ್ರಾಡ್‌ಗೇಜ್ ಮಾಡುವುದಕ್ಕೆ ಆಗುವುದಿಲ್ಲ. 20 ಅಡಿಗಿಂತ ಮೇಲೆ ಅದು ಬರುವುದು. ಇದು ಅನೇಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆಗಿದೆ. ಇದೇನೂ ಹೊಸದಲ್ಲ. ಆದರೆ ಇವತ್ತು ಕೂಡ ಅದು ಚರ್ಚೆಯಲ್ಲೇ ನಿಂತುಬಿಟ್ಟಿದೆ. ಯಾವ ಅಭಿವೃದ್ಧಿ ಕೂಡ ಈ ಲೈಟ್‌ರೈಲ್ವೆ ಬಗ್ಗೆ ಆಗಿಲ್ಲ. ಹಾಗೆಯೇ ಅನೇಕ ಫ್ಲೈಓವರ್‌ಗಳದ್ದು ಪಟ್ಟಿ ಇದೆ. ಸುಮಾರು ಹತ್ತಿಪ್ಪತ್ತು ಫ್ಲೈಓವರುಗಳನ್ನು ಮಾಡಬೇಕೆಂದು ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಕಾರ್ಪೊರೇಷನ್ ಎಂದು ನಾನೇ ಮಾಡಿ, ನಾನು ಅದರ ಅಧ್ಯಕ್ಷನಾಗಿದ್ದೆ. ಆಮೇಲೆ ಕೂಡ ಇದನ್ನು ಫ್ಲೈಓವರ್ ಸಭೆ ಮಾಡಬೇಕೆಂದು ಮಾಡಿದಾಗ ಸಿರ್ಸಿ ಸರ್ಕಲ್‌ನಿಂದ ಟೌನ್‌ಹಾಲ್‌ವರೆಗೆ ಫ್ಲೈಓವರ್ ಮಾಡಿದ್ದಾರೆ. ಅದು ಈ ತಿಂಗಳಲ್ಲಿ ಮುಗಿಯುತ್ತದೆ.

ಅದು ಮುಗಿದಮೇಲೆ ನಿಜವಾಗಿಯೂ ಟೌನ್‌ಹಾಲ್‌ನಿಂದ ಹಡ್ಸನ್ ಸರ್ಕಲ್‌ವರೆಗೆ ಇದು ಬರದೇ ಹೋದರೆ ದೊಡ್ಡ ಅನಾಹುತವಾಗುತ್ತದೆ. ಇವರಲ್ಲಿ ಹೊಂದಾಣಿಕೆ ಇಲ್ಲ, ಸರಿಯಾದ ಪ್ಲಾನಿಂಗ್ ಇಲ್ಲ. ಈಗ ಟ್ರಿನಿಟಿ ಸರ್ಕಲ್, ಮೆಕ್ರಿ ಸರ್ಕಲ್ ಇಲ್ಲಿ ಯಾವ ಒಂದು ಪ್ಲಾನ್ ಕೂಡ ಮಾಡಿಲ್ಲ. ಯಾವ ಯೋಜನೆ ಕೂಡ ಇವತ್ತು ಜಾರಿಗೆ ಬರಲಿಲ್ಲ. ಅಧ್ಯಕ್ಷರೇ, ಪ್ರಮುಖವಾದಂಥ ಇನ್ನೊಂದು ವಿಚಾರವನ್ನು ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇದು ಮೀನುಗಾರರಿಗೆ ಸಂಬಂಧಪಟ್ಟಂಥ ವಿಚಾರ. ನಮ್ಮಲ್ಲಿ ಸುಮಾರು ಮುನ್ನೂರು ಕಿ.ಮೀ. ಉದ್ದದ ಕರಾವಳಿ ಇದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡದಲ್ಲಿ ಎಲ್ಲಿ ಯಾಂತ್ರೀಕೃತ ದೋಣಿಗಳಿವೆ, ಅಲ್ಲಿ 354 ಪರ್ಸಿನ್ ಬೋಟುಗಳು, 2709 ಟ್ರಾಲರ್‌ಗಳು ಮತ್ತು ಇನ್ನಿತರ ಬೋಟುಗಳು ಇವೆ. 354 ಪರ್ಸಿನ್ ಬೋಟುಗಳಿಗೆ ಸ್ವಲ್ಪ ಮೀನು ಸಿಗುತ್ತದೆ. ಉಳಿದ ಬೋಟುಗಳಿಗೇ ಮೀನೇ ಇಲ್ಲ. ದೊಡ್ಡ ಕ್ಷಾಮ ಇವತ್ತು ಬಂದಿದೆ. ಮೂರು ಲಕ್ಷ ಮೀನುಗಾರರು ಇವತ್ತು ಮೀನು ವ್ಯವಸ್ಥೆಗೆ ಹೊಂದಿಕೊಂಡಿದ್ದಾರೆ. ಆದರೆ ನೇರವಾಗಿ ಮೀನುಗಾರಿಕೆಯಲ್ಲಿ ತೊಡಗಿದವರು ಸುಮಾರು ಒಂದು ಲಕ್ಷ ಮಂದಿ. 98-99ರ ಮೀನುಗಾರಿಕಾ ಋತು ಎಂದರೆ ಸೆಪ್ಟೆಂಬರ್ 1 ರಿಂದ ಅಕ್ಟೋಬರ್ 19ರವರೆಗೆ ಮೀನು ಉತ್ಪನ್ನವಾದದ್ದು 3,180 ಮೆಟ್ರಿಕ್ ಟನ್. ಇದು ಸೆಪ್ಟೆಂಬರ್ 1 ರಿಂದ ಅಕ್ಟೋಬರ್ 15ರವರೆಗೆ. ಹೋದವರ್ಷ ಇದೇ ಅವಧಿಯಲ್ಲಿ 13,682 ಮೆಟ್ರಿಕ್ ಟನ್ ಇದ್ದರೆ ಈ ವರ್ಷ ಬರೇ 3,180 ಟನ್ ಮಾತ್ರ ಇದೆ. ಮೀನುಗಾರರಿಗೆ ಮಳೆಗಾಲದಲ್ಲಿ ಜುಲೈ ಮತ್ತ ಆಗಸ್ಟ್, ಈ ಎರಡು ತಿಂಗಳಲ್ಲಿ ಮೀನುಗಾರಿಕೆಗೆ ನಿಷೇಧ ಇದೆ. ಏಕೆಂದರೆ ಗಾಳಿ ಇದ್ದಂಥ ಸಂದರ್ಭದಲ್ಲಿ ಮೀನುಗಾರಿಕೆ ಮಾಡಬಾರದು. ಮತ್ತು ಬಿರುಗಾಳಿ ಹಾಗೂ ವಿಶೇಷವಾದಂಥ ಅಲೆ ಬರುತ್ತದೆ ಎಂದು ಹೇಳಿ ಎರಡು ತಿಂಗಳು ಅವರು ಹೋಗುವುದಿಲ್ಲ. ಆದರೆ ವಿದೇಶಿ ಹಡಗುಗಳು, ವಿದೇಶಿ ಟ್ರಾಲರ್‌ಗಳು ಅವರು 35 ನಾಟಿಕಲ್ ಮೇಲೆ ಬರಬೇಕು. ಅವರು ಅದನ್ನು ಕೂಡ ದಾಟಿ ಬರುತ್ತಾರೆ. ಕೋಸ್ಟಲ್ ಗಾರ್ಡನ್ನು ನೀವು ನೇಮಕ ಮಾಡಬೇಕು ಮತ್ತು ಅವರನ್ನು ತಡೆಯಬೇಕು. ಸಾಧ್ಯವಿದ್ದರೆ ಕೇಂದ್ರಸರ್ಕಾರಕ್ಕೆ ಮನವರಿಕೆ ಮಾಡಬೇಕು. ಅದು ಯಾವುದನ್ನೂ ಮಾಡುತ್ತಿಲ್ಲ. ಇದರಿಂದ ಇವತ್ತು ಮೀನು ಉತ್ಪಾದನೆ ವಿಪರೀತ ಕಡಿಮೆಯಾಗಿದೆ. ಹಿಂದೆ ಬಂಡಾಸ್ ಮೀನು ಎಂದು ಇತ್ತು. 97-98ರಲ್ಲಿ 1500 ಟನ್ ನಾವು ರಫ್ತು ಮಾಡಿದ್ದೆವು. ಈ ಸಾರಿ 5 ಟನ್ ಮಾತ್ರ ರಫ್ತಾಗಿದೆ. ರಾಣಿ ಮೀನು ಎಂದು ಹೇಳಿ ಹೋದಸಾರಿ 3700 ಟನ್ ರಫ್ತಾಗಿದ್ದರೆ ಈ ಸಾರಿ 375 ಟನ್ ಮಾತ್ರ ರಫ್ತಾಗಿದೆ. ರಿಬ್ಬನ್ ಫಿಶ್ ಎನ್ನುವಂಥಾದ್ದು ಹೋದವರ್ಷ ಅದು 1500 ಟನ್ ಇದ್ದರೆ ಈ ವರ್ಷ ಏನೂ ಇಲ್ಲ. ಈ ರೀತಿಯಲ್ಲಿ ಇವತ್ತು ಮೀನು ಕ್ಷಾಮ ಇದೆ. ಅಧಿಕಾರಿಗಳಿಗೆ ಕೇಳಿದರೆ ಅವರಿಗೆ ಕ್ಷಾಮ ಇಲ್ಲ, ಅವರಿಗೆ ಮೀನು ಕ್ಷಾಮ ಕೂಡ ಬರುವುದಿಲ್ಲ. ಆದ್ದರಿಂದ ಇದಕ್ಕೆ ವ್ಯಾಪಕವಾದ, ಸಮಗ್ರವಾದ ವ್ಯವಸ್ಥೆಯಾಗಬೇಕು. ಡೀಸಲ್ ಸೇಲ್ಸ್ ಟ್ಯಾಕ್ಸ್ ರದ್ದು ಮಾಡಬೇಕು. ಅದು ಸುಮಾರು 60 ಲಕ್ಷ ಬರುತ್ತದೆ. ಅದನ್ನು ತಕ್ಷಣ ಮಾಡಬೇಕು. ಮತ್ತು ಅವರಿಗೆ ಬೇಕಾದಂಥ ಅನೇಕ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಎಂದು ಹೇಳಿ ಮೀನುಗಾರರ ಬೇಡಿಕೆ ಇದೆ. ಪ್ರಜಾವಾಣಿಯಲ್ಲಿ ಕೂಡ 31.10.98ರಂದು ಒಂದು ಸಂಪಾದಕೀಯ ಬಂದಿದೆ. 'ಕರಾವಳಿ ಮೀನುಗಾರರಿಗೆ ರಕ್ಷಣೆ' ಎಂದು ಹೇಳಿ ಒಂದು ಸಂಪಾದಕೀಯ ಕೂಡ ಬಂದಿದೆ.

5.40 ಪಿ.ಎಂ

ಆದ್ದರಿಂದ, ಸರ್ಕಾರ ಇದರ ಬಗ್ಗೆ ತಕ್ಷಣ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಇನ್ನೂ ಅನೇಕ ವಿಚಾರಗಳಿದ್ದರೂ ಕೂಡ ಅವುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ಮಾನ್ಯ ಅಧ್ಯಕ್ಷರಿಗೆ ಮತ್ತು ಸದನಕ್ಕೆ ನನ್ನ ವಂದನೆಗಳನ್ನು ಸಮರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್. ರಾಜಣ್ಣ (ಭಾರತೀನಗರ) : ಸನ್ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದಿಂದ ನನಗೆ ಮಾತನಾಡಲು ತಾವು ಅಪ್ಪಣೆ ಕೊಟ್ಟಿದ್ದಕ್ಕಾಗಿ ನಿಮಗೆ ಮೊದಲನೆಯದಾಗಿ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಆಡಳಿತ ಪಕ್ಷದಲ್ಲಿರತಕ್ಕ ಎಲ್ಲಾ ಸಚಿವರಿಗೂ, ಗೆಳೆಯರಿಗೂ, ಅಕ್ಕತಂಗಿಯರಿಗೂ ವಿರೋಧ ಪಕ್ಷದಲ್ಲಿರತಕ್ಕ ಗೆಳೆಯರಿಗೂ, ಸಹೋದರರಿಗಳೂ ಮತ್ತು ವಿರೋಧಪಕ್ಷದಲ್ಲಿರತಕ್ಕ ಹಿರಿಯ ನಾಯಕರಿಗೂ, ಪ್ರೆಸ್‌ನವರಿಗೂ, ಅಧಿಕಾರಿಗಳಿಗೂ ಮತ್ತು ಗ್ಯಾಲರಿಯಲ್ಲಿರತಕ್ಕ ಎಲ್ಲರಿಗೂ ನನ್ನ ವಂದನೆಗಳನ್ನು ಹೇಳುತ್ತಾ,

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇದೇನು ಕೊನೆಯ ಭಾಷಣವೇ. ಕೊನೆಯ ಭಾಷಣ ಮಾಡತಕ್ಕಂಥವರು ಈ ತರಹ ಮಾತನಾಡಬೇಕಾಗುತ್ತದೆ.

ಮಾನ್ಯ ಸದಸ್ಯರು : ರಾಜಣ್ಣನವರ ಸಮಾರೋಪ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜಣ್ಣನವರು ಕೊನೆಯ ಭಾಷಣ ಮಾಡುತ್ತಿದ್ದಾರೋ ಹೇಗೆ?

ಶ್ರೀ ಎನ್.ರಾಜಣ್ಣ : ಅದು ಆಗುವುದಿಲ್ಲ ಕುಳಿತುಕೊಳ್ಳಿ ಸಾರ್. ಏಕೆಂದರೆ 5 ದಿನದಿಂದ ನಾವು ಕುಳಿತಿದ್ದೇವೆ. ಮೂರು ದಿನದಿಂದ ನೀವು ಮಾತನಾಡಿದ್ದನ್ನು ನಾವು ಕೇಳಿದ್ದೇವೆ.

"ಮಾತನಾಡಿದರೆ, ಮಾತು ಮುತ್ತಿನಂತಿರಬೇಕು ಮಾತು ಚುಟುಕಿಯಂತಿರಬೇಕು, ಮಾತು ಲಿಂಗ ಮೆಚ್ಚಬೇಕು" ಇದನ್ನು ಬಸವಣ್ಣನವರು ಹೇಳಿದ್ದುದು.

ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕ ಅವಿಶ್ವಾಸ ನಿರ್ಣಯವನ್ನು ಮೊದಲನೆಯದಾಗಿ ವಿರೋಧ ಮಾಡುತ್ತಾ ಇದ್ದೇನೆ. ನಮ್ಮ ಸರ್ಕಾರ 1999ರ ಡಿಸೆಂಬರ್ ವರೆಗೆ ಇರುತ್ತದೆ. ಆದರೆ, ನಾನು ಸನ್ಮಾನ್ಯ ಖರ್ಗೆಯವರನ್ನು ಮೆಚ್ಚುತ್ತೇನೆ. ಅವರು 23 ಆಪಾದನೆಗಳನ್ನು ನಮ್ಮ ಮೇಲೆ ಇಟ್ಟಿದ್ದಾರೆ. ಕೆಲವು ಆಪಾದನೆಗಳು ಇವೆ, ನಾನು ಒಪ್ಪುತ್ತೇನೆ. ಸ್ವಲ್ಪ ಇರಿ, ನಾನು ಪಾಯಿಂಟಿಗೆ ಬರುತ್ತೇನೆ. ನಾನು ಸತ್ಯ ಹೇಳುವುದಕ್ಕೆ ಹೊರಟಿದ್ದೇನೆ. ನಮ್ಮ ಪಕ್ಷದಲ್ಲಿ ಆಗುತ್ತಿರುವುದು, ನಮ್ಮ ಮನೆಯ ಆಂತರಿಕ ವಿಷಯದ ಸಮಸ್ಯೆ. ನಮ್ಮ ಮನೆಯ ಸಮಸ್ಯೆಯನ್ನು ಸರಿಪಡಿಸುವುದು ನಮ್ಮ ಕರ್ತವ್ಯ. ಈ ರಾಜ್ಯದಲ್ಲಿ ಏನಾದರೂ ಒಳ್ಳೆಯ ಎಂ ಎಲ್ ಎ ಗಳು ಬಂದಿದ್ದಾರೆಂದರೆ, 1994-95ರಲ್ಲಿ ಚುನಾವಣೆಯಾಗಿ ಬಂದಂಥ 120 ಜನ ಆಡಳಿತ ಪಕ್ಷದಲ್ಲಿ ಇದ್ದಾರೆ.

We are not for power. We have come to this great Assembly built by Late Sri Kengal Hanumanthaiah to do good service to the 5 crore people of this State. ಸ್ವಾಮಿ, ಎಲ್ಲರ ಮನೆಯಲ್ಲೂ ದೋಸೆ ತೂತು. ಆದರೆ,

ಅಧ್ಯಕ್ಷರು : ನಿಮ್ಮ ಮನೆಯಲ್ಲಿ ಹೆಂಚೀ ತೂತು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ : ಒಂದು ಕೆಜಿ ಅಕ್ಕಿಗೆ ಇನ್ನೂರು ಗ್ರಾಂ ಉದ್ದಿನಬೇಳೆ ಹಾಕಿದರೆ 50 ದೋಸೆಯಾಗುತ್ತದೆ. ಈ 50 ದೋಸೆಯನ್ನು 10 ರೂಪಾಯಿಗಳಂತೆ ಮಾರಿದರೆ 500 ರೂಪಾಯಿ ಬರುತ್ತದೆ. ಅದೂ ಖಾಲಿ ದೋಸೆ. ಆದರೆ, ಈ 50 ದೋಸೆಯಲ್ಲಿ ಮುಖ್ಯವಾಗಿ ದೋಸೆ ಹಾಕುವವರು ಯಾರು? ಆ ದೋಸೆ ಹಾಕುವುದಕ್ಕೇ ನುಗ್ಗಲಾಟ ನಾನು ಹಾಕಬೇಕೇ, ನೀನು ಹಾಕಬೇಕೇ ಎಂದು. ದೋಸೆ ಹಾಕುವವರು ಪರ್‌ಫೆಕ್ಟಾಗಿದ್ದರೆ, ದೋಸೆ ಟೇಸ್ಟ್ ಆಗಿರುತ್ತದೆ, ರುಚಿಯಾಗಿರುತ್ತದೆ. ಈ ದೋಸೆ ಹಾಕುವವರು ನಾವೇ. ಇವತ್ತು ಜೆ.ಹೆಚ್. ಪಟೇಲರು ಇರಬಹುದು, ನಾಳೆ ಇನ್ನೊಬ್ಬರು ಆಗಬಹುದು. ಆದರೆ, ಈ ದೋಸೆ ತಿನ್ನುವುದಕ್ಕೇ ನುಗ್ಗಲಾಟ. ತಿನ್ನುವುದಕ್ಕೆ ಬೇಕಾದರೆ ನುಗ್ಗಲಾಟ ಮಾಡಿ. ನೀವು ದೋಸೆ ಸುಡುವುದಕ್ಕೆ ಹೋದರೆ, ನಿಮ್ಮ ಹೆಂಚೀ ತೂತಾಗುತ್ತದೆ. ಇದು ನಿಮಗೆಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು : ದೋಸೆ ಚಟ್ನಿ ವಿಷಯ ಆಮೇಲೆ ಮಾತನಾಡೋಣ, ಅಸೆಂಬ್ಲಿಗೆ ಸಂಬಂದಪಟ್ಟಿದ್ದು ಏನಾದರೂ ಹೇಳಿ.

ಶ್ರೀ ಎನ್. ರಾಜಣ್ಣ : ಈ ದೋಸೆ ಸುಡುವುದು ಎಲ್ಲರಿಗೂ ಬರುವುದಿಲ್ಲ. ದೋಸೆ ತಿನ್ನುವುದಕ್ಕೆ ನೂಕು ನುಗ್ಗಲಾಟ ಆಗಬಹುದು. ಆದರೆ, ನಿಮ್ಮಲ್ಲಿ ದೋಸೆ ಸುಡುವುದಕ್ಕೇ ನೂಕು ನುಗ್ಗಲಾಟ ಆಗುತ್ತದೆ. ಈ ರೀತಿ ನೂಕು ನುಗ್ಗಲಾಟವಾದರೆ, ದೋಸೆ ಕೆಟ್ಟು ಹೋಗುತ್ತದೆ. ಏನಿದ್ದರೂ ನಾವೇ ರೂಲ್ ಮಾಡಬೇಕು. ನಾವೇ ಟೇಸ್ಟ್ ದೋಸೆ ಕೊಡುವುದು. One thing I want to bring to the notice of this House. ಮಾನ್ಯ ಖರ್ಗೆಯವರು ಹೇಳಿದರು. ಮಾನ್ಯ ಯಡಿಯೂರಪ್ಪನವರು ನನಗಿಂತ ಸೀನಿಯರ್ ಲೀಡರ್. ವಯಸ್ಸಿನಲ್ಲಿ ನನಗೂ ಅವರಿಗೂ ಸಮ ಇರಬಹುದು, ಇಲ್ಲವೇ ನಾನು ಎರಡು ವರ್ಷ ದೊಡ್ಡವನಿರಬಹುದು. I appreciate you, but I don't appreciate the words used. ಆ ಕಡತದಲ್ಲಿ ನೋಡಿದರೆ, ಅವರು ಗೊತ್ತಿದ್ದೇ ಮಾತನಾಡಿದ್ದಾರೋ ಅಥವಾ ತಿಳಿಯದೇ ಮಾತನಾಡಿದ್ದಾರೋ ಎಂಬುದು ತಿಳಿಯುತ್ತಿಲ್ಲ. ಕೆಲವು ಪದಗಳನ್ನು ಆವೇಶದಲ್ಲಿ ಮಾತನಾಡುವುದನ್ನು ನೋಡಿದರೆ, ಒಬ್ಬ ಲೀಡರ್ ಏನು ಹೀಗೆ ಮಾತನಾಡುತ್ತಿದ್ದಾರೆ ಎನ್ನಿಸುತ್ತದೆ. ಅಂದರೆ, ನೀವು ನಾಯಕರು, ಮುಂದೆ ಏನೇನೋ ಆಸೆ ಇಟ್ಟುಕೊಂಡಿದ್ದೀರಿ. ಸಾರ್, ಮನುಷ್ಯನಿಗೆ ಆಸೆ ಇರಬೇಕು. ದುರಾಸೆ ಬಿಡಬೇಕು. ಕುರ್ಚಿ ತಾನಾಗಿಯೇ ಬರುವಂತಿದ್ದರೆ ಬಂದೇ ಬರುತ್ತದೆ. ಸೆಕ್ಷನ್ 318ರ ಪ್ರಕಾರ ಸ್ಪೀಕರ್ ಮೋಷನ್ ಮೂವ್ ಮಾಡಿದ ಮೇಲೆ, the motion becomes the property of the House. Everybody has got right to speak. I must thank our Hon'ble Speaker who has allowed me to speak.

ಸ್ಪೀಕರ್ ಸಾಹೇಬರು ಬಿಡಬೇಕಾದರೆ, ಮುಂಚೆಯೇ ಎಲ್ಲರನ್ನೂ ವೆರಿಫೈ ಮಾಡಿ, ರೂಲ್ ಪ್ರಕಾರ, ಸ್ಪೀಕರ್ ಸೆಕ್ಷನ್ 318ರ ಪ್ರಕಾರ ಎಲ್ಲಾ ಚೆಕ್ ಮಾಡಿ, ಇಲ್ಲಿ ಮೋಷನ್ ಮೂವ್ ಮಾಡುವುದಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ನಿಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಆದರೆ, ಮಾತನಾಡುವಾಗ ಕೆಲವು ಪದಗಳನ್ನು ಉಪಯೋಗಿಸುವಾಗ ನಾವು ಎಚ್ಚರಿಕೆಯಿಂದ ಇರಬೇಕು. ಸೆಕ್ಷನ್ 317ರ ಪ್ರಕಾರ ಅನ್ ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಬಾರದು. ಇದರಲ್ಲಿ ಕೆಲವು ಗೊತ್ತಾಗುವುದಿಲ್ಲ ಉಪಯೋಗಿಸುತ್ತೀರಿ. ಇದರಿಂದ ನಮಗೆ ಮನಸ್ಸು ನೋವಾಗುತ್ತದೆ. ನಾಳೆ ನೀವು ಈ ಕಡೆ ಬಂದರೆ, ಇನ್ನೊಬ್ಬರು ಉಪಯೋಗಿಸಿದಾಗ ನಿಮ್ಮ ಮನಸ್ಸಿಗೂ ಇದಾಗಬಾರದೆಂದು in future I request the senior leaders to maintain some discipline by using good words. ಸಾರ್ ನಮ್ಮ ಸರ್ಕಾರದ ಮಹಾನ್ ಸಾಧನೆಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಕಳೆದ 4 ವರ್ಷಗಳಿಂದ ಎಷ್ಟು ಸಾಧನೆಗಳನ್ನು ಮಾಡಿದ್ದೇವೆಂಬುದನ್ನು ನಿಮ್ಮ ಮನಸ್ಸನ್ನು ಮುಟ್ಟಿ ನೋಡಿಕೊಳ್ಳಿ. ಈ ಬಾರಿ ಬಜೆಟ್‌ನಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 15,580 ಕೋಟಿ ರೂಪಾಯಿಗಳನ್ನು ಈಗಾಗಲೇ ಮಂಜೂರು ಮಾಡಿದ್ದಾರೆ.

ಮಾನ್ಯ ಸದಸ್ಯರು : ಅಧ್ಯಕ್ಷರೇ, ರಾಜಣ್ಣನವರು ಸ್ವಲ್ಪ ಅಂಕಿ ಸಂಖ್ಯೆಗಳನ್ನು ಕಳೆದುಕೊಂಡು ಬಂದು ಹೇಳುವುದಕ್ಕೆ ಹೇಳಿ.

ಶ್ರೀ ಎನ್. ರಾಜಣ್ಣ : ನೀವು ಎದೆ ಮುಟ್ಟಿ ನೋಡಿಕೊಳ್ಳಿ. ಈ ನಾಲ್ಕು ವರ್ಷಗಳಲ್ಲಿ ಎಷ್ಟು ಡೆವಲಪ್‌ಮೆಂಟ್ ಆಗಿದೆ, ಇದು ಹಿಂದೆ ಆಗಿತ್ತೇ ಎಂದು ನೀವು ಎದೆಮುಟ್ಟಿಕೊಂಡು ಹೇಳಿ. ನಿಮ್ಮ ಕ್ಷೇತ್ರಗಳಲ್ಲಿ ಎಷ್ಟು ಅಭಿವೃದ್ಧಿಯಾಗಿದೆ ಎಂಬುದನ್ನು ಹೇಳಿ. ನಾವು ಯಾವುದೇ ಕೆಲಸ ಮಾಡಬೇಕಾದರೆ, ಈ ಪಕ್ಷ, ಆ ಪಕ್ಷ ಎಂದು ನೋಡುವುದಕ್ಕೆ ಹೋಗಲಿಲ್ಲ. ನಮ್ಮ ಸರ್ಕಾರ ಏನೂ ಮಾಡಿದೆ. in the field of agriculture, in the field of animal husbandry, in the field of rural development, in the field of education, power, health and upliftment of back ward classes and minorities, ದಲಿತರಿಗೆ ಏನು ಮಾಡಿದೆ ಎಂಬುದನ್ನು ಹೇಳಿ, 4 ವರ್ಷಗಳ ಇತಿಹಾಸವನ್ನು ಸ್ವಲ್ಪ ತೆಗೆದುಕೊಳ್ಳಿ.

ಅಧ್ಯಕ್ಷರು : ಅವಿಶ್ವಾಸ ನಿರ್ಣಯದ ಮೇಲೆ ಸಾಮಾನ್ಯವಾಗಿ ಯಾವಾಗಲೂ ಆಡಳಿತ ಪಕ್ಷದ ಸದಸ್ಯರು ಮಾತನಾಡುವುದಿಲ್ಲ. ಇದು ಒಂದು ವಿಶೇಷ ಸಂದರ್ಭ ಎಂದು ನಿಮ್ಮವರು ನಿಮ್ಮ ಹೆಸರನ್ನು ಕಳುಹಿಸಿದರು. ಅದಕ್ಕೆ ನಾನು ಆಯಿತು ಎಂದು ಅಂತ ಹೇಳಿದೆ. ಆಯಾಯಾ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಆಯಾಯಾ ಮಂತ್ರಿಗಳು ಉತ್ತರ ಕೊಡುತ್ತಾರೆ. ಮುಖ್ಯಮಂತ್ರಿಗಳು ಅವರು ಉತ್ತರ ಕೊಡುವಾಗ ವಿರೋಧಪಕ್ಷದವರು ಮಾಡಿದ ಟೀಕೆಗಳಿಗೆ ಉತ್ತರ ಕೊಡುತ್ತಾರೆ. ನೀವು ನಿಮ್ಮ ಕ್ಷೇತ್ರದಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಕಾರ್ಯಗಳು, ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಹೇಳಿ. ಹೇಗೆ ನಿಮ್ಮ ಸರ್ಕಾರ ಒಳ್ಳೆಯದು ಎನ್ನುವ ವಿಷಯವನ್ನು ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡಿ. ಅವರಿಗೆ ಎಲ್ಲಾ ವಿಚಾರ ಗೊತ್ತಿದೆ ಅವರು ಏನು ಬೇಕಾದರೂ ಹೇಳುತ್ತಾರೆ.

7444 - 152

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, 13ನೇ ತಾರೀಖು ಬದಲಾವಣೆ ಮಾಡುತ್ತೀರಾ? ತಾವು ಯಾವ ಕಡೆ? ತಾವು ಸಿದ್ದರಾಮಯ್ಯನವರ ಕಡೆಯೋ ಅಥವಾ ಪಟೇಲರ ಕಡೆಯೋ?

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, it is party discipline.

MR. SPEAKER : He is a disciplined man.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಆಗಲೇ ಒಂದು ಮಾತು ಹೇಳಿದರು ಜೆ.ಹೆಚ್ ಪಟೇಲರಾದರೂ ಇರಬಹುದು, ಇನ್ನು ಯಾರಾದರೂ ಇರಬಹುದು ಎಂದು ಅದಕ್ಕೆ 13ನೇ ತಾರೀಖು ಯಾರು ಇರುತ್ತಾರೆ ಎಂದು ನಾನು ಹೇಳುವುದು.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, 1994ರ ಕೊನೆಯವರೆಗೂ ಶ್ರೀ ವೆಂಕಟಸುಬ್ಬಯ್ಯ ಆಯಿತು, ಆಮೇಲೆ ವೀರೇಂದ್ರಪಾಟೀಲರು ಬಂದರು, ಆಮೇಲೆ ಬಂಗಾರಪ್ಪನವರು ಬಂದರು ಆಮೇಲೆ ಮಾನ್ಯ ಮೊಯ್ಲಿಯವರು ಬಂದರು, ಅವರ ಕಾಲದಲ್ಲಿ ನಾಲ್ಕು ಜನ ಮುಖ್ಯಮಂತ್ರಿಗಳ ಆದರು. ನಮ್ಮ ಕಾಲದಲ್ಲಿ ಮೊದಲನೇ ಮುಖ್ಯಮಂತ್ರಿ ಶ್ರೀಮಾನ ದೇವೇಗೌಡರು. He became Prime Minister of this country. ಮಣ್ಣಿನ ಮಗ. ಅವರನ್ನು 13 ಪಕ್ಷಗಳು ಸೇರಿ ಪ್ರಧಾನ ಮಂತ್ರಿಗಳನ್ನಾಗಿ ಮಾಡಿದರು. ಅವರು ಪ್ರಧಾನ ಮಂತ್ರಿಯಾದ ಮೇಲೆ ಇಲ್ಲಿ ಮಾನ್ಯ ಜೆ ಎಚ್ ಪಟೇಲರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದೆವು. ಇಲ್ಲದಿದ್ದರೆ ಶ್ರೀಮಾನ್ ದೇವೇಗೌಡರೇ ಮುಖ್ಯಮಂತ್ರಿಗಳಾಗಿರುತ್ತಿದ್ದರೂ 5 ವರ್ಷಗಳವರೆಗೂ. We maintain discipline in our party.

ಶ್ರೀ ಡಿ.ಆರ್. ಪಾಟೀಲ್ : ನಿಮ್ಮ ಖಾತೆ ಯಾವುದು ಮುಂದಿನ ಮಂತ್ರಿಮಂಡಲದಲ್ಲಿ ಎನ್ನುವುದನ್ನು ಸ್ವಲ್ಪ ಹೇಳಿ.

SRI N. RAJANNA : I am not angry or hungry. ನನಗೆ ಹಸಿವಾಗಿಲ್ಲ, ಅಂತ ಊಟ ಸಿಗಲಿಲ್ಲ ಅಂದರೆ ಕೋಪ ಇಲ್ಲ. ಇಟ್ಟರೆ ಸಂತೋಷ. ನನಗೆ ಯಾವ ಕೆಲಸವನ್ನು ಕೊಟ್ಟರೂ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ರಾಜಣ್ಣನವರದ್ದು ಅರ್ಥವಾಯಿತು. ನನಗೆ ಮಂತ್ರಿ ಪದವಿ ಕೊಟ್ಟರೆ ಪ್ರಾಮಾಣಿಕವಾಗಿ ಮಾಡುತ್ತೇನೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಯಾರು ಮಂತ್ರಿ ಪದವಿ ಕೊಡುತ್ತಾರೋ ಆ ಕಡೆ ಹೋಗುತ್ತಾರೆ ಎನ್ನುವ ಉದ್ದೇಶ ಇದ್ದಂತೆ ಕಾಣುತ್ತದೆ. ಹೋಗಲಿ ನಿಮಗೆ ಯಾವ ಇಲಾಖೆ ಬೇಕು ಸ್ವಾಮಿ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ವಾಟಾಳ್ ನಾಗರಾಜ್ ಅವರೇ, ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡಬೇಕು.

ಶ್ರೀ ಎನ್. ರಾಜಣ್ಣ : ತಾವು ನೀರಾವರಿ ಬಗ್ಗೆ ಆಪಾದನೆಯನ್ನು ಮಾಡಿದ್ದೀರಿ. Great Britain ruled this country for more than 200 years. ಮಹಾತ್ಮಾ ಗಾಂಧೀಜಿಯವರು ಸುಮಾರು 30 ವರ್ಷಗಳ ಕಾಲ ಹೋರಾಟ ಮಾಡಿದ್ದರಿಂದ ಬ್ರಿಟಿಷರನ್ನು ಓಡಿಸಿದೆವು. ಅವರು ಹೋಗುವಾಗ ನಮಗೆ ಕೆಲವು ಬಿಟ್ಟು ಹೋದ. ರೈಲ್ವೆ, ಇಂಡಿಯನ್ ಪೋಸ್ಟ್ ಆಫೀಸ್ ಇವು ಬಹಳ ಮುಖ್ಯವಾದುದು. ಅವನು ಹೋಗುವಾಗ ತೆಗೆದುಕೊಂಡು ಹೋಗಿದ್ದು ಏನೆಂದರೆ ನಮಗೆ ಪ್ರಾಬ್ಲಮ್ಸ್ ಕ್ರಿಯೇಟ್ ಮಾಡಿ ಇಟ್ಟು ಹೋದ. ಇವತ್ತು ನಾವು ಕಾವೇರಿ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡುತ್ತಿದ್ದೇವೆ. 1924-25 ಅಗ್ರಿಮೆಂಟ್. ಮೊದಲನೇ ಪ್ರಧಾನ ಮಂತ್ರಿಯಾದ ದಿವಂಗತ ಶ್ರೀ ಜವಹರಲಾಲ್ ನೆಹರು ಅವರ ಕಾಲದಿಂದ ಸನ್ಮಾನ್ಯ ವಾಜಪೇಯಿಯವರ ಕಾಲದವರೆಗೂ ಇದೆ. ಮೊದಲನೇ ಮುಖ್ಯಮಂತ್ರಿಯಾದ ಶ್ರೀಮಾನ್ ದಿವಂಗತ ಕೆ.ಸಿ. ರೆಡ್ಡಿಯವರ ಕಾಲದಿಂದಲೂ ಹಿಡಿದು ಶ್ರೀಮಾನ್ ಜೆ.ಹೆಚ್. ಪಟೇಲ್ ಅವರ ಕಾಲದವರೆಗೂ ಇದೆ. ಇನ್ನು ಮುಂದೆಯೂ ಇರುತ್ತದೆ ಅದಕ್ಕೋಸ್ಕರ ನಾವು ಗಂಟೆಗಟ್ಟಲೆ ಕಾಲವನ್ನು ತಳ್ಳುತ್ತಿದ್ದೇವೆ. ಈಗ ನಾನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ಮಹಾರಾಷ್ಟ್ರ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಏನು ಸಹಾಯಧನ ಬರಬೇಕೋ ಅದು ಬಂದು ಅವರು ಇವತ್ತು 12,217 ಮೆಗಾವಾಟ್ಸ್ ವಿದ್ಯುತ್ ಉತ್ಪತ್ತಿಯನ್ನು ಮಾಡುತ್ತಿದ್ದಾರೆ. ಇವತ್ತು ಏನಾದರೂ ಇಲ್ಲಿ ಈ ದೀಪ ಉರಿಯುತ್ತಿದ್ದು ನಾವು ಇಲ್ಲಿ ಕುಳಿತಿದ್ದೇವೆ ಅಂದರೆ ಅದರ ಸಂಪೂರ್ಣ ಗೌರವ ಸಲ್ಲಬೇಕಾದುದು ಮಾನ್ಯ ದಿವಂಗತ ಶ್ರೀ ಸರ್.ಎಂ. ವಿಶ್ವೇಶ್ವರಯ್ಯನವರಿಗೆ, ಮಾನ್ಯ ಕೆಂಗಲ್ ಹನುಮಂತಯ್ಯನವರಿಗೆ ಮತ್ತು ಶ್ರೀಮಾನ್ ನಿಜಲಿಂಗಪ್ಪನವರಿಗೆ ಹೋಗಬೇಕು. ಅವರಿಂದ ಇವತ್ತು ಶರಾವತಿಯಲ್ಲಿ 10 ಜನರೇಟರ್ಸ್ ಓಡುತ್ತಿದೆ. ಆ ಜನರೇಟರ್ಸ್‌ನಿಂದ ಇವತ್ತು ನಾವು ಕರ್ನಾಟಕ ರಾಜ್ಯದಲ್ಲಿ ರೈತರಿಗೆ, ದೀಪಗಳಿಗೆ ಅಷ್ಟೋ ಇಷ್ಟೋ ವಿದ್ಯುತ್ ಕೊಡುವಂತಹ ಶಕ್ತಿ ಇದೆ ಎಂದು ಹೇಳಬಹುದು. ಇದರಲ್ಲಿ ನಾವು ಬಹಳ ರಾಜಕೀಯ ಮಾಡುವುದು ಬೇಡ. ನಾವು ಇನ್ನು ಮುಂದೆ ನಮ್ಮ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತೇವೆ. ಸುಮಾರು 50 ವರ್ಷಗಳ ಆಡಳಿತದಲ್ಲಿ ನಾವು ಹಿಂದೆ 5 ವರ್ಷ ಈಗ 4 ವರ್ಷ ಒಟ್ಟು 9 ವರ್ಷಗಳು ಮಾತ್ರ. ಇನ್ನುಳಿದ 42 ವರ್ಷಗಳ ಕಾಲ ಬೇರೆ ಪಕ್ಷದವರು ಆಡಳಿತವನ್ನು ನಡೆಸಿದ್ದಾರೆ. ನಮಗೆ ಆಗ ಏನೂ ಸಹಾಯ ಕೇಂದ್ರ ಸರ್ಕಾರದಿಂದ ಸಿಕ್ಕಲಿಲ್ಲ. ಮಹಾರಾಷ್ಟ್ರದಲ್ಲಿ ಆಗ ಕಾಂಗ್ರೆಸ್ಸ್‌ನವರು ಕೇಂದ್ರ ಸರ್ಕಾರದಿಂದ ಸಹಾಯಧನ ಪಡೆದುಕೊಂಡರು. ಅದಕ್ಕೆ ಅವರು ಸುಮಾರು 12,300 ಮೆಗಾವಾಟ್ಸ್ ಪವರ್ ಉತ್ಪತ್ತಿ ಮಾಡುತ್ತಾರೆ. ಇವತ್ತು ನಮ್ಮಲ್ಲಿ ಏನಾದರೂ ಪವರ್ ಇದೆ ಅಂದರೆ ಬ್ರಿಟೀಷ್ ನವರು 1882ನೇ ಇಸವಿಯಲ್ಲಿ ನಮ್ಮಲ್ಲಿರತಕ್ಕಂಥ ಎಲ್ಲಾ ಬಂಗಾರ ತೆಗೆದುಕೊಂಡು ಹೋದರು. ನಮ್ಮ ಅಧ್ಯಕ್ಷರ ಜಿಲ್ಲೆಯಲ್ಲಿರುವ ಬಂಗಾರವನ್ನು ತೆಗೆಯುವುದಕ್ಕೆ ಶಿವನ ಸಮುದ್ರದಿಂದ 142 ಕಿಲೋಮೀಟರ್ ಲೇ ಮಾಡಿ, ಗೋಲ್ಡ್ ತೆಗೆಯುವುದಕ್ಕೋಸ್ಕರ ಫಸ್ಟ್ ಅಲ್ಲಿ ಹಾಕಿದರು. ಏಷ್ಯಾದಲ್ಲಿಯೇ ಮೊದಲನೇ ಭಾರಿಗೆ ಅಲ್ಲಿ ಪವರ್ ಉತ್ಪಾದನೆಯನ್ನು ಮಾಡಿದರು. ಇದನ್ನೇ ತಾವು ಇಟ್ಟುಕೊಂಡು ರಾಜಕೀಯ ಮಾಡುವುದು ಬೇಡ. ರೈತರಿಗೆ ಉಚಿತವಾಗಿ ಪವರ್ ಕೊಡುವಂತೆ ಆಗಿದ್ದು ನಮ್ಮ ಸರ್ಕಾರವಿದ್ದಾಗಲೇ. ಭಾಗ್ಯಜ್ಯೋತಿಗೆ ಉಚಿತವಾಗಿ ಪವರ್ ಕೊಡುತ್ತಿರುವವರು ನಾವು. ರಾಸಾಯನಿಕ ಗೊಬ್ಬರದ ಬೆಲೆಯನ್ನು ಇಳಿಸಿದವರು ನಾವು. 10 ಕೋಟಿ ರೂಪಾಯಿಗಳ

ವಹಿವಾಟು ತೆರಿಗೆ ವಿನಾಯಿತಿ, ನಮ್ಮ ಸರ್ಕಾರ ಕೊಟ್ಟಿದೆ. ಕೇಂದ್ರ ಸರ್ಕಾರದ ತಪ್ಪು ನೀತಿಯಿಂದ ರಾಜ್ಯದ ರೈತರಿಗೆ ಗೊಬ್ಬರದ ಕೊರತೆ. ಆಂಧ್ರಪ್ರದೇಶದಲ್ಲಿ 4 ಪರ್ಸೆಂಟ್ ವಹಿವಾಟು ತೆರಿಗೆ. ತಮಿಳುನಾಡಿನಲ್ಲಿ 4 ಪರ್ಸೆಂಟ್ ವಹಿವಾಟು ತೆರಿಗೆ. ನಾವು ಶ್ರೀಮಾನ್ ಭೈರೇಗೌಡರಿಗೆ ಮತ್ತು ಸಿದ್ಧರಾಮಯ್ಯನವರಿಗೆ ಧನ್ಯವಾದಗಳನ್ನು ಅರ್ಪಿಸಬೇಕು. ಅವರು ಕರ್ನಾಟಕ ರಾಜ್ಯದ ರೈತರಿಗೆ 10 ಕೋಟಿ ರೂಪಾಯಿಗಳಷ್ಟು ವಹಿವಾಟು ತೆರಿಗೆಯನ್ನು ರಿಯಾಯಿತಿ ಕೊಟ್ಟಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಹೇಳುತ್ತಿದ್ದೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮೆಲ್ಲರ ಆಶೀರ್ವಾದದಿಂದ ನಾವು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಈ ಬಾರಿ ಒಳ್ಳೆಯ ಮಳೆ. ಚರಿತ್ರೆಯಲ್ಲಿಯೇ ಇಲ್ಲ. ಎಲ್ಲಾ ಕೆರೆಕುಂಟೆಗಳು ತುಂಬಿವೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಮೇಲೆ ಸೂರ್ಯನಿಗೂ ಕರುಣೆ ಬಂದು he is moving some degrees away and Karnataka is coming closer towards equator. ಈಕ್ವೇಟರ್ ಬಗ್ಗೆ ಎಷ್ಟು ಜನರಿಗೆ ಗೊತ್ತಿದೆಯೋ ನನಗೆ ಗೊತ್ತಿಲ್ಲ. ನನಗೆ ಒಬ್ಬ ಹಳೆಯ ಗುರು ಹೇಳಿಕೊಟ್ಟಿದ್ದು. ಈ ಬಾರಿ ನಮಗೆ ಸೂರ್ಯನು ಆಶೀರ್ವಾದ ಮಾಡಿ ಒಳ್ಳೆಯ ಮಳೆ ಕೊಟ್ಟಿದ್ದಾನೆ. ಈ ಬಾರಿ 21 ಲಕ್ಷ ಟನ್ ಗೊಬ್ಬರವನ್ನು ಉಪಯೋಗ ಮಾಡಿ ನಾವು 10 ಲಕ್ಷ ಟನ್ ಆಹಾರ ಪದಾರ್ಥಗಳಿಂದ ನೂರು ಲಕ್ಷ ಟನ್ ಆಹಾರ ಉತ್ಪಾದನೆ ಮಾಡುತ್ತಿದ್ದೇವೆ. ನಾವು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಒಳ್ಳೆಯ ಮಳೆ ಬಂತು. ಇವೊತ್ತು ಮಾರುಕಟ್ಟೆಯಲ್ಲಿ ವ್ಯವಸಾಯೋತ್ಪನ್ನಗಳಿಗೆ ಹೆಚ್ಚು ದರ ಸಿಗುತ್ತಿಲ್ಲ. ರೈತರುಗಳಿಗೆ ವ್ಯವಸಾಯದಲ್ಲಿ ಉತ್ತಮ ಬೆಳೆ ಇರುವಾಗ ಸರಿಯಾದ ಬೆಲೆ ಇಲ್ಲದ ಹಾಗೆ ಆಗಿದೆ. ನಮಗೆ ಸ್ವಾತಂತ್ರ್ಯ ಬರಲು ನಮ್ಮವರು ಎಷ್ಟು ಕಣ್ಣೀರು ಸುರಿಸಿ ಸತತ ಹೋರಾಟ ಮಾಡಿದ್ದರೋ, ಇದೇ ಐವತ್ತು ವರ್ಷಗಳ ನಂತರ ದೇಶದಲ್ಲಿ ಈರುಳ್ಳಿ ಬೆಲೆ ಕೇಳಿದೊಡನೆ ಕಣ್ಣೀರು ಸುರಿಸುವಂತಾಗಿದೆ. ಇವೊತ್ತು ಓರಿಸ್ಸಾದಿಂದ ಎರಡು ರೂಪಾಯಿಗಳಿಗೆ ಈರುಳ್ಳಿಯನ್ನು ಕೊಂಡುಕೊಂಡು ಬಂದು ಗುಜರಾತ್‌ನ ಗೋಡೌನ್‌ಗಳಲ್ಲಿಟ್ಟು ಕೆ.ಜಿ.ಗೆ 40 ರೂ.ಗಳಿಗೆ ಮಾರಾಟ ಮಾಡುತ್ತಾ ಇದ್ದಾರೆ. ಡೆಲ್ಲಿಯಲ್ಲಿ ಉಪ್ಪಿನ ಬೆಲೆಯು ಕೆ.ಜಿ.ಗೆ 50 ರೂಪಾಯಿಗಳು. Is it not artificially created? We are creating it to make money. ಡೆಲ್ಲಿಯ ಆಡಳಿತದಲ್ಲಿ ದೇವೇಗೌಡರು ಇರುವಾಗ ಒಳ್ಳೆಣ್ಣೆಗೆ 39 ರೂಪಾಯಿಗಳಿತ್ತು. ಅವರು ಅಧಿಕಾರದಿಂದ ಇಳಿದ ಕೂಡಲೇ ಅದೇ ಎಣ್ಣೆಗೆ 68 ರೂಪಾಯಿಗಳು ಆಯಿತು.

ಅಧ್ಯಕ್ಷರು : ತಾವುಗಳು ಆಗ್ರೋ ಇಕಾನಮಿ ಡಿಟೈಲ್ಸನ್ನು ಯಾವಾಗ ಸಂಗ್ರಹ ಮಾಡಿದ್ದೀರಿ? ಎಲ್ಲಾ ಇನ್‌ಫಾರ್ಮೇಶನ್ಸ್ ನಮ್ಮ ಹತ್ತಿರ ಇದೆಯಲ್ಲಾ?

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ನಾನು ಪತ್ರಿಕೆಯಲ್ಲಿ ಬರುತ್ತಿರುವ ವಿವರಗಳನ್ನು ಸಂಗ್ರಹ ಮಾಡಿದ್ದೇನೆ. I am not qualified in the college. I am qualified in the cattleshed.

ಶ್ರೀ ರಾಜಶೇಖರ್ ವಿ. ಶೀಲವಂತ : ಅದಕ್ಕಾಗಿ ಅವರಿಗೆ ಪಶುಸಂಗೋಪನ ಖಾತೆಯ ಮಂತ್ರಿಗಳನ್ನಾಗಿ ಮಾಡಬೇಕು.

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಹಿರಿಯರಾದಂಥ ವಾಟಾಳ್ ನಾಗರಾಜ್‌ರವರು ಮೊನ್ನೆ ಒಂದು ಮಾತನ್ನು ಹೇಳಿದ್ದರು. ಬಹಳ ಜನರು ಇಲ್ಲಿ ಆಡಳಿತಪಕ್ಷದವರು ಇಲ್ಲದಿರುವಾಗ ಎಲ್ಲರೂ ದನ ಮೇಯಿಸಲು ಹೋಗಿದ್ದಾರೋ ಎಂದು ಪ್ರಶ್ನಿಸಿದ್ದರು. ದನ ಮೇಯಿಸುವ ಗೋಪಾಲಕೃಷ್ಣ, ಗೋಕುಲ, ಅಲ್ಲಿನ ಕೃಷ್ಣ ಪರಮಾತ್ಮ - ಅವನು "ಗೊಲ್ಲ ಎಲ್ಲವನು ಬಲ್ಲ" ಎಂಬ ರೀತಿಯಲ್ಲಿ ತುಂಬಾ ನಾಲೆಡ್ಜ್ ಇದ್ದವನು. ಅವನೇ ಲಾರ್ಡ್ ಕೃಷ್ಣಪರಮಾತ್ಮ ಈ ದೇಶವನ್ನು ಆಳುತ್ತಿರುವವನು.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿದ ಹಾಗೆ ನಾನು ಹೇಳಿದ್ದು ನಿಜ. ಆದರೆ ಅವರು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲವಲ್ಲಾ? ನಾವೆಲ್ಲಿ ಹೋಗಿದ್ದೇವೆ? ನಾವ್ಯಾಕೆ ದನ ಕಾಯಲು ಹೋಗಬೇಕು? ನೀವೇಕೆ ಹೀಗೆ ಹೇಳುತ್ತಿದ್ದೀರಿ ಎಂಬಿತ್ಯಾದಿಯಾಗಿ ನಮ್ಮನ್ನು ಮರುಪ್ರಶ್ನೆ ಕೇಳಿದರೆ ನಾವೇನು ಮಾಡಬೇಕು? ರಾಜಣ್ಣನವರು ದನಕಾಯಲು ಹೋಗಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಲು ತಯಾರಾಗಿದ್ದಾರೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಅವರು ಒಪ್ಪಿಕೊಳ್ಳಲಿ, ಒಪ್ಪಿಕೊಳ್ಳದಿರಲಿ, ನೀವು ಒಪ್ಪಿಕೊಳ್ಳಿ ಅಥವಾ ಒಪ್ಪಿಕೊಳ್ಳದಿರಿ, ನಾನು ನನ್ನದ್ದು ಅದೇ ಕೆಲಸ ಎಂದು ಒಪ್ಪಿಕೊಳ್ಳಲು ತಯಾರಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಬಹಳ ಪ್ರಾಮಾಣಿಕವಾಗಿ ನಿಜವನ್ನು ಹೇಳಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : "ಇಟ್ಟರೆ ಸಗಣಿಯಾದೆ, ಸುಟ್ಟರೆ ವಿಭೂತಿಯಾದೆ, ನೀನಾರಿಗಾದೆಯೋ ಎಲೆ ಮಾನವ?" ಎಂಬಂಥ ವಚನದ ಪ್ರಕಾರ ಅವರು ಹೇಳಿದ್ದಾರೆ. ಅವರ ಮಾತಿನಲ್ಲಿ ಬಹಳ ಅರ್ಥವಿದೆ.

ಶ್ರೀ ಅರಗ ಜ್ಞಾನೇಂದ್ರ : ತಾವುಗಳು ಯಾವ ಕಡೆಗೆ ನೋಡಿ ಈ ಮಾತನ್ನು ಹೇಳಿದ್ದೀರಿ? ಆಡಳಿತ ಪಕ್ಷದವರ ಕಡೆ ನೋಡಿ ಹೇಳಿದ್ದೀರಾ?

ಅಧ್ಯಕ್ಷರು : ನನಗೆ ಎಲ್ಲರೂ ಒಂದೇ, ನನಗೆ ಯಾವ ಪಕ್ಷ ಭೇದವೂ ಇಲ್ಲ...

ಶ್ರೀ ವಾಟಾಳ್ ನಾಗರಾಜ್ : ನಾವು ಇದನ್ನು ಹಾಸ್ಯವಾಗಿ ತೆಗೆದುಕೊಳ್ಳೋಣ. ತೀವ್ರವಾಗಿ ತೆಗೆದುಕೊಂಡರೆ ಅದರಿಂದ ಅಪಾಯವೂ ಬಂದೀತು. ರಾಜಣ್ಣನವರು ಹೇಳಿದ ಹಾಗೆ ದನ ಕಾಯತಕ್ಕಂಥವರು ಗೊಲ್ಲರು, ಗೊಲ್ಲ ಎಲ್ಲವನು ಬಲ್ಲ ಎಂದು ಕೃಷ್ಣಪರಮಾತ್ಮ ಎಂದು ಹೇಳಿದ್ದಾರೆ. ಶ್ರೀ ಕೃಷ್ಣನಿಗೆ ಗೋಪಿಕಾ ಸ್ತ್ರೀಯರಿದ್ದರು. ಹಾಗಾದರೆ ಆ ಗೊಲ್ಲ ಅಂದರೆ ಯಾರು? ನೀವು ಕಾಯುವವರು, ಈ ತರಹ ಅರ್ಥ ಮಾಡಿಕೊಳ್ಳಬಹುದೇ?

ಅಧ್ಯಕ್ಷರು : ನನಗೆ ತಾವುಗಳು ಏನು ಹೇಳುತ್ತೀರಿ ಎಂಬುದು ಗೊತ್ತು. ನನಗೆ ವಿಪರೀತ ಭಯ ಧೈರ್ಯ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಆ ಧೈರ್ಯ ಪಟೇಲ್‌ರವರಿಗೆ, ನಂಜೇಗೌಡರಿಗೆ ಇದೆಯೇ?

ಅಧ್ಯಕ್ಷರು : ನೀವು ನಿಮ್ಮ ಪಕ್ಷದವರಿಗೆ ಆ ಧೈರ್ಯ ಬಂದೀತು... ನಮಗೆಲ್ಲಿ ಬರುತ್ತದೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಕೃಷಿ ತೋಟಗಾರಿಕೆ ಮತ್ತು ಪಶುಸಂಗೋಪನಾ ಇಲಾಖೆಯಲ್ಲಿ ನಮ್ಮ ಕೇಂದ್ರ ಸರಕಾರದವರು ಒಂದು ತಪ್ಪನ್ನು ಮಾಡಿದ್ದಾರೆ. ಅದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದರೂ ಸಾಕಾಗುತ್ತದೆ. ದೇಶದಲ್ಲಿ ಹಸಿರು ಕ್ರಾಂತಿಯನ್ನು ಹಾಗೂ ಬಿಳಿಕ್ರಾಂತಿಯನ್ನೂ ಪ್ರಾರಂಭದಲ್ಲಿ ಮಾಡಿದವರು ವಲ್ಲಭಬಾಯ್ ಪಟೇಲ್‌ರವರು ಮತ್ತು ಮೊರಾರ್ಜಿ ದೇಸಾಯಿಯವರು. ಈ ದೇಶದಲ್ಲಿ 40 ವರ್ಷಗಳಲ್ಲಿ ಸಕ್ಸೀಡ್ ಆಗಬೇಕಾದರೆ ಅದಕ್ಕೆ ಕಾರಣಕರ್ತರು ಮಾನ್ಯ ವರ್ಗೀಸ್ ಕುರಿಯನ್‌ರವರು. ಅವರೊಬ್ಬ ಅತ್ಯಂತ ಧೀಮಂತ ಅಧಿಕಾರಿ. ಅವರು ಒಂದು ಮಾತನ್ನು ಹೇಳುತ್ತಾರೆ. If you put an IAS Officer as M.D., how will a co-operative society will work? ಈ ಮಾತುಗಳು ನೂರಕ್ಕೆ ನೂರರಷ್ಟು ಸತ್ಯಾಂಶಗಳಿಂದ ಕೂಡಿದೆ. Why you have removed Mr. Kurean, I don't know. ಇವೊತ್ತು ಅಮೂಲ್ ಸಂಸ್ಥೆಯು 3000 ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಪಡೆದಿದೆ. ನಮ್ಮ ದೇಶದಲ್ಲಿ ಎಷ್ಟೋ ಕಾರ್ಖಾನೆಗಳು ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವನ್ನು ಮಾಡಿಕೊಂಡಿವೆ. ಆದರೆ ಕುರಿಯನ್‌ನವರು ಅದೇ ದೊಡ್ಡ ಪ್ರಮಾಣದ ಲಾಭವನ್ನು ಮಾಡಿಕೊಟ್ಟರೂ ಅವರನ್ನು ಏತಕ್ಕಾಗಿ ತೆಗೆದರು ಎಂಬುದು ನನಗೆ ಗೊತ್ತಿಲ್ಲ. ಅವರು ನಿವೃತ್ತರಾಗಿದ್ದರೆ ನನ್ನ ಬಿನ್ನಾಭಿಪ್ರಾಯಗಳಿಲ್ಲ. ಅವರು ನಿವೃತ್ತರಾದ ಮೇಲೆ ಅವರು ತಿಳಿದಿರುವಂತಹ ಅಮೃತಾ ಪಾಟೀಲ್ ಎನ್ನುವವರನ್ನು ತೆಗೆದುಕೊಳ್ಳಲು ಸಜೆಸ್ಟ್ ಮಾಡಿದರು. ಅವರ ಅನುಭವ ಹಿನ್ನೆಲೆಯಲ್ಲಿ ಈ ಸಜೆಶನ್ ಮಾಡಿದ್ದಾರೆ. ಆದರೆ ನೀವು ಐಎಎಸ್ ಅಧಿಕಾರಿಯನ್ನು ಹಾಕಿದ್ದೀರಿ. ಐಎಎಸ್ ಆಫೀಸರ್ಸ್‌ಗೆ ಈ ಕ್ಷೇತ್ರದ ಅನುಭವವಿದೆಯೇ? ಎಷ್ಟು ಜನ ಐಎಎಸ್ ಅಧಿಕಾರಿಗಳ ಮನೆಯಲ್ಲಿ ನಾಯಿಗಳನ್ನು ಸಾಕಿದ್ದಾರೆ? ಹಸುಗಳನ್ನು ಸಾಕಿರುತ್ತಾರೆ? ಹಾಗಾದರೆ ಅವರಲ್ಲಿರತಕ್ಕಂಥ ನಾಯಿ ಎಷ್ಟು ದಿನಗಳಲ್ಲಿ ಮರಿ ಹಾಕುತ್ತದೆ ಎಂದು ಹೇಳಲಿ? ಹಸು ಎಷ್ಟು ದಿನಗಳಿಗೆ ಕರು ಹಾಕುತ್ತದೆ ಎಂಬುದನ್ನು ಹೇಳಲಿ? ನಾಯಿ ಎರಡು ತಿಂಗಳು ಎರಡು ದಿನಗಳಲ್ಲಿ ಮರಿ ಹಾಕುತ್ತದೆ. ಕುದುರೆ ಕರು ಹಾಕುವುದು 11 ತಿಂಗಳು 11 ದಿನಗಳಿಗೆ. ಎಮ್ಮೆ ಕರು ಹಾಕುವುದು 10 ತಿಂಗಳು 10 ದಿನಗಳಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಕುದುರೆ ಎಲ್ಲಾದರೂ ಕರು ಹಾಕುತ್ತದೆಯೇ? ರಾಜಣ್ಣನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಕುದುರೆ ಕರು ಹಾಕುತ್ತದೆ ಎಂದರು.

ಶ್ರೀ ಎನ್. ರಾಜಣ್ಣ : ಅದನ್ನು ತಾವುಗಳು ಕರು ಎಂದಾದರೂ ತಿಳಿದುಕೊಳ್ಳಿ, ಅಥವಾ ಮರಿ ಎಂದಾದರೂ ತಿಳಿದುಕೊಳ್ಳಿ... ನಾವು ಮರಿಗೆ ಕರು ಎಂದು ಹೇಳುವುದು. ಮನೆಯಲ್ಲಿ ಮೊಮ್ಮಗಳು ಮರಿಗೆ ಪೋನಿ ಎಂದು ಹೇಳುತ್ತಾರೆ... ಹೀಗೆ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾಯಿಮರಿಗೆ ನೀವು ಏನು ಹೇಳುತ್ತೀರಿ. ಅದಕ್ಕೂ ಕರು ಅನ್ನುತ್ತೀರಾ?

ಶ್ರೀ ಎನ್. ರಾಜಣ್ಣ : ಎಮ್ಮೆ 10 ತಿಂಗಳು 10 ದಿನಕ್ಕೆ ಕರು ಹಾಕುತ್ತದೆ. ನಾನು ಈ ಮಾತನ್ನು ಯಾಕೆ ಹೇಳುತ್ತಿದ್ದೇನೆ ಅಂದರೆ, ಹೊಸ ಐಎಎಸ್ ಅಧಿಕಾರಿಗಳಿಗೆ ಪಶುಸಂಗೋಪನೆ ಬಗ್ಗೆ ಹೆಚ್ಚು ಮಾಹಿತಿ ಇರುವುದಿಲ್ಲ, ಆ ಇಲಾಖೆಯಲ್ಲಿಯೇ 15-20 ವರ್ಷಗಳ ಕಾಲ ಕೆಲಸ ಮಾಡಿದ್ದರೆ ಅನುಭವವಿರುತ್ತದೆ. ಇವೊತ್ತು ಮಾನ್ಯ ಕುರಿಯನ್ ತರಹ ಅನುಭವಸ್ಥರು ಇದ್ದರೆ ತುಂಬಾ ಅನುಕೂಲವಾಗುತ್ತದೆ. ನಮ್ಮ ದೇಶವು ಹಾಲು ಉತ್ಪಾದನೆಯಲ್ಲಿ ಪ್ರಪಂಚದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಕಳೆದ ಮಾರ್ಚ್ ಕೊನೆಯಲ್ಲಿ ಒಂದು ದಿನಕ್ಕೆ 12ಲಕ್ಷ ಲೀಟರ್‌ಗಳಷ್ಟು ಪ್ರೊಡಕ್ಷನ್ ಇತ್ತು. ಈ ತಿಂಗಳ ಕೊನೆಗೆ ನಾವು 20ಲಕ್ಷ ಲೀಟರ್‌ಗಳಷ್ಟು ಸಾಮರ್ಥ್ಯವನ್ನು ತಲುಪಬಹುದು ಎಂದು ಅಂದುಕೊಂಡಿದ್ದೇನೆ. ನಮ್ಮ ಸರಕಾರದ ಒಳ್ಳೆಯ ಸಾಧನೆಗಳನ್ನು ನಾನು ಹೇಳುತ್ತಿದ್ದೇನೆ. ಇದು ನಮ್ಮ ಸರಕಾರದವರು ಮಾಡಿದ ಒಳ್ಳೆಯ ಕೆಲಸವಲ್ಲವೇ ? 50ವರ್ಷಗಳ ಹಿಂದೆ ಕನ್ಯಾಕುಮಾರಿ ಇಂದ ಕಾಶ್ಮೀರದ ವರೆಗೆ ಬಹಳಷ್ಟು ಜನರು ತಮ್ಮ ಐಸ್‌ಪ್ಲಾಂಟ್‌ಗಳನ್ನು ಮಾರಾಟ ಮಾಡುತ್ತಿದ್ದರು. ಆದರೆ ಮಾನ್ಯ ಕುರಿಯನ್‌ರವರ ಸಹಕಾರದಿಂದ ಕರ್ನಾಟಕ ಮತ್ತಿತ್ತರ ಕಡೆಗಳಲ್ಲಿ ಐಸ್‌ಕ್ರೀಂ ಪ್ಲಾಂಟ್‌ಗಳು ತುಂಬಾಚೆನ್ನಾಗಿ ನಡೆಯುತ್ತಿವೆ.

6.10 ಪಿ.ಎಂ

ಇವತ್ತು ಐಸ್‌ಕ್ರೀಮ್ ಪ್ರಾಂಟ್‌ನಿಂದ ಐದು ಸಾವಿರ ರೈತರಿಗೆ ಅನುಕೂಲ ಆಗಿದೆ. ಐದು ಸಾವಿರ ರೈತರಿಗೆ ಅನುಕೂಲ ಆದರೆ ಕಡಿಮೆ ಅಂದರೂ 10 ಸಾವಿರ ಹಸುಗಳನ್ನು ಕಟ್ಟಿಕೊಳ್ಳುತ್ತಾರೆ. 10 ಸಾವಿರ ಹಸು ಕಟ್ಟಿದರೆ ಒಂದು ದಿನಕ್ಕೆ 80 ಸಾವಿರ ತೆಪ್ಪೆ ಆಗುತ್ತದೆ. ಒಂದು ದಿನಕ್ಕೆ ಒಂದು ರೂಪಾಯಿ ಎಂದು ನಾವು ಲೆಕ್ಕ ಹಾಕಿದರೆ ಒಂದು ಕೋಟಿ ರೂಪಾಯಿ ಬೆಲೆಯ ಕೊಟ್ಟಿಗೆ ಗೊಬ್ಬರ ಸಿಗುತ್ತದೆ. ಏಕೆಂದರೆ ಮಾನ್ಯ ದೇವೇಗೌಡರ ಕಾಲದಲ್ಲಿ ಐಸ್‌ಕ್ರೀಂ ಪ್ಲಾಂಟ್ ತಂದಿದ್ದರಿಂದ ಎಷ್ಟೋ ಜನರಿಗೆ ಅನುಕೂಲ ಆಯಿತು. ನಮ್ಮ ಸಾಧನೆ ಏನು ಎಂದು ನಾವು ಹೇಳಬೇಕಾಗುತ್ತದೆ. What is it that we have done in four years rule of the State Government and 11 months rule of Mr. Devegowda's Government at the centre, I have to tell. 1994-95ರಲ್ಲಿ ಗಂಟೆಗಳ ಕಾಲ ಇಲ್ಲಿ ಚರ್ಚೆ ಆಯಿತು. ಕಬ್ಬನ್ನು ರೈತರು ಅಲ್ಲಿ ಕೊಯ್ಯದೇ ಒಣಗಿಸಿ ಬೆಂಕಿ ಇಟ್ಟರು. ಇವತ್ತು ಯಾರಾದರೂ ಈ ವರ್ಷ ಹಾಗೂ ಕಳೆದ ವರ್ಷ ಧಾರಾಳವಾಗಿ ಕಬ್ಬನ್ನು ತೆಗೆದುಕೊಂಡು ಹೋಗಿ ಮಿಲ್‌ಗೆ ಹಾಕಿ ಹಣ ತೆಗೆದುಕೊಂಡು ಬರುವಂತಹ ಸ್ಥಿತಿಗೆ ತಂದವರು ಯಾರು ಎಂದರೆ ಸನ್ಮಾನ್ಯ ದೇವೇಗೌರು, ಮಾನ್ಯ ಜೆ.ಎಚ್. ಪಟೇಲರು ಅವರು, ನಮ್ಮ ಲೀಡರ್ಸ್, ಫೈಲ್ ಎತ್ತಿಕೊಂಡು ಹೋಗಿ ಹೋಗಿ ಇವತ್ತು 14 ಫ್ಯಾಕ್ಟರಿಗಳು ಶುರುವಾಗಿದೆ. The credit must go to the Janata Dal Government, a disciplined Government, the best Government, a Gandhian Government headed by Mr. H.D. Devegowda.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಮಳೆ ಜಾಸ್ತಿ ಇನ್ನೂ ಕಾರ್ಖಾನೆಗಳು ಈಗ ಪ್ರಾರಂಭ ಆಗುತ್ತಿದೆ. ಈ ವರ್ಷ ಲೇಟಾಗಿ ಕ್ರಷಿಂಗ್ ಮತ್ತೆ ಪ್ರಾಬ್ಲಮ್ ಬರುತ್ತದೆ. ಕಬ್ಬನ್ನು ಎಲ್ಲಿಗೆ

ಕಳುಹಿಸಬೇಕು ? ಕಬ್ಬನ್ನು ಮಹಾರಾಷ್ಟ್ರಕ್ಕೆ ಕಳುಹಿಸಬೇಕೋ, ಎಲ್ಲಿಗೆ ಕಳುಹಿಸಬೇಕು ಎಂದು ಪ್ರಾಬ್ಲಮ್ ಬರುತ್ತದೆ.

ಅಧ್ಯಕ್ಷರು : ಬಂದಾಗ ಮಾತನಾಡೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಅವರು 14 ಕಾರ್ಖಾನೆ ಪ್ರಾರಂಭ ಆಗಿದೆ ಎಂದು ಹೇಳುತ್ತಾರೆ ಇನ್ನೂ ದೀಪಾವಳಿ ಆದರೂ ಕಾರ್ಖಾನೆ ಪ್ರಾರಂಭ ಆಗಿಲ್ಲ.

ಅಧ್ಯಕ್ಷರು : ಅವರು ಹೇಳಿದ್ದು ಲೈಸೆನ್ಸ್ ಕೊಟ್ಟಿದ್ದಾರೆ.

ಶ್ರೀ ಎನ್. ರಾಜಣ್ಣ : ನೀವೇನೂ ಯೋಚನೆ ಮಾಡಬೇಡಿ, ಫ್ಯಾಕ್ಟರಿಗಳು ಬರುತ್ತವೆ. ಆಲ್‌ರೆಡಿ ಪರ್ಮಿಷನ್ ಕೊಟ್ಟಿದೆ, ಫ್ಯಾಕ್ಟರಿ ಬರುತ್ತಿದೆ.

ಅಧ್ಯಕ್ಷರು : ಹೊಸ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿದ್ದಾರೆಂದು ಅವರು ಹೇಳುತ್ತಿರುವುದು.

ಶ್ರೀ ಎನ್. ರಾಜಣ್ಣ : ವಿದ್ಯಾ ಸಂಸ್ಥೆಯ ವಿಚಾರವಾಗಿ ಹೇಳುತ್ತೇನೆ. ಬೆಂಗಳೂರು ಪ್ರಾಬ್ಲಮ್‌ಗೂ ಬರುತ್ತೇನೆ.70530 ಪ್ರಾಥಮಿಕ ಶಾಲಾ ಅಧ್ಯಾಪಕರ ನೇಮಕಾತಿ, 2475 ಪ್ರೌಢಶಾಲಾ ಅಧ್ಯಾಪಕರು ಹಾಗೂ 800 ಮುಖ್ಯೋಪಾಧ್ಯಯರ ನೇಮಕಾತಿ, ಸುಮಾರು 75 ಸಾವಿರ ಅಪಾಯಿಂಟ್‌ಮೆಂಟ್ ಈ ನಾಲ್ಕೂವರೆ ವರ್ಷದಲ್ಲಿ ಕೊಟ್ಟಿದ್ದೇವೆ. ಇದರ ಜೊತೆಗೆ 15 ಸಾವಿರ ಕೆಎಸ್‌ಆರ್‌ಟಿಸಿ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ನೇಮಕಾತಿ. 15 ಸಾವಿರ ಪೋಲೀಸ್ ಇಲಾಖೆಯಲ್ಲಿ ನೇಮಕಾತಿ. ಡಾಕ್ಟರ್ಸ್ ಇಂಜಿನಿಯರ್ಸ್ ಎಲ್ಲಾ ಸೇರಿಸಿದರೆ more than 1,10,000 appointments have been given during the Janatadal Government, a Gandhian Government.

MR. SPEAKER : One or two words about Adult Education please. Which is immediately required for all of us. ಅಡಲ್ಟ್ ಎಜ್ಯುಕೇಷನ್ ಬಗ್ಗೆ ನಿಮ್ಮ ಕಲೀಗ್ ಹೇಳಬೇಕಲ್ಲ.

ಶ್ರೀ ಎನ್. ರಾಜಣ್ಣ : ಮಿಸ್ಟರ್ ಕೃಷ್ಣಪ್ಪನವರು ಇದ್ದಾರೆ. ಅವರಿಗೆ ಹೇಳಿ ಅವರು ಹೇಳುತ್ತಾರೆ ಸಾರ್. ಎಲ್ಲಾ ಫೀಲ್ಡ್‌ನಲ್ಲೂ ಕೆಲಸ ಮಾಡಿದ್ದೇವೆ. ನಮ್ಮ ಸರ್ಕಾರವಂತೂ ಬೀಳುವುದಿಲ್ಲ. ಒಳ್ಳೆಯ ಕೆಲಸ ಮಾಡಿದ್ದರೆ ಅಪ್ರೀಷಿಯೇಟ್ ಮಾಡಿ. ಜೆ ಎಚ್ ಪಟೇಲ್ ಸರ್ಕಾರಕ್ಕೆ ಅಪ್ರೀಷಿಯೇಟ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಅದನ್ನು ಬೀಳಿಸುವುದಕ್ಕೆ ಹೋಗಿಲ್ಲ. ಅವರೇ ಸಹಿ ಮಾಡಿ ಆ ಕಡೆ ಈ ಕಡೆ ಓಡಾಡುತ್ತಿದ್ದಾರೆ. ನಾವು ಬೀಳಿಸುವುದಕ್ಕೆ ಹೋಗಿಲ್ಲ. ರಾಜಣ್ಣನವರೇ ಈ ಕೆಲಸ ಮಾಡಲು ಹೊರಟು ನಮ್ಮನ್ನು ಹೇಳಿದರೆ ಹೇಗೆ?

ಅಧ್ಯಕ್ಷರು : ಅವರು ಪ್ರಾಕ್ಟೀಸ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ : ಸ್ವಾಮಿ, ನಮ್ಮ ಮನೆ ಇದು. ನಮ್ಮ ಸಂಸಾರ, ಇದನ್ನೆಲ್ಲಾ ಸರಿಪಡಿಸಿಕೊಳ್ಳುತ್ತಿದ್ದೇವೆ. ನೀವು ಬ್ಯೂರೋಕ್ರಾಟ್ಸ್ ಬಗ್ಗೆ ಟೀಕೆ ಮಾಡಿದಿರಿ, ಟೀಕೆ ಮಾಡಬೇಕಾದರೆ,

ನನಗೂ ಗೊತ್ತಿದೆ. ನಾನು 14 ವರ್ಷದ ಡಿಫೆನ್ಸ್‌ನಲ್ಲಿ ಇದ್ದವನು. I am not qualified ಎಂದು ಹೇಳಿದೆನಲ್ಲಾ ಬ್ಯೂರೋಕ್ರಾಟ್ಸ್ ಏನೋ ಕೆಲವು ಒಳ್ಳೆಯವರಿಂದ ನಡೆದುಕೊಂಡು ಹೋಗುತ್ತಿದೆ.

ಅಧ್ಯಕ್ಷರು : ಚೈನಾ ವಾರ್ ಆದಾಗ ಇದ್ದೀರಾ?

ಶ್ರೀ ಎನ್. ರಾಜಣ್ಣ : ಚೈನಾ ವಾರ್ ಆದಾಗ ಸರ್ವೀಸ್‌ನಲ್ಲಿದ್ದೆ. ಇಎಂಇನಲ್ಲಿ ಇದ್ದೆ. ಚೈನಾ ವಾರ್ ಅಲ್ಲ, ಪಾಕಿಸ್ಥಾನ್ ವಾರ್ 1971ರಲ್ಲಿ ಆದಾಗ ಇದ್ದೆ. 1962ರಲ್ಲಿ ತಾನೇ ಚೈನಾ ವಾರ್ ಆಗಿದ್ದು. 1971ರಲ್ಲಿ ವಾರ್ ನೋಡಿದ್ದೇನೆ. ನಾನು ಎಲ್ಲಾ ನೋಡಿದ್ದೇನೆ. ನಾನು ಕೊನೆಯ ಹಂತದಲ್ಲಿ ಭಾರತಿನಗರದ ಶಾಸಕನಾಗಿದ್ದೇನೆ. I must be grateful to Bharathinagar Constituency ನನ್ನ ನಿಯತ್ತು ನ್ಯಾಯ ನೋಡಿ ಮತ ಕೊಟ್ಟಿದ್ದಾರೆ. ಮಿಸ್ಟರ್ ಕ್ಲೀನ್ ಎಂದು ಬರೆದಿದ್ದರೆ ನನ್ನ ಎಲೆಕ್ಷನ್‌ನಲ್ಲಿ ಕರ್ನಾಟಕದಲ್ಲಿ one Mr. clean and non-corrupt corporator ಅಂದರೆ ಅದು ನನಗೆ ಬರೆದಿದ್ದಾರೆ. I must be grateful to the press people. ಅದಕ್ಕೋಸ್ಕರ ಕೆ. ಜೆ. ಜಾರ್ಜ್ ಬಿಟ್ಟು ನನಗೆ ಓಟು ಕೊಟ್ಟರು. ಇಲ್ಲ ಎಂದರೆ ನನ್ನ ಕ್ಷೇತ್ರದಲ್ಲಿ ಕನ್ನಡ ಮಾತನಾಡುವವರು ಎಲ್ಲಾ ಕಾಸ್ಟ್‌ನವರನ್ನೂ ಸೇರಿಸಿದರೂ ಸುಮಾರು ಹತ್ತು ಸಾವಿರ ಜನ ಇರಬಹುದು. ಮುಸಲ್ಮಾನರು ಇದ್ದಾರೆ, ಕ್ರಿಶ್ಚಿಯನ್ನರು ಇದ್ದಾರೆ. ತಮಿಳಿಯನ್ಸ್ ಇದ್ದಾರೆ. ಉರ್ದು ಜನ ಇದ್ದಾರೆ, ತೆಲುಗು ಜನ ಇದ್ದಾರೆ. ನಮ್ಮ ಸೀನಿಯರ್ ಲೀಡರ್ಸ್ ಈಗ ಬ್ಯೂರೋಕ್ರಾಟ್ಸ್ ಬಗ್ಗೆ ಮಾತನಾಡಿದರು. Mr. Menaka Gandhi is accusing priority to Bureaucrats. ಅವರೆಲ್ಲಾ ಶಂಖದಿಂದ ಬಂದವರು. ಅವರು ಹೇಳಿದರೆ ನಡೆದುಕೊಂಡು ಹೋಗುತ್ತದೆ. ಆಕೆ ಹೇಳಿರುವುದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಜೇಠ್ಮಲಾನಿ ಹೇಳುವುದೂ ಅದೇನೇ, ಮೇನಕಾಗಾಂಧಿ ಹೇಳುವುದೂ ಅದೇ. ಅವರ ತಂದೆ ಕರ್ನಲ್. ಈ ಮಟ್ಟಕ್ಕೆ ಹೋಗಿದೆ. ನಾನು ಯೋಚನೆ ಮಾಡುವುದು ಹಾಗೂ ರಿಕ್ವೆಸ್ಟ್ ಮಾಡುವುದು ಏನೆಂದರೆ ನಮಗೆ ಓಟು ಕೊಡುತ್ತಾರೆ. ಲಕ್ಷಾಂತರ ಜನಕ್ಕೆ ಉತ್ತರ ಹೇಳಬೇಕು. ನಮ್ಮ ಕಷ್ಟವನ್ನು ಅರ್ಥಮಾಡಿಕೊಂಡು ಕೆಲಸ ಮಾಡಿಕೊಟ್ಟರೆ ಸಾಕು. We are not coming to Bureaucrats for our personal gain, we are coming to them for general cause. They must understand the MLAs, Ministers and do their duty for the cause of the city and the country and they will get a good name. ಇಲ್ಲ ಎಂದರೆ ಏನೇನೋ ಆಗುತ್ತದೆ. ಒಳ್ಳೆಯ ಕೆಲಸ ಮಾಡಿ ನಮ್ಮನ್ನು ಪರಮಾತ್ಮ ಕೈಲಾಸಕ್ಕೆ ಕಳುಹಿಸುತ್ತಾನೆ. ನಾವೇನಾದರೂ ತಪ್ಪು ಕೆಲಸ ಮಾಡಿದರೆ ಯಮ ಲೋಕಕ್ಕೆ ಕಳುಹಿಸುತ್ತಾನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೈಲಾಸ ಪರ್ವತ ಕೂಡ ಚೈನಾಗೆ ಸೇರಿ ಬಿಟ್ಟಿದೆ. ಇವರು ನಮ್ಮನ್ನು ಅಲ್ಲಿಗೆ ಏನಾದರೂ ಕಳುಹಿಸುತ್ತಾರಾ ಸ್ವಾಮಿ?

ಶ್ರೀ ಎನ್. ರಾಜಣ್ಣ : ಬ್ಯುರೋಕ್ರಾಟ್ಸ್ ಏನು ಆಗಿದೆ ಎಂದು ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಮಾನ್ಯ ವಿಧಾನಸಭಾಧ್ಯಕ್ಷರ ಕ್ಷೇತ್ರದ ಸುತ್ತಮುತ್ತಲೂ ಆಗಿರುವ ಒಂದು ಉದಾಹರಣೆ ಕೊಡುತ್ತೇನೆ. ಆರು ತಿಂಗಳೋ ಅಥವಾ ವರ್ಷದ ಹಿಂದೆ ಬ್ಯೂರೋಕ್ರಾಟ್ಸ್‌ನ ಕೆಲವು ಮಂದಿ ಯಾವ ಮಟ್ಟಕ್ಕೆ ಬಂದಿದ್ದಾರೆಂದು ಹೇಳುತ್ತೇನೆ. ಬ್ಯಾಂಕ್ ಮ್ಯಾನೇಜರ್ಸ್‌ಗೆ 15 ಸಾವಿರ

7444-153

ರೂಪಾಯಿ ಸಂಬಳ. ರಿಸರ್ವ್ ಬ್ಯಾಂಕ್‌ನಲ್ಲಿದ್ದರೆ 50 ಸಾವಿರ ರೂಪಾಯಿ ಸಂಬಳ. 50 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವರ ಬ್ಯಾಂಕ್‌ನಲ್ಲಿ, ಇಲ್ಲಿ ಕ್ಲಾಸ್-4 ಗೆ ಮೂರು ಸಾವಿರ, ಕ್ಲಾಸ್-3 ಟೀಚರ್ಸ್ ಮಿನಿಮಮ್ 5 ಸಾವಿರ ರೂಪಾಯಿ ಸಂಬಳ ಬರುತ್ತದೆ. 10 ಸಾವಿರ, 15, ಸಾವಿರ, 20 ಸಾವಿರ ಸಂಬಳ ತೆಗೆದುಕೊಳ್ಳುವವರೂ ಇದ್ದಾರೆ. ಕೂಲಿ ಮಾಡುವ ರೈತ ಮಹಿಳೆ 20 ರೂಪಾಯಿ ಅಥವಾ 30 ರೂಪಾಯಿಗೆ ತೆಗೆದುಕೊಳ್ಳುತ್ತಾಳೆ. ಕೂಲಿ ಕೆಲಸಕ್ಕೂ, ಸರ್ಕಾರೀ ಕೆಲಸಕ್ಕೂ ವ್ಯತ್ಯಾಸ ಏನು ಎಂದರೆ ಕೂಲಿ ಕೆಲಸ ಮಾಡಿದರೆ ಮಾತ್ರ ಕೂಲಿ ಸಿಗುತ್ತದೆ. ಸರ್ಕಾರದಲ್ಲಿ ಕೆಲಸ ಮಾಡದೇ ಇದ್ದರೂ ಸಂಬಳ ಬರುತ್ತದೆ. ಇದೇ ಸರ್ಕಾರೀ ಕೆಲಸಕ್ಕೂ ಹಾಗೂ ಕೂಲಿ ಕೆಲಸಕ್ಕೆ ಇರುವ ವ್ಯತ್ಯಾಸ. ಆದರೆ ಸರ್ಕಾರದಲ್ಲಿರತಕ್ಕವರು, ಈ ಬ್ಯಾಂಕ್ ಅಧಿಕಾರಿ ಬಗ್ಗೆ ಹೇಳುತ್ತೇನೆ. ಚಿಂತಾಮಣಿಯ ಗ್ರಾಮೀಣ ಬ್ಯಾಂಕ್‌ನಲ್ಲಿ ಎಂತಹ ಕೇಸ್ ಆಯಿತು ಎಂದು ಹೇಳುತ್ತೇನೆ. ಯಾವ ಮಟ್ಟಕ್ಕೆ ಬಂದಿದ್ದಾರೆ? ನಿನ್ನೆ ಹೇಳುತ್ತಿದ್ದರಲ್ಲಾ, ಕಬ್ಬನ್ ಪಾರ್ಕ್ ಬಗ್ಗೆ. ಇಂಟೆಲೆಕ್ಚುಯಲ್ಸ್ ಎಂತಹವರು ಎಂದರೆ, ವಿಧಾನಸೌಧದ ಸುತ್ತಲೂ ಇರತಕ್ಕ ಎಲ್ಲಾ ಕ್ಲಬ್‌ನಲ್ಲಿ ಸೇರುತ್ತಾರಲ್ಲಾ. ಅವರಲ್ಲಿ 100ಕ್ಕೆ 90 ಭಾಗ ಅವರೇ ಕಿತಾಪತಿ ಮಾಡುತ್ತಾರೆ. ಅವರಿಗೆ ಬಡವರ ಕಷ್ಟ ಗೊತ್ತಿಲ್ಲ. ಅವರ ಮನೆಯಲ್ಲಿ ನಮಗೆ ಕೇಳುತ್ತಿರುವ ಸುದ್ದಿ, ಕಂಡು ಬಿಟ್ಟರೆ, ಆ ದೇವರು ಒಬ್ಬನೇ ಬರಬೇಕು, ಅವರು ಅಂತಹ ಪಾಪಗಳನ್ನು ಮಾಡುತ್ತಿದ್ದಾರೆ. ಮನುಷ್ಯನಿಗೆ ಆಸೆ ಇರಬೇಕು. ದುರಾಸೆ ಬಿಡಬೇಕು. ಗಾಂಧಿ ಹೇಳಿದ ಹಾಗೆ ಮೋಜಿನ ಜೀವನ ಬಿಡಬೇಕು, ಆಗ ದೇಶ ಬಂಗಾರವಾಗುತ್ತದೆ. ಇವನು ಮೋಜಿಗೋಸ್ಕರ ಬ್ಯಾಂಕ್ ಮ್ಯಾನೇಜರ್ ಏನು ಮಾಡುತ್ತಾನೆ ಎಂದರೆ, 15 ಸಾವಿರ ಸಂಬಳ ತೆಗೆದುಕೊಳ್ಳುವವನು. ಇವನು ಇನ್ನೊಬ್ಬ ಮ್ಯಾನೇಜರ್ ಬರುತ್ತಾನೆ. ಬಹಳ ಒಳ್ಳೆಯ ಮನುಷ್ಯ, ಬುದ್ಧಿಜೀವಿ. ಅವನು ಬ್ಯಾಂಕಿಗೆ ಬರುತ್ತಾನೆ. ಹ್ಯಾಂಡಿಂಗ್ ಓವರ್ ಅಂಡ್ ಟೇಕಿಂಗ್ ಓವರ್ ಮಾಡಬೇಕಾದರೆ ಇನ್ವೆಂಟರಿ ಬರೆಯುತ್ತಾನೆ. ಇನ್ವೆಂಟರಿ ಮಾಡಿ, ಛಾರ್ಜ್ ಎಲ್ಲಾ ಕೊಟ್ಟಾಗ, ಬೀಗವನ್ನೂ ಕೊಡುತ್ತಾನೆ. ಆ ಬೀಗವನ್ನು ಡೂಪ್ಲಿಕೇಟ್ ಮಾಡಿ ಜೇಬಿನಲ್ಲಿ ಇಟ್ಟುಕೊಂಡಿರುತ್ತಾನೆ. ಇಂತಹದೆಲ್ಲಾ ಕೇಳುತ್ತಿದ್ದರೆ ಆ ಹೊಸದಾಗಿ ಬಂದ ಬ್ಯಾಂಕ್ ಮ್ಯಾನೇಜರ್ ಇವನಿಗೆ ಮದುವೆ ಆಗಿ 11 ತಿಂಗಳು ಆಗಿದೆ. ಅವನ ಹೆಸರು ನಾಗರಾಜ್ ಎಂದು ಹೇಳಿ. ಇವನು ಹೋಗಿ ಏನು ಮಾಡುತ್ತಾನೆ ಅಂದರೆ ಇನ್ವೆಂಟರಿ ಇಶ್ಯೂ ಎಲ್ಲಾ ಹೊಸದಾಗಿ ಕೊಡುತ್ತಾನೆ. ಆ ಹೊಸದಾಗಿ ಕೊಡುವುದು ತರಹ ಮಾಡಿ ಡೂಪ್ಲಿಕೇಟ್ ಕೀ ಮಾಡಿಸಿಕೊಂಡಿರುತ್ತಾನೆ. ಒಂದು ದಿನ ಬಂದು ಒಳಗಡೆ ಇರುವ ಎರಡು ಕೇಜಿಯಷ್ಟು ಗೋಲ್ಡನ್ನು ಎತ್ತಿಕೊಂಡು ಹೋಗಿ ಮನೆಯಲ್ಲಿ ಇಟ್ಟುಕೊಂಡು ಹೊಸ ಮ್ಯಾನೇಜರ್‌ಗೆ ಮದುವೆಯಾಗಿ 11 ತಿಂಗಳಾಗಿದೆ. ಆತನ ಹೆಂಡತಿ ಎರಡು ತಿಂಗಳ ಗರ್ಭಿಣಿ. ಈ ಇಂಟಲೆಕ್ಚುಯಲ್ಸ್ ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಇವರು ವಿದ್ಯಾವಂತರಾ ಏನು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಆ ತಾಯಿ ಎರಡು ತಿಂಗಳ ಗರ್ಭಿಣಿ. ಅವನು ಪಾಶಾಣ ತೆಗೆದುಕೊಂಡು ನ್ಯಾಯವಾಗಿ ಸ್ಮಶಾನಕ್ಕೆ ಹೋಗುತ್ತಾನೆ. ಆತನ ಹೆಂಡತಿ ಎರಡು ತಿಂಗಳ ಗರ್ಭಿಣಿ. What will be the fate of that lady, what will be the fate of the baby in the stomach,... ಸ್ವಲ್ಪ ಇದನ್ನು ಸೀರಿಯಸ್ಸಾಗಿ ಯೋಚನೆ ಮಾಡಿ. ಆ ಮಗುವಿನ ಪರಿಸ್ಥಿತಿ ಏನಾಗಬಹುದು? ಅವಳ ಚಿಂತನೆಯಿಂದ ಏನು ಆಗಬಹುದು? ಒಂಭತ್ತು ತಿಂಗಳು ಒಂಭತ್ತು ದಿನವಾದ ಮೇಲೆ ಆ ಮಗುವಿಗೆ ಜನ್ಮ

ಕೊಡಬೇಕಾದರೆ ಏನು ಪರಿಸ್ಥಿತಿ ಆಗುತ್ತದೆ. ಇಂತಹವರು ಬಹಳ ಜನ ಇದ್ದಾರೆ. ನಾನು ಉದಾಹರಣೆ ಕೊಡಬೇಕಾದರೆ ಬಹಳ ಇದೆ. ಆ ಮಟ್ಟಕ್ಕೆ ಬಂದಿದೆ. ಎಲ್ಲರಿಗೂ ಆಸೆ ಇರಬೇಕು. ದುರಾಸೆ ಬಿಡಬೇಕು. ಗಾಂಧೀಜಿ ಹೇಳಿದ ಹಾಗೆ ಮೋಜಿನ ಜೀವನ ಬಿಟ್ಟರೆ the country will become best in this world... ಈ ಒಂದು ಉದಾಹರಣೆ ಕೊಟ್ಟು ನಾನು ಹೇಳುತ್ತೇನೆ.

ಶ್ರೀ ಎಚ್.ಡಿ. ಬಸವರಾಜ್ : ಮಾನ್ಯ ರಾಜಣ್ಣನವರೇ, ಇದಕ್ಕೂ ವಿಶ್ವಾಸ ಮತಕ್ಕೂ ಏನು ಸಂಬಂಧ ಗೊತ್ತೇ ಇಲ್ಲ.

SRI N. RAJANNA : You spoke about bureaucrats. I want to give an example.

ಶ್ರೀ ಅರಗ ಜ್ಞಾನೇಂದ್ರ : ಅವರ ಸರ್ಕಾರದಲ್ಲಿ ಅಧಿಕಾರಿಗಳು ಏನೇನು ಆಗಿದ್ದಾರೆಂದು ಹೇಳುತ್ತಿದ್ದಾರೆ. ಚೆನ್ನಾಗಿ ಹೇಳುತ್ತಿದ್ದಾರೆ. ಪರವಾಗಿಲ್ಲ.

ಶ್ರೀ ಎನ್. ರಾಜಣ್ಣ : ಗ್ರಾಮೀಣ ಬ್ಯಾಂಕಿನಲ್ಲಿ ಯಾವ ಮಟ್ಟಕ್ಕೆ ಬಂದಿದೆ? ಸಪೋಸ್ ನನ್ನ ಮನೆಯಲ್ಲಿ ಆ ತರಹ ಆಗಿದ್ದರೆ ನಾನು ಯಾವ ತರಹ ಆಗುತ್ತಿದ್ದೆ. ಆತ ಪತ್ರ ಬರೆದಿಟ್ಟು ಹೋಗಿದ್ದಾನೆ. ಇದನ್ನು ಯಾರು ಕಂಡು ಹಿಡಿದ ಮೇಲೆ ಅವತ್ತು ನನ್ನ ಜನ್ಮ ಕೈಲಾಸಕ್ಕೆ ಹೋಗುತ್ತದೆ ಎಂದು ಬರೆದಿಟ್ಟು ಹೋಗಿದ್ದಾರೆ. ಯಾರೋ ಖರ್ಚಿಗೆ ಗೋಲ್ಡನ್ನು ಮಾರುವುದಕ್ಕೆ ಬರುತ್ತಾನೆ. ಮೋಜಿನ ಜೀವನ ಮಾಡುವುದಕ್ಕೆ ಬರುತ್ತಾನೆ. ಅವನ ಹೆಂಡತಿ ಅಕ್ಕಂದಿರಿಗೆ ಒಳ್ಳೆಯ ಡೈಮೆಂಡ್ ಗೋಲ್ಡ್ ಹಾಕಿ ತೆಗೆದುಕೊಂಡು ಹೋಗುವುದಕ್ಕೆ ಬರುತ್ತಾನೆ. ಯಾರು ಪೋಲಿಸರು ಅವನನ್ನು ಹಿಡಿದು ಕೊಟ್ಟರೋ ಅವರಿಗೆ ನಾನು ಬಹಳ ಗ್ರೇಟ್‌ಫುಲ್ ಆಗಿದ್ದೇನೆ. ಅವರಿಗೆ ಅವಾರ್ಡ್ ಕೊಡಬೇಕು. ಇಲ್ಲದಿದ್ದರೆ ನಾನೇ ಅವರಿಗೆ 500 ರೂಪಾಯಿ ಕೊಡುತ್ತೇನೆ. ಬ್ಯೂರೋಕ್ರಾಟ್ಸ್ ಬಗ್ಗೆ ಉದಾಹರಣೆ. ಏಕೆ ಹೇಳುತ್ತೇನೆ ಎಂದರೆ, ನಿನ್ನೆಯಿಂದ ಎಲ್ಲಾ ಸೀನಿಯರ್ ಲೀಡರ್ಸ್ ಬ್ಯೂರೋಕ್ರಾಟ್ಸ್ ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆಂದು ಹೇಳಿದರು. ನಾನು ಉದಾಹರಣೆ ಕೊಡಬೇಕೆಂದು ತಿಳಿದುಕೊಂಡು ಉದಾಹರಣೆ ಕೊಟ್ಟಿದ್ದೇನೆ. ನಾವು ಯಾವ ಫೀಲ್ಡ್‌ನಲ್ಲಿ ಕೆಲಸ ಮಾಡಿಲ್ಲ ಎಂದು ಹೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ತಯಾರಿದ್ದೇನೆ. ನಮ್ಮ ಸ್ಪೀಕರ್ ಸಾಹೇಬರು ಅವಕಾಶ ಕೊಟ್ಟಿದ್ದಕ್ಕೆ ನಾನು ಅವರಿಗೆ ಬಹಳ ಅಭಾರಿ ಆಗಿದ್ದೇನೆ. ಬೆಂಗಳೂರು ಸಿಟಿ ವಿಚಾರ. ಬೆಂಗಳೂರು ಸಿಟಿ ಮತ್ತು ಅದರಲ್ಲೂ ವಿಶೇಷವಾಗಿ ಬೆಂಗಳೂರು ರೂರಲ್‌ನಲ್ಲಿ ಇವತ್ತು ಎರಡು ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ. ಬೆಂಗಳೂರು ಸಿಟಿಯಲ್ಲಿ ನಾವು ಆಶ್ರಯ ಸಮಿತಿಯ ವತಿಯಿಂದ ನನ್ನ ಕ್ಷೇತ್ರದಲ್ಲಿ 500 ಮನೆಗಳನ್ನು ಕೊಟ್ಟಿದ್ದೇನೆ. ಅದರಲ್ಲಿ 80 ಪರ್ಸೆಂಟ್ ಪರಿಶಿಷ್ಟ ಪಂಗಡ, 20 ಪರ್ಸೆಂಟ್ ಮೈನಾರಿಟಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಅವರು ಕಾರ್ಪೊರೇಟರ್ ಆಗಿ, ಶಾಸಕರಾಗಿ ಭಾರತೀ ನಗರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಆದರೆ ನಾನು ಕೇಳುವುದು ಏನೆಂದರೆ ಅಲ್ಲಿ ಯಾವುದೇ ಒಂದು ಡೆವಲಪ್‌ಮೆಂಟ್ ಆಗಬೇಕಾದರೆ ಪಾಪ್ಯೂಲೇಷನ್ ಕಂಟ್ರೋಲ್ ಮಾಡಬೇಕಾಗುತ್ತದೆ.

ನಾವು ಎರಡನ್ನೂ ಕೂಡ ನೋಡಬೇಕಾಗುತ್ತದೆ. ಆದರೆ ಪಾಪ್ಯೂಲೇಷನ್ ಜಾಸ್ತಿ ಮಾಡುವುದಕ್ಕೆ ಯಾವಾಗಲೂ ಎನ್‌ಕರೇಜ್ ಮಾಡುತ್ತಾರೆಂದು ನನಗೆ ಬಂದಿರುವ ಸುದ್ಧಿ. ನಿಜ ಇದು. ಅವರನ್ನು ಕೇಳಿ. ಮಕ್ಕಳು ಆಗದವರಿಗೆ ಔಷಧಿ ಕೊಡುತ್ತೇನೆ ಎಂದರೆ ಹೀಗೆಯೇ ಜಾಸ್ತಿ ಪಾಪ್ಯುಲೇಷನ್ ಆದರೆ ನೀವು ಎರಡು ಲಕ್ಷ ಮನೆ ಕೊಟ್ಟರೂ ಏನು? ಐದು ಲಕ್ಷ ಮನೆ ಕೊಟ್ಟರೂ ಏನು? ಹತ್ತು ಲಕ್ಷ ಮನೆ ಕೊಟ್ಟರೂ ಏನು? ಅದು ಎಲ್ಲಿ ಹೋಗುತ್ತದೆ. ಆದ್ದರಿಂದ ದಯವಿಟ್ಟು ಭಾರತೀ ನಗರದ ಪಾಪ್ಯುಲೇಷನ್ ಕಂಟ್ರೋಲ್ ಮಾಡಿ. ಐದು ನೂರು ಮನೆ ಕೊಡುವ ಬದಲು 600 ಮನೆ ಕೊಡಿ. ಚಿಂತೆ ಇಲ್ಲ. ಆದರೆ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಇನ್‌ಸ್ಟ್ರಕ್ಷನ್ ಕೊಡುವುದು ಒಳ್ಳೆಯದು.

ಶ್ರೀ ಎನ್. ರಾಜಣ್ಣ : ಮಾನ್ಯ ಗೌರವಾನ್ವಿತ ಅಧ್ಯಕ್ಷರೆ, ಪಾಪ್ಯುಲೇಷನ್ ಬಗ್ಗೆ ಕಳೆದ ವರ್ಷ ಮಾರ್ಚಿನಲ್ಲಿ ಮಾತನಾಡಿದ್ದೇನೆ. ಅದರ ಕಟಿಂಗ್ಸ್ ನಾನು ಕೊಡುತ್ತೇನೆ. ಎಲ್ಲಾ ಲೀಡರ್ಸ್ ಎಲ್ಲಾ ಸಬ್ಜೆಕ್ಟ್ ಮಾತನಾಡಿದ್ದಾರೆ. ಪಾಪ್ಯುಲೇಷನ್ ಬಗ್ಗೆ ಒಬ್ಬರೂ ಮಾತನಾಡಲಿಲ್ಲ. I spoke on this population in the last March. I have this subject. ಇವತ್ತೇನಾದರೂ ಇಷ್ಟು ಜನ ಮಾತನಾಡುತ್ತೀರಿ; ಎಷ್ಟು ಜನಕ್ಕೆ ನೀವು ವೆಸೆಕ್ಟಮಿ, ಟ್ಯುಬೆಕ್ಟಮಿ ಆಪರೇಷನ್ ಮಾಡಿಸುವುದಕ್ಕೆ ರೆಕ್ಮಂಡ್ ಮಾಡಿದ್ದೀರೋ ನನಗೆ ಗೊತ್ತಿಲ್ಲ. ನೀವು ಎಷ್ಟು ಜನ ಆಪರೇಷನ್ ಮಾಡಿಸಿಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಆದರೆ ನಾನಂತೂ ಆಪರೇಷನ್ ಮಾಡಿಸಿಕೊಂಡಿದ್ದೇನೆ. in the interest of my country. and if you want I will prove. I have got the certificate...

ಅಧ್ಯಕ್ಷರು : ರಾಜಣ್ಣನವರೇ, ನನಗೆ ನಿಮ್ಮನ್ನು ಮತ್ತು ಎಲ್ಲಾ ಮೆಂಬರ್ಸನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕದ್ದು ನಮ್ಮ ಕರ್ತವ್ಯ. ನಾವು ಏನೂ ನಿಮ್ಮ ಹತ್ತಿರ ಪ್ರೂಫ್ ಕೇಳುವುದಿಲ್ಲ. ತಾವು ಬೇಗ ಮಾತು ಮುಗಿಸಿ. ಈಗ ತಾವು ಹೇಳಿದ್ದರಿಂದ ಅವರ ಡೈರೆಕ್ಟ್ ಕಾಂಟ್ರಿಬ್ಯೂಷನ್ಸ್ ಪಾಪ್ಯುಲೇಷನ್‌ಗೆ ಇಲ್ಲ. ಬೇರೆ ಏನಾದರೂ ಇದ್ದರೆ ಕಾರಣವಲ್ಲ. ನೀವು ಆ ಛಾರ್ಜ್ ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡೈರೆಕ್ಟ್ ಕಾಂಟ್ರಿಬ್ಯೂಷನ್ ಇಲ್ಲ. ಇಂಡೈರೆಕ್ಟ್ ಕಾಂಟ್ರಿಬ್ಯೂಷನ್ ಏನು ಅಂದರೆ ಯಾರಿಗೆ ಮಕ್ಕಳಲಾಗಲಿಲ್ಲ ಅವರಿಗೆ ಔಷಧಿ ಕೊಡುವುದು ಇಂತಹವು ಇದೆ ಎಂದು ನಾನು ಕೇಳಿದ್ದೇನೆ. ಅದು ನಿಜನೋ ಸುಳ್ಳೋ ಗೊತ್ತಿಲ್ಲ. ಅದಕ್ಕೆ ದಯವಿಟ್ಟು ನೀವು ಅವರಿಗೆ ಹೇಳಬೇಡಿ. ಇದನ್ನೆಲ್ಲಾ ತೆಗೆದುಕೊಂಡರೆ ಪಾಪ್ಯುಲೇಷನ್ ಹೆಚ್ಚಾಗುತ್ತದೆ. ಇದನ್ನು ತೆಗೆದುಕೊಳ್ಳುವುದೂ ಬೇಡ, ಮಾಡುವುದೂ ಬೇಡ ಎಂದು ನೀವು ಅಡ್ವೈಸ್ ಮಾಡಿ.

ಅಧ್ಯಕ್ಷರು : ನನ್ನ ಛೇಂಬರಿಗೆ ಕರೆಸಿ ಅಡ್ವೈಸ್ ಮಾಡುತ್ತೇನೆ.

ಶ್ರೀ ಎಂ.ಎಸ್. ನಾಗರಾಜ್ : ಅವರು ಎಷ್ಟು ಜನ ಮಕ್ಕಳಾದ ಮೇಲೆ ಆಪರೇಷನ್ ಮಾಡಿಸಿದರು ಎಂಬುದನ್ನು ಹೇಳಬೇಕಲ್ಲಾ.

ಅಧ್ಯಕ್ಷರು : ಅವೆಲ್ಲಾ ಏಕೆ?

ಶ್ರೀ ಎನ್. ರಾಜಣ್ಣ : ಮಾನ್ಯ ನಾಗರಾಜ್ ಅವರೇ, ನಮಗೆಲ್ಲರಿಗೂ ಆ ಒಂದು ಮನೋಭಾವನೆ ಬಂದು ಬಿಟ್ಟರೆ ದೇಶದ ಪಾಪ್ಯುಲೇಷನ್ 100 ಕ್ರೋರ್ಸ್‌ಗೆ ಹೋಗುತ್ತಿರಲಿಲ್ಲ. ನಾನು 1974ರಲ್ಲಿ ಮಿಲಿಟರಿ ಆಸ್ಪತ್ರೆಗೆ ಸ್ಕೂಟರಿನಲ್ಲಿ ಹೋಗಿ ಆಪರೇಷನ್ ಮಾಡಿಸಿಕೊಂಡು ಬಂದಿರುವ ಸರ್ಟಿಫಿಕೇಟ್ ಇದೆ.

ಅಧ್ಯಕ್ಷರು : ಇನ್ನೂ ಜಾಸ್ತಿ ಯಾರಾದರೂ ಮಾಡಿರೆ ನಿಮಗೆಲ್ಲಾ ಅವರು ಅದೇ ಕೆಲಸ ಮಾಡುತ್ತಾರೆ. ದಯಮಾಡಿ ತಾವು ಕನ್‌ಕ್ಲೂಡ್ ಮಾಡಿ. ಏಕೆಂದರೆ ಮುಂದಿನ ಅಧಿವೇಶನದಲ್ಲಿ ನೀವು ಮಾತನಾಡುವುದು ಇದೆ. ಆದ್ದರಿಂದ ಈಗ ಬೇಗ ಮುಗಿಸಿ. ನಮಗೂ ಸ್ವಲ್ಪ ಛೇಂಜ್ ಆಗಬೇಕಾಗಿತ್ತು.

ಶ್ರೀ ಎನ್. ರಾಜಣ್ಣ : ಸಾರ್, ಎಲ್ಲಾ ಸರ್ಕಾರ ಬರುತ್ತಿದೆ, ಹೋಗುತ್ತಿದೆ, ಪಾಪ್ಯುಲೇಷನ್ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲ. ಚಿಂತನೆ ಮಾಡಿದ್ದರೆ 30 ಕೋಟಿ ಸ್ವಾತಂತ್ರ್ಯ ಬಂದಾಗ ಇದ್ದುದು 100 ಕೋಟಿ ಆಗುತ್ತಿರಲಿಲ್ಲ. ನಮಗೆ ಬೆಳಿಗ್ಗೆ ಎದ್ದರೆ ಸಮಸ್ಯೆಗಳು ಪಾಪ್ಯುಲೇಶನ್ ಬಗ್ಗೆ ಇದೆ. ಜನ ಸಂಖ್ಯೆ ಜಾಸ್ತಿ ಆಗುತ್ತಿದೆ.

ಶ್ರೀ ಬಿ.ಎ. ಮೊಹಿದ್ದೀನ್ : ಹಿಂದೆ ಒಂದು ಫೋರಂ ಇತ್ತು, Legislator's Forum for population control... ಅದು ಏನಾದರೂ ಇದ್ದರೆ, ರಾಜಣ್ಣನವರನ್ನು ಛೇರ್ಮನ್ ಮಾಡಿ ಬಿಡಿ..

ಅಧ್ಯಕ್ಷರು : ಅವರನ್ನೂ ನಿಮ್ಮನ್ನು ಛೇರ್ಮನ್ ಮಾಡಿ ಪ್ರಯೋಜನ ಏನು ?

ಶ್ರೀ ಎನ್. ರಾಜಣ್ಣ : ಇಷ್ಟು ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಯಾವುದಾದರೂ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿದ್ದರೆ ಯಾವುದಕ್ಕೂ ಪ್ರಾಬ್ಲಮ್ ಇರುತ್ತಿರಲಿಲ್ಲ. ಕಾವೇರಿಗೂ ಸಮಸ್ಯೆ ಇರಲಿಲ್ಲ, ಆಲ್ಮಟ್ಟಿಗೂ ಸಮಸ್ಯೆ ಇರುತ್ತಿರಲಿಲ್ಲ. ಹೌಸಿಂಗ್ ಪ್ರಾಬ್ಲಮ್ ಇರುತ್ತಿರಲಿಲ್ಲ. ಈ ಕಲಿಯುಗದ ಕೊನೆಯಲ್ಲಿ ಕ್ಯೂನಲ್ಲಿ ನಿಂತುಕೊಂಡು ಜೀವನ ಮಾಡುವುದೇ ಹೋಗುತ್ತಿದೆ.

ಅಧ್ಯಕ್ಷರು : ರಾಜಣ್ಣನವರೇ, ತಾವು ಬೇಗ ಮುಗಿಸಬೇಕು.

ಶ್ರೀ ಎನ್. ರಾಜಣ್ಣ : ಕಲಿಯುಗದ ಕೊನೆಯಲ್ಲಿ ಇದನ್ನು ನಿಯಂತ್ರಣ ಮಾಡಿದರೆ ಕ್ಯೂ ಜೀವನೇ ಹೋಗುತ್ತದೆ. ಬೆಂಗಳೂರು ಸಿಟಿ ಇನ್‌ಫ್ರಾಸ್ಟ್ರಕ್ಚರ್ ವಿಚಾರ.

ಅಧ್ಯಕ್ಷರು : ಅದು ಈಗ ಬೇಡ. ನೀವು ಮುಂದಿನ ಸಲ ಹೇಳುವಿರಂತೆ.

ಶ್ರೀ ಎನ್. ರಾಜಣ್ಣ : ಸಾರ್ ನಾವು ಬಡವರಿಗೆ ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ನಾವು 6 ಲಕ್ಷ ಗ್ರೀನ್ ಕಾರ್ಡ್ಸ್ ಕೊಟ್ಟಿದ್ದೇವೆ. ಈಗ ರೀಸೆಂಟಾಗಿ ಆರು ತಿಂಗಳ ಹಿಂದೆ ಇನ್ನೊಂದು ಆರು ಲಕ್ಷ ಗ್ರೀನ್ ಕಾರ್ಡ್ಸ್ ಕೊಟ್ಟಿದ್ದೇವೆ. ಇದಕ್ಕೆ 250 ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೀರಿ. ಬಡವರಿಗೆ 3.50 ಪೈಸೆಗೆ ಅಕ್ಕಿ ಕೊಡುತ್ತಿದ್ದೀರಿ.

ಅಧ್ಯಕ್ಷರು : ಈಗ ಈ ಗ್ರೀನ್ ಕಾರ್ಡ್ಸ್‌ಗೆ ಮಳೆಗೆ ಸಿಕ್ಕಿ ವೈಟ್ ಆದರೆ ಏನು ಮಾಡುವುದು ? ಗ್ರೀನ್ ಕಾರ್ಡ್ ಕೊಟ್ಟಿರುತ್ತಾರೆ, ಅದು ಮಳೆಗೆ ನೆನೆದು ಬಿಳಿ ಬಣ್ಣ ಆದರೆ ಆ ಕಾರ್ಡ್ ಹೋಲ್ಡರ್ಸ್‌ಗೆ ಏನು ಮಾಡುವುದು ?

ಶ್ರೀ ವಾಟಾಳ್ ನಾಗರಾಜ್ : ಅವರ ಬಣ್ಣ ಬಯಲಾಗುತ್ತದೆ.

ಶ್ರೀ ಎಚ್.ಡಿ. ಬಸವರಾಜ್ : ಇವರು ಗ್ರೀನ್ ಕಾರ್ಡ್ ಕೊಟ್ಟಿದ್ದೇವೆಂದು ಹೇಳುತ್ತಾರೆ. ಸಿಟಿಯವರಿಗೆ ಗ್ರೀನ್ ಕಾರ್ಡ್ ಕೊಡಬಹುದಾ?

MR. SPEAKER : He is member of the Karnataka Legislative Assembly.

ಶ್ರೀ ಎನ್. ರಾಜಣ್ಣ : ನಾವು ಇಂತಹ ಫೀಲ್ಡ್‌ನಲ್ಲಿ ಕೆಲಸ ಮಾಡಿಲ್ಲ ಎಂದು ಇಲ್ಲ. ನಮ್ಮ ಸರ್ಕಾರ ಜೆನ್ಯೈನ್ ಆಗಿ ಒಳ್ಳೆಯ ಕೆಲಸ ಮಾಡಿದೆ. ನೀವು ಏನು ಅವಿಶ್ವಾಸ ನಿರ್ಣಯ ತಂದಿದ್ದೀರಿ. ದಯವಿಟ್ಟು ವಾಪಸ್ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮದೇನೂ ತಕರಾರು ಇಲ್ಲ. ನಿಮ್ಮದೇ ತಕರಾರು ನೀವು ಒಟ್ಟಾಗಿ ಇದ್ದೀರಾ ಹೇಳಿ.

ಶ್ರೀ ಎನ್. ರಾಜಣ್ಣ : ನೀವು 18 ಪಾರ್ಟಿ ಇಟ್ಟುಕೊಂಡು ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿದ್ದೀರಿ. ಮಾನ್ಯ ದೇವೇಗೌಡರಿಗೆ 13 ಪಾರ್ಟಿಗೆ ಕಷ್ಟ ಆಯಿತು. ಮಾನ್ಯ ದೇವೇಗೌಡರು ಮಾರ್ಚಿ ತಿಂಗಳಲ್ಲಿ ರಾತ್ರಿ 11.00 ಗಂಟೆಗೆ ಭಾಷಣ ಮಾಡುವಾಗ ನೀವು ಸಹಕಾರ ಕೊಡಲಿಲ್ಲ. ಆಯಿತು ಈಗ ಮಾನ್ಯ ವಾಜಪೇಯಿ ಅವರು ಬಂದಿದ್ದಾರೆ. ಈಗ 18 ಪಾರ್ಟಿ ಇದೆ. 18 ಪಾರ್ಟಿ ಎಂದರೆ ಎಲ್ಲಾ ಪೀಸ್ ಪೀಸ್ ಸೇರಿಸಿ ವೆಲ್ಡ್ ಮಾಡಿದ್ದೀರಿ. Broken iron rod may be welded but it loses its original temper. I am grateful to all my friends and our President. Thank you sir.

ಶ್ರೀ ಅರಗ ಜ್ಞಾನೇಂದ್ರ : ದೇವೇಗೌಡರಿಗೆ ಎಷ್ಟು ಪೀಸ್‌ಗಳು ಸಪೋರ್ಟ್ ಮಾಡಿದ್ದವು?

ಶ್ರೀ ರಾಜಣ್ಣ : ಅಧ್ಯಕ್ಷರೆ, ಒಂದೇ ರಾಡ್ ಆಗಿದ್ದರೆ ಅದರಲ್ಲಿ ಶಬ್ಧ ಬಂದರೆ ಅದು ಸ್ಪಷ್ಟವಾಗಿ ಚೆನ್ನಾಗಿ ಕೇಳುತ್ತದೆ. ಆದರೆ 18 ಪೀಸ್‌ಗಳನ್ನು ವೆಲ್ಡ್ ಮಾಡಿದ್ದರೆ ಆಗ ಶಬ್ದ ಮಾಡಿದರೆ ಚೆನ್ನಾಗಿ ಶಬ್ಧ ಬರುವುದಿಲ್ಲ. ಸ್ವಲ್ಪ ವ್ಯತ್ಯಾಸವಿರುತ್ತದೆ. ಹಾಗೆ ಇಂದು 18 ಪೀಸ್‌ಗಳನ್ನು ಸೇರಿಸುವಲ್ಲಿ ಏನೇನೋ ಕಷ್ಟಪಡುತ್ತಿದ್ದಾರೆ, ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಉತ್ತರ ಭಾರತದ ನಾಲ್ಕು ರಾಜ್ಯಗಳಲ್ಲಿ ಚುನಾವಣೆಯಾಗಲಿ ಜನತೆಯ ತೀರ್ಪು ಗೊತ್ತಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ನೀವು ಈ ಹಿಂದೆ ಗೆದ್ದಿರುವ ಸ್ಥಾನಗಳಷ್ಟನ್ನು ಉಳಿಸಿಕೊಳ್ಳಿ ಸಾಕು.

ಶ್ರೀ ಎನ್. ರಾಜಣ್ಣ : ನಾವು ಉಳಿಸಿಕೊಳ್ಳುತ್ತೇವೆ. ಈಗ ನೀವು ಸಹಕಾರ ಕೊಟ್ಟು ಅವಿಶ್ವಾಸ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ನಾಳೆಯ ಕಾರ್ಯಕ್ರಮದ ಪಟ್ಟಿ ಈ ರೀತಿ ಇದೆ. ಇನ್‌ಫರ್ಮೇಷನ್ ಟೆಕ್ನಾಲಜಿ ಎಕ್ಸಿಬಿಷನ್ ನೋಡುವ ಸಲುವಾಗಿ ಶಾಸಕರನ್ನು ಕರೆದೊಯ್ಯಲು ಮಿನಿ ಬಸನ್ನು ಶಾಸಕರ ಭವನದ

ಸ್ಥಳದಿಂದ ಏರ್ಪಾಡು ಮಾಡಲಾಗಿದೆ. ಬೆಳಗಿನ ತಿಂಡಿಯನ್ನು ಅಲ್ಲಿಯೇ ಅವರು ವ್ಯವಸ್ಥೆ ಮಾಡುತ್ತಾರೆ. ಆದಕಾರಣ ನಾಳೆ ಸದನ ಮಧ್ಯಾಹ್ನ 12-15 ಗಂಟೆಗೆ ಸಮಾವೇಶಗೊಳ್ಳುತ್ತದೆ. ಸಮಾವೇಶಗೊಂಡ ಮೇಲೆ ಮೊದಲನೆಯದಾಗಿ ಭಾಷಣ ಮಾಡುವವರ ಕ್ರಮಾಂಕದಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಬರುತ್ತಾರೆ, ಅವರಾದ ಮೇಲೆ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾರೆ, ಇವರುಗಳು ಮಾತನಾಡಿದ ಮೇಲೆ ಕಾಂಗ್ರೆಸ್‌ನವರ ಟರ್ನ್ ಬರುತ್ತದೆ. ರಾಜೇಂದ್ರನ್‌ರವರೆ ನೀವು ನಾಳೆ ಮಾತನಾಡಿ, ಅವಕಾಶ ಮಾಡಿಕೊಡುತ್ತೇನೆ. ಈಗ ಕಡೆಯದಾಗಿ ಹಶ್ಮಿಯವರು ಮಾತನಾಡಲಿ. ಎಲ್ಲರೂ ಸಹಕರಿಸಿ. ಏಕೆಂದರೆ ಇವೊತ್ತು

ಶ್ರೀ ಮಲ್ಲಿಕಾರ್ಜುನ ಖರ್ಗೆ ; ಅಧ್ಯಕ್ಷರೆ, ನಾಳೆ 12-15ಕ್ಕೆ ಸದನ ಸೇರಿದರೆ 6-30 ಅಥವಾ 7-00 ಗಂಟೆಗೆ ಸದನ ಮುಂದೂಡುತ್ತೀರಿ. ಶುಕ್ರವಾರ ಬೆಳಿಗ್ಗೆ 9-00 ಗಂಟೆಗೆ ಸದನ ಸಮಾವೇಶವಾದರೆ ಮಧ್ಯಾಹ್ನ 1-00 ಗಂಟೆಗೆ ಮುಗಿಸುತ್ತೀರಿ.

ಅಧ್ಯಕ್ಷರು : ಶುಕ್ರವಾರ ಹೆಚ್ಚಿನ ಸಮಯವನ್ನು ತೆಗೆದುಕೊಂಡು ಅವಕಾಶ ಮಾಡಿಕೊಡುತ್ತೇನೆ. ಏಕೆಂದರೆ ನಿಮ್ಮ ಪಾರ್ಟಿಯವರದೇ ದೊಡ್ಡ ಪಟ್ಟಿ ಇದೆ. ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾನು ಸುಮಾರು ಐದಾರು ಗಂಟೆಗಳ ಕಾಲ ಮಾತನಾಡಿ ತೊಂದರೆ ಮಾಡಿದ್ದೇನೆ. ಅದಕ್ಕಾಗಿ ಕ್ಷಮೆ ಕೇಳುತ್ತೇನೆ. ದಯವಿಟ್ಟು ನಮ್ಮ ಪಾರ್ಟಿಯ ಇನ್ನಿತರ ಸದಸ್ಯರುಗಳು ಅವರವರುಗಳ ಅಭಿಪ್ರಾಯವನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಿ.

ಅಧ್ಯಕ್ಷರು ; ಅವಕಾಶ ಮಾಡಿಕೊಡುತ್ತೇನೆ. ನೀವು ಹೆಚ್ಚು ಸಮಯ ಮಾತನಾಡಿದ್ದರಿಂದ ತೊಂದರೆ ಏನು ಆಗಿಲ್ಲ. ಬಿ.ಜೆ.ಪಿ. ಯವರೂ ಕೂಡ ಕೆಲವರು ಮಾತನಾಡಬೇಕಾಗಿದೆ. ಆದಕಾರಣ ಒಂದೆರಡು ಗಂಟೆಗಳ ಕಾಲ ಹೆಚ್ಚಾಗಿ ಸದಸ್ಯರುಗಳು ಸದನದಲ್ಲಿ ಕೂರಬೇಕಾಗುತ್ತದೆ. ದಯಮಾಡಿ ಎಲ್ಲಾ ಸದಸ್ಯರುಗಳು ಸಹಕರಿಸಬೇಕು. ಸಾಧ್ಯವಾದ ಮಟ್ಟಿಗೆ ಎಲ್ಲ ಸದಸ್ಯರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಯಾವ ಸದಸ್ಯರಿಗೂ ಮಾತನಾಡವುದರಲ್ಲಿ ವಂಚಿತರಾಗದೇ ಇರುವ ಹಾಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಹಶ್ಮಿಯವರೆ ನೀವು ಮಾತನಾಡಿ.

+ ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ (ಬೀದರ್) : ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಬೀದರ್ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಪದೇ ಪದೇ ಹೇಳುತ್ತಲೇ ಬಂದಿದ್ದೇನೆ. ಆದರೆ ಅಲ್ಲಿ ಮಾಡಬೇಕಾದ ಕೆಲಸಗಳನ್ನು ಮಾಡುತ್ತಿಲ್ಲ. ಅದರ ಬದಲು ಪ್ರತಿದಿನ ಒಂದೊಂದು ಇಲಾಖೆಯಲ್ಲಿಯೂ ಒಂದೊಂದು ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ. ಇದೇ ಅಲ್ಲಿಯ ಕೆಲಸವಾಗಿಬಿಟ್ಟಿದೆ. ಈ ರೀತಿಯ ಭ್ರಷ್ಟಾಚಾರವಾಗುತ್ತಿರುವ ಬಗ್ಗೆ ನಾನು ಸಾಕಷ್ಟು ಬಾರಿ ಸಂಬಂಧಪಟ್ಟ ಮಂತ್ರಿಗಳಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಕೂಡ ಯಾರೂ ಕ್ರಮವನ್ನು ತೆಗೆದುಕೊಂಡಿಲ್ಲ. ಕೆಲವು ದಿವಸಗಳ ಹಿಂದೆ ಬೀದರ್‌ನಲ್ಲಿ ಅತಿಯಾದ ಮಳೆಯಿಂದಾಗಿ ಹೆಚ್ಚು ಹಾನಿಯಾಗಿದೆ. ಅಲ್ಲಿಗೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಂದಿದ್ದಾಗ ಅವರ ಗಮನಕ್ಕೂ ನಾನು ಈ ವಿಷಯವನ್ನು ತಂದೆ. ಇಂದು

ಸಮಾಜವಾದತತ್ತ್ವದವರಾದ ಸನ್ಮಾನ್ಯ ಶ್ರೀ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾದಾಗಿನಿಂದ ನೋಡುತ್ತಿದ್ದೇನೆ, ಅವರು ಎಲ್ಲಾ ಮಂತ್ರಿಗಳು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಕೆಲವು ಮಂತ್ರಿಗಳು ಶಾಸಕರ ಮಾತಿಗೆ ಬೆಲೆ ಕೊಡುತ್ತಿಲ್ಲ. ನಾನು ತಮ್ಮ ಮೂಲಕ ನಮ್ಮ ಜಿಲ್ಲೆಯಲ್ಲಿ ಆಗಿರುವ ಹಾನಿಯ ಬಗ್ಗೆ ಹೇಳುತ್ತೇನೆ. ಅಲ್ಲಿ ಕೋಟ್ಯಾಂತರ ರೂ.ಗಳ ಬೆಳೆ ಹಾನಿಯಾಗಿದೆ. ಅಲ್ಲಿಯ ಬಹಳ ಜನರು ತೊಂದರೆಗೆ ಒಳಗಾಗಿದ್ದಾರೆಯಾದ ಕಾರಣ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ಒಂದು ಸಭೆಯನ್ನೂ ಕೂಡ ಇವರು ನಡೆಸಿಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ನಾನು ಜನರಿಗೆ ಆಗಿರುವ ತೊಂದರೆಯ ಬಗ್ಗೆ ಹೇಳಿದರೂ ಕೂಡ ಅವರು ನನ್ನ ಮಾತನ್ನು ಕೇಳುವುದಕ್ಕೆ ತಯಾರಿಲ್ಲ. ಜಿಲ್ಲೆಯ ಎಲ್ಲಾ ಕಡೆ ಇವರು ಪ್ರವಾಸ ಮಾಡಿದ್ದಾರೆ. ಆದರೆ ನನ್ನ ಕ್ಷೇತ್ರಕ್ಕೆ ಈ ಇಬ್ಬರು ಮಂತ್ರಿಯಲ್ಲಿ ಯಾರೂ ಕೂಡ ಹೋಗಿಲ್ಲ. ನಾನು ನಮ್ಮ ಪಾರ್ಟಿಯಿಂದ ಒಬ್ಬನೇ ಶಾಸಕ. ನನ್ನ ಸಲಹೆಯನ್ನು ಇವರಿಗೆ ಕೊಡೋಣವೆಂದರೆ ಇವರುಗಳು ನನಗೆ ಕಾಲಾವಕಾಶವನ್ನೇ ಕೊಡುವುದಕ್ಕೆ ತಯಾರಿಲ್ಲ. ಕಡೇಪಕ್ಷ ಯಾವ ಮಂತ್ರಿಯೂ ನನ್ನ ಕ್ಷೇತ್ರಕ್ಕೆ ಪ್ರವಾಸ ಮಾಡಿಲ್ಲ. ಆದರೆ ನನ್ನ ಕ್ಷೇತ್ರದ ಜನ ಇವರುಗಳ ಬಳಿ ಸಮಸ್ಯೆ ಹೇಳಿದರೆ ಆಗ ಮಂತ್ರಿಗಳು ನಿಮ್ಮ ಶಾಸಕರು ನನಗೆ ಏನೂ ಹೇಳಲಿಲ್ಲವಾದ ಕಾರಣ ನಾವೇನೂ ಮಾಡಲಿಲ್ಲವೆನ್ನುತ್ತಾರೆ. ಇವರುಗಳು ಈ ರೀತಿಯ ಕುತಂತ್ರ ರಾಜಕೀಯವನ್ನು ಮಾಡುತ್ತಿದ್ದಾರೆ. ಇಂದು ಇಲ್ಲಿ ಸಣ್ಣ ನೀರಾವರಿ ಸಚಿವರು ಇದ್ದಾರೆ. ನಾನು ಅವರಿಗೆ ತಮ್ಮ ಮೂಲಕ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಬೀದರ್‌ನಲ್ಲಿ ಒಂದು ವೇಸ್ಟ್ ವಿಯರ್ ಇದೆ, ಅಲ್ಲಿಂದ ನೀರು ಹೋಗುತ್ತಿತ್ತು, ಮುಸ್ಲಿಂ ಜನರಿಗೆ ತೊಂದರೆ ಮಾಡಬೇಕೆಂದು ಕೆಲವರು ಪರ್ಪಸ್ಲಿ ಆಗಿ ಸುಮಾರು ಎರಡೂವರೆ ಅಡಿ ಆ ವೇಸ್ಟ್ ವಿಯರ್ ಮೇಲೆ ಗೋಡೆಯನ್ನು ಕಟ್ಟಿದ್ದಾರೆ. ಈ ವಿಷಯ ಮಂತ್ರಿಗಳಿಗೂ ಗೊತ್ತು ಮತ್ತು ಜಿಲ್ಲಾ ಆಡಳಿತ ವರ್ಗದವರಿಗೂ ಗೊತ್ತು. ಸಣ್ಣ ನೀರಾವರಿ ಇಲಾಖೆಯವರು ಇದರ ಬಗ್ಗೆ ವರದಿಯನ್ನು ತಯಾರಿಸಿ ಆ ವೇಸ್ಟ್ ವಿಯರ್ ಮೇಲೆ ಏನು ಎರಡೂವರೆ ಅಡಿ ಗೋಡೆ ಕಟ್ಟಿದ್ದಾರೆ. ಅದನ್ನು ಡೆಮಾಲಿಷ್ ಮಾಡಿ ಅಲ್ಲಿಂದ ನೀರನ್ನು ಬಿಡಬೇಕೆಂದು ಹೇಳಿದ್ದಾರೆ. ಸುಮಾರು ಒಂದು ತಿಂಗಳಾದರೂ ಯಾರೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಜಿಲ್ಲಾ ಮಂತ್ರಿಗಳೂ ಕೂಡ ಹೇಳುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿಯೂ ದುರ್ದೈವದ ಸಂಗತಿ. ಸರ್ಕಾರಿ ಟ್ಯಾಂಕಾದ ಆ ವೇಸ್ಟ್‌ವಿಯರ್ ಮೇಲೆ ಆ ಊರಿನ ಜನರು ಸುಮಾರು ಎರಡೂವರೆ ಅಡಿ ಗೋಡೆ ಕಟ್ಟಿ ನೀರನ್ನು ನಿಲ್ಲಿಸಿದ್ದಾರೆ. ಅದರಿಂದ ಅದರ ಹಿಂದಿರತಕ್ಕಂಥ ಸುಮಾರು 200 ರಿಂದ 300 ಎಕರೆ ಭೂಮಿ ಸಬ್‌ಮರ್ಜ್ ಆಯಿತು. ಆಮೇಲೆ ಒಂದು ಭಾಗದಲ್ಲಿ ಅದು ಒಡೆದುಹೋಯಿತು. ಆಮೇಲೆ ಇಲ್ಲಿ ಅದನ್ನು ಎತ್ತರಿಸುವುದರಿಂದ ಕೆಲವು ಭಾಗಗಳು ಮುಳುಗಡೆಯೂ ಆಯಿತು. ಎರಡನೆಯದಾಗಿ ಸರ್ಕಾರಿ ಟ್ಯಾಂಕನ್ನು ಎತ್ತರಿಸುವ ಕೆಲಸವನ್ನು ಖಾಸಗಿ ಜನರು ಸರ್ಕಾರದ ಅನುಮತಿ ಇಲ್ಲದೆ ಮತ್ತು ಟೆಕ್ನಿಕಲ್ ಅಡ್ವೈಸ್ ಇಲ್ಲದೆ ಹೇಗೆ ಎತ್ತರಿಸಿದರು ? ಇದನ್ನು ಪರ್ಪಸ್ಲಿ ಮಾಡಿ ಕೆಲವು ಜನರ ಜಮೀನುಗಳು ಮುಳುಗಡೆಯಾಗಲಿ ಎನ್ನುವ ಉದ್ದೇಶದಿಂದ ಕೆಲವು ವಿಲೇಜರ್ಸ್ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಆ ಕೆರೆಯನ್ನು ಎತ್ತರಿಸುವ ಕೆಲಸವನ್ನು ಮಾಡಿದರೆ ಯಾರಿಗೆ ಹೇಳಬೇಕು ? ಅದು

ನನ್ನ ಗಮನಕ್ಕೆ ಬಂದಾಗ ತಕ್ಷಣ ನಾನು ಜಿಲ್ಲಾಪಂಚಾಯತ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ಮತ್ತು ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇನೆ. ಆದರೂ ಕೂಡ ಯಾರ ಮೇಲೂ ಕೂಡ ಕ್ರಮ ತೆಗೆದುಕೊಂಡಿಲ್ಲ. ನಾನು ಕೇಳುವುದೇನೆಂದರೆ ಸರ್ಕಾರಿ ಆಸ್ತಿಯ ಮೇಲೆ ಖಾಸಗಿಯವರ ಹಕ್ಕು ಏನಿದೆ? ಇದರ ಬಗ್ಗೆ ಅಲ್ಲಿಯ ಜನರು ಸರ್ಕಾರಕ್ಕೆ ಟೆಲಿಗ್ರಾಂ ಕೊಟ್ಟರೂ ಕೂಡ ಏನು ಕ್ರಮ ತೆಗೆದುಕೊಂಡಿಲ್ಲ. ಸರ್ಕಾರಿ ಕೆರೆಗೆ ಕೆಲವು ಜನರು ಪರ್ಪ್‌ಸ್ ಆಗಿ ಗೋಡೆ ಎತ್ತರಿಸುವ ಕೆಲಸವನ್ನು ಮಾಡಿದರೆ ಅದು ಕಡೆಗೆ ಎಲ್ಲಿಂದ ಎಲ್ಲಿಗೋ ವಿಚಾರ ಹೋಗಿ ಕಡೆಗೆ ಹಿಂದೂ ಮುಸ್ಲಿಂ ಗಲಾಟೆ ಪ್ರಾರಂಭವಾಗಲೂ ಕಾರಣವಾಗುತ್ತದೆ. ಹಷ್ಮಿಯವರು ಇದನ್ನು ಬಾಯಿಬಿಟ್ಟು ಹೇಳಲಿಲ್ಲ. ಏಕೆಂದರೆ ಅಲ್ಲಿ ಜಮೀನು ಮುಳುಗಡೆಯಾಗುತ್ತಿರುವುದು ಮುಸ್ಲಿಂ ಜನರದು. ಇದು ಸರಿಯಲ್ಲ. ಇಲ್ಲಿ ಗೋಡೆ ಕಟ್ಟಲು ಅಲ್ಲಿ ಅಸಿಸ್ಟೆಂಟ್ ಕಮೀಷನರ್ ಹೇಗೆ ಅಲೋ ಮಾಡಿದರು ಮತ್ತು ಅಲ್ಲಿಯ ಜನರು ಕಾನೂನನ್ನು ತಮ್ಮ ಕೈಗೆ ಹೇಗೆ ತೆಗೆದುಕೊಂಡರು? ಈಗಲೇ ತಾವು ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಹಳೇ ಟ್ಯಾಂಕ್ ವೇಸ್ಟ್‌ವಿಯರ್ ಎಷ್ಟು ಹೈಟ್ ಮೊದಲು ಇತ್ತು ಅಷ್ಟೇ ಇರುವಂತೆ ನೋಡಿಕೊಳ್ಳಬೇಕು. ಇದಕ್ಕೆ ಯಾರ ತಕರಾರಿಲ್ಲ. ಈಗ ಏನು ಎತ್ತರಿಸಿದ್ದಾರೆ. ಅದರಿಂದ ಮುಸ್ಲಿಂ ಜನರಿಗೆ ಅನ್ಯಾಯವಾಗಿದೆ. ಇದನ್ನು ಸರಿ ಮಾಡದಿದ್ದರೆ ನಾಳೆ ದಿವಸ ಕಾನೂನು ವ್ಯವಸ್ಥೆಯಲ್ಲಿ ಸಮಸ್ಯೆ ತಲೆದೋರುತ್ತದೆಯಾದ ಕಾರಣ ಅದರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ಮನ್ನಳ್ಳಿಗ್ರಾಮ ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಬರುತ್ತದೆ. ಕಳೆದ ವರ್ಷ ಹೆಚ್ಚು ಮಳೆಯಾಗಿ ಆ ಬಂಡೆ ಏನಿದೆ ಅಲ್ಲಿಂದ ಹೆಚ್ಚು ನೀರು ಹೋಗಿ ಕೃಷಿ ಬೆಳೆಗಳಿಗೆಲ್ಲಾ ನಾಶವಾಗಿ ಹೆಚ್ಚು ಹಾನಿಯಾಗಿತ್ತು. ನಾನು ಕೂಡ ಅಲ್ಲಿಯ ಡಿ.ಸಿ. ಮತ್ತು ಎ.ಸಿ. ಜೊತೆ ಹೋಗಿ ಭೇಟಿ ಕೊಟ್ಟು ಅಲ್ಲಿ ಎಷ್ಟು ಬೆಳೆ ನಾಶವಾಗಿದೆ ಎಂಬ ಬಗ್ಗೆ ಡಿ.ಸಿ.ಯವರಿಂದ ನಂತರ ವರದಿಯನ್ನು ತರಿಸಿದೆ. ಕೃಷಿ ಇಲಾಖೆಯಿಂದ ಸುಮಾರು 58 ಸಾವಿರ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

6.40 ಪಿ.ಎಂ

ಕೆಲವರಿಗೆ ಪೇಮೆಂಟ್ ಸಹ ಮಾಡಿದ್ದಾರೆ. ಯಾವ ಸಚಿವರೂ ನಮ್ಮನ್ನು ಕೇರ್ ಮಾಡುತ್ತಿಲ್ಲವೆಂದು ಮಾನ್ಯ ಹಷ್ಮಿಯವರು ಹೇಳಿದರು. ನಾನೂ ಮನಳ್ಳಿಗೆ ಭೇಟಿ ನೀಡಿದ್ದೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಅವರು ಹೋದ ವರ್ಷದ ವಿಚಾರವನ್ನು ಹೇಳುತ್ತಿದ್ದಾರೆ. ಮೂರು ವರ್ಷಗಳಿಂದ ಅಲ್ಲಿನ ರೈತರಿಗೆ ತೊಂದರೆ ಇದೆ.

ಶ್ರೀ ಮೀರಾಜುದ್ದಿನ್ ಎನ್. ಪಟೇಲ್ : ನಾನು ಹೋದ ವರ್ಷದ ವಿಚಾರವನ್ನೇ ಮಾತನಾಡುತ್ತಿದ್ದೇನೆ. ಬ್ಯಾಕ್ ವಾಟರ್ ಬಂದು ಕೆಲವು ರೈತರಿಗೆ ನಷ್ಟವಾಗಿದೆ. ಅಲ್ಲಿ ಎರಡು ಗುಂಪುಗಳಾಗಿದೆ. ಒಂದು ಗುಂಪಿನವರು ನೀರನ್ನು ಬಿಡಬೇಡಿ ಎಂದು ಹೇಳುತ್ತಾರೆ, ಮತ್ತೊಂದು ಗುಂಪಿನವರು ನೀರನ್ನು ಬಿಡಿ, ನೀರನ್ನು ಬಿಡದಿದ್ದರೆ ನಮಗೆ ನಷ್ಟವಾಗುತ್ತದೆಂದು ಹೇಳುತ್ತಾರೆ. ಮಾಜಿ ಎಂಎಲ್‌ಎ ನಾರಾಯಣ್‌ರಾವ್ ಮನಳ್ಳಿಯವರ ಜೊತೆ ಕೆಲವೊಂದು ಗುಂಪುಗಳು ಸೇರಿ ಅಲ್ಲಿ

7444-15/p

ಗಲಾಟೆಯಾಗಿ ಕಾನೂನು ಸುವ್ಯವಸ್ಥೆಯ ತೊಂದರೆಯಾಗಿದೆ. ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಗೆ ಮೊನ್ನೆ ಕರೆಸಿ ಇಂಥ ಎಷ್ಟು ಏರಿಯಾ ಇದೆ ಅದರ ಬಗ್ಗೆ ಪರಿಶೀಲನೆ ಮಾಡಲು ಸೂಚನೆ ಕೊಟ್ಟಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಈ ಸಮಸ್ಯೆ ಮೂರು ವರ್ಷಗಳಿಂದ ಇದೆ. ರೈತರಿಗೆ ಭೂಪರಿಹಾರವನ್ನು ಇದುವರೆಗೆ ಕೊಟ್ಟಿಲ್ಲ. ಬೆಳೆ ಪರಿಹಾರವಾಗಿ ಒಬ್ಬೊಬ್ಬರು ರೈತರಿಗೆ ಎರಡು ಸಾವಿರ ಮಾತ್ರ ಪರಿಹಾರವನ್ನು ಕೊಟ್ಟಿದ್ದಾರೆ. ರೈತರಿಗೆ ಒಂದೊಂದು ಎಕರೆಯಲ್ಲಿ ಸಾವಿರಾರು ರೂಪಾಯಿಗಳ ನಷ್ಟವಾಗಿದೆ. ಮಾನ್ಯ ಸಣ್ಣ ನೀರಾವರಿ ಸಚಿವರು ಇಲ್ಲಿದ್ದಾರೆ, ಅವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ತಾವು ನನ್ನ ಮತ್ತು ಇತರರ ಮಾತನ್ನು ಕೇಳಬೇಡಿ. ತಮ್ಮ ಇಲಾಖೆಯಲ್ಲಿ ತಾಂತ್ರಿಕ ವರದಿ ಇದೆ, ಅದರ ಆಧಾರದ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಿ. ಇಲ್ಲದಿದ್ದರೆ ನಮ್ಮ ಭಾಗದಲ್ಲಿ ಬಹಳ ಸಮಸ್ಯೆಯಾಗುತ್ತದೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಜಾಗ್ರತೆಯಿಂದ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ತಮಗೆ ಧನ್ಯವಾದಗಳು. ನಾವು ಯಾವುದೇ ವಿಚಾರದ ಬಗ್ಗೆ ಹೇಳಲು ಸದನಕ್ಕೆ ಬರಬೇಕು. ಈಗೇನೋ ಸದನ ನಡೆಯುತ್ತಿದೆ. ಅಧ್ಯಕ್ಷರು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾರೆ ನಾನು ಹೇಳುತ್ತಿದ್ದೇನೆ. ಆದರೆ ಸದನವು ನಡೆಯದಿದ್ದಾಗ ನಮಗೇನಾದರೂ ತೊಂದರೆ ಬಂದರೆ ಪರಿಹಾರಿಸಲು ಯಾರೂ ಇರುವುದಿಲ್ಲ. ನಾವು ಹೇಳಿದ ವರ್ಗಾವಣೆಯನ್ನೊಂದನ್ನೂ ಮಾಡಬೇಡಿ. ಆದರೆ ಅಭಿವೃದ್ಧಿ ಕೆಲಸಗಳನ್ನು ಮಾತ್ರ ಮಾಡಿಕೂಡಲೇ ಬೇಕು. ಆದರೆ ತಾವು ನಾವು ಬರೆದ ಪತ್ರವನ್ನು ಓದಲು ಹೋಗುವುದಿಲ್ಲ, ನಾಲ್ಕೈದು ತಿಂಗಳಿಂದ ತಮ್ಮಲ್ಲಿ ಅಧಿಕಾರಿಗಳ ವರ್ಗಾವಣೆಯ ಕೆಲಸವೇ ಆಗುತ್ತದೆ. ಅಭಿವೃದ್ಧಿ ಕೆಲಸಗಳ ಬಗ್ಗೆ ಇರುವ ಪತ್ರವನ್ನು ಯಾವುದೋ ಬುಟ್ಟಿಯಲ್ಲಿ ಹಾಕಿಬಿಡುತ್ತೀರಿ. ನಮ್ಮಲ್ಲಿ ಕಾರಂಜಾ ಯೋಜನೆ ಬಹಳ ವರ್ಷಗಳಿಂದ ನಡೆಯುತ್ತಿದೆ, ಎರಡು ಸಾವಿರ ಇಸವಿಯೊಳಗೆ ಆ ಯೋಜನೆಯನ್ನು ಪೂರ್ಣ ಮಾಡುತ್ತೇವೆಂದು ತಾವು ಹೇಳುತ್ತೀರಿ. ಯೋಜನೆಯ ಕಾಮಗಾರಿಯಲ್ಲಿ ಏನೇನು ಲೋಪದೋಷವಾಗುತ್ತಿದೆ ಎಂಬ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ತಮ್ಮ ಪಕ್ಷದ ಮಾಜಿ ಎಂ.ಎಲ್.ಸಿ. ನಾಯಕರು ದೂರು ಕೊಟ್ಟಿದ್ದಾರೆ. ಆದರೆ ತಾವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇದುವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತಾವು ಸ್ವತಃ ಅಲ್ಲಿಗೆ ಭೇಟಿ ನೀಡಿ ಈ ಯೋಜನೆ ನಿಗದಿಯಾದ ಸಮಯದಲ್ಲಿ ಪೂರ್ಣಗೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಆದರೆ ತಾವು ಅದಕ್ಕೆ ಬದಲಾಗಿ ಯಾರು ಅಧಿಕಾರಿಗಳು ತಪ್ಪು ಮಾಡುತ್ತಿದ್ದಾರೆ, ಅವ್ಯವಹಾರ ಮಾಡುತ್ತಿದ್ದಾರೆ ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಕಾರಂಜಾ ಯೋಜನೆಯ ಒಂದೂ ಕೆನಾಲ್ ಬರುವುದಿಲ್ಲ. ಆದರೆ ನಮ್ಮ ಜಿಲ್ಲೆಯ ಹಿತದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಕಾರಂಜ ಯೋಜನೆಯಲ್ಲಿ 10-20 ಪರ್‌ಸೆಂಟ್ ಸೋರಿಕೆಯಾದರೆ ಪರವಾಗಿಲ್ಲ, ಆದರೆ ಅಲ್ಲಿ 90 ಪರ್ಸೆಂಟ್ ಲೀಕೇಜ್ ಆಗುತ್ತಿದೆ. ಹೀಗಾದರೆ ಯೋಜನೆಯನ್ನು ಹೇಗೆ ಪೂರ್ಣ ಮಾಡುತ್ತೀರಿ? ಅದರಲ್ಲೂ ವಿಶೇಷವಾಗಿ ಒಂದನೇ ಡಿವಿಜನ್‌ನ ಬಗ್ಗೆ ತಮ್ಮ ಪಕ್ಷದವರೇ ಹತ್ತು

ಪುಟಗಳುಳ್ಳ ದೂರನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ಅವರುಗಳಿಗೆ ಯಾವುದೇ ಭಯವಿಲ್ಲ. ಇದರ ಜೊತೆಗೆ ಅಲ್ಲಿನ ಜಿಲ್ಲಾಪರಿಷತ್‌ನಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ತಮ್ಮ ಹತ್ತಿರ ವರದಿ ಇದೆ, ಆದರೆ ಇದುವರೆಗೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಯಾರಾದರೂ ಬಡವ ರಸ್ತೆಯಲ್ಲಿ ಪಾನ ಅಂಗಡಿಯೊಂದನ್ನಿಟ್ಟರೆ ತಮ್ಮ ಆಡಳಿತವರ್ಗದವರು ಇದು ರಸ್ತೆಯಲ್ಲಿದೆಯೆಂದು ಕಿತ್ತು ಹಾಕುತ್ತಾರೆ.

ಅಧ್ಯಕ್ಷರು : ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ಬಗ್ಗೆ ಹೇಳಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಯಾವ ಸಚಿವರು ಇದಕ್ಕೆ ಸಂಬಂಧಪಡುತ್ತಾರೆ ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗಲಾದರೂ ತಮ್ಮಲ್ಲಿ ಯಾರಾದರೂ ಇದನ್ನು ಸರಿಪಡಿಸಬೇಕು. ಕೋಟಿಗಟ್ಟಲೆ ಹಣದ ಸಾಮಗ್ರಿಗಳೇನು ಸಪ್ಲೈ ಮಾಡಿದ್ದಾರೆ ಆ ಫರ್ಮ್‌ಗಳ ಪಟ್ಟಿ ಇದೆ. ವರದಿ ಇದೆ. ಅದರಲ್ಲಿ ಎಂಬತ್ತು ಪರ್ಸೆಂಟ್ ಫರ್ಮಗಳು ಮಂತ್ರಿಗಳ, ಅವರ ಮಕ್ಕಳ, ಸಂಬಂಧಿಕರದ್ದಾಗಿದೆ. ಆದ್ದರಿಂದ ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ನಾನು ಇಲ್ಲಿ ಸರಿಯಾದ ಮಾಹಿತಿಯನ್ನು ಕೊಡುತ್ತಿದ್ದೇನೆ. ಆದರೆ ಅವರು ಇವರು ಎಂಎಲ್‌ಎ ದುರುದ್ದೇಶದಿಂದ ಈ ರೀತಿ ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಇವರು ನಮ್ಮ ಮಾತನ್ನು ಕೇಳುತ್ತಿಲ್ಲ. ಅವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಮಂತ್ರಿಗಳ ಎಂದರೆ ಯಾರು ಎಂದು ಅವರು ನಿಖರವಾಗಿ ಹೇಳಬೇಕು.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ತಾವು ಆ ಫರ್ಮ್‌ಗಳ ಪಟ್ಟಿಯನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಪ್ರಕಟ ಮಾಡಿಬಿಡಿ.

ಅಧ್ಯಕ್ಷರು : ಅವರು ಈ ರೀತಿ ಮಂತ್ರಿಯವರ ಬಗ್ಗೆ ನಿಖರವಾಗಿ ಹೇಳಬೇಕೆಂದರೆ ನಾನು ಅದರ ಬಗ್ಗೆ ನೋಟೀಸ್ ಕೊಡಿ ಎಂದು ಹೇಳುತ್ತೇನೆ. ಅವರು ಸ್ಪೆಸಿಫಿಕ್ ಚಾರ್ಜಸ್ ಮಾಡಬೇಕಾದರೆ ನೋಟೀಸನ್ನು ಕೊಡಬೇಕಾಗುತ್ತದೆ. ಅವರು ಜನರಲ್‌ಆಗಿ ಚಾರ್ಜಸ್ ಮಾಡುತ್ತಿದ್ದಾರೆ. ತಾವೆಲ್ಲರೂ ವೆರಿಫೈ ಮಾಡಿಕೊಳ್ಳಿ, ನಿಮಗೆ ಯಾರಿಗೂ ಅನ್ವಯಿಸುವುದಿಲ್ಲವೆಂದರೆ ತಾವು ಉತ್ತರವನ್ನು ಕೊಡಿ.

ಶ್ರೀ ಎಸ್ ರಾಜೇಂದ್ರನ್ : ಅಷ್ಟೊಂದು ಗಂಭೀರವಾದ ವಿಚಾರವಿದ್ದರೆ ಒಂದು ಸದನದ ಸಮಿತಿಯನ್ನು ಮಾಡಿ, ನಾವುಗಳೇ ನೋಡಿ ಪರಿಶೀಲನೆ ಮಾಡಿ ವರದಿ ಕೊಡುತ್ತೇವೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಇಲ್ಲಿ ಕಾನೂನು ಸಚಿವರು ಇದ್ದಾರೆ, ಅವರು ಬಹಳ ರಕ್ಷಣೆ ಕೊಡುತ್ತಾರೆ. ಕೆಲವು ದಿನಗಳ ಹಿಂದೆ ಬೀದರ್‌ನಲ್ಲಿ ದೊಡ್ಡ ಭೂಹಗರಣವಾಯಿತು. ನಾನು ಇದನ್ನು ಸರ್ಕಾರದ ಗಮನಕ್ಕೆ ತಂದೆ, ಸಾಬೀತು ಸಹ ಮಾಡಿದೆ. ಆಗ ಅವರು ನಾನು ಇದರ ಬಗ್ಗೆ ಕ್ರಮ ತೆಗೆದುಕೊಂಡು ಎಲ್ಲಾ ನೊಂದಾವಣೆಯನ್ನು ರದ್ದುಮಾಡುವುದಾಗಿ ಹೇಳಿದ್ದರು. ಆದರೆ ಅಂದು ಯಾರು

ಕಂದಾಯ ಸಚಿವರು ಇದ್ದರು ಅವರು ಮತ್ತು ಇದರಲ್ಲಿ ಯಾರು ಶಾಮೀಲಾಗಿದ್ದಾರೆ ಆ ಸಚಿವರೂ ಸಹ ಇಂದು ತಮ್ಮ ಜೊತೆ ಇಲ್ಲ. ಅವರಿಗೆ ಈ ರೀತಿ ರಕ್ಷಣೆ ಕೊಡಬೇಡಿ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಸದಸ್ಯರು ಸಚಿವರು ಕೇಳಿದಂಥ ಒಂದು ಮಾಹಿತಿಗೆ ಉತ್ತರವನ್ನು ಕೊಟ್ಟರು. ಆ ರೀತಿ ಉತ್ತರವನ್ನು ಕೊಡುವಾಗ ಮಂತ್ರಿಗಳು, ಅವರ ಸಂಬಂಧಿಕರು, ಮಕ್ಕಳು ಎಂದು ಹೇಳಿದ್ದಾರೆ. ಮಂತ್ರಿಗಳು ಎಂದು ಹೇಳಿದ ಮೇಲೆ it applies to the present council of Ministers. We are about 46 now. Let him specify as to whether any Minister in the present Council of Ministers is involved or not.

ಅಧ್ಯಕ್ಷರು : ಅವರು ಅವೆಲ್ಲವನ್ನೂ ಹೇಳಿದರು, ತಾವು ಕೇಳಿಸಿಕೊಳ್ಳಲಿಲ್ಲ. ಹಿಂದೆ ಇದ್ದರು, ಅವರು ಬಿಟ್ಟು ಹೋಗಿದ್ದಾರೆ, ಅವರ ಬಗ್ಗೆ ಜಾಗರೂಕರಾಗಿರಿ ಎಂದು ಹೇಳಿದರು. I have heard. I am hearing every word.

SRI M.C. NANAIAH : It is confirmed now that none in the present Council of Ministers is involved. As a parliamentary Affairs Minister, I want to know from you as to whether any Minister in the present Council of Ministers is involved.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಾನು ಹೆಸರನ್ನು ಹೇಳಲು ಹೋಗುವುದಿಲ್ಲ. ಆದರೆ ಈ ಹಿಂದೆ ತಾವು ಇದೇ ರೀತಿ ಅವಕಾಶ ಕೊಟ್ಟಿದ್ದಾಗ ಮಂತ್ರಿಗಲು ಶಾಮೀಲಾಗಿರುವ ಬಗ್ಗೆ ಸಾಬೀತು ಮಾಡಿದ್ದರೂ ತಾವೇನು ಮಾಡಿದಿರಿ ? ಆಗ ಅವರಿಗೆ ರಕ್ಷಣೆ ಕೊಟ್ಟಿದ್ದಿರಿ. ತಾವು ಒಳ್ಳೆಯವರು, ತಮ್ಮ ಮುಖ್ಯ ಮಂತ್ರಿಯವರು ಒಳ್ಳೆಯವರು, ಆದರೆ ಇಂಥ ಜನರು ತಮ್ಮ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತಂದು ಲೂಟಿ ಹೊಡೆಯುತ್ತಿದ್ದಾರೆ. ನಾನು ಅವರ ಹೆಸರನ್ನು ಹೇಳುವುದಿಲ್ಲ, ಅದರ ಬಗ್ಗೆ ವಿಚಾರಣೆಯಾಗಲಿ, ಅದರ ವರದಿ ತನ್ನಿ, ಯಾವ್ಯಾವ ಫರ್ಮ್‌ಗಳಿದೆ ನೋಡಿ, ಪಟ್ಟಿ ನೋಡಿ, ಪ್ರೊಪ್ರೈಟರ್ ನೋಡಿ, ಅದರ ಆಧಾರದ ಮೇಲೆ ತಮ್ಮ ಜನತಾದಳದ ಶಾಸಕಾಂಗ ಸಭೆಯಲ್ಲಿ ಕ್ರಮ ತೆಗೆದುಕೊಳ್ಳಿ. ಹೆಸರನ್ನು ಹೇಳಿದರೆ ಚೆನ್ನಾಗಿರುವುದಿಲ್ಲ. ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಶಿಕ್ಷಣ ಸಚಿವರು ಬಹಳ ಒಳ್ಳೆಯವರು, ತಾವೇ ಸ್ವತಃ ಬೀದರ್‌ಗೆ ಬಂದು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ 14-15 ಜನ ಅಂಗವಿಕಲ ಪ್ರಾಥಮಿಕ ಶಿಕ್ಷಕರಿಗೆ ನೇಮಕಾತಿ ಆದೇಶ ಕೊಟ್ಟಿದ್ದಾರೆ. ತಾವು 9ನೇ ಸೆಪ್ಟೆಂಬರ್ ಇಲ್ಲಿಗೆ ಬಂದು 14 ಜನರಿಗೆ ನೇಮಕಾತಿ ಆದೇಶ ನೀಡಿ ಹೋದಮೇಲೆ ಆ ಲಿಸ್ಟ್ ಎಲ್ಲಿ ಹೋಯಿತೋ ಗೊತ್ತಿಲ್ಲ. ಆ ಲಿಸ್ಟ್‌ನ ಗುರುತೇ ಇಲ್ಲ. ಮೊನ್ನೆ 27ನೇ ತಾರೀಖು ಕಂಪ್ಯೂಟರ್‌ನಲ್ಲಿ ಲಿಸ್ಟ್ ಫೈನಲೈಸ್ ಮಾಡಿ ಆಯ್ಕೆ ಪಟ್ಟಿಯನ್ನು 29ನೇ ತಾರೀಖು ನೋಟೀಸ್ ಬೋರ್ಡಿನಲ್ಲಿ ಹಾಕಿದ್ದಾರೆ. ನಾನು 27ನೇ ತಾರೀಖು ರಾತ್ರಿ ಇಲ್ಲಿಗೆ ಬರಬೇಕಾಗಿತ್ತು. ಆಯ್ಕೆ ಪಟ್ಟಿ ಪ್ರಕಟವಾಗಿದ್ದನ್ನು ನೋಡಿಕೊಂಡು ಹೋಗೋಣ ಎಂದು ನಾನು 28ನೇ ತಾರೀಖು 10ಗಂಟೆಯವರೆಗೆ ಕಾದರೂ ಆಯ್ಕೆ ಪಟ್ಟಯನ್ನು ಪ್ರಕಟಿಸಲೇ ಇಲ್ಲ. 27ನೇ ತಾರೀಖು ಅಂತಿಮ ಆಯ್ಕೆ ಪಟ್ಟಿ ಸಿದ್ಧವಾದ ನಂತರ ಅಧಿಕಾರಿಗಳು ಆಯ್ಕೆ ಪಟ್ಟಿಯಲ್ಲಿರುವ

ಅಭ್ಯರ್ಥಿಗಳ ವಿಳಾಸಗಳನ್ನು ಹುಡುಕಿಕೊಂಡು ಮನೆ ಮನೆಗೂ ಹೋಗಿ, ಕೇವಲ ಅರ್ಧ ಅಥವಾ ಒಂದು ಅಂಕದಲ್ಲಿ ನಿಮಗೆ ಶಿಕ್ಷಕರ ಹುದ್ದೆ ತಪ್ಪಿ ಹೋಗುವ ಸಂಭವವಿದೆ ಎಂದು ಸುಳ್ಳು ಹೇಳಿ ಅವರುಗಳಿಂದ ದುಡ್ಡು ಕಲೆಕ್ಟ್ ಮಡಿಕೊಡಿದ್ದಾರೆ. ಆಯ್ಕೆ ಪಟ್ಟಿ ಏನೋ ಅರ್ಹತೆ ಆಧಾರದ ಮೇಲೆಯೇ ಸಿದ್ಧಗೊಂಡಿದೆ, ಅದರಲ್ಲಿ ಏನೂ ಅವ್ಯವಹಾರ ನಡೆದಿಲ್ಲ. 27ನೇ ತಾರೀಖಿನಂದೇ ಅಂತಿಮ ಆಯ್ಕೆ ಪಟ್ಟಿ ಸಿದ್ಧವಾದರೂ 29ನೇ ತಾರೀಖಿನವರೆಗೂ ಅದನ್ನು ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಿಲ್ಲ. ಮಾನ್ಯ ಗೋವಿಂದೇಗೌಡರೇ, ತಾವು ನಮ್ಮಲ್ಲಿಗೆ ಬಂದು ಒಂದೂವರೆ ತಿಂಗಳಾಯಿತು. ಫಸ್ಟ್ ಲಿಸ್ಟ್‌ನಲ್ಲಿ ತಾವು ಕೆಲವು ಜನರಿಗೆ ನೇಮಕಾತಿ ಆದೇಶಗಳನ್ನು ಕೊಟ್ಟಿರಿ, ಉಳಿದ ಲಿಸ್ಟ್ ಎಲ್ಲಿ ಹೋಯಿತೋ? ನಮ್ಮಲ್ಲಿ ಓಪನ್ ಆಗಿಯೇ ಭ್ರಷ್ಟಾಚಾರ ನಡೆಯುತ್ತಿದೆ. ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಬೀದರ್ ಜಿಲ್ಲೆಯ ಲೋಕಲ್ ಅಧಿಕಾರಿಗಳನ್ಯಾರನ್ನೂ ಬೀದರ್ ಜಿಲ್ಲೆಗೆ ಪೋಸ್ಟಿಂಗ್ ಮಾಡಬಾರದೆಂದು ಸರ್ಕಾರಕ್ಕೆ ಕೋರುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಅಂಶದ ಬಗ್ಗೆ ನಾನು ಮಧ್ಯ ಪ್ರವೇಶಿಸುತ್ತಿರುವುದಕ್ಕಾಗಿ ಕ್ಷಮೆ ಕೋರುತ್ತೇನೆ. ಬೀದರ್ ಜಿಲ್ಲೆಯಲ್ಲಿ ಪರ್ಟಿಕ್ಯುಲರ್ ಆಗಿ 10-12 ಇಂಜಿನಿಯರ್‌ಗಳಿದ್ದಾರೆ, ನಾವು ಅವರೆಲ್ಲರನ್ನೂ ಒಂದೇ ಸಲ ಟ್ರಾನ್ಸ್‌ಫರ್ ಮಾಡಿದೆವು. ನಾನು ಇಲ್ಲಿ ಹೆಸರುಗಳನ್ನು ಹೇಳುವುದಕ್ಕೆ ತಯಾರಿಲ್ಲ. ಒಂದು ತಿಂಗಳು ಟ್ರಾನ್ಸ್‌ಫರ್ ಮಾಡಿದರೂ ಕೂಡ ಒಂದಲ್ಲ ಒಂದು ರೀತಿಯ ಒತ್ತಡವನ್ನು ತಂದು 3-4 ಜನ ಅಲ್ಲೇ ಹಾಕಿಸಿಕೊಳ್ಳುತ್ತಾರೆ. ಬೇಕಾದರೆ ಈ ಬಗ್ಗೆ ಸದನ ಒಂದು ನಿರ್ಣಯ ಅಂಗೀಕರಿಸಲಿ, ಮಾನ್ಯ ಮಂತ್ರಿಗಳೂ ಕೂಡ ಇಲ್ಲೇ ಇದ್ದಾರೆ. ನಾವು ಅವರನ್ನು ವರ್ಗ ಮಾಡುತ್ತೇವೆ. ಇಲ್ಲಿ ಭಾಷಣ ಮಾಡುವುದು ಬಹಳ ಸುಲಭ. ಆದರೆ...

ಅಧ್ಯಕ್ಷರು : ಮಾನ್ಯ ನಾಗೇಗೌಡರೇ ನಾವೂ 1978ರಿಂದಲೂ ನೋಡಿದ್ದೇವಲ್ಲಾ. ಯಾವ ಸರ್ಕಾರವಿದ್ದರೂ...

ಶ್ರೀ ಕೆ.ಎನ್. ನಾಗೇಗೌಡ : ನಾನು ಮಾನ್ಯ ಹಶ್ಮಿಯವರನ್ನು ರೆಫರ್ ಮಾಡಿ ಆ ಮಾತು ಹೇಳಲಿಲ್ಲ.

ಅಧ್ಯಕ್ಷರು : ಒಂದು ನಿಮಿಷ ದಯವಿಟ್ಟು ನಾನು ಹೇಳುವುದನ್ನು ಕೇಳಿ. ಸಾಮಾನ್ಯವಾಗಿ ಜನ ಪ್ರತಿನಿಧಿಗಳಾದ ನಾವು ಆರಿಸಿ ಬಂದ ಮೇಲೆ ಆಫೀಸರ್‍ಸ್ ನಾವು ಹೇಳಿದವರೇ ಆಗಬೇಕಾಗುತ್ತದೆ. ನಾವು ಈ ಪ್ರದೇಶಕ್ಕೆ ಚಕ್ರಾಧಿಪತಿಗಳಾಗಿ ಬಿಡುತ್ತೇವೆ, ನಮ್ಮನ್ನು ಬಿಟ್ಟು ಏನೂ ಆಗಬಾರದು. ನಮಗೆ ಆರಿಸಿ ಬಂದ ಮೇಲೆ ನಮ್ಮ ಜಾತಿ, ಕುಲ, ಸಂಬಂಧಿಕರು, ನಾವು ಹೇಳಿದಂತೆ ಕೇಳುವವರು ಬಿಟ್ಟು ಬೇರೆ ಯಾರೂ ಕೂಡ ನೆನಪಿಗೆ ಬರುವುದಿಲ್ಲ, ಅದರಿಂದ ಹದಗೆಟ್ಟು ಹೋಗಿದೆ. ಅದು ಇನ್ನು ಯಾವಾಗ ಸುಧಾರಿಸುತ್ತದೆ? ಸುಧಾರಿಸುವುದೇ ಇಲ್ಲ ಬಿಡಿ. ಯಾರಾದರೂ ಗ್ರಹಚಾರಕ್ಕೆ ಮಾನ್ಯ ಮೊಯ್ಲಿಯಂತಹವರು ಮುಖ್ಯಮಂತ್ರಿಗಳಾಗಿದ್ದು, ಹೇಳಿದವರು ಕೇಳಲಿಲ್ಲವೆಂದರೆ, ಅವರೆಲ್ಲಾ ಅವರ ಮೇಲೆ ಗದಾ ಪ್ರಹಾರ ಮಾಡಿ ಬಿಸಾಕಿ ಬಿಡುತ್ತಾರೆ. ಹೀಗಾಗಿ ಪೋಲೀಸ್ ಡಿಪಾರ್ಟ್‌ಮೆಂಟ್ ಆದರೂ ಅಷ್ಟೇ, ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಆದರೂ ಅಷ್ಟೇ, ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಆದರೂ

ಅಷ್ಟೇ. ಅವರ ಊರು ಬಿಟ್ಟು ಅವರು ಹೋಗುವುದಿಲ್ಲ. ಅವರ ನೆಂಟರು ಬಿಟ್ಟು ಅವರು ಹೋಗುವುದಿಲ್ಲ. ಆರಿಸಿ ಬರುವವರೆಲ್ಲಾ ಅವರ ನೆಂಟರೇ ಆಗಿರುತ್ತಾರೆ. ಇಲ್ಲಾಂದರೆ ಪಕ್ಕದಲ್ಲಾದರೂ ಅವರ ನೆಂಟರು ಆರಿಸಿ ಬಂದಿರುತ್ತಾರೆ. ಯಾರಿಗೆ ಯಾರು ದಿಕ್ಕಿಲ್ಲದಿರವುದಿಲ್ಲವೋ ಅವನೇ ಯಾರಿಗೂ ಬೇಡವಾಗಿರತಕ್ಕ ಜಾಗಕ್ಕೆ ಹೋಗುತ್ತಾನೆ. ಎಲ್ಲಾ ಇಲಾಖೆಗಳಲ್ಲಿ ಮೇಯಲಿಕ್ಕೆ ಸಿಗುವ ಎಲ್ಲಾ ಪ್ರೈಮ್ ಪ್ಲೇಸಸ್‌ಗಳಲ್ಲೂ ಕೂಡ ಪ್ರಬಲಸ್ಥರು ಅಥವಾ ಅನುಕೂಲಸ್ಥರ ಸಂಬಂಧಿಕರುಗಳೇ ಇದ್ದಾರೆ. This is the fact of life. What we are speaking is a bare truth. ನನಗೇನೂ ಅಪೇಕ್ಷೆಗಳಿಲ್ಲ, ಆದ್ದರಿಂದ ನಿರ್ಭಯದಿಂದ ನಾನು ಮಾತನಾಡುತ್ತೇನೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದ ಮೇಲಾಗಲೀ ಅಥವಾ ಮಾನ್ಯ ಮಂತ್ರಿಗಳ ಮೇಲಾಗಲೀ ಚಾರ್ಜ್ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರಾದ ಗೋವಿಂದೇಗೌಡರು ಬಹಳ ಒಳ್ಳೆಯವರು. ಯಾರಾದರೂ ಅವರ ಬಗ್ಗೆ ವಿರೋಧದ ಮಾತುಗಳನ್ನು ಆಡಿದರೆ ನನಗೆ ಸಿಟ್ಟು ಬರುತ್ತದೆ. ಕೆಳ ಹಂತದಲ್ಲಿರತಕ್ಕ ಎಫ್.ಡಿ.ಸಿ. ಮತ್ತು ಎಸ್.ಡಿ.ಸಿಗಳು ಇಂತಹ ಕೆಟ್ಟ ಕೆಲಸ ಮಾಡಿ ತಮ್ಮಂತಹ ಒಳ್ಳೆಯವರಿಗೆ ಕೆಟ್ಟ ಹೆಸರು ತರುತ್ತಾರೆ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ತಾವು ಇದನ್ನು ಸ್ವಲ್ಪ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಅವರ ವಿರುದ್ಧ ನೀವು ಏನು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನಷ್ಟೇ ನಾನು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಈ ರೀತಿ ಆಗಬಾರದು. ಮತ್ತೊಂದು ವಿಷಯವೇನೆಂದರೆ, ಈ ವಿಚಾರವನ್ನು ಪದೇ ಪದೇ ಹೇಳಲಿಕ್ಕೆ ನನಗೂ ಬೇಜಾರಾಗುತ್ತಿದೆ. ಆಟೋ ಕಾಂಪ್ಲೆಕ್ಸ್ ಬಸವಕಲ್ಯಾಣದಲ್ಲಿ ಒಂದು ಮತ್ತು ಬೀದರ್‌ನಲ್ಲಿ ಮತ್ತೊಂದು ಇದೆ. ಇತ್ತೀಚಿಗಷ್ಟೇ ಮಾನ್ಯ ಮೊಹಿದ್ದೀನ್ ಸಾಹೇಬರು ಭಾರೀ ಕೈಗಾರಿಕೆಗಳ ಇನ್‌ಚಾರ್ಜ್ ಮಿನಿಸ್ಟರ್ ಆಗಿದ್ದಾಗ ಇದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ. ಇಂಡಸ್ಟ್ರಿಯಲ್ ಏರಿಯಾದಲ್ಲಿ ಈ ಆಟೋ ಕಾಂಪ್ಲೆಕ್ಸ್ ಇದೆ. ಬಸವಕಲ್ಯಾಣದಲ್ಲಿ ಈ ಕಾಂಪ್ಲೆಕ್ಸ್‌ನಲ್ಲಿ ಸೈಟಿನ ಬೆಲೆ ಅಡಿಗೆ 20 ರೂ.ಗಳೆಂದು ನಿಗದಿ ಮಾಡಿದ್ದರೆ, ಬೀದರ್‌ನಲ್ಲಿ ಅದನ್ನು ಅಡಿಗೆ 30 ರೂ.ಗಳೆಂದು ನಿಗದಿ ಮಾಡಿದ್ದಾರೆ. ಬೀದರ್‌ನಲ್ಲಿ ಈ ಕಾಂಪ್ಲೆಕ್ಸ್‌ಗಾಗಿ ಬೇಕಾದ ಲ್ಯಾಂಡ್ ಅನ್ನು ಬಸವಕಲ್ಯಾಣದಲ್ಲಿ ಖರೀದಿಸಿದ ರೇಟ್‌ಗಿಂತ ಕಡಿಮೆ ರೇಟಿನಲ್ಲಿ ಕೆಐಎಡಿಬಿ ಯವರು ಖರೀದಿಸಿದ್ದಾರೆ. ನೋ ಪ್ರಾಫಿಟ್ ನೋ ಲಾಸ್‌ನಲ್ಲಿ ತಾವು ಕೆಲಸ ಮಾಡುತ್ತೀರಿ. ಹೀಗಿರುವಾಗ ಬೀದರ್‌ನಲ್ಲಿ ನಿಮಗೆ ಪ್ರಾಫಿಟ್ ಏಕೆ ಬೇಕು? ಬಸವಕಲ್ಯಾಣದಲ್ಲಿ ಮಾತ್ರ ನೋ ಪ್ರಾಫಿಟ್ ನೋ ಲಾಸ್ ತತ್ವದಂತೆ ಕೆಲಸ ಮಾಡುತ್ತೀರಿ, ಆದರೆ ಬೀದರ್‌ನಲ್ಲಿ ತಮಗೆ ಪ್ರಾಫಿಟ್ ಏಕೆ ಬೇಕು? ಮಾನ್ಯ ದೇಶಪಾಂಡೆಯವರು ಕೈಗಾರಿಕಾ ಸಚಿವರಾಗಿದ್ದಾಗ ಇದರ ಬಗ್ಗೆ ಗಂಭೀರವಾಗಿ ಮೊದಲು ಚಿಂತನೆ ಮಾಡಿದ್ದರು. ಅದು ಅವರ ಕೈಯ್ಯಲ್ಲೇ ಆಗಬೇಕಾಗಿತ್ತು. ತದನಂತರ ಅದು ಮಾನ್ಯ ಮೊಹಿದ್ದೀನ್ ಸಾಹೇಬರಿಂದ ಆಯಿತು. ತಾವು ಅಲ್ಲಿ ಕೆಲಸ ಮಾಡಿದ್ದೀರಿ. ನಾನು ಮಾನ್ಯ ಕೈಗಾರಿಕಾ ಸಚಿವರಾದ ಶಿವಪ್ಪನವರನ್ನು ತಮ್ಮ ಇಲಾಖೆ ವತಿಯಿಂದ ನಮ್ಮ ಬೀದರ್ ಜಿಲ್ಲೆಯಲ್ಲಿ ಮಾಡಿರುವ 22 ಎಕರೆ ವ್ಯಾಪ್ತಿಯ ಆಟೋ ಕಾಂಪ್ಲೆಕ್ಸ್ ಅನ್ನು ಉದ್ಘಾಟನೆ ಮಾಡಲು ಬರಬೇಕೆಂದು ಹೇಳಿದೆ. ಅಲಾಟ್‌ಮೆಂಟ್‌ಗೋಸ್ಕರ ರೇಟ್ ನೋಡಿದಾಗ ಬೀದರ್‌ನಲ್ಲಿ ಅಡಿಗೆ 30 ರೂ. ನಿಗದಿ ಪಡಿಸಿದ್ದರೆ

ಬಸವಕಲ್ಯಾಣದಲ್ಲಿ ಅಡಿಗೆ 20 ರೂ. ನಿಗದಿಪಡಿಸಲಾಗಿತ್ತು. ಈ ರೀತಿ ಏಕೆ ಸರ್ಕಾರ ನಮ್ಮ ಕ್ಷೇತ್ರಕ್ಕೆ ತಾರತಮ್ಯ ತೋರಿಸುತ್ತಿದೆ? ಬಸವಕಲ್ಯಾಣದಲ್ಲಿ ರೇಟ್ ಕಡಿಮೆ ಇದೆ, ಬೀದರ್‌ನಲ್ಲಿ ರೇಟ್ ಜಾಸ್ತಿ ಇದೆ, ಇಲ್ಲಿಯ ಎಂ.ಎಲ್.ಎ. ಏನೋ ಅಡ್ಜೆಸ್ಟ್ ಮಾಡಿಕೊಂಡಿರಬೇಕು ಎಂದು ಬೀದರ್‌ನ ಜನ ನನ್ನ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಜಿಲ್ಲಾ ಕೇಂದ್ರವಾದ ಬೀದರ್‌ನಲ್ಲಿ ಬಸವಕಲ್ಯಾಣಕ್ಕಿಂತ ಕಡಿಮೆ ದರದಲ್ಲಿ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ, ತಾವು ಬೇಕಾದರೆ ದಾಖಲೆಗಳನ್ನು ನೋಡಿ. ಬೀದರ್‌ನಲ್ಲಿ ಆಟೋ ಕಾಂಪ್ಲೆಕ್ಸ್‌ಗೆಂದು ಕೊಟ್ಟಿರುವ ಸೈಟ್‌ನಲ್ಲಿ ನೀವೇನೂ ಲಾಲ್‌ಬಾಗ್ ಮಾಡುತ್ತಿಲ್ಲ; ಯಾರದ್ದೋ ಒಬ್ಬರ ಮಾತು ಕೇಳಿ ನೀವು ನಮಗೆ ಈ ರೀತಿ ಮಾಡಬೇಡಿ ಎಂದು ನಾನು ತಮಗೆ ಕೇಳುತ್ತಿದ್ದೇನೆ. ಮೊನ್ನೆ ಇದರ ಬಗ್ಗೆ ನಾನು ಮಾನ್ಯ ಮೊಹಿದ್ದೀನ್ ಸಾಹೇಬರಿಗೆ ಹೇಳಿದೆ, ಅವರು ಒಂದು ಅಪ್ಲಿಕೇಷನ್ ಕೊಟ್ಟು ಪ್ರಪೋಸಲ್ ಕಳುಹಿಸಿಕೊಡಿ, ಏನಾದರೂ ಮಾಡಿ ಕಡಿಮೆ ಮಾಡೋಣ ಎಂದು ಹೇಳಿದ್ದಾರೆ. ಇನ್ನು ನಮ್ಮಲ್ಲಿ ವೆಜಿಟೆಬಲ್ ಮಾರ್ಕೆಟ್ ಸ್ಥಾಪನೆ ಮಾಡುವ ಬಗ್ಗೆ ಒಂದು ಸಮಸ್ಯೆ ಇದೆ. ಅದು ಮಾನ್ಯ ತೋಟಗಾರಿಕಾ ಸಚಿವರಿಗೂ ಗೊತ್ತಿದೆ. ಅವರು ಇವತ್ತಾದರೂ ಈ ಸಮಸ್ಯೆಗೆ ಒಂದು ಪರಿಹಾರ ಹೇಳಬೇಕು. ಹೋಲ್‌ಸೇಲ್ ಬಿಸಿನೆಸ್ ಮಾಡುವವರು, ರೈತರು ಎಲ್ಲರೂ ಸೇರಿ ಮಾನ್ಯ ತೋಟಗಾರಿಕಾ ಸಚಿವರನ್ನು, ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಒಂದು ಬೇಡಿಕೆ ಇಟ್ಟಿದ್ದಾರೆ. ಈಗ ನಮ್ಮ ಬೀದರ್‌ನಲ್ಲಿರುವ ಓಲ್ಡ್ ವೆಜಿಟೆಬಲ್ ಮಾರ್ಕೆಟ್‌ನಿಂದ ರೈತರಿಗೆ ಬಹಳ ಲಾಸ್ ಆಗುತ್ತಿದೆ, ಅಲ್ಲೇ ಗೋಡೌನ್ ಇದ್ದು, ಅಲ್ಲೇ ರೈತರು ಬಿಸಿನೆಸ್ ಮಾಡಬೇಕು, ಈಗ ಸಾಗಾಣಿಕೆ ಮಾಡುವಾಗ ವೆಜಿಟಬಲ್ ಹಾಳಾಗುತ್ತಿದೆ. ಆದ್ದರಿಂದ ನಮಗೊಂದು ಪ್ರತ್ಯೇಕವಾದ ವೆಜಿಟಬಲ್ ಮಾರ್ಕೆಟ್‌ಗೆ ಜಾಗ ಕೊಡಿ ಎಂದು ನಾವು ಮಾನ್ಯ ಸಚಿವರಿಗೆ ಬೇಡಿಕೆ ಸಲ್ಲಿಸಿದೆವು. ಮಾನ್ಯ ಸಚಿವರು ಯಾವುದಾದರೂ ಜಾಗವೊಂದು ಇದ್ದರೆ ನೋಡಿ ಎಂದು ಹೇಳಿದಿರಿ. ತೋಟಗಾರಿಕೆ ಇಲಾಖೆಗೆ ಸೇರಿದ 37 ಎಕರೆ ವಿಸ್ತೀರ್ಣದ ಒಂದು ಫಾರ್ಮ್ ಹೌಸ್ ಒಂದು ಇದೆ. ಅಲ್ಲಿ ಈಗ ಏನೂ ಬೆಳೆಯುತ್ತಿಲ್ಲ. ಅಲ್ಲಿ ಸುಮಾರು 3-4 ಎಕರೆಗಳಷ್ಟು ಜಾಗವನ್ನು ಜನ ಎನ್‌ಕ್ರೋಚ್ ಮಾಡಿದ್ದಾರೆ. ಇದರಲ್ಲಿ ಮಾನ್ಯ ಮಾಜಿ ಸಚಿವರೊಬ್ಬರೂ ಕೂಡ ಒಂದು ಚೂರು ಒತ್ತುವರಿ ಮಾಡಿದ್ದಾರೆ. ಆ ಫಾರಂ ಹೌಸ್ ಜಾಗದಲ್ಲಿ 6 ಎಕರೆ ಮಾರ್ಕೆಟ್ ಸ್ಥಾಪನೆಗಾಗಿ ಕೊಡಬೇಕೆಂಬ ಪ್ರಸ್ತಾವನೆಯು ಬಹಳ ದಿವಸಗಳಿಂದಲೂ ತೋಟಗಾರಿಕಾ ನಿರ್ದೇಶನಾಲಯ ಮತ್ತು ಕೃಷಿ ಮತ್ತು ತೋಟಗಾರಿಕಾ ಸಚಿವಾಲಯದಲ್ಲಿ ಪೆಂಡಿಂಗ್ ಇದೆ. ಮಾನ್ಯ ಸಚಿವರು ಇದಕ್ಕೆ ಸಂಬಂಧಪಟ್ಟ ಫೈಲ್ ಕ್ಲಿಯರ್ ಮಾಡಲು ಕಾರ್ಯದರ್ಶಿಯವರಿಗೆ ಕನಿಷ್ಠ ಹತ್ತು ಬಾರಿಯಾದರೂ ಹೇಳಿದ್ದಾರೆ. ನಾನು ಸುಮಾರು 20 ಬಾರಿ ಲಾಲ್‌ಬಾಗ್‌ನಲ್ಲಿರುವ ತೋಟಗಾರಿಕಾ ನಿರ್ದೇಶನಾಲಯದ ಕಛೇರಿಗೆ ಹೋಗಿದ್ದೇನೆ. ಒಂದು ನಿಗದಿತ ಅವಧಿಯೊಳಗೆ ಮಾಡುತ್ತೇವೆಂದು ಭರವಸೆ ಕೊಡುತ್ತಾರೆ, ಆದರೆ ಅದರಂತೆ ನಡೆದುಕೊಳ್ಳುವುದಿಲ್ಲ. ಏಕೆ ಈ ರೀತಿ ಮಾಡುತ್ತಿದ್ದಾರೆ ಎಂದರೆ, ಈಗಿರುವ ವೆಜಿಟೆಬಲ್ ಮಾರ್ಕೆಟ್‌ನಲ್ಲಿ ಹೋಲ್‌ಸೇಲ್ ಮಾರಾಟವನ್ನು ಮಾಡುತ್ತಿರುವವರು ಶೇಕಡ 90ರಷ್ಟು ಮುಸ್ಲಿಂ ಸಮಾಜಕ್ಕೆ ಸೇರಿದವರೇ ಆಗಿದ್ದಾರೆ. ಉದ್ದೇಶಪೂರ್ವಕವಾಗಿ ಅಧಿಕಾರಿಗಳು ಈ ಪ್ರಸ್ತಾವನೆಗೆ ಮಂಜೂರಾತಿ ನೀಡಲು ತಡ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಾನು ಈ ರೀತಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ತಡ ಮಾಡುತ್ತಿದ್ದಾರೆ ಎಂದು ಹೇಳಿದೆ. ಆದರೂ

ಕೂಡ ಯಾರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ಮಂತ್ರಿಗಳು ಏನೋ ಈ ಪ್ರಸ್ತಾವನೆಗೆ ಒಪ್ಪಿಗೆ ಕೊಡಬೇಕೆಂಬ ಮನಸ್ಸಿದ್ದರೂ ಅಧಿಕಾರಿಗಳಿಂದ ಈ ರೀತಿ ಆಗುತ್ತಿದೆ. ಏನಾದರೂ ಒಂದು ವರದಿ ಮಾಡಿ ಪ್ರಸ್ತಾವನೆ ಮಂಜೂರಾತಿಗೆ ತಡೆ ಒಡ್ಡುತ್ತಿದ್ದಾರೆ. ಈ ಒಂದು ಪ್ರಸ್ತಾವನೆಗೆ ತಾವು ಮಂಜೂರಾತಿ ದೊರಕಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಕೋರುತ್ತಿದ್ದೇನೆ. ರೈತರಿಗೆ ಅಲ್ಲಿ ಬಹಳ ತೊಂದರೆ ಇದೆ. ರೈತರ ಸವಲತ್ತುಗಳ ಸಲುವಾಗಿ ಅಲ್ಲಿ ಈ ಮಾರ್ಕೆಟ್ ಜರೂರಾಗಿ ಆಗಬೇಕಾಗಿದೆ. ಈ ಬಗ್ಗೆ ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಅಲ್ಲಿ ಪ್ರಾಬ್ಲಂ ಇದೆ, ಅವರಿಗೂ ಕೂಡ ಅದನ್ನು ಹೇಳಲು ಬರುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಹಲವಾರು ಬಾರಿ ಅಧಿಕಾರಿಗಳಿಗೆ ಹೇಳಿದ್ದಾರೆ, ಫೋನ್ ಮಾಡಿ ಕಡತವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದರೂ ಅಧಿಕಾರಿಗಳು ಅವರ ಮಾತು ಕೇಳುತ್ತಿಲ್ಲ. ನಾನು ಈ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಯಾರ ಮೇಲೂ ಚಾರ್ಜ್ ಮಾಡುತ್ತಿಲ್ಲ. ಅಲ್ಲಿ ಏನೇನು ನಡೆಯುತ್ತಿದೆ ಎಂದು ಮಾತ್ರ ಹೇಳುತ್ತಿದ್ದೇನೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಮಂತ್ರಿಗಳು ಹತ್ತು ಬಾರಿ ಹೇಳಿದರೂ ಕೂಡ ಒಂದು ಫೈಲ್ ತರಿಸಲಾರದಂತಹ ಇನ್‌ಕಾಂಪಿಟೆನ್ಸಿ ನಿಮ್ಮ ಮಿನಿಸ್ಟ್ರಿಯಲ್ಲಿ ಇದೆಯೇ ?

ಅಧ್ಯಕ್ಷರು ; ಇದರ ಬಗ್ಗೆ ಮಾನ್ಯ ಮಂತ್ರಿಗಳೇ ಹೇಳಬೇಕು.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಾನು ಇಲ್ಲಿ ರಾಜಕೀಯವಾಗಿ ಮಾತನಾಡಲಿಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಅಭಿವೃದ್ಧಿಯಾಗುವಂತಹ ಕೆಲಸ ನನಗೆ ಆಗಬೇಕಾಗಿದೆ.

ಶ್ರೀ ಡಿ.ಟಿ. ಜಯಕುಮಾರ್(ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಗೆ ಸೇರಿದ ಜಾಗಗಳನ್ನು ಬಸ್‌ಸ್ಟ್ಯಾಂಡ್, ಶಾಲೆ ಮುಂತಾದವುಗಳಿಗೆ ಬೇಕಾಗಿದೆ ಎಂದು ಸುಮಾರು 20-30 ಕಡೆಗಳಿಂದ ಬೇಡಿಕೆಗಳು ಬಂದಿವೆ. ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಗದಗ್ ಮತ್ತು ಬೆಟಗೇರಿಯಲ್ಲಿ ಬಸ್‌ಸ್ಟಾಂಡ್‌ಗಾಗಿ ತೋಟಗಾರಿಕೆ ಇಲಾಖೆಯ ಜಾಗ ಬೇಕು ಎಂದು ಕೇಳಿದ್ದಾರೆ. ಒಬ್ಬರಿಗೆ ಈ ರೀತಿ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗ ಬೇರೆ ಉದ್ದೇಶಕ್ಕೆ ಬಿಟ್ಟು ಕೊಟ್ಟರೆ, ಇದೊಂದು ಬ್ಯಾಡ್ ಪ್ರಿಸಿಡೆಂಟ್ ಆಗಿ ಬಿಡುತ್ತದೆ. ಒಬ್ಬರಿಗೆ ಕೊಟ್ಟರೆ ಎಲ್ಲರೂ ಕೇಳುತ್ತಾರೆ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ, ಈ ಕಾರಣಕ್ಕಾಗಿ ಜಾಗ ಕೊಡಬಾರದು ಎಂದು ಅಧಿಕಾರಿಗಳು ನನಗೆ ಶಿಫಾರಸ್ಸು ಮಾಡಿ ಕಳುಹಿಸಿದ್ದಾರೆ. ನಗರ ಪ್ರದೇಶಗಳಲ್ಲಿ ಒಳ್ಳೊಳ್ಳೆ ಆಯಕಟ್ಟಿನ ಜಾಗದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗಗಳು ಇವೆ. ಆದರೂ ಕೂಡ ನಾವು ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಲಿ, ವಿಷಯವನ್ನು ಕ್ಯಾಬಿನೆಟ್ ಮುಂದೆ ತರೋಣ, ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆದರೆ ಜಾಗ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಮಾಡಿದ್ದೇವೆ. ಇದರ ಜೊತೆಗೆ ಬೀದರ್ ಪ್ರಸ್ತಾವನೆ ಒಂದು ವಿಶೇಷ ಪ್ರಕರಣ. ಇಲ್ಲಿ ವೆಜಿಟಬಲ್ ಮತ್ತು ಫ್ರೂಟ್ಸ್ ಮಾರ್ಕೆಟ್‌ಗೆ ಜಾಗ ಕೇಳಿದ್ದಾರೆ. ಇದು ತೋಟಗಾರಿಕೆ ಇಲಾಖೆಯ ಪಾರ್ಟ ಅಂಡ್ ಪಾರ್ಸಲ್ ಆಗಿರುವುದರಿಂದ ಅವರಿಗೆ ಜಾಗ ಮಂಜೂರು ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ಅಲ್ಲಿ

37 ಎಕರೆ ಹಳ್ಳದ ಕೇರಿ ಪ್ರಾಜೆಕ್ಟ್ ಎಂಬುದೊಂದು ಇದೆ. ಅದರ ಮೈನ್ ರೋಡಿನ ಭಾಗದಲ್ಲಿ 6 ಎಕರೆ ಜಾಗವನ್ನು ಅವರು ಕೇಳುತ್ತಿದ್ದಾರೆ. ಅವರಿಗೆ ಜಾಗವನ್ನು ಮಂಜೂರು ಮಾಡಿ ಕೊಡಲಿಕ್ಕೆ ನಾವು ಪ್ರಪೋಸಲ್ ಕಳುಹಿಸಿದ್ದೇವೆ. ಅದನ್ನು ಕ್ಯಾಬಿನೆಟ್‌ನ ಮುಂದೆ ತಂದು ಅದನ್ನು ಅಪ್ರೂವಲ್ ಮಾಡಿಸಿ ಕೊಡುತ್ತೇನೆ ಎನ್ನುವ ಭರವಸೆಯನ್ನು ನಾನು ಅವರಿಗೆ ಕೊಡುತ್ತೇನೆ ಬೇರೆಯವರಿಗೆ ಈ ರೀತಿಯ ಆಶ್ವಾಸನೆಗಳನನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, 5 ಎಕರೆಗಳವರೆಗೆ ಇರುವ ಜಾಗವನ್ನು ಮಂಜೂರು ಮಾಡಲು ಮಾನ್ಯ ಸಚಿವರಿಗೇ ಅಧಿಕಾರ ಇದೆ. 5 ಎಕರೆಗಳಿಗಿಂತ ಹೆಚ್ಚು ಜಾಗ ಮಂಜೂರಾತಿ ನೀಡಬೇಕಾಗಿದ್ದರೆ ಮಾತ್ರ ಅದು ಕ್ಯಾಬಿನೆಟ್‌ಗೆ ಹೋಗಬೇಕು. ಮಾನ್ಯ ಸಚಿವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಎಷ್ಟಾಗುತ್ತದೋ ಅಷ್ಟನ್ನಾದರೂ ಮಂಜೂರು ಮಾಡಿಕೊಡಲಿ.

ಅಧ್ಯಕ್ಷರು : ಮಾನ್ಯ ತೋಟಗಾರಿಕಾ ಸಚಿವರೇ, ಮಾನ್ಯ ಸದಸ್ಯರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಎಷ್ಟಾಗುತ್ತದೋ ಅಷ್ಟನ್ನು ಈಗ ಮಂಜೂರು ಮಾಡಿ ಉಳಿದದ್ದನ್ನು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿಸಿ ಕೊಡಿ ಎಂದು ಕೇಳುತ್ತಿದ್ದಾರೆ. ಇದೊಂದು ಒಳ್ಳೆಯ ಸಲಹೆ. ಅದರ ಬಗ್ಗೆ ಗಮನ ಹರಿಸಿ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ 5 ಎಕರೆ ಪ್ರದೇಶವಲ್ಲ, ಅರ್ಧ ಎಕರೆ ಪ್ರದೇಶವಲ್ಲ, ಒಂದು ಗುಂಟೆ ಜಾಗ ಮಂಜೂರು ಮಾಡಬೇಕಾದರೂ ಅದು ಕ್ಯಾಬಿನೆಟ್‌ನ ಮುಂದೆ ಬರಲೇಬೇಕು. ಅದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಐದು ಎಕರೆ ಅಲ್ಲ, ಒಂದು ಗುಂಟೆ ಬೇಕಾದರೂ ಅದು ಕ್ಯಾಬಿನೆಟ್‌ಗೆ ಬರಬೇಕು. ಆ ತರಹ ಪವರ್ ಇಲ್ಲ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಿಮ್ಮ ಸಮಸ್ಯೆ ಏನಿದೆ ನಮಗೆ ಗೊತ್ತು ರೋಷನ್‌ಬೇಗ್ ಸಮಸ್ಯೆ ಏನು ನನಗೆ ಗೊತ್ತು. ರೋಷನ್ ಬೇಗ್ ನಮ್ಮ ಮುಸ್ಲಿಂ ಸಮಾಜದಲ್ಲಿ ಭಾಷಣ ಮಾಡುತ್ತಾರೆ. ಉತ್ತರ ಪ್ರದೇಶದಲ್ಲಿ ಇಬ್ರಾಹಿಂರವರು ಹೋಗಿ ನಾನು ಒಬ್ಬ ಮುಸಲ್ಮಾನನಿಗೆ ಹೋಮ್ ಮಿನಿಸ್ಟರ್ ಮಾಡಿದ್ದೇವೆಂದು ಹೇಳುತ್ತಾರೆ, ಜನ ಚಪ್ಪಾಳೆ ಹೊಡೆಯುತ್ತಾರೆ. ಹೋಮ್ ಮಿನಿಸ್ಟರ್‌ಗೆ ಒಬ್ಬ ಕಾನ್‌ಸ್ಟೇಬಲ್‌ಗೆ ಟ್ರಾನ್ಸಫರ್ ಮಾಡುವುದಕ್ಕೆ ಪವರ್ಸ್ ಇಲ್ಲ. ನಾನು ಛಾರ್ಜಸ್ ಮಾಡುತ್ತಿಲ್ಲ.

ಅಧ್ಯಕ್ಷರು : ಉತ್ತರ ಪ್ರದೇಶದಲ್ಲಿ ಇವರೇ ಹೋಗಿ ಭಾಷಣ ಮಾಡಿದರಾ?

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಶ್ರೀ ಸಿ.ಎಂ. ಇಬ್ರಾಹಿಂ ಹೋಗಿ ಇವರಿಗೆ ಹೋಮ್ ಮಿನಿಸ್ಟರ್ ಮಾಡಿದ್ದೇನೆಂದು ಹೇಳಿದರು. ಐದು ಮೆಡಿಕಲ್ ಕಾಲೇಜ್ ಕೊಟ್ಟಿದ್ದೇವೆ, 10 ಇಂಜಿನಿಯರಿಂಗ್ ಕಾಲೇಜ್ ಕೊಟ್ಟಿದ್ದೇವೆ, 20 ಕಡೆ ರೆಸಿಡೆನ್‌ಷಿಯಲ್ ಸ್ಕೂಲ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ರೆಸಿಡೆನ್‌ಷಿಯಲ್ ಸ್ಕೂಲ್ ಪತ್ತೆ ಇಲ್ಲ. ಇದು ಸರಿ ಇದೆ, ಎಲ್ಲರಿಗೂ ಗೊತ್ತಿದೆ, ಅದು ಕೋರ್ಟಿಗೆ ಹೋಗಿ ಎಲ್ಲಾ ಪ್ರಾಬ್ಲಮ್ ಆಗಿದೆ. ನಾನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಂತ್ರಿಗಳನ್ನಾಗಿ ಮಾಡಿದ್ದೀರಿ. ಮಿರಾಜುದ್ದೀನ್ ಪಟೇಲರನ್ನು ಮಿನಿಸ್ಟರನ್ನಾಗಿ ಮಾಡಿದ್ದೀರಿ. ಅವರು

ಕೆಲಸ ಏಕೆ ಮಾಡುತ್ತಿಲ್ಲ? ನನಗೆ ಸಹಕಾರ ಏಕೆ ಮಾಡುತ್ತಿಲ್ಲ, ನನಗೆ ಗೊತ್ತು. ನನಗೆ ಸಹಕಾರ ಕೊಡದೆ ಇದ್ದುದರಿಂದ ಪ್ರಾಬ್ಲಂ ಇದೆ. ಮಿನಿಸ್ಟ್ರಿ ಇದೆ, ನಾನು ಮತ್ತು ಅವರು ಜಗಳವಾಡಬೇಕು. ಬೀದರ್‌ನಲ್ಲಿ ಜಗಳ ಎಂದರೆ ಮೀರಾಜುದ್ದೀನ್ ಪಟೇಲ್ ವರ್ಸಸ್ ಹಾಶ್ಮಿ ಹೀಗಾಗಿದೆ. ಅವರ ಪರಿಸ್ಥಿತಿ ನನಗೆ ಗೊತ್ತು. ನಾನು ಈ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಂತ್ರಿಗಳನ್ನಾಗಿ ಮಾಡಿದ್ದೀರಿ ಬಹಳ ಧನ್ಯವಾದಗಳು. ಈಗ ಮೊಯಿದ್ದೀನ್ ಸಾಹೇಬರ ಬಗ್ಗೆ ಹೇಳುತ್ತೇನೆ. ಸಾರ್, ಮುಸ್ಲಿಂರಿಗೆ ಈ ತರಹ ತೊಂದರೆ ಇದೆ ಎಂದರೆ ಏನ್ರಿ ಮುಸ್ಲಿಂ ಮುಸ್ಲಿಂ ಎಂದು ಹೇಳಬೇಡಿ, ಏನು ತೊಂದರೆ ಇದೆ ಅದು ಹೇಳಿ. "ಕಭಿ ಯಾದ್ ಹೈತೋ ಆಬಾದ್ ನಹೀ ತೋ ಹಮ್ ಬರ್ಬಾದ್". ಇವರ ವಿಷಯ ಹೀಗಿದೆ. ಅವರಿಗೆ ಜ್ಞಾಪಕ ಇದ್ದರೆ ನಾವು ಆಬಾದ್ ಆಗುತ್ತೇವೆ. ಅವರು ಮರೆತು ಬಿಟ್ಟರೆ ಬರ್ಬಾದ್ ಆಗುತ್ತೇವೆ. ಅವರಿಗೆ ಜ್ಞಾಪಕ ಇರುವುದು ಬಹಳ ಕಷ್ಟವಿದೆ. ಜ್ಞಾಪಕ ಬಂದರೆ ಎಲ್ಲಾ ಮಾಡುತ್ತಾರೆ. ಇಲ್ಲದಿದ್ದರೆ ಎಮ್‌ಎಲ್‌ಎ ಗಳಿಗೂ ಕೂಡ ಕಂಡುಹಿಡಿಯುವುದಿಲ್ಲ. ನಮಸ್ಕಾರ ಮಾಡಿದರೆ ಹಾಗೆ ಹೊರಟು ಹೋಗುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಅವರು ಮೂವರಲ್ಲಿ ಯಾರು ಸೆಕ್ಯುಲರ್ ಎಂದು ಹೇಳಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಎಲ್ಲರೂ ಸೆಕ್ಯುಲರ್ ಯಾರೂ ಕಮ್ಯುನಲ್ ಇಲ್ಲ. ಕಮ್ಯುನಲ್ ಡೆಫನೇಷನ್ ನೀವು ಬೇರೆ ತೆಗೆದುಕೊಂಡಿದ್ದೀರಿ. ನೀವು ಸೆಕ್ಯುಲರ್ ಡೆಫನೇಷನ್ ಬೇರೆ ತೆಗೆದುಕೊಂಡಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ನೀವೇ ಹೇಳುತ್ತಿದ್ದೀರಿ, ಮಂತ್ರಿಗಳೆಲ್ಲಾ ಮುಸ್ಲೀಮರ ಕೆಲಸ ಮಾಡಬೇಕೆಂದು. ಅವರು ಮುಸ್ಲೀಮರ ಕೆಲಸ ಮಾಡಬೇಕು, ಇವರು ಗೌಡರ ಕೆಲಸ ಮಾಡಬೇಕೆಂದರೆ ಇದು ಸೆಕ್ಯುಲರಾ, ಇವರು ಗೌಡರ ಕೆಲಸ ಮಾಡಬೇಕು, ಇವರು ಲಿಂಗಾಯಿತರ ಕೆಲಸ ಮಾಡಬೇಕೆಂದರೆ ಮಂತ್ರಿಗಳು ಹೀಗೆ ಮಾಡುವುದಕ್ಕಾಗುತ್ತಾ?

ಅಧ್ಯಕ್ಷರು : ಈ ಸದನದ ವಿಶೇಷತೆ ಸಾಮಾನ್ಯವಾಗಿ ಸೀನಿಯರ್ ಲೀಡರ್ಸ್‌ಗೆ ಹೆಚ್ಚು ಅವಕಾಶ ಸಿಗುತ್ತದೆ. ಮಂತ್ರಿಗಳಿಗೆ ಅವಕಾಶ ಸಿಗುತ್ತದೆ. ಕೆಲವರಲ್ಲಿ ಎಂಥೆಂತಹ ಟ್ಯಾಲೆಂಟ್ ಇರುತ್ತದೆ ನಾವು ಸದನದಲ್ಲಿ ತಿಳಿದುಕೊಳ್ಳುವುದಕ್ಕೆ ಅವಕಾಶ ಸಿಗುವುದಿಲ್ಲ. ರಾಜೇಂದ್ರನ್ ಯಾವಾಗಲಾದರೂ ಒಂದು ಸಾರಿ ಅಪರೂಪಕ್ಕೆ ಮಾತನಾಡುತ್ತಾರೆ. He speaks very sensibly. We must encourage all these people. ಹಾಶ್ಮಿ ಕೂಡ ಅಷ್ಟೆ ಬಹಳ ಕಡಿಮೆ ಮಾತನಾಡಿದ್ದಾರೆ. ಅವರು ಮಾತನಾಡುವ ವೇಳೆಗೆ ಭಾಷೆ ಅದರ ವ್ಯಾಕರಣ ಶೈಲಿ ಇವೆಲ್ಲಾ ನಮಗೆ ಮುಖ್ಯವಿಲ್ಲ. ಇನ್ನೇಟ್ ಫೀಲಿಂಗ್ಸ್ ಏನು ಇರುತ್ತದೆ ಅದನ್ನು ನಾವು ಗೌರವಿಸಬೇಕಾಗುತ್ತದೆ. ಮನುಷ್ಯನ grasping power, presentation, are important. We must encourage such people.

ಶ್ರೀ ಅರಗ ಜ್ಞಾನೇಂದ್ರ : ಹೊರಗಡೆ ಒಳ್ಳೆಯ ಮಸೇಜ್ ಹೋಗಬೇಕಾಗುತ್ತದೆ. ಅವರ ಅರ್ಥದಲ್ಲಿ ಅವರು ಕೆಲವು ಶಬ್ದಗಳ ಉಚ್ಚಾರಣದಲ್ಲಿ ತಪ್ಪು ಹೇಳಿದರೆ ಯಾರೂ ಅಬ್ಜೆಕ್ಷನ್ ಮಾಡುವುದಿಲ್ಲ. ಅವರು ಏನು ಹೇಳಿದರು ಮಾನ್ಯ ಗೃಹ ಸಚಿವರೂ ಆಗುವುದಕ್ಕೆ ಮುಸ್ಲೀಮರಿಗೆ

ಅವಕಾಶ ಕೊಟ್ಟಿದ್ದೇನೆಂದು ಇಬ್ರಾಹಿಂರವರು ಹೇಳುತ್ತಾರೆ, ಇವರು ಮುಸ್ಲಿಮರ ಕೆಲಸ ಮಾಡುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಎಲ್ಲರೂ ಕೂಡ ಅವರವರ ಕಮ್ಯುನಿಟಿ ಕೆಲಸ ಮಾಡುವುದು ಅಲ್ಲ, ಇಡೀ ಸಮಾಜಕ್ಕೆ ಕೆಲಸ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಹೇಳಿದೆ.

ಅಧ್ಯಕ್ಷರು : ಅವರು ಹೇಳುವಾಗ ಏನು ಹೇಳಿದರೆಂದರೆ, ನಾನು ಯಾವಾಗಲಾದರೂ ಹೋಗಿ ಇದು ಮೈನಾರಿಟಿಯವರ ಕೆಲಸ ಇದೆ, ಮೈನಾರಿಟಿ ರೆಪ್ರಸೆಂಟೇಟಿವ್ ಎಂದು ಹೇಳಿದರೆ, "ಮೈನಾರಿಟಿ ಮೆಜಾರಿಟಿ ಏನೂ ಹೇಳಬೇಡಿ, ಅದು ಏನಿದೆ ಹೇಳಿ ಹೋಗಪ್ಪ' ಎಂದು ಕ್ಯಾಷುಯಲ್ಲಾಗಿ ಹೇಳಿದರು. That is a good thing. It is a compliment to the Hon. Minister.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಅವರು ಏನು ಒಳ್ಳೆಯದು ಮಾಡಿದರು ಎಂದು ಅದನ್ನೂ ಹೇಳುತ್ತಿದ್ದೇನೆ.

MR. SPEAKER : The whole problem is ನೀವು ಯಾರೂ ಅಟೆಂಟೀವ್ ಆಗಿರುವುದಿಲ್ಲ. Because I hear everybody, to the last word and I try to set the records straight.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಶ್ಮಿಯವರು ಮೊದಲು ಹೇಳಿದರು, ಯಾದ್ ಕರೇತೋ ಆಬಾದ್ ನಹೀತೋ ಬರ್ಬಾದ್ ಎಂದು ಮೊದಲೆ ನಿಮ್ಮ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು : ಕನ್ನಡ ಕೂಡ ಮೊದಲು ಇವರು ಸದನಕ್ಕೆ ಬಂದಾಗ ಮಾತನಾಡಿದ್ದಕ್ಕೂ ಇವತ್ತಿಗೂ ಕನ್ನಡ ಎಷ್ಟೋ ಸುಧಾರಿಸಿದ್ದಾರೆ. ಖುಷಿಯಾಗುತ್ತದೆ. ಮಾತನಾಡಿ. He is speaking well.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಈ ನಮ್ಮ ರಾಜ್ಯದಲ್ಲಿ ನಮ್ಮ ರಾಷ್ಟ್ರದಲ್ಲಿ ರಿಸರ್ವೇಷನ್ ಏಕೆ ಬಂದಿದೆ, ಚಿನ್ನಪ್ಪರೆಡ್ಡಿ ಕಮಿಷನ್ ಏಕೆ ಬಂದಿದೆ, ಜನತಾದಳದವರು ಹೇಳುತ್ತೀರಿ, ಸಾಮಾಜಿಕ ನ್ಯಾಯ ಕೊಡುತ್ತೇವೆಂದು ಹೇಳುತ್ತೀರಿ ಕೊಡುತ್ತಿಲ್ಲ. ಅದು ನಂತರ ಮಾತನಾಡೋಣ. ಎಲ್ಲಾ ಸಮಾಜದವರೂ ಸಮಾನವಾಗಿ ಇರಬೇಕೆಂದು ನಮ್ಮ ದೇಶದಲ್ಲಿ ರಿಸರ್ವೇಷನ್ ಬಂದಿದೆ. 100 ರಿಂದ 50 ಪರ್ಸೆಂಟ್ ಜಾತಿಯಲ್ಲಿ ಏಕೆ ರಿಸರ್ವೇಷನ್ ಬರುತ್ತದೆ, ಈ ದೇಶದಲ್ಲಿ ಜಾತಿ ಹೆಸರಿನಲ್ಲಿ ಯಾರು ತಮ್ಮ ಕೂಲಿಗೋಸ್ಕರ ಏನಾದರೂ ಕೆಲಸ ಮಾಡಿರಬಹುದು ಅವರಿಗೆ ಒಂದು ಜಾತಿ, ಒಂದು ಭಗವಾನ್ ಮಾಡಿದ್ದಾರೆ. ನಾನು ದೇವರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಿಸ್ಟಮ್ ಇಲ್ಲಿ ನಡೆಯುತ್ತಿದೆ. ಈ ದೇಶದಲ್ಲಿ ಏಕೆ ಹೀಗೆ ನಡೆಯುತ್ತಿದೆ. ಏನಾಗುತ್ತಿದೆ, ನಮಗೆ ಗೊತ್ತು. ನಮಗೆ ಗೊತ್ತು ಏನೇನು ಪ್ರಾಬ್ರಮ್ ಇದೆ ಎಂಬುದು ಮಾನ್ಯ ಕಾನ್‌ಶಿರಾಮ್‌ನವರು 50 ಪುಟಗಳ ಒಂದು ಪುಸ್ತಕ ಮಾಡಿದ್ದಾರೆ. ಆ ಪುಸ್ತಕವನ್ನು ನಾನು ಮಾನ್ಯ ಡಿ.ಆರ್. ಪಾಟೀಲ್ ಒಬ್ಬರಿಗೆ ಓದುವುದಕ್ಕೆ ಕೊಟ್ಟಿದ್ದೇನೆ. ಈ ಸಿಸ್ಟಮ್ ಏನಿದೆ ಎಂದು ಹೇಳಿ, ನೀವು ಬಿಎಸ್‌ಪಿಗೆ ಬರಲಿ, ಬಿಡಲಿ, ಫಾಲೋ ಮಾಡಲಿ ಬಿಡಲಿ, ಬಹುಜನ ಸಮಾಜ ಪಾರ್ಟಿ ಐಡಿಯಾಲಜಿಕಲ್ ಪಾರ್ಟಿ. ಈ ದೇಶಕ್ಕೆ ನಾವು ರಾಜಕೀಯವಾಗಿ ಹೊಸ ಮೂವ್‌ಮೆಂಟ್ ಕೊಡುತ್ತಿದ್ದೇವೆ. ಅದು ಒಂದು. ಮಾನ್ಯ ಕಾನ್‌ಶಿರಾಮ್‌ರವರು ಈ ದೇಶಕ್ಕೆ ಏನೇನು

ಕೊಟ್ಟಿದ್ದಾರೆಂದು ಹೇಳುವುದಕ್ಕೆ ಸಮಯ ಬೇಕಾಗುತ್ತದೆ. ಈಗ ಆ ಐಡಿಯಾಲಜಿಯನ್ನೇ ಇಷ್ಟು ಬೆಳವಣಿಗೆ ಮಾಡಿದ್ದಾರೆ. ಈ ದೇಶದಲ್ಲಿ ಬಿಎಸ್‌ಪಿ ಇಲ್ಲದೆ, ಕಾನ್‌ಶಿರಾಮ್ ಸಹಕಾರ ಇಲ್ಲದೆ ನಾರ್ಥ್ ಇಂಡಿಯಾದಲ್ಲಿ ಯಾವ ಪಾರ್ಟಿ ಎಲಕ್ಷನ್‌ಗೆ ಹೋಗುವುದಕ್ಕೆ ಧೈರ್ಯವಿಲ್ಲ. ತಾವು ಪೇಪರ್‌ನಲ್ಲಿ ಓದುತ್ತಿದ್ದೀರಿ, ಅದರಲ್ಲಿ ಐಡಿಯಾಲಜಿ ಇದೆ. ನಾವು ಅಧಿಕಾರಕ್ಕೆ ಬರುತ್ತೇವೆ, ಎಂಎಲ್‌ಎ ಆಗುತ್ತೇವೆ, ಮಂತ್ರಿಗಳಾಗುತ್ತೇವೆಂದು ನಮಗೆ ಆಸೆ ಇಲ್ಲ. ಐಡಿಯಾಲಜಿಯನ್ನು ಜನರಿಗೆ ತೋರಿಸಿ ಜನರ ಮುಂದೆ ನಾವು ಹೋಗಬಹುದು. ಕರ್ನಾಟಕದಲ್ಲಿ 24 ಸೆಪ್ಟೆಂಬರ್‌ಗೆ ಕಾನ್‌ಶಿರಾಮ್‌ರವರ ಬಹುಜನ ಸಮಾಜ ಪಾರ್ಟಿ ಮತ್ತು ನನ್ನ ಶಕ್ತಿಯನ್ನು ಪ್ರದರ್ಶನ ಮಾಡಿದೆ ಜನ ನೋಡಿದ್ದಾರೆ. ಅದು ಐಡಿಯಾಲಜಿಕಲ್ ಆಗಿ ಆಯಿತು. ಒಂದು ನಯಾಪೈಸೆ ದುಡ್ಡೂ ಇಲ್ಲ. ಮೂಲೆ ಮೂಲೆಗಳಿಂದ ಜನ ನಮ್ಮ ಫಂಕ್ಷನ್ ನೋಡುವುದಕ್ಕೆ ಮತ್ತು ಕಾನ್‌ಶಿರಾಮ್‌ರವರ ಮುಖ ನೋಡುವುದಕ್ಕೆ ಬಂದಿದ್ದರು. ಈ ಸಿಸ್ಟಮ್ ವಿರುದ್ಧವಾಗಿ ನಾವು ಮೂವ್‌ಮೆಂಟ್ ನಡೆಸುತ್ತಿದ್ದೇವೆ. ಒಂದು ದಿನ ಆ ಕಾಲ ಬರಬಹುದು. ಎಲ್ಲರಿಗೂ ತಿಳುವಳಿಕೆ ಬರಬಹುದು. ನಾವೆಲ್ಲರೂ ತಮ್ಮ ತಮ್ಮ ಪಕ್ಷದ ಬಗ್ಗೆ ಹೇಳುತ್ತೇವೆ. ಎಲ್ಲಾ ಮಾಡಿ ನಾವು ಅದು ಮಾಡಿದ್ದೇವೆ, ನಾವು ಇದು ಮಾಡಿದ್ದೇವೆ, ಈಶ್ವರಪ್ಪನವರು ಮೈನಾರಿಟೀಸ್ ಬಗ್ಗೆ ಮಾತನಾಡುತ್ತಿದ್ದರು. ಅವರು ಏನು ಹೇಳಿದರೆಂದರೆ ಜನತಾದಳದವರು ಮತ್ತು ಕಾಂಗ್ರೆಸ್‌ನವರು ಮೈನಾರಿಟಿ ಎಸ್.ಸಿ. ಬಿಸಿ ಎಂದು ಹೆಸರು ತೆಗೆದುಕೊಳ್ಳುತ್ತಾರೆ, ಎಲಕ್ಷನ್‌ನಲ್ಲಿ ಓಟು ತೆಗೆದುಕೊಳ್ಳುವುದಕ್ಕೋಸ್ಕರ ಹೇಳುತ್ತಿದ್ದಾರೆಂದು ಅವರು ಮಾತನಾಡಿದರು. ಏನೇನೋ ಹೇಳಿದರು, ಓಟ್ ತೆಗೆದುಕೊಂಡಿದ್ದಾರೆ ಕೆಲಸ ಮಾಡಲಿಲ್ಲ ಅಥವಾ ಮಾಡಿದ್ದಾರೆ ಅದು ನೋಡೋಣ. ಬಿಜೆಪಿಯವರಿಗೆ ಮೈನಾರಿಟೀಸ್ ಮೇಲೆ ಏಕೆ ಇಷ್ಟು ಪ್ರೀತಿ ಬರುತ್ತಿದೆ, ಈ ನಿಮ್ಮ ರಾಜಸ್ಥಾನದಲ್ಲಿ ನಿಮ್ಮ ಸರ್ಕಾರ ಇದೆ, ಅಲ್ಲಿ ಸಿಂಗಲ್ ಸ್ಟೇಟ್ ಗವರ್ನಮೆಂಟ್‌ನಲ್ಲಿ ಒಂದು ನಯಾಪೈಸೆ ಮೈನಾರಿಟೀಸ್ ಡೆವಲಪ್‌ಮೆಂಟ್ ಸಲುವಾಗಿ ನಿಮ್ಮ ಸರ್ಕಾರ ಇಟ್ಟಿಲ್ಲ. ಇಲ್ಲವೆಂದು ನಾನು ಹೇಳುತ್ತಿದ್ದೇನೆ, ಸುಮ್ಮನೆ ಛಾರ್ಜಸ್ ಮಾಡುವುದಕ್ಕೆ ಹೇಳುತ್ತಿಲ್ಲ. ಅದರ ಸಲುವಾಗಿ ನಿಮ್ಮ ಪ್ರೀತಿ ನಮಗೆ ಬೇಡ. ಏಕೆಂದರೆ ತಮ್ಮ ಪ್ರೀತಿ ನಮ್ಮ ಮೇಲೆ ಎಷ್ಟು ಹೆಚ್ಚಿದರೂ ಅಷ್ಟೆ. ನಾನು ಏತಕ್ಕಾಗಿ ಇಷ್ಟು ಹೇಳುತ್ತಿದ್ದೇನೆಂದರೆ, ಯಾವ ಜಾತಿಯವರೂ, ಯಾರೇ ಮಂತ್ರಿ ಇರಲಿ ತಾವು ಹೋಗಿ ತಮ್ಮ ತಮ್ಮ ಕಮ್ಯುನಿಟಿ, ತಮ್ಮ ಸಮಾಜದ ಫಂಕ್ಷನ್ ಅಟೆಂಡ್ ಮಾಡಿ ನಿಮಗೆ ಯಾವ ವಿರೋಧವೂ ಇಲ್ಲ. ಯಾವ ಡಿಸ್ಟ್ರಿಕ್ಟ್‌ಗೆ ತಾವು ಬರುತ್ತೀರಿ ಆ ಡಿಸ್ಟ್ರಿಕ್ಟ್‌ನಲ್ಲಿ ಹೋಗಿ ತಮ್ಮ ಡಿಪಾರ್ಟ್‌ಮೆಂಟ್‌ಗೆ ಒಂದು ರಿವ್ಯೂ ಮಾಡಬೇಕು. ಯಾರು ಜನರ ಪ್ರತಿನಿಧಿ ಇದ್ದಾರೆ, ತಾಲ್ಲೂಕು ಪಂಚಾಯಿತಿ ಸದಸ್ಯರು ಯಾರಿದ್ದಾರೆ, ಅಧ್ಯಕ್ಷರು ಯಾರಿದ್ದಾರೆ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಯಾರಿದ್ದಾರೆ ತಾವು ಬಹಳ ಒಳ್ಳೆಯ ಕೆಲಸ ಮಾಡುತ್ತಿರಬಹುದು, ಮೊದಲು ಮನುಷ್ಯ ತಮ್ಮ ಮನೆಗೆ, ತಮ್ಮ ಸಮಾಜಕ್ಕೋಸ್ಕರ ಮಾಡಬೇಕು, ಯಾರುಮನೆಗೆ, ಸಮಾಜಕ್ಕೆ ಮಾಡುತ್ತಾರೆ ಅವನು ರಾಜ್ಯಕ್ಕೋ ಮಾಡುತ್ತಾರೆ, ರಾಷ್ಟ್ರಕ್ಕೂ ಮಾಡುತ್ತಾರೆ. ತಾವು ಏನು ಮಾಡುತ್ತೀರಿ, ಸಮಾಜದ ಮೀಟಿಂಗ್ ಮಾಡುತ್ತೀರಿ ಆ ಸಮಾಜದವರಿಗೆ ಯಾವುದೇ ಕೆಲಸ ಮಾಡುವುದಿಲ್ಲ. ಆ ಸಮಾಜದವರು ಮಂತ್ರಿಗಳು ಬಂದಿದ್ದರು ಮೀಟಿಂಗ್ ಆಗಿದೆ ಎಂದು ತಿಳಿದುಕೊಂಡು ಬೇರೆ ಸಮಾಜದವರು ಏನೇನೋ ತಿಳಿದುಕೊಂಡು ಆರ್ಗನೈಸ್ ಆಗುತ್ತಾರೆ.

7.10ಪಿ.ಎಂ

ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಮಂತ್ರಿಯವರು ಯಾವ್ಯಾವ ಜಿಲ್ಲೆಗೆ ಹೋಗುತ್ತಾರೋ ಆಗ ತಮ್ಮ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಂತೆ ರಿವ್ಯೂ ಮಾಡಬೇಕು. ಮೊನ್ನೆ ಗೃಹಮಂತ್ರಿಗಳು ಬೀದರ್‌ಗೆ ಒಂದು ಕಾರ್ಯಕ್ರಮಕ್ಕೆ ಬಂದಿದ್ದಾಗ ತಮ್ಮ ಇಲಾಖೆ ಬಗ್ಗೆ ಅಲ್ಲಿ ರಿವ್ಯೂ ಮಾಡಲಿಲ್ಲ. ನಾನೇ ಅಲ್ಲಿಯ ಕಾರ್ಯಕ್ರಮವನ್ನು ಅರೇಂಜ್ ಮಾಡಿದ್ದೆ. ಅಲ್ಲಿ ಅವರು ತಮ್ಮ ಇಲಾಖೆ ಬಗ್ಗೆ ರಿವ್ಯೂ ಮಾಡಲಿಲ್ಲ. ಬೇರೆ ಮಂತ್ರಿಗಳೂ ಕೂಡ ಏನೇನು ಮಾಡುತ್ತಿದ್ದಾರೆ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಯಾರು ಕೆಲಸವನ್ನು ಮಾಡುತ್ತಿದ್ದಾರೆ ಮತ್ತು ಯಾರು ಮಾಡುತ್ತಿಲ್ಲವೆಂಬ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವೊತ್ತು ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್‌ನವರು ತಂದಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್‌ನವರು ಅಲ್ಲಿ ಕುಳಿತಿದ್ದರು, ಈಗ ನೀವು ಅಲ್ಲಿ ಕುಳಿತಿದ್ದೀರಿ. ಯಾರು ಬಂದರೂ ಕೂಡ 50 ವರ್ಷಗಳಿಂದ ಏನೂ ಕೆಲಸ ಮಾಡಲಿಲ್ಲ. ಅದರ ಬಗ್ಗೆ ನಾನು ಹೇಳುವುದಿಲ್ಲ. ಇನ್ನು ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಬಗ್ಗೆ ಹೇಳಬೇಕೆಂದಿದ್ದೇನೆ. ಇಂದು ಸಮಾಜವಾದದ ಮುಖಂಡರಾದ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿ ಯಾಗಿರಬೇಕೆಂಬುದು ನಮ್ಮ ಆಸೆಯಾಗಿದೆ. ನನ್ನ ನೇಟಿವ್ ಪ್ಲೇಸ್‌ನಲ್ಲಿ ಸುಮಾರು 230 ಜನ ಸ್ವಾತಂತ್ರ್ಯ ಸೇನಾನಿಗಳಿದ್ದಾರೆ. ಸಾವಿರಾರು ಜನರು ಗೋವಾ ಸತ್ಯಾಗ್ರಹದಲ್ಲಿ ಪ್ರಜಾ ಸೋಷಿಯಲಿಸ್ಟ್ ಹೆಸರಿನಲ್ಲಿ ಅರೆಸ್ಟ್ ಆಗಿದ್ದಾರೆ. ಇವರು ಹೆಸರುಗಳು ಅರಸ್ಟ್ ಆಗಿರುವವರ ಪಟ್ಟಿಯಲ್ಲಿ ಇದೆ. ಅಲ್ಲಿಯೇ ರಜಾಕರ ಚಳುವಳಿಗೆ ಸಂಬಂಧಪಟ್ಟ ಜನರೂ ಇದ್ದಾರೆ. ಇವರಲ್ಲದೇ ನಿಜಾಮನ ಮೇಲೆ ಬಾಂಬ್ ಹಾಕಿದ ಜನರೂ ಕೂಡ ನನ್ನ ನೇಟೀವ್ ಪ್ಲೇಸ್‌ನಲ್ಲಿ ಇದ್ದಾರೆ. ಅಂಥ ಸಮಾಜವಾದಿ ಜನಗಳಿರುವ ಸ್ಥಳದಿಂದ ಈ ಬಾರಿ ಮಾತ್ರ ಕಾಂಗ್ರೆಸ್‌ನವರು ಮತ್ತು ಜನತಾದಳದ ಅಭ್ಯರ್ಥಿಗಳು ಗೆದ್ದಿದ್ದಾರೆ. ಆ ದೃಷ್ಟಿಯಿಂದ ಜನತಾದಳದ ಅಭ್ಯರ್ಥಿಯಾಗಿದ್ದ ಮಿರಾಜುದ್ದೀನ್ ಪಟೇಲ್‌ರವರು ಗೆದ್ದಿರುವುದು. ಅಲ್ಲಿ ಸಮಾಜವಾದಿ ಜನಗಳಿರುವ ಕಾರಣದಿಂದ ಅಲ್ಲಿಗೆ ನೀವು ಮತ ಕೇಳುವುದಕ್ಕೆ ಹೋಗಲಿ ಅಥವಾ ಹೋಗದಿರಲಿ, ಅಲ್ಲಿಯ ಜನರು ಜನತಾದಳಕ್ಕೇ ಮತ ಕೊಡುತ್ತಾರೆ. ಚಿಟಗುಪ್ಪ ಎನ್ನುವ ಊರು ಮೀರಾಜುದ್ದೀನ್ ಪಟೇಲ್ ಕ್ಷೇತ್ರವಲ್ಲಿ ಬರುತ್ತದೆ, ಅದು ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ. ಇನ್ನೊಂದು ವಿಷಯವೆಂದರೆ ಮೀರಾಜುದ್ದೀನ್ ಪಟೇಲ್ ನೇಟಿವ್ ಪ್ಲೇಸ್‌ನಲ್ಲಿ ನಾನು ಶಾಸಕನಾಗಿದ್ದೇನೆ ಮತ್ತು ನನ್ನ ನೇಟಿವ್ ಪ್ಲೇಸ್‌ನಲ್ಲಿ ಮಿರಾಜುದ್ದೀನ್ ಪಟೇಲರು ಶಾಸಕರಾಗಿದ್ದಾರೆ. ಚಿಟಗುಪ್ಪದಲ್ಲಿ ಜೆ.ಹೆಚ್. ಪಟೇಲ್‌ರವರ ಅಭಿಮಾನಿಗಳಿದ್ದಾರೆ. ಸಮಾಜವಾದಿಗಳಾದ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾದಾಗ ಚಿಟಗುಪ್ಪದಲ್ಲಿ ದೊಡ್ಡ ಕಾರ್ಯಕ್ರಮವನ್ನೇ ಮಾಡಿದರು. ಪಟಾಕಿಯನ್ನು ಹೊಡೆದು ಸಿಹಿಯನ್ನು ಹಂಚಿದರು. ನಾನು ಏಕೆ ಈ ರೀತಿ ಮಾಡುತ್ತಿದ್ದೀರೆಂದಾಗ ಅವರು ಏನು ಹೇಳಿದರೆಂದರೆ ಜೆ.ಹೆಚ್. ಪಟೇಲ್‌ರವರು ಸಮಾಜವಾದಿ ತತ್ವದವರಾಗಿದ್ದಾರೆ, ಅಂಥವರು ಇಂದು ಮುಖ್ಯಮಂತ್ರಿಯಾಗಿದ್ದಾರೆಯಾದ ಕಾರಣ ಚಿಟಗುಪ್ಪ ಅಭಿವೃದ್ಧಿಯ ಸಂಬಂಧದಲ್ಲಿ ನಿನಗೆ ಚೆನ್ನಾಗಿ ಪ್ರೋತ್ಸಾಹ ಸಿಗುತ್ತದೆಂದೂ ಮೊದಲು ಅವರು ಚಿಟಗುಪ್ಪವನ್ನು ತಾಲ್ಲೂಕನ್ನಾಗಿ ಮಾಡುತ್ತಾರೆಂದು ಬಹಳ ವಿಶ್ವಾಸದಿಂದ, ಸಂತೋಷದಿಂದ ಹೇಳಿದರು. ಆ ಚಿಟಗುಪ್ಪವೇ ನಾನು ಹುಟ್ಟಿದ ಊರಾಗಿದೆ. ಆ ಕಾರಣದಿಂದ ಜೆ.ಹೆಚ್. ಪಟೇಲ್‌ರು

ಏನು ಮುಖ್ಯಮಂತ್ರಿಯಾಗಿದ್ದಾರೆ ಅವರ ಮೇಲೆ ನನಗೆ ಬಹಳ ಗೌರವವಿದೆ. ಇಂಥ ಮುಖ್ಯಮಂತ್ರಿಗೆ ಯಾರ್ಯಾರಿಂದ ಕೆಟ್ಟ ಹೆಸರು ಬರುತ್ತಿದೆ ಎಂಬ ಬಗ್ಗೆ ತಮಗೆ ಹೇಳುತ್ತಿದ್ದೇನೆ. ಅಧ್ಯಕ್ಷರೆ, ಸಿಂದನಗೆರೆ ಗ್ರಾಮ, ಹುಮ್ನಾಬಾದ್ ತಾಲ್ಲೂಕು, ಇಲ್ಲಿ ಅಕ್ರಮವಾಗಿ, ಕಾನೂನು ಬಾಹಿರವಾಗಿ ಸರಾಯಿ ಉತ್ಪಾದನೆಯಾಗುತ್ತಿತ್ತು, ಆ ಪಾಕೆಟ್ ಮೇಲೆ ಎಂ.ಎಸ್.ಐ.ಎಲ್, ಗುಲ್ಬರ್ಗಾ ಎಂದು ಪ್ರಿಂಟ್ ಆಗಿತ್ತು. ಅಲ್ಲಿಗೆ 17-9-1998 ರಂದು ಜಿಲ್ಲಾಧಿಕಾರಿಯವರು ಹೋಗಿ ಧಾಳಿ ಮಾಡಿ ಸುಮಾರು 35 ಸಾವಿರ ಲೀಟರ್ ಸಾರಾಯಿಯನ್ನು ವಶಪಡಿಸಿಕೊಂಡಿದ್ದಾರೆ. ಇದಲ್ಲದೇ ಒಂದು ಜೀಪ್, ಒಂದು ವ್ಯಾನ್, ಒಂದು ಜನರೇಟರ್ ಮತ್ತು ಪ್ಯಾಕೆಟ್ ಮಾಡುವ ಯಂತ್ರವನ್ನು ವಶಪಡಿಸಿಕೊಂಡು ಅದನ್ನು ಕಛೇರಿಯಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಯಾರನ್ನೂ ಬಂಧಿಸಿಲ್ಲ. ನಾನು ಇದರ ಬಗ್ಗೆ ಜಿಲ್ಲಾಧಿಕಾರಿಯವರನ್ನು ಕೇಳಿದರೆ ಅವರು ಉತ್ತರಿಸುವುದಕ್ಕೆ ತಯಾರಿಲ್ಲ. ಯಾರ ಒತ್ತಡದಿಂದ ಹೇಳುತ್ತಿಲ್ಲವೋ ಅದು ಅವರಿಗೆ ಗೊತ್ತು. ಒಟ್ಟಿನಲ್ಲಿ ಪ್ಯಾಕೆಟ್ ಮೇಲೆ ಎಂ.ಎಸ್.ಐ.ಎಲ್, ಗುಲ್ಬರ್ಗ ಎಂದು ಪ್ರಿಂಟ್ ಇದೆ. ನಾನು ಏಕೆ ಹೇಳುತ್ತಿದ್ದೇನೆಂದರೆ ತಾವು ಬಹಳ ಡಿಫೆಂಡ್ ಮಾಡುತ್ತಿದ್ದೀರಿ. ಇಂದು ಮರ್ಡರ್ ಕೇಸ್ ಪ್ರೂವ್ ಆಗಿದೆ, ಸುಪಾರಿ ಕೊಲೆ ಕೇಸ್ ಪ್ರೂವ್ ಆಗಿದೆ, ಸಾಕಷ್ಟು ಜನರು ಗುಲ್ಬರ್ಗಾದಿಂದ ಮನೆ ಬಿಟ್ಟು ಹೋಗುತ್ತಿದ್ದಾರೆ, ಆದರಲ್ಲೂ ನಾವು ಬಡವರಿಗೆ ಅನ್ಯಾಯ ಮತ್ತು ಅತ್ಯಾಚಾರಗಳಾಗುತ್ತಿವೆಯೆಂದು ಚಳುವಳಿಯನ್ನು ಮಾಡಿದೆವು. ತಾವು ಅವರಿಗೆ ಡಿಫೆಂಡ್ ಮಾಡುವುದಕ್ಕೆ ಹೋಗುತ್ತೀರಿ. ಮಹಾರಾಷ್ಟ್ರ ಪೋಲೀಸರು ಅಲ್ಲಿ ಪ್ರೂವ್ ಮಾಡುತ್ತಿದ್ದಾರೆ. ಅಲ್ಲಿ ನಮ್ಮ ಪಾರ್ಟಿಯ ಪಾರ್ಲಿಮೆಂಟರಿ ಅಭ್ಯರ್ಥಿಗೆ ಮರ್ಡರ್ ಮಾಡುತ್ತೇವೆಂದು ಸುಪಾರಿಯವರು ಫೋನ್ ಮಾಡಿದ್ದಾರೆ. ಆ ಅಭ್ಯರ್ಥಿ ನಮ್ಮ ಪಾರ್ಟಿಯ ಉಪಾಧ್ಯಕ್ಷರಾಗಿದ್ದಾರೆ. ಇದರ ಬಗ್ಗೆ ಪೋಲೀಸ್ ಕಂಪ್ಲೆಂಟ್ ಕೊಟ್ಟು ಪ್ರೂವ್ ಮಾಡಿದರೂ ಕೂಡ ಯಾರ ಮೇಲೂ ಇಂದು ಕಂಟ್ರೋಲ್ ಇಲ್ಲ. ನೀವು ಅವರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಕು. ಬೀದರ್ ಘಟನೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ವರದಿಯಲ್ಲಿ ಯಾರ್ಯಾರ ಹೆಸರಿದೆ ಅವರನ್ನು ಮೊದಲು ನೀವು ಪ್ರಪ್ರಥಮವಾಗಿ ನೀವು ಬಂಧಿಸಬೇಕು. ಈಗಾಗಲೇ ನಾಲ್ಕು ತಿಂಗಳಾದರೂ ಯಾರೂ ಕೂಡ ಅವರನ್ನು ಬಂಧಿಸುತ್ತಿಲ್ಲ. ನಾನು ಅಬ್ಕಾರಿ ಲಾಬಿ ವಿರುದ್ಧವಾಗಿ ಹೇಳುತ್ತಿದ್ದೇನೆ. ನಮಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಎಸ್.ಪಿ. ಯವರಿಗೆ ಎಲ್ಲಾ ಗೊತ್ತಿದೆ. ನನಗೆ ಅವರು ಮೂವರು ಪೋಲಿಸ್ ಕಾನ್ಸ್‌ಟೆಬಲ್‌ಗಳನ್ನು ರಕ್ಷಣೆಯ ಸಲುವಾಗಿ ಕೊಟ್ಟಿದ್ದರು. ಆದರೆ ನಾನು ಬೇಡವೆಂದೆ. ಏಕೆಂದರೆ ನಾನೇ ಪಾರ್ಟಿಯ ನಾಯಕನಾಗಿ ನಾನೇ ಪೋಲಿಸ್ ರಕ್ಷಣೆಯನ್ನು ತೆಗೆದುಕೊಂಡರೆ ನಮ್ಮ ಜನ ಮತ್ತು ನನಗೆ ಮತದಾನ ಮಾಡುವ ಜನ ಭಯ ಪಡುತ್ತಾರೆ. ಏಕೆಂದರೆ ನಾಯಕರೇ ಭಯಕ್ಕೊಳಗಾಗಿ ರಕ್ಷಣೆಯಲ್ಲಿ ಹೋದರೆ ನಾವು ಹೇಗೆ ಅವರನ್ನು ಹಿಂಬಾಲಿಸುವುದು ಎಂದು ಜನರು ಭಯಭೀತಿಗೊಳಗಾಗುತ್ತಾರೆಯಾದ ಕಾರಣ ನನಗೆ ಪೋಲೀಸ್ ರಕ್ಷಣೆ ಬೇಡ ನಾನು ಹಾಗೆಯೇ ತಿರುಗುತ್ತೇನೆ ಎಂದು ಎಸ್.ಪಿ.ಯವರಿಗೆ ಹೇಳಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸರ್ಕಾರ ಅಂಥ ಜನರನ್ನು ಇವೊತ್ತಿನವರೆಗೂ ಬಂಧಿಸಿ ಕಂಟ್ರೋಲ್‌ನಲ್ಲಿಟ್ಟುಕೊಂಡಿಲ್ಲ. ಯಾರು ಇವೊತ್ತು ಅಬ್ಕಾರಿ ಇಲಾಖೆ ಅನುಮತಿ ಪಡೆದು ಕಂಟ್ರಾಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ ಅವರ ವಿರುದ್ಧವಾಗಿ ನಾನು ಏನನ್ನೂ ಹೇಳುತ್ತಿಲ್ಲ. ಇವೊತ್ತು ಗೂಂಡಾಗಿರಿಯ ಪಡೆ ಗುಲ್ಬರ್ಗಾದಿಂದ

ಬೀದರ್‌ಗೆ ಶಿಫ್ಟ್ ಆಗಿದೆ. ಆ ಪಡೆಯ 40 ಜೀಪ್‌ಗಳ ಮೇಲೆ "ಡೂ ಆರ್ ಡೈ" ಎಂದು ಕೆಂಪು ಬಣ್ಣದಿಂದ ಬರೆದಿದ್ದಾರೆ. ವಿರೋಧ ಪಕ್ಷದ ನಾಯಕರಿಗೂ ಇದು ಗೊತ್ತಿದೆ.

ಅಧ್ಯಕ್ಷರು : ಹಾಗಾದರೆ ಖರ್ಗೆಯವರು ಮಾತನಾಡುವಾಗ ಅದನ್ನು ಹೇಳಲೇ ಇಲ್ಲವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಏನು ಸರ್ಕಾರದ ವಿರುದ್ಧವಾಗಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೋ ಆ ಚಾರ್ಜ್‌ನಲ್ಲಿಯೇ ಇವೆಲ್ಲಾ ಒಳಗೊಂಡಿದೆ. ಸುಪಾರಿ ಕೊಲೆ ಸಂಬಂಧದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಹೇಳಿದ್ದೇವೆ. ಹಶ್ಮಿಯವರು ಮಾತನಾಡುತ್ತಾ ಸಿಂಧನಗೆರೆ ಗ್ರಾಮ, ಹುಮ್ನಾಬಾದ್ ತಾಲ್ಲೂಕಿನಲ್ಲಿ ಸಾರಾಯಿ ಪ್ಯಾಕೆಟ್ ಮೇಲೆ ಎಂ.ಎಸ್.ಐ.ಎಲ್., ಗುಲ್ಬರ್ಗಾ ಎಂದು ಏನಿತ್ತು ಅದನ್ನು ಡಿ.ಸಿ.ಯವರು ಸೀಜ್ ಮಾಡಿದ್ದಾರೆ ಎಂದು ಹೇಳಿದರೂ ಕೂಡ ಸರ್ಕಾರದವರು ಆ ಉತ್ಪಾದಕರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲವೆಂದರೆ ನಾವೇನು ಮಾಡುವುದು? ಹಿಂದೆ ಈ ಸದನದಲ್ಲೂ ಕೂಡ ಪ್ರಸ್ತಾಪವಾಗಿದೆ. ಅದಕ್ಕೆ ನೀವು ಡಿಫೆಂಡ್ ಕೂಡ ಮಾಡಿಕೊಂಡಿರಿ. ಈ ರೀತಿಯಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು, ಹೀಗೆ ಎಲ್ಲರೂ ಡಿಫೆಂಡ್ ಮಾಡಿಕೊಂಡು ಹೋದರೆ ಹೇಗೆ? ಹೊರಗಿನವರು ಎಷ್ಟು ಜನ ಎವಿಡೆನ್ಸ್ ಕೊಡುವುದಕ್ಕೆ ಬರುತ್ತಾರೆ? ಹಶ್ಮಿಯವರಿಗೆ ಕೊಟ್ಟ ಪೋಲೀಸ್ ರಕ್ಷಣೆಯನ್ನು ತಿರಸ್ಕರಿಸಿದರು. ಏಕೆಂದರೆ ಇವರೇ ಪೊಲೀಸ್ ರಕ್ಷಣೆ ಪಡೆದರೆ ಬೆಂಬಲಿಗರು ಧೈರ್ಯವಾಗಿ ಇವರನ್ನು ಹಿಂಬಾಲಿಸುವುದಿಲ್ಲ. ಆದುದರಿಂದ ಸರ್ಕಾರ ಎಲ್ಲಿ ಇಂಪಾರ್ಶಿಯಲ್ ಆಗಿ ಕ್ರಮ ತಗೆದುಕೊಳ್ಳಬೇಕೋ ಆ ಕೆಲಸವನ್ನೂ ಕೂಡ ಮಾಡದೇ ಹೋದರೆ ಹೇಗೆ? ಇದರ ಬಗ್ಗೆ ನಾವು ಎಷ್ಟು ಬಾರಿ ಹೇಳುವುದು.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ : ಅಧ್ಯಕ್ಷರೆ, ಬೀದರ್‌ನಲ್ಲಿ ಮೂರ್‍ನಾಲ್ಕು ಮರ್ಡರ್ ಆಗಿದೆ. ಆದರೆ ಕೊಲಿ ಮಾಡಿದವರು ಪತ್ತೆಯೇ ಇಲ್ಲ. ಕಾನೂನು ಬಾಹಿರವಾಗಿ ವಿಸ್ಕಿ, ಸಾರಾಯಿ ಮಾರುವವರು ಇದ್ದಾರೆ. ಗೂಂಡಾಗಿರಿ ಪಡೆಯವರು ಜೀಪ್‌ಗಳಲ್ಲಿ ಬಂದು ಯಾರು ಸಿಗುತ್ತಾರೋ ಅವರಿಗೇ ಹೊಡೆದು ಹೋಗುತ್ತಾರೆ. ಪಾಪ ತಪ್ಪು ಮಾಡದ ಆ ಜನರು ನನ್ನ ಬಳಿ ಬಂದು ಹೇಳುತ್ತಾರೆ. ನಾವೇನೂ ಕಾನೂನು ಬಾಹಿರವಾಗಿ ಸಾರಾಯಿ ಮಾರುವುದಿಲ್ಲ. ಆದರೂ ಕೆಲವು ಜನರು ಬಂದು ಹೊಡೆದು ಹೋಗಿದ್ದಾರೆ, ನಿಮಗೂ ಗೊತ್ತು ನಾವು ಕಾನೂನುಬಾಹಿರವಾಗಿ ಸಾರಾಯಿ ಮಾರುವವರಲ್ಲವೆಂದು. ಒಬ್ಬ ಅಲ್ಲಿ ಪೂಜೆಯನ್ನು ಮನೆಮನೆಗೆ ಹೋಗಿ ಮಾಡುವ ಸ್ವಾಮಿಯಿದ್ದಾನೆ. ಅವನ ಮಕ್ಕಳಿಗೆ ಈ ಗೂಂಡಾಗಿರಿ ಜನ ಹೊಡೆದಿದ್ದಾರೆ. ಇದರ ಬಗ್ಗೆ ಅವರು ನನಗೆ ಹೇಳಿದಾಗ ಇದರ ಬಗ್ಗೆ ಪೋಲಿಸ್ ಕಂಪ್ಲೆಂಟ್ ಕೊಟ್ಟೆ. ಆದರೆ ಯಾರು ಕಾರಣಭೂತರಾಗಿದ್ದಾರೆ ಅವರನ್ನು ಯಾರೂ ಇಂದು ಬಂಧಿಸುತ್ತಿಲ್ಲ. ಇದಕ್ಕೆ ಕಾರಣ ಮೇಲಿನಿಂದ ಒತ್ತಡವಿರುವುದೇ ಆಗಿದೆ. ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಯಾರನ್ನಾದರೂ ಹಿಡಿಯಲಿಕ್ಕೆ ಹೋದರೆ, ನೀನು ವರ್ಗವಾಗುತ್ತೀಯೇ ಎಂದು ಹೆದರಿಸುತ್ತಾರೆ. ಈ ರೀತಿಯ ವಾರ್ನಿಂಗ್ ಕೊಡುತ್ತಾರೆ. ಇಷ್ಟೇ ಅಲ್ಲದೇ ಇಲ್ಲಿಂದ ದೂರವಾಣಿ ಮೂಲಕ ಬಂಧಿಸದಿರುವಂತೆ ತಿಳಿಸಲಾಗುತ್ತದೆ. ಆದರೆ ನಾನು ನನ್ನ ಊರಿನ ಜನರಿಗೆ ಕಾನೂನುಬಾಹಿರವಾಗಿ ಕೆಲಸ ಮಾಡಬೇಡಿ ಎಂದಿದ್ದೇನೆ. ಆದರೆ ಯಾರಾದರೂ ನಿಮಗೆ ಅಪಮಾನ ಮಾಡುವುದಕ್ಕೆ ಪ್ರಯತ್ನಪಟ್ಟರೆ ಅವರನ್ನು ಬಿಡಬೇಡಿ ಎಂದಿದ್ದೇನೆ.

ಈಗ ನಮ್ಮ ಊರಿನಲ್ಲಿ ಜನರು ಮತ್ತು ನಮ್ಮ ಕಾರ್ಯಕರ್ತರು ಅಲ್ಲಿಯ ಮುರ್ನಾಲ್ಕು ಎಕ್ಸೈಸ್ ಕಂಟ್ರಾಕ್ಟರ್ಸ್ ವಿರುದ್ಧ ಅವರ ಗುಂಡಾಗಿರಿ ವಿರುದ್ಧ ಹೋರಾಡಲು ಸಂಘಟಿತರಾಗಿ ತಯಾರಾಗಿದ್ದಾರೆ. ಇವರನ್ನು ಕಂಟ್ರೋಲ್ ಮಾಡುವಂಥ ಕೆಲಸವಾಗಬೇಕು. ಇವರನ್ನು ಏಕೆ ಕಂಟ್ರೋಲ್ ಮಾಡಬೇಕೆಂದರೆ ಇವರ ಬಗ್ಗೆ ಜನರಿಗೆ ಭಯವಿದೆ, ಮತ್ತು ತೊಂದರೆಯನ್ನು ಕೊಡುತ್ತಿದ್ದಾರೆ. ಆದುದರಿಂದ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಅನ್ಯಾಯ, ಅತ್ಯಾಚಾರಗಳು ಆಗುತ್ತಿವೆ ಎಂಬ ಬಗ್ಗೆ ಸಾಕಷ್ಟು ಪಟ್ಟಿ ನನ್ನ ಬಳಿ ಇದೆ. ಗುಲ್ಬರ್ಗಾದಲ್ಲಿ ಯಾವ್ಯಾವ ಊರುಗಳಲ್ಲಿ ಏನೇನು ಆಗಿವೆ ಎಂಬ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ತಮ್ಮಲ್ಲೂ ಕೂಡ ಪಟ್ಟಿ ಇದೆ, ತಮಗೂ ಗೊತ್ತಿದೆ. ಅದನ್ನು ತಾವು ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ : ಆ ಪಟ್ಟಿಯಲ್ಲಿರುವ ಹೆಸರುಗಳನ್ನು ಹೇಳಿ, ಅದು ರೆಕಾರ್ಡ್‌ಗೆ ಹೋಗಲಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಗುಲ್ಬರ್ಗಾದಲ್ಲಿ ಅಜ್ಜಲ್‌ಪುರ ತಾಲ್ಲೂಕು ಗಾಣಗಪುರ ಸ್ಟೇಷನ್ ಇಲ್ಲಿಗೆ ಮನೋಹರ್ ಸಿಂಗ್ ಎನ್ನುವವರನ್ನು ಹೊಡೆದ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಇದನ್ನು ಪತ್ತೆ ಮಾಡಿಲ್ಲ, ಯಾರನ್ನು ಹಿಡಿದಿಲ್ಲ. ಇಂತಹ ವಾತಾವರಣ ಗುಲ್ಬರ್ಗಾ ಜಿಲ್ಲೆಯಲ್ಲಿ ಆಗಿದೆ. ಇಲ್ಲಿ ಯಾರ್‍ಯಾರ ಮರ್ಡರ್ ಆಗಿದೆ, ಯಾರ್‍ಯಾರನ್ನು ಹೊಡೆದಿದ್ದಾರೆ, ಅವರು ಕಂಪ್ಲೆಂಟ್ ಕೊಡುವುದಕ್ಕೆ ರೆಡಿ ಇಲ್ಲ, ಈ ರೀತಿ ಏನಾದರೂ ಕಂಪ್ಲೇಂಟ್ ಕೊಟ್ಟರೆ ಕೊಟ್ಟವನನ್ನೇ ಹೊಡೆಯುತ್ತಾರೆ, ಇದು ಓಪನ್‌ಆಗಿ ನಡೆಯುತ್ತಿದೆ. ಸನ್ಮಾನ್ಯ ಗೃಹ ಸಚಿವರೆ ತಾವು ಪೆನ್ ತೆಗೆದುಕೊಂಡು ಬರೆಯಬೇಡಿ ನಮ್ಮ ಜೀವ ಹೋಗಿ ಬಿಡುತ್ತದೆ. ತಮ್ಮ ಮೇಲೆ ವಿಶ್ವಾಸ ಇಟ್ಟೆವು ಎಂದರೆ ಒಂದು ದಿವಸ ನಮ್ಮ ಕೊಲೆ ಆಗಿ ಹೋಗುತ್ತದೆ. ಇಲ್ಲಿ ಸನ್ಮಾನ್ಯ ಕಾನೂನು ಸಚಿವರು ಇದ್ದಾರೆ. ತಾವು ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಿ, ನಾನು ನಿಮ್ಮ ಮೇಲೆ ಚಾರ್ಜ್ ಮಾಡುತ್ತಿಲ್ಲ. ಇಂತಹ ಜನರು ಯಾವುದರ ಮೂವ್‌ಮೆಂಟ್‌ಗೆ ಸೇರಿ ಈ ಕೆಟ್ಟ ಕೆಲಸಗಳನ್ನು ಮಾಡುವಂತಹ ಜನರು ಇದ್ದಾರೆ. ಅವರ ಮೇಲೆ ತಾವು ಆ್ಯಕ್ಷನ್ ತೆಗೆದುಕೊಳ್ಳಿ ಎಂದು ನಾನು ಓಪನ್ ಆಗಿ ಹೇಳುತ್ತಿದ್ದೇನೆ. ಅವರನ್ನು ಕಂಟ್ರೋಲ್ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಕಾನೂನು ಸಚಿವರ ಮೇಲೆ ಚಾರ್ಜ್ ಇಲ್ಲ, ನೀವು ಎಲ್ಲಾ ಇದ್ದು ಹೀಗೆ ಆಗುತ್ತಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ನಾನು ಹೇಳುವಂಥಾದ್ದು ಪರಿಣಾಮ ಏನು ಸಿಕ್ಕಿದೆ, ಏನು ಪರಿಣಾಮವಾಗುತ್ತಿದೆ? x x x ನಾನು ಇದನ್ನು ಕಂಟ್ರೋಲ್ ಮಾಡಿ ಎಂದು ಹೇಳುತ್ತಿದ್ದೇನೆ. ನಾನು ವಿಧಾನಸಭಾ ಸದಸ್ಯನಾಗಿ ನಮ್ಮ ಪಾರ್ಟಿ ವರ್ಕರ್ಸ್ ಮೇಲೆ ಹಲ್ಲೆಯಾಗಿದೆ ಎಂದ ಮೇಲೆ ನಾನು ಇವರ ಬಗ್ಗೆ ಹೇಳುವುದು ನನ್ನ ಕರ್ತವ್ಯವಾಗಿದೆ.

---

x x x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

MR. SPEAKER : It should not become part of the proceedings. ಅವರ ಹೆಸರು ಎಫ್.ಐ.ಆರ್.ನಲ್ಲಿ ಇದೆಯಾ?

SRI M.C. NANAIAH : So far as Backward Classes Minister x x x is concerned, ಅವರ ಹೆಸರು ಎಫ್.ಐ.ಆರ್.ನಲ್ಲಿ ಇಲ್ಲ. Kindly bear it in mind.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಮಹಾರಾಷ್ಟ್ರದ ಪೋಲೀಸರು ಗುಲ್ಬರ್ಗಾದಲ್ಲಿ ಇನ್‌ವೆಸ್ಟಿಗೇಷನ್ ನಡೆಸುತ್ತಿದ್ದಾರೆಂದು ನಾನು ಹೇಳುತ್ತಿದ್ದೇನೆ.

SRI M.C. NANAIAH : Let it not go on record. ಇವರು ಬಂದಂತಹ ಸಂದರ್ಭದಲ್ಲಿ ಎಲ್ಲಾ ಪತ್ರಿಕೆಗಳಲ್ಲೂ ಬಂತು. ಇದು ಪತ್ರಿಕೆಗಳಲ್ಲಿ ಬಂದ ಮೇಲೆ ನಾನು ಮತ್ತು ಗೃಹ ಸಚಿವರು ಸೇರಿ ಅಧಿಕಾರಿಗಳನ್ನು ಕರೆಸಿ ಎಫ್.ಐ.ಆರ್.ಅನ್ನು ಪೂರ್ತಿಯಾಗಿ ನೋಡಿದ್ದೇವೆ. ನಾವು ಅಲ್ಲಿರುವಂತಹ ಮತ್ತು ಇಲ್ಲಿರುವಂತಹ ಎಫ್.ಐ.ಆರ್‌ಗಳನ್ನು ತರಿಸಿ ನೋಡಿದ್ದೇವೆ. ಮಹಾರಾಷ್ಟ್ರದಲ್ಲಿ ಒಂದು ಎಫ್.ಐ.ಆರ್ ಆಗಿದೆ, ಇಲ್ಲಿ ಒಂದು ಎಫ್.ಐ.ಆರ್ ಆಗಿದೆ. ಎರಡು ಚಾರ್ಜ್ ಸೀಟ್ ಫೈಲ್ ಆಗಿದೆ. A charge-sheet has been filed in Sholapur court and a charge-sheet has been filed here now. ಇದು ಎರಡು ಕೇಸ್ ಇದೆ. ಎರಡು ಚಾರ್ಜ್ ಶೀಟ್ ಫೈಲ್ ಆಗಿದೆ. What should be done? The Legal Department is looking into the matter. So far as Backward Classes Minister is there, his name is not there in the F.I.R.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಮಾನ್ಯ ಅಧ್ಯಕ್ಷರೆ, ನಯರುಸೀನ್ ದನ್ನೂರು, ರಿವರ್ ಪೊಲೀಸ್ ಸ್ಟೇಷನ್, ಅಫ್ಜಲ್‌ಪುರ ತಾಲ್ಲೂಕು, ಇವರ ಮರ್ಡರ್ ಆಗಿದೆ. ಇದು ಕಂಪ್ಲೇಂಟ್ ಕೊಟ್ಟು ಕೇಸ್ ಬುಕ್ ಆಗಿದೆ. ನಾನು ವ್ಯಕ್ತಿಯ ಹೆಸರನ್ನು ಮತ್ತು ಪೊಲೀಸ್ ಸ್ಟೇಷನ್ ಹೆಸರನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಇನ್ನೊಂದು ಮೊಗಲ್ ಬೈ ಮಿಠಲ್‌ವಾಲ, ಅಮೀನ್ ಬೈ, ಅಲಿಯಾಸ್ ಮಂಗ್ಲು ಎಂದು ಅಡ್ಡ ಹೆಸರು ಇದೆ, ಇವನು ನಾಪತ್ತೆಯಾಗಿದ್ದಾನೆ.

ಅಧ್ಯಕ್ಷರು : ಅವರ ಮರ್ಡರ್ ಆಗಿರಬಹುದು, ಕೇಸ್ ರಿಜಿಸ್ಟರ್ ಆಗಿರಬಹುದು ಇದೆಲ್ಲಾ ನಿಜ. ಆದರೆ ಎಫ್.ಐ.ಆರ್.ನಲ್ಲಿ ಹೇಳಿರುವಂತಹ ಹೆಸರುಗಳಿಲ್ಲ. ಆ ಹೆಸರುಗಳು ಇವೆ ಎನ್ನುವಂತಹ ಪ್ರೂವೇನಾದರೂ ನಿಮ್ಮ ಬಳಿ ಇದ್ದರೆ ಕೊಡಿ.

ಶ್ರೀ ಎಂ.ಸಿ. ನಾಣಯ್ಯ ; ಈ ಸದನದಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಬಗ್ಗೆ, ಮರ್ಡರ್ ಆಗಿರುವುದರ ಬಗ್ಗೆ, ರಾಜಕಾರಣಿಗಳ ಕೈವಾಡದ ಬಗ್ಗೆ, ಹಸ್ತಕ್ಷೇಪದ ಬಗ್ಗೆ ನೀವು ಹೇಳುವಂತಹ ಅಧಿಕಾರವಿದೆ. ಅದನ್ನು ಯಾರಿಂದಲೂ ಮೊಟಕು ಮಾಡುವಂಥಾದ್ದಕ್ಕೆ ಆಗುವುದಿಲ್ಲ. ಸರ್ಕಾರ ಈ ಭಾಗದಲ್ಲಿ ನಿಂತು ಅಂತಹ ಕ್ರಮಗಳಾಗಿದ್ದರೆ, ಎಲ್ಲಾದರೂ ಅಂತಹ ಎಫ್.ಐ.ಆರ್‌ಗಳು ಫೈಲ್ ಆಗಿದ್ದರೆ, ಅದರಲ್ಲಿ ಆ ರೀತಿಯ ಹೆಸರುಗಳು ಇದ್ದರೆ ಹೇಳಿ, ನಾನು ಅಧಿಕೃತವಾಗಿ ಹೇಳುತ್ತೇನೆ. ತಾವು

x x x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

TP44 - 156

ಹೇಳಿದಂತೆ ಆ ಮಂತ್ರಿಯವರ ಹೆಸರು ಇಲ್ಲ, ಅವರ ಮೇಲೆ ಯಾವುದೇ ಆರೋಪಗಳು ಇಲ್ಲ. ಈ ರೀತಿಯ ದಾಖಲೆಗಳು ನಿಮ್ಮ ಹತ್ತಿರ ಏನಾದರೂ ಇದ್ದರೆ ನಮಗೆ ಕೊಡಿ us at the monent, so far as records of the Government are concerned, there in nothing against that Minister.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಆ ದಾಖಲೆಯನ್ನು ನಾಳೆ ತಂದು ಕೊಡುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ತಾವು ನಾಳೆ ರೆಕಾರ್ಡ್ ತಂದು ಕೊಡಿ. ಮಾನ್ಯ ಸದಸ್ಯರು ಮಂತ್ರಿಯವರ ಹೆಸರು ಎಫ್.ಐ.ಆರ್.ನಲ್ಲಿದೆ ಎಂದು ಹೇಳಿರುವಂಥಾದ್ದು ರೆಕಾರ್ಡ್‌ಗೆ ಹೋಗುವುದಿಲ್ಲ ಮತ್ತು ಪತ್ರಿಕೆಯವರಿಗೂ ಕೂಡ ಇದನ್ನು ಹೇಳುತ್ತಿದ್ದೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ನಾನೇ ಸ್ವತಃ ರಜುಂಟೌನ್ ಪೋಲೀಸ್ ಸ್ಟೇಷನ್‌ಗೆ ಬೀದರ್‌ನಲ್ಲಿ ಯಾರ್‍ಯಾರಿಗೆ ಹೊಡೆದಿದ್ದಾರೆ ಎಂಬ ಬಗ್ಗೆ ಕಂಪ್ಲೇಂಟ್ ಮಾಡಿದೆ. ಅಲ್ಲಿ ರೋಡ್ ಮೇಲೆ ಹೋಗುವವರನ್ನು ಹಿಡಿದಿದ್ದಾರೆ. ಇದಕ್ಕೆ ಮುಖ್ಯವಾಗಿ ಕಾರಣಕರ್ತರು ಯಾರಿದ್ದಾರೆ, ಅವರ ಹೆಸರನ್ನು ಕೊಟ್ಟಿದ್ದೇನೆ, ಅವರನ್ನು ಇನ್ನು ಹಿಡಿದಿಲ್ಲ. ಈ ರೀತಿ ರೋಡು ಮೇಲೆ ಹೋಗುವವರನ್ನು ಪೋಲೀಸ್‌ನವರು ಹಿಡಿಯುತ್ತಿದ್ದಾರೆ. ನಾನು ಎರಡು ಮೂರು ಹೆಸರುಗಳನ್ನು ಕೊಟ್ಟಿದ್ದೇನೆ. ಅವರು ಆಫೀಸ್‌ನ ಚೇಂಬರ್‌ನಲ್ಲಿ, ಗೋದಾಮ್‌ಗಳಲ್ಲಿ ಇದ್ದಾರೆಂದರೂ ಹಿಡಿಯುವುದಕ್ಕೆ ಇವರು ರೆಡಿ ಇಲ್ಲ. ನಾನು ಈ ಬಗ್ಗೆ ಸ್ವತಃ ಕಂಪ್ಲೇಂಟ್ ಕೊಟ್ಟಿದ್ದೇನೆ. ಇದನ್ನು ನಿಯಂತ್ರಿಸುವಂತಹ ವ್ಯವಸ್ಥೆಯಾಗಬೇಕು. ಗುಲ್ಬರ್ಗಾದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ತಾವು ನೋಡುತ್ತಿದ್ದೀರಿ. ನಮ್ಮ ವರ್ಕರ್ಸ್ ಮೇಲೆ ಲೀಡರ್ಸ್ ಮೇಲೆ ಅತ್ಯಾಚಾರಗಳು, ಅನ್ಯಾಯಗಳು ನಡೆಯುತ್ತಿವೆ, ಅವರಿಗೆ ರಕ್ಷಣೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಇದನ್ನು ಸರ್ಕಾರ ಕೊಡುತ್ತದೋ, ಪೊಲೀಸ್‌ನವರು ಕೊಡುತ್ತಾರೋ ಗೊತ್ತಿಲ್ಲ. ಅಲ್ಲಿ ಪೋಲೀಸ್‌ನವರಿಂದ ನಮಗೆ ಯಾವ ಸಹಕಾರವೂ ಸಿಕ್ಕಿಲ್ಲ; ಆದರೆ ಅದರಿಂದ ಬೇರೆ ಬೇರೆ ಪರಿಣಾಮಗಳಾಗುತ್ತಿವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ಬೀದರ್‌ನ ಒಂದೇ ತಾಲ್ಲೂಕುನಲ್ಲಿ ನಕ್ಸಲೀಯರ ಡಾಮಿನೇಷನ್ ಆಯಿತು, ಯಾರ ಅತ್ಯಾಚಾರಕ್ಕೆ ಈ ಡಾಮಿನೇಷನ್ ಆಯಿತು? ಬೀದರ್‌ನಲ್ಲಿ ಏಕೆ ಆಗಲಿಲ್ಲ? ಬಸವಕಲ್ಯಾಣದಲ್ಲಿ ಆಗಿಲ್ಲ? ಹುಮ್ನಬಾದ್‌ನಲ್ಲಿ ಇಲ್ಲ, ಭಾಲ್ಕಿಯಲ್ಲಿ ಇಲ್ಲ. ಒಂದು ತಾಲ್ಲೂಕಿನಲ್ಲಿ ಮಾತ್ರ ನಕ್ಸಲಿಯರ ಡಾಮಿನೇಷನ್ ಏಕೆ ಆಯಿತು? ಅಲ್ಲಿನ ಅತ್ಯಾಚಾರ, ಅನ್ಯಾಗಳಿಗೆ ಜನರೇ ವಿರೋಧವಾಗಿ ಪರಿವರ್ತನೆಯಾಗಿ ಅವರ ಸಹಕಾರ ತೆಗೆದುಕೊಂಡು ಇಂತಹ ಮೂವ್‌ಮೆಂಟ್ಸ್ ನಡೆಯುತ್ತಿವೆ. ಯಾವ ರಾಜ ಮಹಾರಾಜರ ಕಾಲದಲ್ಲೂ ಇದು ನಡೆದಿಲ್ಲ. ಇವತ್ತು ಅಧಿಕಾರ ಇರುತ್ತದೆ, ನಾಳೆ ಹೋಗುತ್ತದೆ. ಆದರೆ ಅತ್ಯಾಚಾರ, ಅನ್ಯಾಯಗಳು ಆಗಬಾರದು ಎಂದು ನಾನು ಹೇಳುತ್ತಿದ್ದೇನೆ. ಇನ್ನು ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಬಗ್ಗೆ ನಾನು 3-4 ವರ್ಷಗಳಿಂದಲೂ ಹೇಳುತ್ತಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರು 15 ಅಂಶಗಳ ಕಾರ್ಯಕ್ರಮವನ್ನು ಕೊಟ್ಟರು. ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಚೇರ್ಮನ್ ಆಗಿದ್ದಾರೆ. ಸ್ಟೇಟ್‌ನಲ್ಲಿ ರಿವ್ಯೂ ಮಾಡಬೇಕೆಂದರೆ ಮುಖ್ಯಮಂತ್ರಿಯವರು ಚೇರ್ಮನ್ ಆಗಿರುತ್ತಾರೆ. ತಾವು ಇದರ ಬಗ್ಗೆ ಮೀಟಿಂಗ್ ಏನಾದರೂ

ಮಾಡಿದ್ದೀರಾ? ಇದರ ಬಗ್ಗೆ ನಾನು ಮುಖ್ಯಮಂತ್ರಿಯವರ ಬಳಿ ಮೆಮೊರ್ಯಾಂಡಮ್ ತೆಗೆದುಕೊಂಡು ಹೋದರೆ ಅವರು ಇದರ ಕನ್‌ಸರ್ನ್ಡ್ ಮಿನಿಸ್ಟರ್ ಇದ್ದಾರೆ, ಅವರಿಗೆ ಹೇಳುತ್ತೇನೆಂದು ಅವರ ಮುಂದೆ ಈ ಮೆಮೊರ್ಯಾಂಡಮ್ ಕೊಟ್ಟಿದ್ದಾರೆ. ಆದರೆ ಅವರು ಯಾರೂ ಅದನ್ನು ನೋಡಿಲ್ಲ, ಮತ್ತೆ ರೋಷನ್ ಬೇಗ್‌ರವರಿಗೂ ಹೇಳಿದರು. ಮತ್ತೆ ಮಾನ್ಯ ಮೊಯಿದ್ದೀನ್ ರವರಿಗೆ ನೀವು ಒಂದು ಸಾರಿ ಮೀಟಿಂಗ್ ಮಾಡಿ ಎಂದು ಹೇಳಿದ್ದಾರೆ. ನಾವು ಇಲ್ ಲೀಗಲ್ ಆಗಿ ಅಥವಾ ಹೊಸದಾಗಿ ಹಣ ಕೊಡಿ ಎಂದು ಹೇಳುವುದಿಲ್ಲ. ಈಗ ಕೇಂದ್ರಸರ್ಕಾರದಿಂದ ಏನು ಹಣ ಬರುತ್ತಿದೆ, ಅದನ್ನು ಲ್ಯಾಫ್ಸ್ ಮಾಡಬೇಡಿ ಎಂದು ಹೇಳುತ್ತಿದ್ದೇವೆ, ಅದನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಯಾರು ಸಿರೀಯಸ್ ಆಗಿ ತೆಗೆದುಕೊಂಡಿಲ್ಲ. ನನಗೆ ಇದರ ಬಗ್ಗೆ ನೋವು ಇದೆ. ನಮ್ಮ ಸಮಾಜದ ಸಲುವಾಗಿ ಈ ಸಮಾಜದ ಜನರಿಗೆ ತೊಂದರೆಯಾಗುತ್ತದೆಂಬ ಬಗ್ಗೆ ಯಾರಾದರೂ ಮಿನಿಸ್ಟರ್‌ರವರು ಸಿರಿಯಸ್ಸಾಗಿ ಇರಬೇಕು. ಜಿಲ್ಲಾ ಸಚಿವರು ಇಷ್ಟು ಜನರು ಇದ್ದಾರೆ. ಈ 15 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಯಾರೂ ಮೀಟಿಂಗ್ ಮಾಡಿಲ್ಲ. ನಾನು ಈ ಸಮಾಜದ ಸಲುವಾಗಿ ಮಾತ್ರ ಹೇಳುತ್ತಿಲ್ಲ. ನಾನು ಇದಕ್ಕಿಂತ ಮುಂಚೆ ಎಸ್‌ಸಿ, ಎಸ್ ಟಿ. ಬಗ್ಗೆ ಕೂಡ ಮಾತನಾಡಿದೆ. ಈ ಬಾರಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರ ಬಗ್ಗೆ ನಾನೇ ಸ್ವತಃ ಮೆಮೊರ್ಯಾಂಡಮ್ ಕೊಟ್ಟೆ ಏನೂ ಆಗಿಲ್ಲ. ಇವರು ಗಂಗಾ ಕಲ್ಯಾಣ ಯೋಜನೆಯನ್ನು ತಂದಿದ್ದಾರೆ. ಇದು ಬಂದು ಎರಡು ವರ್ಷಗಳಾಗುತ್ತಾ ಇದೆ, ಬೋರವೆಲ್‌ಗಳು ಆಗಿದೆ, ಅದಕ್ಕೆ ಪಂಪ್ ಸೆಟ್ ಮತ್ತು ಪೈಪ್‌ಗಳ ಸಪ್ಲೈ ಆಗಿಲ್ಲ. ಅಲ್ಲಿ ಬೋರವೆಲ್‌ಗಳು ಹಾಳಾಗುತ್ತಿವೆ. ಇದನ್ನು ತಾವು ಸ್ವತಃ ಹೋಗಿ ನೋಡಿ. ಮಾನ್ಯ ನಾಯಕ್‌ರವರೇ, ತಮಗೆ ಮಂತ್ರಿಯವರು ಸಜೇಷನ್ ಕೊಟ್ಟಿದ್ದಾರೋ ಇಲ್ಲವೊ ಗೊತ್ತಿಲ್ಲ. ಇದನ್ನು ಸರಿಪಡಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ 15ಅಂಗಳ ಕಾರ್ಯಕ್ರಮಗಳ ಬಗ್ಗೆ ಮೀಟಿಂಗ್ ಆಗಿಲ್ಲ. ಇದು ಆದರೆ ಡಿಸ್ಟ್ರಿಕ್ಟ್ ಲೇವಲ್‌ನಲ್ಲಿ ಮಾಡಿದರೆ ಶೇ. 50ರಷ್ಟು ಪ್ರಾಬ್ಲಂ ಸಾಲ್ವ್ ಆಗುತ್ತದೆ. ಇನ್ನು ಇನ್‌ಕಂ ಕಾಸ್ಟ್ ಸರ್ಟಿಫಿಕೇಟ್ ಬಗ್ಗೆ ತೊಂದರೆ ಇದೆ. ಇದು ಮೂರು ತಿಂಗಳಾದರೂ ಸಿಗುವುದಿಲ್ಲ, ಆಫೀಸರ್‌ಗಳು ತಿರುಗಾಡಿಸುತ್ತಾರೆ. ಇದರಿಂದ ಏನಾದರೂ ಸಹಾಯವಾಗಿದೆಯೇ? ಈ15ಅಂಶಗಳ ಕಾರ್ಯಕ್ರಮಗಳ ಬಗ್ಗೆ ರೆಗ್ಯುಲರ್ ನೀವು ಮೀಟಿಂಗ್ ಮಾಡಬೇಕು. ಅದನ್ನು ಕಾಂಗ್ರೆಸ್‌ನವರು ಮಾಡಿದ್ದಾರೆಂದು ನೀವು ಇದನ್ನು ಮಾಡುತ್ತಿಲ್ಲವೇ? ಒಳ್ಳೆಯ ಕಾರ್ಯವನ್ನು ಯಾರೇ ತರಲಿ ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಒಳ್ಳೆಯ ಕಾರ್ಯವನ್ನು ಅದು ಯಾರದ್ದೇ ಇರಲಿ, ಕಾಂಗ್ರೆಸ್‌ನವರದ್ದು ಇರಲಿ ಅಥವಾ ನಿಮ್ಮದು ಇರಲಿ, ಅದು ಇಂಪ್ಲಿಮೆಂಟ್ ಆಗಬೇಕು. ನಮ್ಮ ಸಿ.ಎಂ. ಇಬ್ರಾಹಿಂ ಅವರು ಶೇ. 4ರಷ್ಟು ಕೊಟ್ಟಿದ್ದಾರೆ. ಶೇ.6 ರಷ್ಟು ಕೊಟ್ಟಿದ್ದಾರೆ ಎಂದು ಭಾಷಣ ಮಾಡುತ್ತಿದ್ದೀರಿ. ಯಾರು ಸರಿಯಾಗಿ ಮಾಡಿದ್ದಾರೆ, ಯಾರು ಒಳ್ಳೆಯದು ಮಾಡಿದ್ದಾರೆ, ಅವರು ಯಾವುದೇ ಪಾರ್ಟಿಯವರಾಗಲಿ ಅದನ್ನು ನಾನು ಓಪನ್ ಆಗಿ ಹೇಳುತ್ತೇನೆ. ಸನ್ಮಾನ್ಯ ವೀರಪ್ಪ ಮೊಯ್ಲಿಯವರ ಕಾರಣದಿಂದ ಈ ಕರ್ನಾಟಕ ರಾಜ್ಯದಲ್ಲಿ ಮುಸಲ್ಮಾನರಿಗೆ ಶೇ. 4ರಷ್ಟು ಮೀಸಲಾತಿ ಸಿಗುತ್ತಿದೆ. ಆದರೆ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಏಕೆ ಇಂಪ್ಲಿಮೆಂಟ್ ಆಗುತ್ತಿಲ್ಲ? ತಮಗೆ ನಾನು ಒಂದು ರಿಪೋರ್ಟ್ ಕೊಟ್ಟಿದ್ದೇನೆ. ಕೆ.ಎಸ್.ಆರ್.ಟಿ.ಸಿ. ಇಲಾಖೆಗೆ ಒಂದು ರಿಪೋರ್ಟ್ ಕೊಟ್ಟಿದ್ದೇನೆ. ನಿಮಗೆ ಕನ್ನಡ ಬರುವುದಿಲ್ಲ

ಎಂದು ಹೇಳುತ್ತಾರೆ. ಕನ್ನಡ ಕಲಿಯಲು ನಮಗೆ ಅವಕಾಶ ಕೊಡಿ. ಇದೇ ನನ್ನ ಬೇಡಿಕೆ. ವಾಟಾಳ್ ನಾಗರಾಜ್‌ರವರೇ, ತಮಗೆ ನೆನಪಿರಬಹುದು, ನಮಗೆ ಒಬ್ಬ ಅಡಿಷನಲ್ ಕನ್ನಡ ಟೀಚರ್ ಕೊಡಿ ಎಂದರೆ ಕೊಡಲು ಸಿದ್ಧರಿಲ್ಲ. ಈಗ ಹೈಸ್ಕೂಲುಗಳಲ್ಲಿ ಮೆರಿಟ್‌ನಲ್ಲಿ ಸೆಲೆಕ್ಷನ್ ಆಗುತ್ತಿದೆ. ಈಗ ನಾವು ಎಲ್ಲಿಗೆ ಹೋಗಬೇಕು. 1994ರಿಂದ ಹೈಸ್ಕೂಲು ಟೀಚರ್ ಪೋಸ್ಟ್‌ಗಳಿಗೆ ಅಪಾಯಿಂಟ್‌ಮೆಂಟ್ ಆಗುತ್ತಿದೆ. ಆದರೆ ಉರ್ದು, ಮರಾಠಿ, ಟೀಚರ್‌ಗಳು ಅಪಾಯಿಂಟ್‌ಮೆಂಟ್ ಆಗುತ್ತಿಲ್ಲ. ಕೋರ್ಟ್ ಡೈರೆಕ್ಷನ್ನೇ ಇದೆ, ಕೆ.ಎ.ಟಿ. ನಿಮಗೆ ಡೈರೆಕ್ಷನ್ ಕೊಟ್ಟಿದೆ. ಆದರೆ ರೂಲ್ಸ್ ಫ್ರೇಮ್ ಆಗುತ್ತಿಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನವರು ಸೆಕ್ರೆಟರಿ, ಸೆಕ್ರೆಟರಿಯಿಂದ ಕಮೀಷನರ್, ಕಮೀಷನರಿಂದ ಡಿ.ಪಿ.ಎ.ಆರ್ ಎಂದು ಹೇಳಿ ಈಗ ಅದು ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಬೇಕು ಎಂದು ಹೇಳುತ್ತಿದ್ದಾರೆ. ಕ್ಯಾಬಿನೆಟ್‌ನಿಂದ ಅಪ್ರೂವಲ್ ಆಗುವ ಅವಶ್ಯಕತೆ ಇಲ್ಲ. ಕನ್ನಡ ಶಾಲೆಗಳವರಿಗೆ ಕೊಟ್ಟಿದ್ದೀರಿ. ನಮ್ಮ ಜಿಲ್ಲೆ ಉರ್ದು ಮೈನಾರಿಟಿ ಜಿಲ್ಲೆ, ಮರಾಠಿ ಬೆಲ್ಟ್ ಡಿಸ್ಟ್ರಿಕ್ಟ್; ಅಲ್ಲಿ ಉರ್ದು ಮೀಡಿಯಂನ ಹುಡುಗರಿಗೆ ಸೈನ್ಸ್ ಮ್ಯಾಥ್ಸ್ ಟೀಚರ್ ಇಲ್ಲ. ಹೀಗಾದರೆ ನಾವು ಹೇಗೆ ಮೆರಿಟ್ ತರುವುದು? ಇದು ಒಂದು ಭಾಷೆಯ ಹೆಸರಿನಲ್ಲಿ ವಿಶೇಷವಾಗಿ ಒಂದು ಕಮ್ಯುನಿಟಿಗೆ ಪ್ರಿಪ್ಲಾನ್‌ಆಗಿ ತೊಂದರೆ ಕೊಡುತ್ತಿದ್ದೀರಿ. ಇದನ್ನು ಸರಿಪಡಿಸಬೇಕು. ಯಾರು ಅಧಿಕಾರ ಮಾಡುತ್ತಿದ್ದಾರೆ. ಅವರು ಎಲ್ಲಿ ತಪ್ಪಾಗಿದೆ ಅದನ್ನು ಸರಿ ಮಾಡಿಕೊಳ್ಳಬೇಕು. ಮೀಟಿಂಗ್ ಮಾಡಿದರೆ ನಿಮಗೇ ಎಲ್ಲಾ ಗೊತ್ತಾಗುತ್ತದೆ. ಆದರೆ ಒಂದು ಮೀಟಿಂಗ್ ಆಗಿಲ್ಲ. ಮೈನಾರಿಟಿ ಕಮೀಷನ್ ರಿಪೋರ್ಟ್‌ಗಳನ್ನೆಲ್ಲಾ ಕಸದ ತೊಟ್ಟಿಯಲ್ಲಿ ಹಾಕಿದ್ದೀರಿ. ಅವರಿಗೆ ಬಜೆಟ್ ಇಲ್ಲ, ಅವರಿಗೆ ಪವರ್ಸ್ ಇಲ್ಲ, ಮೈನಾರಿಟಿ ಕಮೀಷನ್ನಿನ ಛೇರ್ಮನ್‌ರವರ ಮಾತನ್ನು ಯಾರೂ ಕೇಳುವುದಿಲ್ಲ. ಈಗ ಮುಸ್ಲಿಂ ಮೂವ್‌ಮೆಂಟ್‌ನಿಂದ ಬಂದಿರುವಂಥ ಖಮರುಲ್ ಇಸ್ಲಾಂ ಅವರನ್ನು ಛೇರ್ಮನ್ ಆಗಿ ಮಾಡಿದ್ದೀರಿ. ಅವರು ಡೇರ್ ಅಂಡ್ ಡ್ಯಾಷ್ ಆಗಿದ್ದಾರೆ. ಅವರು ಹೇಳಿದ್ದನ್ನು ಅಧಿಕಾರಿಗಳಾದರೂ ಏನು ಮಾಡುತ್ತಾರೆ? ಮಂತ್ರಿಗಳ ಕೈಯ್ಯಲ್ಲೇ ಮಾಡಲು ಆಗುತ್ತಿಲ್ಲ, ಇನ್ನು ಮೈನಾರಿಟಿ ಕಮೀಷನ್ನಿನ ಛೇರ್ಮನ್ ಕೈಯ್ಯಲ್ಲಿ ಏನಾಗುತ್ತದೆ? ಅವರಿಗೆ ಅಧಿಕಾರವಿಲ್ಲ. ಅವರಿಗೆ ನೀವು ಜ್ಯುಡಿಷಿಯಲ್ ಪವರ್ ಕೊಡಿ. ಮೈನಾರಿಟಿ ಕಮೀಷನ್ನಿಗೆ ಒಂದಷ್ಟು ಪವರ್ ಕೊಡಿ. ಡೆಪ್ಯುಟಿ ಕಮೀಷನರ್‌ರವರನ್ನು ಕರೆದು ಮಾತನಾಡುವುದಕ್ಕೆ ಅವರಿಗೆ ಪವರ್ ಕೊಡಿ. ಡೆಪ್ಯುಟಿ ಕಮೀಷನರ್‌ರವರನ್ನು ಕರೆದರೂ ಅವರು ಬರಲು ಸಿದ್ಧರಿಲ್ಲ. ಅವರಿಗೇನು ಪ್ರಾಮುಖ್ಯತೆ ಇಲ್ಲವೇ? ಇದು ಈಗ ಆಗುತ್ತಿಲ್ಲ. ಹಿಂದಿನಿಂದಲೂ ಆಗಿದೆ, ಈಗಲೂ ಆಗುತ್ತಿದೆ. ಅದರ ಸಲುವಾಗಿ ತಾವಾದರೂ ಇದನ್ನು ಮಾಡಬೇಕು. ಏಕೆಂದರೆ ನಮ್ಮ ಜನ ನಿಮಗೆ ಓಟು ಕೊಟ್ಟಿದ್ದಾರೆ. ಕಾಂಗ್ರೆಸ್‌ನಿಂದ ಮುಸ್ಲಿಂ ಕ್ಯಾಂಡಿಡೇಟ್ ಇದ್ದರೂ ನಮ್ಮ ಜನ ಜನತಾದಳಕ್ಕೆ ಓಟು ಕೊಡಬೇಕು ಎಂದು ನಿಮಗೆ ಓಟು ಕೊಟ್ಟಿದ್ದಾರೆ. ನಮಗೆ ಶೆಡ್ಯೂಲ್ಡ್ ಕ್ಯಾಸ್ಟ್‌ನ ಜನ ಓಟು ಕೊಟ್ಟಿದ್ದಾರೆ. ಅವರು ನಮಗೆ ಓಟು ಕೊಟ್ಟಿದ್ದಾರೆ ಎಂದು ನಮಗೆ ಅವರ ಸಲುವಾಗಿ ಎಷ್ಟು ಚಿಂತೆ ಇದೆ ಎಂದರೆ ಅವರಿಗೆ ಏನೇನು ಮಾಡಬೇಕು, ಅವರನ್ನು ಹೇಗೆ ಸಮಾಧಾನ ಮಾಡಬೇಕು ಎನ್ನುವ ಚಿಂತೆ ನಮಗೆ ಇದೆ. ನಿಮಗೆ ಯಾವ ಜನ ಓಟು ಕೊಟ್ಟಿದ್ದಾರೆ. ಅವರ ಚಿಂತೆಯನ್ನು ನೀವು ಮಾಡಬೇಕು. ಆದರೆ ನೀವು ಅದನ್ನು ಮಾಡಲು ಸಿದ್ಧರಿಲ್ಲ. ತಾವೇ ಒಂದು ಮೀಟಿಂಗ್ ಕರೆಸಿ ಹೇಳಿಬಿಡಿ ಎಂದು ಹೇಳಿದೆ. ಸನ್ಮಾನ್ಯ ದಿವಂಗತ

ದೇವರಾಜ ಅರಸುರವರು ಅರಬ್ಬೀ ಸ್ಕೂಲುಗಳಿಗೆ ಅವಕಾಶ ಕೊಟ್ಟರು. ಅರಬ್ಬೀ ಸ್ಕೂಲುಗಳಿಗೆ ಏನು ಗ್ರ್ಯಾಂಟ್ ಇತ್ತು, ಏನು ಪರ್ಮಿಷನ್ ಇತ್ತು ಎಂದರೆ ವಿಶೇಷವಾಗಿ ರೂರಲ್ ಏರಿಯಾಗಳಲ್ಲಿ ಮುಸ್ಲಿಂ ಕಮ್ಯುನಿಟಿಯಲ್ಲಿರುವ ಬಡ ಹುಡುಗರಲ್ಲಿ ಒಂದು ಡಿಸಿಪ್ಲಿನ್ ಇರುತ್ತದೆ. ಅರಬಿಕ್ ಸ್ಕೂಲುಗಳಲ್ಲಿ ನಾವು ಕಾಟೋ, ಮಾರೋ (ಕಡಿ, ಹೊಡಿ, ಬಡಿ) ಎಂದು ಪಾಠ ಕಲಿಸುವುದಿಲ್ಲ. ಆದರೆ ಅರಬಿಕ್ ಸ್ಕೂಲುಗಳಿಗೆ ಹೋಗಲು ಅವರಿಗೆ ಟೈಂ ಇಲ್ಲ. ಏಕೆಂದರೆ ಅವರೆಲ್ಲರೂ ಕೂಲಿಕಾರರಾಗಿರುತ್ತಾರೆ. ಅವರು ಶಾಲೆಗೆ ಹೋದರೆ, ಹೊಟ್ಟೆ ತುಂಬಲು ಅವರ ಮನೆಯಲ್ಲಿ ತೊಂದರೆ ಇರುತ್ತದೆ. ಬೆಳಿಗ್ಗೆ 2 ಗಂಟೆ ಮತ್ತು ರಾತ್ರಿ 2 ಗಂಟೆಗಳ ಕಾಲ ಮಸೀದಿಯಲ್ಲಿ ಅರಬಿಕ್ ಅದರ ಜೊತೆ ಉರ್ದು ಮತ್ತು ರಾಜ್ಯ ಭಾಷೆಯನ್ನು ಕಲಿಸತ್ತಾರೆ. ಅಲ್ಲಿ ಒಬ್ಬ ಮೌಲ್ವಿ ಇರುತ್ತಾರೆ. ಶಾಸಕರು ಅಥವಾ ನಾಯಕರು ಹೋದರೆ ನಮ್ಮ ಜನ ಅವರ ಮಾತಿಗೆ ಅಷ್ಟು ಬೆಲೆ ಕೊಡುವುದಿಲ್ಲ. ಮೌಲ್ವಿವರ ಮಾತು ಕೇಳಿದರೆ ಡಿಸಿಪ್ಲಿನ್ ಬರುತ್ತದೆ. ಅಂಥ ಮೌಲ್ವಿಗಳು ನಿಮಗೆ ಓಟು ಕೊಡಲು ಹೇಳಿದ್ದಾರೆ. ಸಿ.ಎಂ. ಇಬ್ರಾಹಿಂ ಅಥವಾ ಬೇರೆ ಯಾವ ಮುಸ್ಲಿಂ ಲೀಡರ್ ಕರ್ನಾಟಕದ ಜನತಾದಳದಲ್ಲಿದ್ದರೂ ಮುಸಲ್ಮಾನರು ಅವರಿಗೆ ಓಟು ಕೊಟ್ಟಿಲ್ಲ. ಅಂಥ ಮೌಲ್ವಿಗಳು ಈ ಸಲ ಜನತಾದಳಕ್ಕೆ ಓಟು ಕೊಡಿ. ಕಾಂಗ್ರೆಸ್‌ಗೆ ಬೇಡ ಎಂದು ಹೇಳಿದ್ದರಿಂದ ಜನ ನಿಮಗೆ ಓಟು ಕೊಟ್ಟಿದ್ದಾರೆ. ಅಂಥ ಮೌಲ್ವಿಗಳು ನಮ್ಮ ಜನರಿಗೆ ಡಿಸಿಪ್ಲಿನ್ ಕಲಿಸುತ್ತಾರೆ. ಆದರೆ ತಮ್ಮ ಸರ್ಕಾರ ಬಂದ ಮೇಲೆ ಅಂಥ ಯಾವ ಶಾಲೆಗಳಿದ್ದವು, ಅವುಗಳಿಗೆ ಗ್ರ್ಯಾಂಟ್ ನಿಲ್ಲಿಸಿಬಿಟ್ಟಿದ್ದೀರಿ, ಹೊಸ ಪರ್ಮಿಷನ್‌ಅನ್ನು ಕೊಡುತ್ತಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾಡ್ರನೈಸೇಷನ್ ಆಫ್ ಮದ್ರಸಾ ಎನ್ನುವ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ. ರಾಜ್ಯದ ಉತ್ತರದಲ್ಲಿ ಈ ರೀತಿಯ ಸಾವಿರಾರು ಶಾಲೆಗಳು ಇವೆ. ಎಸ್.ಆರ್. ಬೊಮ್ಮಾಯಿಯವರು ಕೇಂದ್ರದಲ್ಲಿ ಮಾನವ ಸಂಪನ್ಮೂಲ ಸಚಿವರಾಗಿದ್ದಾಗ ನಮ್ಮ ಏಳೆಂಟು ಜಿಲ್ಲೆಗಳಿಗೆ ಈ ಯೋಜನೆಯನ್ನು ತಲುಪಿಸಿದ್ದಾರೆ. ಆದರೆ ಅದನ್ನು ಕರ್ನಾಟಕ ಸರ್ಕಾರ ಇಂಪ್ಲಿಮೆಂಟ್ ಮಾಡಿಲ್ಲ. ಮಾಡ್ರನೈಸೇಷನ್ ಆಫ್ ಮದ್ರಸಾ ಸ್ಕೀಮ್‌ನಲ್ಲಿ ಏನಿದೆ ಎಂದರೆ ಈ ಅರಬಿಕ್ ಶಾಲೆಗಳಲ್ಲಿ ಅರಬಿಕ್ ಮತ್ತು ಇತರ ಧರ್ಮವನ್ನು ಕಲಿಸುತ್ತಾರೆ. ಅರಬಿಕ್ ಶಾಲೆಗಳಲ್ಲಿರುವ ಹುಡುಗರಿಗೆ ಮ್ಯಾಥ್ಸ್, ಇಂಗ್ಲೀಷ್, ಮತ್ತು ಸೈನ್ಸ್ ಕಲಿಸಬೇಕು ಎಂದು ಅಡಿಷನಲ್ ಟೀಚರ್ ಕೊಡುವಂಥ ವರ್ಷಕ್ಕೆ 42 ಸಾವಿರ ರೂಪಾಯಿಯ ಒಂದು ಗ್ರ್ಯಾಂಟ್ ಇದೆ. ಇದು ಮೂರು ವರ್ಷಗಳಿಂದ ಇಂಪ್ಲಿಮೆಂಟ್ ಆಗಿಲ್ಲ. ಬಿಜಾಪುರ ಜಿಲ್ಲೆಯಲ್ಲಿ 200 ಸ್ಕೂಲುಗಳು ಅಪ್ಲಿಕೇಷನ್‌ಗಳು ಪೆಂಡಿಂಗ್ ಇವೆ. ಅದೇ ರೀತಿ ಬೀದರ್‌ನಲ್ಲಿ ಇವೆ, ಗುಲ್ಬರ್ಗಾದಲ್ಲಿ ಇವೆ. ಈಗ ಮತ್ತೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳನ್ನು ಸೇರಿಸಿದ್ದಾರೆ. ಹಾವೇರಿ ಎಸ್.ಆರ್. ಬೊಮ್ಮಾಯಿಯವರ ಜಿಲ್ಲೆಯಾಗಿದೆ ಎಂದು ಅದನ್ನು ಈ ಯೋಜನೆಯಲ್ಲಿ ಇನ್‌ಕ್ಲೂಡ್ ಮಾಡಿದ್ದಾರೆ. ಇನ್ನೂ ಅದು ಇಂಪ್ಲಿಮೆಂಟ್ ಆಗಿಲ್ಲ. ಇಂಪ್ಲಿಮೆಂಟ್ ಮಾಡದೇ ಕೇಂದ್ರ ಸರ್ಕಾರದಿಂದ ಬರುವಂಥ ಸಾಕಷ್ಟು ದುಡ್ಡನ್ನು ಲ್ಯಾಪ್ಸ್ ಮಾಡಿದ್ದಾರೆ. ಬ್ಯಾನ್ ಇದೆ ಎಂದು ಹೇಳುತ್ತಾರೆ. ರಾಜ್ಯ ಸರ್ಕಾರದ ಬ್ಯಾನ್ ಇರಬಹುದು. ಕೇಂದ್ರ ಸರ್ಕಾರದಿಂದ ಬರುವ ಹಣಕ್ಕೆ ಏನು ಬ್ಯಾನ್ ಇದೆ, ಏನೇನೋ ಕಂಡೀಷನ್‌ಗಳನ್ನು ಹಾಕಿ ಅದನ್ನು ಲ್ಯಾಪ್ಸ್ ಮಾಡುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) : ಕೇಂದ್ರ ಸಂಯುಕ್ತ ರಂಗ ಸರ್ಕಾರ ಇದ್ದಾಗ 9ನೇ

ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಇದಕ್ಕಾಗಿ ರಿಸರ್ವ್ ಮಾಡಿದ್ದರು.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಅದನ್ನೇ ಲ್ಯಾಪ್ಸ್ ಮಾಡುತ್ತಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, 15 ಅಂಶಗಳ ಕಾರ್ಯಕ್ರಮದ ಬಗ್ಗೆ ಮೀಟಿಂಗ್ ಮಾಡಿದರೆ ಈ ಸಮಸ್ಯೆ ಇರುವುದಿಲ್ಲ.

ಶ್ರೀ ಎನ್. ರಾಜಣ್ಣ : ನಾವು ಎಷ್ಟು ಒಳ್ಳೆಯದು ಮಾಡಿದ್ದೇವೆ ಎನ್ನುವ ಲಿಸ್ಟನ್ನು ಬೇಕಾದರೆ ನಾಳೆ ಕೊಡುತ್ತೇನೆ. ಒಳ್ಳೆಯದು ಮಾಡಿರುವುದೊಂದನ್ನೂ ನೀವು ಹೇಳುವುದಿಲ್ಲ. ಮಾಡಿಲ್ಲ ಎನ್ನುವುದನ್ನಷ್ಟೇ ಹೇಳುತ್ತಿದ್ದೀರಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಮುಂದೆ ತಾವೆಲ್ಲರೂ ಪುನಃ ಶಾಸಕರಾಗಿ ಬರಬೇಕು. ನಮ್ಮ ಜಿಲ್ಲೆಯವರು ಇನ್ನೊಂದು ಬಾರಿ ನಿಮಗೇ ಓಟು ಕೊಡುವಂತಾಗಲಿ, ನೀವೇ ಅಧಿಕಾರದಲ್ಲಿ ಇರಿ. ಯಾರೇ ಅಧಿಕಾರಕ್ಕೆ ಬರಲಿ, ಮುಸ್ಲಿಂ ಕಮ್ಯುನಿಟಿಯಲ್ಲಿ ಜನರು ಅಷ್ಟು ಕ್ರಿಮಿನಲ್ ಆಗಿಲ್ಲ. ಅಬುಲ್ ಕಲಾಂ ಅಜಾದ್‌ರವರು ಇದ್ದರು. ನಮ್ಮ ಜನ ಇಂದಿರಾ ಗಾಂಧಿಯವರು ಹಿಂದೆ ಹೋಗುತ್ತಿದ್ದರು, ಪಂಡಿತ್ ನೆಹರೂರವರ ಹಿಂದೆ ಹೋಗುತ್ತಿದ್ದರು, ವಿ.ಪಿ.ಸಿಂಗ್‌ರವರ ಹಿಂದೆ ಇದ್ದರು. ಆದರೆ ನಮ್ಮ ಜನ ಅಬುಲ್ ಕಲಾಂ ಅಜಾದ್‌ರವರ ಹಿಂದೆ ಹೋಗಿಲ್ಲ, ರೋಷನ್ ಬೇಗ್, ಮೊಯಿದ್ದೀನ್‌ರವರ ಹಿಂದೆ ಹೋಗಿಲ್ಲ. ಆದರೆ ಜೆ.ಹೆಚ್. ಪಟೇಲರ ಮೇಲೆ ವಿಶ್ವಾಸ ಇಟ್ಟುಕೊಂಡಿದ್ದಾರೆ. ಆ ಕಾಲದಲ್ಲಿ ಧರ್ಮಸಿಂಗ್‌ರವರ ಮೇಲೆ ನಮ್ಮ ಜನರಿಗೆ ಬಹಳ ವಿಶ್ವಾಸವಿತ್ತು. ಖರ್ಗೆಯವರ ಮೇಲೆ ನಮ್ಮ ಜನರಿಗೆ ವಿಶ್ವಾಸವಿದೆ, ವೀರಪ್ಪ ಮೊಯ್ಲಿಯವರ ಮೇಲೆ ನಮ್ಮ ಜನರಿಗೆ ವಿಶ್ವಾಸವಿದೆ. ಮೊನ್ನೆ ಆದಂಥ ಲೋಕಸಭಾ ಚುನಾವಣೆಯಲ್ಲಿ ಶೇ. 80ರಷ್ಟು ಮುಸ್ಲಿಂ ಜನ ವೀರಪ್ಪ ಮೊಯ್ಲಿಯವರಿಗೆ ಓಟು ಹಾಕಿದ್ದಾರೆ. ಅವರು ಸೋತರೆ ಅದು ಬೇರೆ ಪ್ರಶ್ನೆ. ಏಕೆಂದರೆ, ಯಾರು ಒಳ್ಳೆಯದನ್ನು ಮಾಡಿದ್ದಾರೆ ಅವರನ್ನು ಜನ ಗೆಲ್ಲಿಸುವುದಿಲ್ಲ. ಬಾಬಾ ಸಾಹೇಬ್ ಅಂಬೇಡ್ಕರರಿಗೂ ಜನ ಹೀಗೇ ಮಾಡಿದರು. ಹೀಗೆಯೇ ಜನ ಅವರನ್ನು ಗೆಲ್ಲಿಸಲಿಲ್ಲ. ಈ ಸಮಾಜದಲ್ಲಿ ಜಸ್ಟೀಸ್ ಕೊಟ್ಟಿರುವವರನ್ನು ಗೆಲ್ಲಿಸಿ ಕೊಟ್ಟಿಲ್ಲ. ಈ ರಾಜ್ಯದಲ್ಲಿ ಬಸವೇಶ್ವರರ ಕೊಲೆಯಾಗಿದೆ. ಟಿಪ್ಪು ಸುಲ್ತಾನಿನ ಮಕ್ಕಳು ಈಗ ಸಾಯುತ್ತಿದ್ದಾರೆ. ಯಾರು ಒಳ್ಳೆಯದನ್ನು ಮಾಡುತ್ತಾರೆ, ಅವರಿಗೆ ಬಹಳ ತೊಂದರೆಗಳು ಬರುತ್ತವೆ. ಯಾರು ಕೆಟ್ಟದ್ದನ್ನು ಮಾಡುತ್ತಾರೆ. ಯಾರೂ ಗೂಂಡಾಗಳನ್ನು ಇಟ್ಟುಕೊಂಡಿರುತ್ತಾರೆ, ಅವರದೆಲ್ಲಾ ನಡೆಯುತ್ತದೆ. ಆದರೆ ಯಾರು ಒಳ್ಳೆಯದನ್ನು ಮಾಡಿದ್ದಾರೆ, ಮಾಡುತ್ತಾರೆ, ಅವರ ಹೆಸರು ಇರುತ್ತದೆ. ಇವರು ಇಂಥಾದ್ದನ್ನು ಮಾಡಿದ್ದಾರೆ ಎಂದು ನಾಳೆ ನಮ್ಮ ಮಕ್ಕಳು ಅವರ ಹೆಸರನ್ನು ಹೇಳುತ್ತಾರೆ. ಅದಕ್ಕೋಸ್ಕರ ನೀವು ಒಳ್ಳೆಯ ಕೆಲಸವನ್ನು ಮಾಡಿ. ಇದೇ ನನಗೆ ಬಹಳ ಚಿಂತೆಯಾಗಿದೆ. ಜೆ.ಹೆಚ್. ಪಟೇಲರು ಸರಿಯಾಗಿ ಕೆಲಸ ಮಾಡುತ್ತಾರೆ ಎಂದು ನನಗೆ ಬಹಳ ಆಸೆ ಇತ್ತು. ಈಗಲೂ ಮಾಡುತ್ತಾರೆ ಅವರು. ಆದರೆ ಅವರಿಗೆ ಯಾರೂ ಸಲಹೆ ಕೊಡುತ್ತಿಲ್ಲ. ಅವರಿಗೆ ಸಲಹೆ ಕೊಡಲು ನೀವ್ಯಾರೂ ಸಿದ್ದರಿಲ್ಲ. ಸಮಸ್ಯೆಗಳನ್ನು ಅವರ ಗಮನಕ್ಕೆ ತರುತ್ತಿಲ್ಲ. ಈಗ ಅವರ ಪಕ್ಷದ ಮೇಲೆ ಗುಂಪಿನವರಲ್ಲಿ ಬೇರೆಯದೇ ನಡೆಯುತ್ತಿದೆ. ನಿಮ್ಮ ಗುಂಪಿನಲ್ಲೇ ಮುಖ್ಯಮಂತ್ರಿಯಾಗಲಿ ಅಥವಾ ಬೇರೆ ಯಾರಾದರೂ

ಆಗಲಿ, ಇದಕ್ಕೆ ಏನು ಹೇಳುತ್ತೀರಿ ವೈಜನಾಥ ಪಾಟೀಲರೇ? ಸಭಾಧ್ಯಕ್ಷರೇ, ನಾನು ಮೈನಾರಿಟಿಯವರ ಸೀರಿಯಸ್ ಪ್ರಾಬ್ಲಮ್ ಅನ್ನು ಹೇಳುತ್ತಿದ್ದೇನೆ. ತಾವು ಮೈನಾರಿಟಿಯವರಿಗಾಗಿ ಹೊಸದಾಗಿ ಏನೂ ಕೊಡಬೇಡಿ. ಎಜ್ಯುಕೇಷನ್‌ಗಾಗಿ ಕೇಂದ್ರ ಸರ್ಕಾರದಿಂದ ಬರುವುದನ್ನು ಮತ್ತು ಹಿಂದಿನ ಸರ್ಕಾರಗಳು ಏನು ಮಾಡಿವೆ, ಆ ಸೌಲಭ್ಯಗಳನ್ನು ಮುಂದುವರೆಸಿ ಎಂದು ಹೇಳುತ್ತಿದ್ದೇನೆ. ಅಲ್ಪಸಂಖ್ಯಾತರಿಗೆ ಇನ್ಸ್‌ಟಿಟ್ಯೂಷನ್ ಅನ್ನು ನಡೆಸಲಿಕ್ಕೆ ಅವಕಾಶ ನೀಡಬೇಕೆಂದು ಸಂವಿಧಾನದಲ್ಲೇ ಇದೆ. ನೀವು ಸಂವಿಧಾನದ ಪ್ರಕಾರವಾಗಿಯೇ ಮಾಡಿ. ಹಷ್ಮಿ ಹೇಳುತ್ತಿದ್ದಾರೆ ಅಥವಾ ಬೇರೆ ಯಾರೋ ಮಿನಿಸ್ಟರ್ ಹೇಳುತ್ತಿದ್ದಾರೆ ಎಂದು ಮಾಡಬೇಡಿ. ಸಂವಿಧಾನ ಬದ್ಧರಾಗಿಯೇ ಕೆಲಸ ಮಾಡಿ. ಈಗ ನೀವು ಸಂವಿಧಾನ ಬಿಟ್ಟು ಹೋಗುತ್ತಿದ್ದೀರಿ. ಅದರ ಬದ್ಧರಾಗಿ ಕೆಲಸ ಮಾಡಬೇಕು. ವಕ್ಫ್ ಪ್ರಾಪರ್ಟಿ ಎಷ್ಟು ಇದೆ ಅದರಿಂದ ಮುಸ್ಲಿಂ ಜನರ ಅಭಿವೃದ್ಧಿಯಾಗಬೇಕು ಎಂದು ಒಂದು ಸಲ ಮುಖ್ಯಮಂತ್ರಿಯವರು ಹೇಳಿದ್ದರು. ನಿಮ್ಮ ವಕ್ಫ್ ಪ್ರಾಪರ್ಟಿಯನ್ನು ರಕ್ಷಣೆ ಮಾಡಿಕೊಳ್ಳಿ, ಆಗ ನಿಮ್ಮ ಸಾಕಷ್ಟು ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ಹೇಳಿದ್ದರು. ಅದು ಸರಿಯಾದ ಮಾತು. ಈ ರಾಜ್ಯದಲ್ಲಿ ವಕ್ಫ್ ಪ್ರಾಪರ್ಟಿಯನ್ನು ಯಾರು ಎನ್‌ಕ್ರೋಚ್ ಮಾಡುತ್ತಿದ್ದಾರೆ? ವಕ್ಫ್ ಡಿಪಾರ್ಟ್‌ಮೆಂಟ್ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಅಟ್ಯಾಚ್ ಆಗಿದೆ. ವಕ್ಫ್ ಇನ್ಸ್‌ಪೆಕ್ಟರ್‌ರವರಾಗಲೀ, ವಕ್ಫ್ ಅಧಿಕಾರಿಗಳಾಗಲೀ ಕಂಪ್ಲೇಂಟ್ ಕೊಟ್ಟರೂ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಸಹಕಾರ ಕೊಡಲು ಸಿದ್ಧರಿಲ್ಲ. ಅವರು ಸಹಕಾರವನ್ನು ಕೊಡುವುದಿಲ್ಲ. ಸಾಕಷ್ಟು ವಕ್ಫ್ ಪ್ರಾಪರ್ಟಿಯನ್ನು ಸರ್ಕಾರವೇ ಎನ್‌ಕ್ರೋಚ್ ಮಾಡಿಬಿಟ್ಟಿದೆ.

7.40 ಪಿ.ಎಂ

ಇನ್ನು ಈದ್ಗಾ ಮೈದಾನದಲ್ಲಿ ನಮ್ಮ ಮುಸ್ಲಿಂ ಜನಾಂಗದ ಮಸೀದಿ ಇದ್ದು ಅಲ್ಲಿ ನಮ್ಮವರು ನಮಾಜ ಮಾಡುವುದಕ್ಕೆ ತಡೆಯೊಡ್ಡಿದ್ದಾರೆ. ವಕ್ಫ್ ಇಲಾಖೆಯ ರೆಕಾರ್ಡ್‌ನಲ್ಲಿ ಆ ಜಾಗ ಇದೆ. ಈಗ ಅದು ಪ್ರೈವೇಟ್ ಪಾರ್ಟಿಯವರ ಜಾಗದಲ್ಲಿ ಇದೆಯೆಂದು ಹೇಳಿ ಅಲ್ಲಿ ಮುಸ್ಲಿಂ ಜನಾಂಗದವರು ನಮಾಜು ಮಾಡುವುದಕ್ಕೆ ಬಿಡಬೇಡಿ ಎಂದು ಬೇಲಿ ಹಾಕಿದ್ದಾರೆ. ಬಾಬರಿ ಮಸೀದಿ ಇಶ್ಯೂ ಇದ್ದ ಹಾಗೆ ಇದನ್ನು ಸೆನ್ಸಿಟೀವ್ ಇಶ್ಯೂ ಆಗಿ ಸರ್ಕಾರದವರು ದಯವಿಟ್ಟು ಮಾಡುವುದಕ್ಕೆ ಬಿಡಬೇಡಿ. ನಾವು ಅಲ್ಲಿ ಒಂದು ವರ್ಷದಿಂದ ನಮಾಜು ಮಾಡುವುದನ್ನು ನಿಲ್ಲಿಸಿದ್ದೇವೆ. ಇದರ ಬಗ್ಗೆ ನಾನು ಮಾನ್ಯ ಗೃಹಸಚಿವರನ್ನು ಬೀದರ್‌ನಲ್ಲಿ ನಾನು ಭೇಟಿಯಾಗಿ ವಿವರಿಸಿ ಹೇಳಿದ್ದೇನೆ. ಈ ಜಾಗದಲ್ಲಿ ಮೊದಲಿನಿಂದಲೂ ನಮಾಜು ನಡೆಯುತ್ತಿತ್ತು. ಇದು ದೊಡ್ಡ ಇಶ್ಯೂ ಆಗುತ್ತದೆಂದು ನಾನು ಇದರ ಬಗ್ಗೆ ಚಳುವಳಿ ಮಾಡುವುದಕ್ಕೆ ಹೋಗಲಿಲ್ಲ. ನಾನು ಇದರ ಬಗ್ಗೆ ಸ್ವತಃ ಎಲ್ಲಿಯೂ ಫಂಕ್ಷನ್ಸ್ ಮಾಡುವುದಕ್ಕೆ ಹೋಗಲಿಲ್ಲ. ನಾನು ಮಾನ್ಯ ಬಸವರಾಜಪಾಟೀಲ್‌ಅಟ್ಟೂರ್ ರವರಿಗೆ ಮತ್ತು ಶ್ರೀ ಮೀರಾಜುದ್ದೀನ್ ಪಟೇಲ್ ರವರಿಗೆ ಹೇಳಿದೆ. ಆದರೆ ಅದರ ಬಗ್ಗೆ ಅವರು ಸಲ್ಯೂಷನ್ ತೆಗೆದುಕೊಳ್ಳಲಿಕ್ಕೆ ರೆಡಿ ಇಲ್ಲ. ಮತ್ತು ಇವರು ಏನು ಮಾಡಿದ್ದಾರೆಂದರೆ ಒಬ್ಬ ಅಭ್ಯರ್ಥಿಯನ್ನು ಮುನ್ಸಿಪಲ್ ಕೌನ್ಸಿಲರ್ ಆಗಿ ನಾಮಿನೇಟ್ ಮಾಡಿದರು. ನಾನು ನಂತರ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ-ನಾಮಿನೇಟ್ ಮಾಡಿರುವವನು ಬಿ.ಜೆ.ಪಿ. ಕ್ಯಾಂಡಿಡೇಟ್ ಇದ್ದ, ಈದ್ಗಾವನ್ನು ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದಾನೆ.

ಇವನನ್ನು ನಾಮಿನೇಟ್ ಮಾಡಿಕೊಳ್ಳುವುದು ಬೇಡ ಎಂದು ಹೇಳಿದ ಮೇಲೆ ಆ ಅಭ್ಯರ್ಥಿಯ ಹೆಸರನ್ನು ಮುಖ್ಯಮಂತ್ರಿಗಳು ಕ್ಯಾನ್ಸಲ್ ಮಾಡಿ ಬೇರೆಯವರನ್ನು ನಾಮಿನೇಟ್ ಮಾಡಿದರು. ನಾವು ನಮಾಜು ಮಾಡುವುದಕ್ಕೆ ಬಿಡದಿರುವ ಇನ್ನೊಬ್ಬ ವ್ಯಕ್ತಿ ಕೂಡ ನಾಮಿನೇಟು ಕೌನ್ಸಿಲರ್ ಆಗಿದ್ದಾನೆ. ಆದ್ದರಿಂದ ಈದ್ಗಾ ಮೈದಾನ ಖಾಸಗಿ ಸ್ವತ್ತು ಎಂದು ಯಾರು ಹೇಳುತ್ತಿದ್ದಾರೆ ಅವರಿಗೆ, ಡೆವಲಪ್‌ಮೆಂಟ್ ಅಥಾರಿಟಿಯಿಂದ ಕೊಟ್ಟಿರುವ ಪ್ಲಾನ್ ತರಿಸಿ, ಅವರ ಹತ್ತಿರ ಇರುವ ರೆಕಾರ್ಡ್ ತರಿಸಿ ವೆರಿಫೈ ಮಾಡಿ ಅದರಂತೆ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯವನ್ನು ಮಾನ್ಯ ಸಿಂಧ್ಯಾರವರು ಬಗೆಹರಿಸುತ್ತಾರೆಂದು ನನಗೆ ವಿಶ್ವಾಸವಿದೆ. ರೆಕಾರ್ಡ್ ತರಿಸಿ ವೆರಿಫೈ ಮಾಡದೆ ಅದರ ಬದಲು ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿದ್ದಾರೆಂದು ನನ್ನ ಬಗ್ಗೆ ವಿರೋಧ ಮಾಡುತ್ತಾರೆ. ನಾನು ಯಾರ ಪರವಾಗಿ ಅಥವಾ ವಿರೋಧವಾಗಿ ಹೇಳುವುದಿಲ್ಲ. ಅದನ್ನು ಎನ್‌ಕ್ವೈಯರಿ ಮಾಡಿ ಸರ್ಕಾರಕ್ಕೆ ಸಮಾಧಾನ ಆದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಿ. ಇನ್ನು ವಕ್ಫ್ ಪ್ರಾಪರ್ಟಿ ಬಗ್ಗೆ ಹೇಳುವುದಾದರೆ ಕಂದಾಯ ಇಲಾಖೆಯವರು 7 ಎಕರೆ ವಕ್ಫ್ ಪ್ರಾಪರ್ಟಿಯನ್ನು ಡಿ-ನೋಟಿಫೈ ಮಾಡಿ ಒಬ್ಬ ಖಾಸಗಿ ವ್ಯಕ್ತಿಗೆ ಕೊಟ್ಟಿದ್ದಾರೆ. ನಾವು ವಿಧಾನಮಂಡಲದ ಬಿ.ಸಿ.ಎಂ.ಕಮಿಟಿಯಲ್ಲಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಚಾರ್ಜ್ ಮಾಡಿದಾಗ ಆ ಅಧಿಕಾರಿ ಬೇರೆ ಡೆಪ್ಯುಟಿ ಸೆಕ್ರೆಟರಿಗೆ ವಕ್ಫ್ ಪ್ರಾಪರ್ಟಿ ಇನ್‌ಚಾರ್ಜ್ ವಹಿಸಿ ಬೇರೆ ಕಡೆಗೆ ಹೋಗಿದ್ದಾರೆ. ನಮ್ಮ ವಕ್ಫ್ ಪ್ರಾಪರ್ಟಿಯನ್ನು ಪ್ರೀಪ್ಲಾನ್ ಮಾಡಿ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಖಾಸಗಿ ವ್ಯಕ್ತಿಗೆ ಕೊಟ್ಟಿರುವ 7 ಎಕರೆ ಜಾಗವನ್ನು ದಯಮಾಡಿ ಪುನಃ ವಕ್ಫ್ ಪ್ರಾಪರ್ಟಿಗೆ ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ ನನ್ನ ಮೇಲೆ ಯಾರ್‍ಯಾರೋ ಒಂದು ಚಾರ್ಜ್ ಮಾಡಿದ್ದಾರೆ. ಅನಾವಶ್ಯಕವಾಗಿ ನನ್ನ ಮೇಲೆ ಏನಾದರೂ ಹೇಳಿ ಗದ್ದಲ ಮಾಡುವಂಥದ್ದು ಸರಿಯಲ್ಲ. ಸರದಾರ್ ಪಟೇಲ್ ಅವರ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ವಿಚಾರವನ್ನು ತೆಗೆದುಕೊಂಡು ಅನಾವಶ್ಯಕವಾಗಿ ದೇಶದ್ರೋಹಿ, ರಜಾಕರು ಇದ್ದಾರೆ ಇತ್ಯಾದಿ ಅಲ್ಲಿ ಕೆಲವು ಜನ ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳಿದರು. ಸ್ವತಂತ್ರ ಸೇನಾನಿ ಹೆಸರಿನ ಮೇಲೆ ನನ್ನ ಮೇಲೆ ಚಾರ್ಜಸ್ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿಯ ಸ್ವತಂತ್ರ ಸೇನಾನಿಗಳೆಲ್ಲಾ ನನಗೆ ಪರಿಚಯ ಇದೆ. ನಿಜಾಮರಾಜ ಮುಸಲ್ಮಾನ ಸಮಾಜದಲ್ಲಿ ಹುಟ್ಟಿದವನು. ಆದರೆ ನಿಜಾಮ ಮುಸಲ್ಮಾನ ಜನಾಂಗಕ್ಕೆ ಏನೂ ಮಾಡಿಲ್ಲ. ನಮ್ಮ ಜಿಲ್ಲೆ ದೇಶಮುಖ್, ದೇಶಪಾಂಡೆ, ಪಟೇಲ್, ಪಟವಾರಿ ಕುಲಕರ್ಣಿ ಎಂದು ಇದ್ದಾರೆ. ಇಲ್ಲಿ ಮುಸ್ಲಿಂ ಇದ್ದಾರೆಯೇ? ಜಹಗಿರ್‌ದಾರರಾದ ದೇಶಪಾಂಡೆಗಳು ಯಾರು ಇದ್ದಾರೆ ಅವರು ತಾವು ರಾಜ್ಯ ನಡೆಸುವುದಕ್ಕೋಸ್ಕರ ಸಲುವಾಗಿ ಎಲ್ಲಾ ಬೇರೆಯವರಿಗೆ ಮಾಡಿದ್ದಾರೆ. ನಮ್ಮ ಜನಾಂಗಕ್ಕೆ ಚಪರಾಸಿ, ಹವಾಲ್ದಾರ್, ಜಮೇದಾರ್ ಸುಬೇದಾರ್ ಈ ಕೆಲಸಗಳನ್ನು ಕೊಟ್ಟಿದ್ದಾರೆ. ಉಸ್ಮಾನಿಯಾ ಯೂನಿವರ್ಸಿಟಿ ಎಂದು ಹೆಸರು ಇದೆ, ಆದರೆ ಅಲ್ಲಿಯ ಪ್ರೊಫೆಸರ್‌ಗಳು, ಉಪನ್ಯಾಸಕರು ನಮ್ಮ ಜನಾಂಗದವರು ಇಲ್ಲ. ನಿಜಾಮರ ಕಾಲದಲ್ಲಿ ಈ ಯೂನಿವರ್ಸಿಟಿ ಪ್ರಾರಂಭವಾಗಿದೆ. ಉಸ್ಮಾನ್ ಬಾದ್‌ಶಾಹ ಎಂದು ನಿಜಾಮನ ತಂದೆಯ ಹೆಸರು. ಉಸ್ಮಾನ್ ಹೆಸರಿನಲ್ಲಿ ಯೂನಿವರ್ಸಿಟಿ. ಹಾಗೆಯೇ ಈಗ ಅಂಬೇಡ್ಕರ್ ಯೂನಿವರ್ಸಿಟಿ ಎಂದು ಹೆಸರು ಕೊಟ್ಟಿದ್ದಾರೆ. ಆದರೆ ಅಲ್ಲಿ ಶೇಕಡ 100ರಷ್ಟು ಎಸ್‌ಸಿ:ಎಸ್‌ಟಿಯವರು ಇದ್ದಾರೆಯೇ? ಇಲ್ಲ. ಅಲ್ಲಿ ಹೆಸರು ಇಟ್ಟುಕೊಳ್ಳುವುದು ಒಂದು ಜನಾಂಗದವರು ಆದರೆ ಅಲ್ಲಿ

ಇರುವವರು ಬೇರೆಯವರಾಗಿರುತ್ತಾರೆ. ನಿಜಾಮರೂ ಮಾಡಿದ್ದಾರೆ. ತಾವೂ ಮಾಡುತ್ತಿದ್ದೀರಿ. ನಾವೂ ಮಾಡುತ್ತೇವೆ. ಇದು ನಡೆಯುತ್ತಿದೆ. ಕಾಶ್ಮೀರದಲ್ಲಿ ಶೇಕಡ ಒಂದರಷ್ಟು ಭಯೋತ್ಪಾದಕರು ಇದ್ದಾರೆ. ಆದರೆ ಇಡೀ ಕಾಶ್ಮೀರದ ಜನರಿಗೆ ಹೋಗಿ ಗುಂಡು ಹೊಡೆಯುವುದು ಸರಿಯೇ? ನಾನು ಈಗ ಹಿಂದಿನ ಹಿಸ್ಟರಿ ಹೇಳುತ್ತೇನೆ. ಹಿಂದೆ ನಿಜಾಮರ ವಿರುದ್ಧ ರಜಾಕ್‌ರ ಚಳುವಳಿ ಇತ್ತು. ಪ್ರಜಾಪ್ರಭುತ್ವದ ಸಲುವಾಗಿ ಖಾಸಿಂ ರಜ್ವಿ ಚಳುವಳಿ ನಡೆಸಿದ. ನಿಜಾಮರ ಕಾಲದಲ್ಲಿ ಮುಖ್ಯಮಂತ್ರಿಗಳು ಯಾರಿದ್ದರು - ದಾದಾ ಕಿಷನ್ ಪರ್ಷಾ, ಅವರ ಶಿಕ್ಷಣ ಸಚಿವರು ಶ್ರೀ ಶ್ಯಾಮಸುಂದರ್ ನಾವು ಇದ್ದೇವೇ? ಈಗ ಸರಿಯಾದ ಸಮಯವೆಂದು ಹೇಳಿ ನಿಜಾಮ ನಮ್ಮ ರಾಜ್ಯ, ನಮ್ಮ ಮಹಲ್, ನಮ್ಮ ದುಡ್ಡು ಎಲ್ಲವನ್ನು ಉಳಿಸಿಕೊಳ್ಳಬೇಕೆನ್ನುವ ಆಸೆಯಿಂದ ಖಾಸಿಂ ರಜ್ವಿಗೆ ನೀನು ಮೊದಲು ಹೋಗಿ ಇಂಡಿಯನ್ ಯೂನಿಯನ್‌ಗೆ ವಿರೋಧ ಮಾಡು, ನಾನು ಎಲೆಕ್ಷನ್ ಮಾಡುತ್ತೇನೆ, ನಾನು ನಿನಗೆ ಅಧಿಕಾರ ಕೊಡುತ್ತೇನೆ ಎಂದು ಹೇಳಿ ಕಳುಹಿಸಿದ. ಅವರು ಹೋಗಿ ವಿರೋಧ ಮಾಡಿದರು. ಇದು ಹಿಸ್ಟರಿಯಲ್ಲಿ ಇದೆ. ಇಲ್ಲಿ ತಪ್ಪು ಮಾಡಿಲ್ಲವೆಂದಲ್ಲ. ಒಂದರೆಡು ತಪ್ಪು ಆಗಿರಬಹುದು. ಇಲ್ಲಿ ಘಟನೆ ಏನಾಗಿದೆ ಎಂದರೆ ನಿಜಾಮನು ರಾಜಕರನ್ನು ಖಾಲಿ ಟ್ರೈನ್‌ನಲ್ಲಿ ಕಟಗಿಗೆ ಕಳುಹಿಸಿಕೊಟ್ಟ. ರಜಾಕರು ಬರುತ್ತಿದ್ದಾಗ ಅಲ್ಲಿಯೇ ಎಲ್ಲರೂ ಸತ್ತಿದ್ದರು. ಅದರಲ್ಲಿ ಸುಮಾರು 3 ಲಕ್ಷ ಬಡ ಮುಸಲ್ಮಾನರು ಸತ್ತಿದ್ದರು. ಇದು ಚರಿತ್ರೆಯಲ್ಲಿ ಇದೆ. ಇದರ ಬಗ್ಗೆ ಪಂಡಿತ್ ಸುಂದರ್‌ಲಾಲ್ ಕಮಿಟಿಯವರು ಕೇಂದ್ರಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ನನ್ನ ಇಂಟೆಂಷನ್ ಏನೆಂದರೆ 17-9-1948ರ ನಂತರ ಇಂಡಿಯನ್ ಯೂನಿಯನ್ ಬಂದಮೇಲೆ ರಜಾಕರ ಪಿರಿಯಡ್‌ನಲ್ಲಿ ಏನಾದರೂ ಆಗಿರಬಹುದು. 17-9-1948ರಲ್ಲಿ ಆದ ಘಟನೆಯಲ್ಲಿ ರೂರಲ್‌ನಲ್ಲಿ ಕ್ಲಾಷಸ್ ಆಗಿತ್ತು. ರೂರಲ್‌ನಲ್ಲಿ ಮಸೀದಿಯನ್ನು ಒಡೆದುಹಾಕಿದ್ದಾರೆ. ಆಗ ಅರ್ಬನ್‌ನಲ್ಲಿ ಏನೂ ಆಗಿಲ್ಲ. 1992ರ ಡಿಸೆಂಬರ್ ಘಟನೆಯಲ್ಲಿ ಅರ್ಬನ್‌ನಲ್ಲಿ ಮಾತ್ರ ಕ್ಲಾಷಸ್ ಆಗಿದೆ. ರೂರಲ್‌ನಲ್ಲಿ ಆಗಿಲ್ಲ. ಆದ್ದರಿಂದ ಇವೆಲ್ಲಾ ನೆನಪುಗಳು ಬಂದು ಪುನಃ ಹಿಂದೂ, ಮುಸ್ಲಿಂ, ಪಾರ್ಸಿ ಹೀಗೆ ಇವರುಗಳು ಮನಸ್ಸು ಕೆಡಿಸಿಕೊಂಡು ಗಲಾಟೆಗಳು ಆಗಬಾರದು ಎನ್ನುವ ದೃಷ್ಟಿಯಿಂದ ಅಲ್ಲಿ ಪ್ರತಿಷ್ಠಾಪನೆ ಮಾಡುವುದು ಬೇಡ ಎಂದು ಹೇಳಿದ್ದು. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಬಿ.ಜೆ.ಪಿ.ಯವರು ಮಿಸ್‌ಗೈಡ್ ಮಾಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಜನತಾದಳದವರ ಪ್ರಭಾವ ಸ್ವಲ್ಪ ಇದೆ. ಜನತಾದಳದಲ್ಲಿ ವಿಶೇಷವಾಗಿ ಮುಸ್ಲಿಂ ಲೀಡರ್‌ಶಿಫ್ ಗುಲ್ಬರ್ಗಾದಲ್ಲಿ ಇದೆ, ಅಲ್ಲಿಂದ ಒಬ್ಬರು ಮಿನಿಸ್ಟರ್ ಇದ್ದಾರೆ, ಒಬ್ಬ ಮೈನಾರಿಟಿ ಕಮೀಷನ್‌ನ ಚೇರ್ಮನ್ ಆಗಿದ್ದಾರೆ, ಹಾಗೆಯೇ ಹಿಂದೆ ದಿ. ಮಾನ್ಯ ನಜೀರ್‌ಸಾಹೇಬರು ಇದ್ದರು. ಹಾಗಾಗಿ ಜನತಾದಳದ ಪ್ರಭಾವವನ್ನು ಡ್ಯಾಮೇಜ್ ಮಾಡಬೇಕು ಎನ್ನುವ ಉದ್ದೇಶ ಅವರದು ಇತ್ತು. ಸರ್ಕಾರದ ಕಡೆಯಿಂದ ಫಂಕ್ಷನ್ ಡಿಕ್ಲೇರ್ ಆಯಿತು. ಸರ್ಕಾರಿ ಕಾರ್ಯಕ್ರಮ ಮಾಡಿ, ಧ್ವಜಾರೋಹಣ ಮಾಡಿ ಇಡೀ ಮುಸ್ಲಿಂ ಸಮಾಜಕ್ಕೆ ಬಹಳ ದುಃಖ ಕೊಟ್ಟಿದ್ದೀರಿ. ನಾವೆಲ್ಲವನ್ನೂ ಮರೆತಿದ್ದೆವು. ಸರ್ಕಾರ ವಲ್ಲಭಬಾಯ್ ಪಟೇಲ್‌ರವರ ಹುಟ್ಟುಹಬ್ಬ 31ನೇ ತಾರೀಖು ಇತ್ತು. ಅಂದೇ ಅವರ ಪ್ರತಿಮೆಯನ್ನು ಅನಾವರಣ ಮಾಡಿದಿರಿ, ಅದನ್ನು ನಾನು ಸ್ವಾಗತಿಸುತ್ತೇನೆ. ಲಾಲ್‌ಕೃಷ್ಣ ಅಡ್ವಾಣಿಯವರು, ಬಾಳಠಾಕ್ರೆ ಇದ್ದಾರೆ. ಶ್ರೀ ಅಡ್ವಾಣಿಯವರು ದೇಶದ ಗೃಹಮಂತ್ರಿಗಳು, ಅವರ ಸರ್ಕಾರವಿದೆ, ಅಧಿಕಾರವಿದೆ, ಅವರನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಒಂದು

ವ್ಯವಸ್ಥೆಯಿದೆ, ಆ ವ್ಯವಸ್ಥೆಯಲ್ಲಿ ಏನಾದರೂ ಆಗುತ್ತದೆ. ಸೆಪ್ಟೆಂಬರ್ 17 ರಂದು ಸುವರ್ಣೋತ್ಸವ ಆಚರಿಸುವಂತೆ ಮುಖ್ಯಮಂತ್ರಿಯವರಿಗೆ ಬಿಜೆಪಿಯವರು ಮಿಸ್‌ಗೈಡ್ ಮಾಡಿ, ಇವರಿಗೆ ಕೆಟ್ಟ ಹೆಸರು ಬರಬೇಕೆಂದು ಈ ರೀತಿ ಮಾಡಿದ್ದಾರೆ. ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಗುರುತು ಇಲ್ಲ, ಅವರ ಮನಸ್ಸಿಗೆ ಬಹಳ ದುಃಖವಾಗಿದೆ. ಆ ಮಾತು ನನಗೆ ನೆನಪಿದೆ. ಏಕೆಂದರೆ, ಶ್ರೀ ಚಂದ್ರಬಾಬು ನಾಯ್ಡುರವರು ಆಂಧ್ರಪ್ರದೇಶದಲ್ಲಿ ಮಾಡಿಲ್ಲ. ಇಲ್ಲಿ ಯಾರ ಯಾರೋ ಮಾತು ಕೇಳಿ, ಆ ಜಿಲ್ಲಾ ಮಂತ್ರಿಯವರು ನಿಮಗೆ ಸಜೆಷನ್ ಕೊಟ್ಟಿಲ್ಲ.

ಶ್ರೀ ಎ. ರಾಮದಾಸ್ : ಒಬ್ಬ ಮುಖ್ಯಮಂತ್ರಿಗೆ ಬಿಜೆಪಿಯವರು ಹೇಳಿದ್ದರಿಂದಲೇ, ಸರ್ಕಾರವನ್ನು ನಡೆಸುವ ಮುಖ್ಯಮಂತ್ರಿಗಳು ಅವರ ಮಾತನ್ನು ಕೇಳಿದ್ದಾರೆನ್ನುವ ವಿಚಾರ ಇಲ್ಲಿ ಬರುತ್ತದೆ. ಬಿಜೆಪಿಗೂ, ಅದಕ್ಕೂ ಏನು ಸಂಬಂಧ? ಈ ದೇಶದ ಒಬ್ಬ ಗೃಹಮಂತ್ರಿಗಳನ್ನು ಪಟೇಲರ ಪ್ರತಿಮೆ ಅನಾವರಣಕ್ಕೆ ಕರೆದಿದ್ದಾರೆಯೇ ಹೊರತು ಬಿಜೆಪಿ ಲೀಡರ್ ಎಂದು ಅಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಬಿಜೆಪಿಯವರು, ಊರು ಊರಿಗೆ ಹೋಗಿ, ಈ ಇಷ್ಯೂ ಮೇಲೆ ಕೆಟ್ಟ ಭಾವನೆ ಬರುವ ಹಾಗೆ ಮಾಡಿದ್ದಾರೆ. ಸೆಪ್ಟೆಂಬರ್ 17ರ ಇಷ್ಯೂ ಒಂದು ಪಾಯಿಂಟ್ ಕಾರ್ಯಕ್ರಮ. ಮುಸ್ಲಿಂ ರಾಜ ಹೀಗೆ ಮಾಡಿದ್ದಾನೆ ಎಂದು ಹೇಳುತ್ತಾರೆ. ಆದರೆ ಮುಸ್ಲಿಂ ರಾಜ ನಮಗೆ ಏನು ಮಾಡಿದ್ದಾನೆ? ನಾವು ಅದೇ ಜಮೇದಾರ್, ಹವಾಲ್ದಾರ್ ಆಗಿದ್ದೇವೆ. ನಿಜಾಮರಿಂದ ಹಿಡಿದು ಇಡೀ ನಮ್ಮ ಮುಸ್ಲಿಂ ಸಮಾಜದ ವಿರೋಧಕ್ಕೆ, ಬೇರೆ ಸಮಾಜವನ್ನು ಆರ್ಗನೈಸ್ ಮಾಡುತ್ತಾರೆ. ನಾನು ಮಾತನಾಡುತ್ತೇನೆ. ನಿಮಗೆ ಹಿಸ್ಟರಿ ಗುರುತು ಇಲ್ಲ. ಆ ಏರಿಯಾದಲ್ಲಿ ನಾನು ಹುಟ್ಟಿದ್ದೇನೆ. ಶ್ರೀ ವೈಜನಾಥ ಪಾಟೀಲರು ಇದಕ್ಕೆ ವಿಟ್‌ನೆಸ್ ಇದ್ದೀರಿ.

ಶ್ರೀ ಹೆಚ್.ಸಿ ಬಾಲಕೃಷ್ಣ : ಬಿಜೆಪಿ ಬೇರೆ, ಮುಸ್ಲಿಮರು ಬೇರೆ ಎಂದು ಇಲ್ಲಿ ಇವರೇ ಬೈಫರ್‌ಕೇಟ್ ಮಾಡುತ್ತಿದ್ದಾರೆ. ಬಿಜೆಪಿಗೂ, ನಮಗೂ ಸಂಬಂಧವಿಲ್ಲ ಎಂಬುದನ್ನು ಮಾತನಾಡುತ್ತಿದ್ದಾರೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : 17.9.48ಕ್ಕಿಂತ ಹಿಂದೆ ಮತ್ತು ಅದರ ನಂತರದ ಈ ವಿಷಯವನ್ನು ಮರೆತಿದ್ದೇವೆಂಬುದು ನಮ್ಮ ಬಹುಜನ ಸಮಾಜ ಪಕ್ಷದ ಉದ್ದೇಶವಿತ್ತು. ತಾವು ಬಾಬರಿ ಮಸೀದಿ ಘಟನೆಯನ್ನು ಮರೆತು ಬಿಡಬೇಕೆಂದು ಹೇಳುತ್ತೀರಿ, ಸಾಕಷ್ಟು ಸೆಕ್ಯುಲರ್ ಜನ ಹೇಳುತ್ತಾರೆ. ಮರೆತು ಹೋದ ವಿಷಯವನ್ನು ತಾವು ಮತ್ತೆ ಹೊಸದಾಗಿ ಮಾಡಿ ಆ ಏರಿಯಾದಲ್ಲಿ ನಮ್ಮ ಮನಸ್ಸನ್ನು ಕೆಡಿಸಿದ್ದೀರಿ. ರೂರಲ್ ಏರಿಯಾದಲ್ಲಿ ನಾವು ಬಹಳ ಪ್ರೀತಿ, ಪ್ರೇಮದಿಂದಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಸೈಡ್ ಪಿಕ್ಚರ್ ಮಾತ್ರವಿದ್ದು, ಅದರ್ ಸೈಡ್ ಪಿಕ್ಚರ್ ಇಲ್ಲ. ಅವರು ಏನು ಹೇಳಬೇಕೋ ಅದನ್ನು ಹೇಳಲಿ. ಫರ್ದರ್ ಕಾಂಪ್ಲಿಕೇಷನ್ ಆಗುವುದು ಬೇಡ.

ಶ್ರೀ ಅರಗ ಜ್ಞಾನೇಂದ್ರ : ಸರ್ದಾರ್ ಪಟೇಲರ ಪ್ರತಿಮೆ ಅನಾವರಣವಾದ ಕೂಡಲೇ.....

(ಗೊಂದಲ)

ಅಧ್ಯಕ್ಷರು : ಅವರು ಸ್ವಾತಂತ್ರ್ಯ ಯೋಧರ ಬಗ್ಗೆಯಾಗಲೀ, ಶ್ರೀ ಅಡ್ವಾಣಿಯವರ ಬಗ್ಗೆಯಾಗಲೀ, ಸರ್ದಾರ ಪಟೇಲರ ಬಗ್ಗೆಯಾಗಲೀ ಕೆಟ್ಟದ್ದೇನನ್ನೂ ಹೇಳಲಿಲ್ಲ. ಈ ವ್ಯವಸ್ಥೆಯಲ್ಲಿ ಗೃಹ ಸಚಿವರಿದ್ದಾರೆ, ಅವರಿಗೆ ನಾವು ಗೌರವ ಕೊಡಲೇ ಬೇಕು, ಅದಕ್ಕೆಲ್ಲಾ ನಾವು ತಯಾರಿದ್ದೇವೆ, ಮರೆತಿದ್ದ ಒಂದು ಕಹಿ ಘಟನೆಯನ್ನು ಜ್ಞಾಪಿಸಿದರು, ಸರ್ದಾರ ಪಟೇಲರ ಪ್ರತಿಮೆ ಅನಾವರಣವನ್ನು ಅವರ ಹುಟ್ಟಿದ ದಿವಸ ಮಾಡಬಹುದಿತ್ತೆಂದು ಅವರ ಅಭಿಪ್ರಾಯ ವ್ಯಕ್ತ ಪಡಿಸಿದರೇ ಹೊರತು ಯಾರಿಗೂ ಅಗೌರವ ತರುವ ಮಾತನ್ನು ಆಡಲಿಲ್ಲ.

(ಗೊಂದಲ)

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಇವರು ಸರ್ದಾರ್ ಪಟೇಲರ ಹೆಸರನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಸರ್ದಾರ್ ಪಟೇಲರಿಗೆ ಇವರು ಅಪಮಾನ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಅಪಮಾನವಾಗುತ್ತಿದೆ.

ಅಧ್ಯಕ್ಷರು : ಏಕಷ್ಟು ಉದ್ರೇಕಗೊಳ್ಳುತ್ತೀರಿ?

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಇವರು ಬಾರ್ಡರ್‌ನಲ್ಲಿ ಹೋರಾಡಿ ಜೀವ ಕೊಟ್ಟಿದ್ದಾರೆಯೇ?

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸರ್ದಾರ್ ಪಟೇಲರ ಬಗ್ಗೆ ತಾವು ಪ್ರಸ್ತಾಪಿಸುವ ಅಗತ್ಯವಿಲ್ಲ. ಅದು ಹಶ್ಮೀಯವರು ಏನೇ ಮಾತಾಡಲಿ ನಮಗೆ ಏನು ಅಸಮಾಧಾನವೇನಿಲ್ಲ. ಇಡೀ ಪ್ರಪಂಚಕ್ಕೆ ಗೊತ್ತಿರುವ ವಿಚಾರ. ನಮಗೆ ಇಲ್ಲೊಂದು ಮಾತು ಕ್ಲಿಯರ್ ಆಗಬೇಕಾಗಿದೆ. ಏನೆಂದರೆ, ಅವರು ಸರ್ದಾರ ಪಟೇಲರ ಪ್ರತಿಮೆಯನ್ನು 17ನೇ ತಾರೀಖು ಅಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂಬ ಆ ವಿಷಯ ಬಿಜೆಪಿಯವರಿಂದ ಬಂತು ಎಂಬ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ಲಿಯರ್ ಮಾಡಬೇಕು.

ಅಧ್ಯಕ್ಷರು : ಅವರು ಉತ್ತರ ಹೇಳುವಾಗ ಹೇಳುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ : ಹಶ್ಮೀಯವರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಅದರ ಬಗ್ಗೆ ಅನುಮಾನವಿಲ್ಲ. ಯಾರ್‍ಯಾರ ಮೇಲೆ ಆಪಾದನೆ ಮಾಡಬೇಕಾಗಿತ್ತೋ, ಅದನ್ನು ನೇರವಾಗಿ ಮಾಡಿದ್ದಾರೆ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಅವರು ಹಿಂದೆ ಕನ್ನಡ ಮಾತನಾಡಿದ್ದಕ್ಕೂ, ಈಗ ಮಾತನಾಡಿದ್ದಕ್ಕೂ ಬಹಳ ವ್ಯತ್ಯಾಸವಿದೆ. ಚೆನ್ನಾಗಿ ಮಾತನಾಡಿದ್ದಾರೆ. ತುಂಬಾ ಸಂತೋಷ. ಆದರೆ, ಬಿಜೆಪಿಯವರು ಸರ್ದಾರ್ ಪಟೇಲ್‌ರ ಪ್ರತಿಮೆ ಅನಾವರಣ ಮಾಡಲು ಪ್ರಚೋದನೆ ಮಾಡಿದರೆಂಬ ಮಾತು ಬಂದಿದೆ, ಆ ಮಾತನ್ನು ಈ ಸರ್ಕಾರ ಕೇಳಿ, ಅದರ ಆಧಾರದ ಮೇಲೆ ಪ್ರತಿಮೆ ಅನಾವರಣ ಮಾಡಲು ಪ್ರಯತ್ನ ಮಾಡಿದ್ದಾರೆನ್ನುವುದಾದರೆ ಅದು ಬಹಳ ದೊಡ್ಡ ಆಪಾದನೆಯಾಗುತ್ತದೆ.

ಅಧ್ಯಕ್ಷರು : ತಾವು ಎತ್ತಿರುವ ವಿಷಯ ಬಹಳ ರಿಲವೆಂಟಾಗಿದೆ. ಜವಾಬ್ದಾರಿ ಸರ್ಕಾರದ ಮೇಲಿದೆ.

ಶ್ರೀ ಬಿ.ಬಿ. ಶಿವಪ್ಪ : 17ನೇ ತಾರೀಖು ಆ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಗುಲಬರ್ಗಾದಲ್ಲಿ ನಡೆಸಲಾಗುತ್ತದೆ ಎನ್ನುವ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ನಾನು ಯಾವುದೋ ಕಾರಣಕ್ಕೆ ಮುಖ್ಯಮಂತ್ರಿಗಳ ಆಫೀಸಿಗೆ ಹೋಗಿದ್ದೆ. ಅವರು ಹೇಳುವುದು ಸರಿಯೋ, ತಪ್ಪೋ ಗೊತ್ತಿಲ್ಲ. ಅವರು ಆಪಾದನೆ ಮಾಡಿರುವುದರಿಂದ ನಾನು ಹೇಳಬೇಕಾಗುತ್ತದೆ. ಸಭಾಪತಿಯವರಾದ ಸನ್ಮಾನ್ಯ ಶ್ರೀ ಕಲ್ಮಣ್‌ಕರ್‌ರವರು ಇದರ ಬಗ್ಗೆ ಚರ್ಚಿಸುತ್ತಿದ್ದರು. ಈ ತರಹದ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದು, ಇದು 17ನೇ ತಾರೀಖು ಆಗಬೇಕು, ಅದರಲ್ಲಿ ಪ್ರತಿಮೆ ಅನಾವರಣವಾಗಬೇಕು, ಇದೆಲ್ಲಾ ನಮ್ಮ ಕಾರ್ಯಕ್ರಮದಲ್ಲಿ ಸೇರಿದೆ ಎಂಬ ಬಗ್ಗೆ ಅವರು ಚರ್ಚೆ ಮಾಡುತ್ತಿದ್ದರು. ಸರ್ಕಾರದ ಇದನ್ನು ಮಾಡಿದೆಯೇ ವಿನಃ ಬಿಜೆಪಿಯವರು ಅದನ್ನು ಮಾಡಬೇಕೆಂದು ಹೇಳಿದ್ದರೆ, ಬಹುಶಃ ಸರ್ಕಾರ ಅದನ್ನು ಮಾಡುತ್ತಿತ್ತೋ, ಇಲ್ಲವೋ ಗೊತ್ತಿಲ್ಲ. ಅಂದಮೇಲೆ, ನೇರವಾಗಿ ಬಿಜೆಪಿಯವರ ಮಾತಿನ ಪ್ರಕಾರ ಸರ್ಕಾರ ಸರ್ದಾರ್‌ಪಟೇಲರ ಪ್ರತಿಮೆ ಅನಾವರಣ ಮಾಡಲು ಸಿದ್ದವಿತ್ತು ಎನ್ನುವುದಾದರೆ ಅದನ್ನು ನಾನು ಸ್ವಾಗತಿಸುತ್ತೇನೆ.

ಅಧ್ಯಕ್ಷರು : ತಾವು ರಿಲವೆಂಟ್ ಆಗಿರುವ ವಿಷಯ ಪ್ರಸ್ತಾಪಿಸಿದ್ದೀರಿ. ಸರ್ಕಾರದ ಮೇಲೆ ಜವಾಬ್ದಾರಿ ಇದೆ. ಅವರು ಆ ತರಹದ್ದಕ್ಕೆ ಒಪ್ಪಿಕೊಂಡರೆ, ಇಲ್ಲವೇ, ಏಕೆ ಮಾಡಿದರು ಎಂಬ ಬಗ್ಗೆ ಅವರು ಉತ್ತರ ಕೊಡುವಾಗ ಹೇಳುತ್ತಾರೆ. ಆ ವಿಚಾರವನ್ನು ಮತ್ತೆ ಮತ್ತೆ ಪ್ರಸ್ತಾಪಿಸುವುದು ಬೇಡ. ಏಕೆಂದರೆ, 1948ರಲ್ಲಿದ್ದವರು, ಅದಕ್ಕೂ ಹಿಂದಿದ್ದವರು ಇಲ್ಲಿ ಯಾರೂ ಇಲ್ಲ. ಸೂಕ್ಷ್ಮವಾದ ವಿಚಾರವನ್ನು ಹೆಚ್ಚು ಹೆಚ್ಚು ಪ್ರಸ್ತಾಪಿಸಿ ಅದನ್ನು ಕೆಡಿಸುವುದು ಬೇಡ. ನಿಮಗೆ ಒಂದು ನಿಮಿಷ ಅವಕಾಶ ಕೊಡುತ್ತೇನೆ. ನಿಮ್ಮ ಮಾತನ್ನು ಬೇಗ ಮುಗಿಸಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಇವರು ಸರ್ದಾರ್ ಪಟೇಲರ ಹೆಸರು ತೆಗೆದುಕೊಂಡು ನನ್ನ ಮೇಲೆ ಚಾರ್ಜಸ್ ಮಾಡುತ್ತಿದ್ದಾರೆ. ಪಟೇಲರ ಜಯಂತಿ 31ರಂದು ಇತ್ತು. 17ನೇ ಸೆಪ್ಟೆಂಬರ್‌ನಲ್ಲಿ ಏಕೆ ಮಾಡಲು ಹೋದರು?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಬಿಜೆಪಿಯವರು ಮುಸ್ಲಿಮರ ವಿರೋಧಿಗಳೆಂದು ಈ ಸಭೆ ಮೂಲಕ ಸಂದೇಶ ನೀಡುತ್ತಿದ್ದಾರೆ. 6 ತಿಂಗಳು ನಿಮ್ಮನ್ನು ಮುಖ್ಯಮಂತ್ರಿ ಮಾಡಿದ್ದನ್ನು ಮರೆತು ಬಿಟ್ಟಿದ್ದಾರೆ.

ಅಧ್ಯಕ್ಷರು : ಅವರು ಆ ಮಾತೇ ಹೇಳಲಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನನ್ನ ಕ್ಷೇತ್ರಗಳಲ್ಲಿ ಮುಸ್ಲಿಮರಿಗೆ ಸಾಕಷ್ಟು ಕೆಲಸಗಳನ್ನು, ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ತಾವು ಆ ರೀತಿ ಹೇಳುವುದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎ. ರಾಮದಾಸ್ : ಒಬ್ಬ ಸದಸ್ಯನಾಗಿದ್ದವರು, ಬಿಜೆಪಿಯವನು ಎನ್ನುವ ಕಾರಣದಿಂದ ನಾನೇ ಕಿತ್ತುಹಾಕಿಸಿದೆ ಎಂಬ ಮಾತು ಬಂದಿರುವ ಸಂದರ್ಭದಲ್ಲಿ...

ಶ್ರೀ ಬಿ.ಬಿ. ಶಿವಪ್ಪ : ನಿನ್ನೆ ನಾವು ಒಂದೂವರೆ ಗಂಟೆವರೆಗೂ ದೇವರ ಬಗ್ಗೆ ವಿಷಯವೆತ್ತಿ ಸಮಯವನ್ನು ಹಾಳು ಮಾಡಿದೆವು. ಇಂದು ಸರ್ದಾರ್ ಪಟೇಲರು ಮತ್ತು ಮತ್ತೊಂದು ವಿಚಾರವನ್ನೆತ್ತಿ ಸಮಯವನ್ನು ಹಾಳು ಮಾಡಬೇಡಿ. ಅವರು ಅವಿಶ್ವಾಸ ನಿರ್ಣಯಕ್ಕೆ ತಕ್ಕಂತೆ ಮಾತನಾಡಿದ್ದಾರೆ. ಅದನ್ನು ಹೇಗೆ ಮುಗಿಸಬೇಕೆಂಬ ಗೊಂದಲದಲ್ಲಿದ್ದಾರಷ್ಟೆ.

ಶ್ರೀ ಎಂ.ಸಿ. ನಾಣಯ್ಯ : ಶ್ರೀ ಹಷ್ಮೀಯವರು ಕೆಲವು ವಿಚಾರಗಳನ್ನೆತ್ತಿದ್ದಾರೆ. ಅವರು ಎತ್ತಿರುವ ವಿಚಾರಗಳಲ್ಲಿ ಒಂದು ವಿಚಾರ ನಡೆದು ಹೋಗಿರುವುದು. ಆ ಘಟನೆಯನ್ನು ಪ್ರತಿಮೆ ಅನಾವರಣಕ್ಕೆ ಹೊಂದಾಣಿಕೆ ಮಾಡಬಾರದೆಂದು ಅವರು ಹೇಳುತ್ತಿದ್ದಾರೆ. ಸರ್ದಾರ್ ಪಟೇಲರ ಪ್ರತಿಮೆ ಬಗ್ಗೆ ಆಡ್ವಾಣಿಯವರು ಮಾತನಾಡಿಲ್ಲ. ಶ್ರೀ ಅಡ್ವಾಣಿಯವರು ದೇಶದ ಒಬ್ಬ ಪ್ರತಿಭಾವಂತ ಬಹಳ ಎತ್ತರದ ನಾಯಕರೆಂಬುದನ್ನು ನಾವೆಲ್ಲರೂ ಗುರುತಿಸಿದ್ದೇವೆ. ರಾಜಕೀಯವಾಗಿ ಇರತಕ್ಕಂಥ ಭಿನ್ನಾಭಿಪ್ರಾಯ ನಮಗೂ ಇದೆ, ಬೇರೆ ಜನರಲ್ಲೂ ಇದೆ. ಆದರೆ ಇದು ರಾಜಕೀಯದ್ದಲ್ಲ. ಅಲ್ಲಿ ನಡೆದು ಹೋಗಿರತಕ್ಕಂಥ ಘಟನೆಯ ಸಂದರ್ಭವನ್ನು ಹೊಂದಾಣಿಕೆಗೆ ತರುವ ಮುಖಾಂತರ ಸೀಮಿತವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಶಿವಪ್ಪನವರೂ ಕೂಡ ಒಂದು ಮಾತನ್ನು ಹೇಳಿದರು, "ಬಿಜೆಪಿ ನಾಯಕರು ಹೇಳಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ದಾರಿತಪ್ಪಿಸಿ ಈ ಒಂದು ಕಾರ್ಯಕ್ರಮಕ್ಕೆ ಅನುವು ಮಾಡಿ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳುವುದರ ಜೊತೆಗೆ ಸರ್ಕಾರದವರು ಇದನ್ನು ಕ್ಲಿಯರ್ ಮಾಡಬೇಕೆಂದು ಒತ್ತಾಯಿಸಿದ್ದಾರೆ. ನಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದಕ್ಕೆ ಉತ್ತರ ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ಹಷ್ಮಿಯವರೆ, ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸಿಬಿಡಿ ಒಂದು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಅಧ್ಯಕ್ಷರೆ, ನಾನು ಈ ಸಭೆಯ ಸದಸ್ಯನಿದ್ದೇನೆ, ನನ್ನ ಮೇಲೆ ದೇಶ ದ್ರೋಹಿ ಎಂದು ಚಾರ್ಜ್ ಮಾಡಿದ್ದಾರೆ, ತಪ್ಪು ಮಾಹಿತಿ ಕೊಟ್ಟಿದ್ದಾರೆ. ಬ್ಯಾನರ್ ಕೂಡ ನನ್ನ ಹತ್ತಿರ ಇದೆ.

(ಗೊಂದಲ)

ಅಧ್ಯಕ್ಷರು : ದೇಶ ದ್ರೋಹಿ ಎಂದು ಯಾರು ನಿಮ್ಮನ್ನು ಹೇಳಿದರು ? ಸದನದಲ್ಲಿ ನಡೆಯುವುದು ಮುಖ್ಯ. ನಾನು ಮೊನ್ನೆ ತಾನೇ ಹೇಳಿದ್ದೇನೆ ಇಲ್ಲಿ ಯಾರು ದೇಶ ದ್ರೋಹಿ ಇಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಈ ವಿಷಯ ಬೇಡ ಎಂದು ತಾವು ಹೇಳುತ್ತಿರುವುದರಿಂದ ಇದನ್ನು ಇಲ್ಲಿಗೆ ಬಿಟ್ಟು ಬಿಡುತ್ತೇನೆ. ತಾವು ಇದಕ್ಕೆ ಏನು ಮಾಡುತ್ತೀರೋ ಮಾಡಿ. ನನ್ನ ಶಕ್ತಿ ಏನಿದೆ, ನನ್ನ ಮಾತು ಏನಿದೆ, ಇಷ್ಟನ್ನು ಮಾತ್ರ ನಾನು ಸರ್ಕಾರಕ್ಕೆ ಹೇಳಿದ್ದೇನೆ. ನಾನು ಏನಾದರೂ ಹೇಳುವುದಕ್ಕೆ ಹೋದರೆ ಬಿ.ಜೆ.ಪಿ.ಯವರು ಏನಾದರೂ....

(ಗೊಂದಲ)

ಅಧ್ಯಕ್ಷರು : ಅವರೇನು ಮಾತನಾಡಿದರು, ಸುಮ್ಮನೆ ಏಕೆ ಈ ರೀತಿ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಇಷ್ಟು ಚೆನ್ನಾಗಿ ತಾವು ಮಾತನಾಡಿದಿರಿ. ಎಲ್ಲಾ ಮಾತನಾಡಿದ್ದನ್ನೆಲ್ಲಾ ಈಗ ನೀವೇ ಏಕೆ ಸ್ಪಾಯಿಲ್ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೆ, ನಿನ್ನೆ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನನ್ನ ಮನಸ್ಸಿನಲ್ಲಿರತಕ್ಕಂಥ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಪೂರ್ಣ ಅವಕಾಶ ನನಗೆ ಸಿಕ್ಕಲಿಲ್ಲ. ಅದೇ ನೋವಿನಿಂದ ಇವತ್ತು ಬೆಳಿಗ್ಗೆ ನಾನು ಏನು ಮಾತನಾಡುವುದಿಲ್ಲವೆಂದು ಸುಮ್ಮನೆ ಕುಳಿತಿದ್ದು. ಇವತ್ತು ಬಿ.ಜೆ.ಪಿ.ಮೇಲೆ ಅವರು ಸಾಕಷ್ಟು ಆಪಾದನೆ ಮಾಡಿದರು. ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ನಡೆಯುತ್ತಿದೆ, ಯಾವುದೋ ಪಕ್ಷದ ಮೇಲೆ ಚರ್ಚೆಗೆ ಬಂದಾಗ ಒಂದೊಂದು ಪಕ್ಷದ ಮೇಲೆ ರಾಡಿ ಹಾಕುವಂಥ ಸಂದರ್ಭ ಬರುತ್ತದೆಂದು ನಾವು ಸುಮ್ಮನೆ ಕುಳಿತೆವು. ಆದರೆ ಮಾನ್ಯ ಸರ್ದಾರ್ ವಲ್ಲಭಾಯಿ ಪಟೇಲ್‌ರವರ ಪ್ರತಿಮೆ ಅನಾವರಣ ವಿಚಾರ ಬಂದಾಗ, ಇಡೀ ದೇಶಕ್ಕೆ ಸ್ವಾತಂತ್ರ್ಯ ಆಗಸ್ಟ್ 15, 1947ರಂದು ಬಂದರೆ ಆ ಭಾಗಕ್ಕೆ ಮಾತ್ರ ಸೆಪ್ಟೆಂಬರ್ 17ರಂದು ಸ್ವಾತಂತ್ರ್ಯ ಬಂದಿದೆ ಎಂದು, ಸ್ವತಂತ್ರ ಯೋಧರು, ರಾಷ್ಟ್ರಭಕ್ತರು, ಎಲ್ಲರೂ ತೀರ್ಮಾನಿಸಿ ಬಹಳ ವಿಜೃಂಬಣೆಯಿಂದ ಈ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಆಚರಿಸಬೇಕೆಂದು ತೀರ್ಮಾನಿಸಿದ್ದರು. ಇದರಲ್ಲಿ ಬಿ.ಜೆ.ಪಿ.ಯವರ ರಾಷ್ಟ್ರ ಭಕ್ತಿ ಕೂಡ ಸೇರಿತ್ತು. ಆದರೆ ಮಾನ್ಯ ಸದಸ್ಯರು ಮನಸ್ಸಿನಲ್ಲಿ ಯಾವುದೋ ಭಾವನೆಗಳನ್ನು ಇಟ್ಟುಕೊಂಡು ಅದಕ್ಕೆ ಪುಷ್ಠಿ ಕೊಡುವಂಥ ರೀತಿಯಲ್ಲಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ಅದನ್ನು ತಕ್ಷಣ ಕಡತದಿಂದ ತೆಗೆದು ಹಾಕುವಂತೆ ಹೇಳಿದ್ದೇನೆ. ಪುನಃ ಇದರ ಬಗ್ಗೆ ಪ್ರಸ್ತಾಪ ಮಾಡಬೇಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಸರ್ದಾರ್ ವಲ್ಲಭಾಯಿ ಪಟೇಲ್‌ರವರ ಪ್ರತಿಮೆ ಅನಾವರಣ ಮಾಡಬೇಕಾದ ಸಂದರ್ಭ ಬಂದಾಗ ಈ ಸರ್ಕಾರ ಏನು ದಿಟ್ಟವಾದ ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥ ಅಂಶವನ್ನು ತಕ್ಷಣ ಈ ಸರ್ಕಾರದವರು ಹೇಳಿದ್ದರೆ ಖಂಡಿತವಾಗಿ ಈ ನಿಮಿಷದವರೆಗೂ ಈ ಪ್ರಶ್ನೆ ಬರುತ್ತಿರಲಿಲ್ಲ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ನಿನ್ನೆ ನಾನು ಒಂದೊಂದು ಮಾತನಾಡುವಾಗ ಮಾನ್ಯ ಸಿಂಧ್ಯರವರು, ಭೈರೇಗೌಡರು, ಎಲ್ಲಾ ಮಂತ್ರಿಗಳು ಬಹಳ ವೀರಾವೇಶದಿಂದ ಎದ್ದರು. ಬೇಕಾದರೆ ಕಡತ ತರಿಸಿ ನೋಡಿ.

ಅಧ್ಯಕ್ಷರು : ನಾನು ಇಲ್ಲಿ ಕುಳಿತಿದ್ದೆ ಕಡತ ಏಕೆ?

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಅಲ್ಲಿ ಕುಳಿತಿದ್ದರೂ ಕೂಡ ನನಗೆ ಇಂತಹ ಪರಿಸ್ಥಿತಿ ಬಂತು. ಬೆಳಿಗ್ಗೆಯಿಂದ ನಾವು ಇಲ್ಲಿ ಯಾವ ರೀತಿಯಲ್ಲಿ ಕುಳಿತಿದ್ದೇವೆ ಎಂದು ತಾವು ನೋಡಿದ್ದೀರಿ. ಈ ಒಂದು

ಕೊಲೆ ವಿಚಾರ ಬಂದಾಗ, ಯಾವುದೇ ರಾಷ್ಟ್ರದ್ರೋಹಿ ಈ ದೇಶದಲ್ಲಿ ಈ ಕೃತ್ಯವನ್ನು ಮಾಡಿದಾಗ ಅದಕ್ಕೆ ಬಿ.ಜೆ.ಪಿ. ಯವರು ಅವಕಾಶ ಕೊಡುವುದಿಲ್ಲ. ರಾಷ್ಟ್ರದ್ರೋಹಿಗಳನ್ನು "ಟಾಡಾ" ಕಾಯಿದೆಯನ್ವಯ ಬಂಧಿಸಿ ಎಂದು ಹೇಳಿದ್ದು ನಿಜ. ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ಅವರ ಬಗ್ಗೆ ಗಮನ ಕೊಟ್ಟಿದ್ದರೆ ನಮಗೆ ಗೊತ್ತಿಲ್ಲ. ಸರ್ದಾರ್ ವಲ್ಲಬಾಯಿ ಪಟೇಲ್‌ರವರ ಪ್ರತಿಮೆಯ ಅನಾವರಣದ ವಿಚಾರದಲ್ಲೂ ಕೂಡ ರಾಜಕೀಯ ನಡೆಯುತ್ತಿರುವ ಈ ಒಂದು ದುಷ್ಕೃತ್ಯವನ್ನು ರಾಜ್ಯ ಸರ್ಕಾರ ಇವತ್ತು ಖಂಡನೆ ಮಾಡುತ್ತಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಅಧ್ಯಕ್ಷರೆ, ತಾವು ಈಗಾಗಲೇ ಸೂಚಿಸಿರುವಂತೆ ಬೇರೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಮನಸ್ಸಿನಲ್ಲಿರುವ ವಿಚಾರವನ್ನು ತಮ್ಮ ಕೊಠಡಿಯಲ್ಲಿ ಹೇಳಿಬಿಡುತ್ತೇನೆ. ಏಕೆಂದರೆ ಈ ವಿಷಯ ತಮ್ಮಲ್ಲಿ ಇರಬೇಕು. ಅವಿಶ್ವಾಸ ನಿರ್ಣಯದ ಪ್ರಸ್ತಾವದ ಮೇಲೆ ಕಾಂಗ್ರೆಸ್‌ನವರು ಮತ್ತು ಬಿಜೆಪಿಯವರು ಸಪೋರ್ಟ್ ಮಾಡುತ್ತಿದ್ದಾರೆ. ಇವರಿಬ್ಬರೂ ಸೇರಿ ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡಿಸಿದ್ದಾರೆ. ಈಗ ನಾನು ಮಾತನಾಡಿದರೆ ಅವರಿಗೆ ಬಹಳ ನೋವು ಆಗುತ್ತದೆ.

(ಗೊಂದಲ)

ಮಾನ್ಯ ಜೆ.ಹೆಚ್. ಪಟೇಲ್‌ರವರು, ಬಹಳ ಒಳ್ಳೆಯ ಸೆಕ್ಯುಲರ್, ಸೋಷಿಯಲಿಸ್ಟ್ ಆಗಿದ್ದಾರೆ. ಅವರು ಒಳ್ಳೆಯ ಕೆಲಸಗಳನ್ನು ಮಾಡುವವರಿದ್ದಾರೆ. ನಾನು ಏನು ಸಲಹೆ ಕೊಟ್ಟಿದ್ದೇನೆ ಅದನ್ನು ತಾವು ಗಮನದಲ್ಲಿಟ್ಟುಕೊಂಡು ತಾವು ಸರಿಪಡಿಸಿಕೊಳ್ಳುತ್ತಿರೆಂದು ಆಶಿಸುತ್ತೇನೆ. ನನಗೆ ಮತ್ತೊಂದು ಸಲ ಮಾತನಾಡಲು ಅವಕಾಶ ಕೊಡಬೇಕು. ಬಿ.ಜೆ.ಪಿ.ಯವರು ನಿಮಗೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ, ಅವರ ಮಾತಿಗೆ ನೀವು ಬೆಂಡ್ ಆಗಬೇಡಿ. ಜಾತ್ಯಾತೀತ ಪಾರ್ಟಿ ವಿರುದ್ಧ ತಾವು ಇದ್ದೀರಿ ಎಂದರೆ ಅದಕ್ಕೆ ನಮ್ಮ ಎಲ್ಲಾ ಸಹಕಾರ ಆಗಲೂ ಇದೆ, ಈಗಲೂ ಕೂಡ ಇದೆ. ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 12-15ಕ್ಕೆ ಸಮಾವೇಶಗೊಳ್ಳಲಿದೆ. ಎಲ್ಲರಿಗೂ ನಮಸ್ಕಾರ.

(ಸದನವು ಸಂಜೆ ಎಂಟು ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 5ನೇ ನವೆಂಬರ್ ಮಾಹೆ 1998ರ ಗುರುವಾರದಂದು ಮಧ್ಯಾಹ್ನ 12-15 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆಯನ್ನು ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕಾಸೂ. 7444 ಸ. ಶಾ. ಮು. ತುಮಕೂರು 350 ಪ್ರತಿಗಳು ದಿ: 13-12-2000